ಗರಗದ

ಶ್ರೀಮಡಿವಾಳೇಶ್ವರ ಚರಿತ್ರೆ



PCS
ಇವರ ಪ್ರಕಟನೆ

ಪಿ. ಸಿ. ಶಾಬಾದಿಮಠ ಬುಕ್ ಡಿಪೋ
ಸ್ಟೇಶನ್ ರೋಡ್ -- ಗದಗ

|| ಶ್ರೀ ಗುರು ಮಡಿವಾಳೇಶ್ವರ ನಮಃ ||

ಗರಗದ

ಶ್ರೀ ಮಡಿವಾಳೇಶ್ವರ ಚರಿತ್ರೆ

(ಪವಾಡಗಳು ಸಹಿತ)

ಲೇಖಕರು :

ವೀರಪ್ಪ ಸಿದ್ದಪ್ಪ ಸಾಗರ

ಪ್ರಕಾಶಕರು :

ಮೆ|| ಪಿ. ಸಿ. ಶಾಬಾದಿಮಠ

ಬುಕ್ ಡಿಪೋ, ಗದಗ.

ಬೆಲೆ : ೧೦-೦೦ ೧೯೯೩

ಪರಿವಿಡಿ

ಪ್ರಕರಣ	ವಿಷಯ	ಪುಟ

ಪ್ರಸ್ತಾವನೆ

ಈ ಭಾರತ ಭೂಮಿ ಪುಣ್ಯ ಭೂಮಿ. ಈ ಪುಣ್ಯ ಭೂಮಿಯ ಅನ್ನ ಪಾನಾದಿಗಳನ್ನು ಉಂಡು ಅನೇಕ ಮಹನೀಯರು ಬಾಳಿದ್ದಾರೆ. ಬಾಳಿ ಬೆಳಗಿದ್ದಾರೆ. ಬಾಳಿ ಬೆಳಗಿದವರ ಜೀವನ ಚರಿತ್ರೆಯನ್ನು ಓದಿದಾಗ ಈ ಮನುಷ್ಯನ ಜೀವನ ಪಾವನವಾಗುತ್ತದೆ. ಆ ಪಾವನತೆಯ ಮಾರ್ಗವನ್ನು ತೋರಿಸಿದರೂ ಕೂಡ ಮೋಹ ಮಮಕಾರ ಅಹಂಕಾರಕ್ಕೆ ಒಳಪಟ್ಟು ಮಾನವ ತನ್ನಲ್ಲಿರುವ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತಾನೆ. ಈ ಮನುಷ್ಯ ವ್ಯಕ್ತಿತ್ವ ಬರಬೇಕಾದರೆ, ತಾನು ಕೈಯಾರೆ ಕರೆದರೆ ಬರುವದಿಲ್ಲ ಅದು ದೈವದತ್ತವಾಗಿ ಬಂದ ವಿಷಯ.

"ಮಲೆ ಮೂಡಿ ಬಂದರೆ ಹೆಣ್ಣೆಂಬರೋ ಗಡ್ಡ ಮೀಸೆ ಬಂದರೆ ಗಂಡೆಂಬದೆರೋ ನಡುವೆ ಸುಳಿವಾತ್ಮ ಗಂಡೋ ಹೆಣ್ಣೋ ಹೇಳೋ ರಾಮನಾಥ'

"ಮರದೊಳಗೆ ಮಂದಾಗ್ನಿ ಉರಿಯದಂತಿರಿಸಿದೆ. ನೊರೆ ಹಾಲೊಳಗೆ ತುಪ್ಪದ ಕಂಪಿಲ್ಲದಂತಿರಿಸಿದೆ. ಶರೀರದೊಳಗಿನ ಆತ್ಮನಾದರೂ ಕಾಣದಂತೆ' ಇರಿಸಿದೆ. ನೀನಿರಿಸಿದ ಭೇದಕ್ಕೆ ಬೆರಗಾದೆನಯ್ಯಾ ರಾಮನಾಥ."

ಇಂತಹ ಮಹಾತ್ಮರ ಅಭ್ಯಾಸವನ್ನು ಮನಃಪೂರ್ವಕವಾಗಿ ಅಭ್ಯಸಿಸಿ ಆತ್ಮಾನಾತ್ಮ ವಿಚಾರ ಮಾಡಿ ಬರೆದ ಗರಗದ ಶ್ರೀ ಮಡಿವಾಳೇಶ್ವರ ಸ್ವಾಮಿಗಳ ಪುಣ್ಯ ಚರಿತ್ರೆಯೇ ಇದಾಗಿದೆ. ಶ್ರೀ ವೀರಪ್ಪ ಶಿದ್ದಪ್ಪ ಸಾಗರ ಇವರು ಈ ಚರಿತ್ರೆ ಬರೆಯಬೇಕಾದರೆ ಅವರು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಎಷ್ಟೇ ಕಷ್ಟ ಬಂದರೂ ಕೂಡ ಅವರ ಕೈ ಲೇಖಣಿ ಯಾವ ಆತಂಕವಿಲ್ಲದೇ ಮುಂದುವರಿಯುತ್ತದೆ.

ಅದಕ್ಕಾಗಿ ಇಂತಹ ಬರಹಗಾರರು ಇನ್ನೂ ಬೆಳೆಯಲಿ ತಾಯಿ ಸರಸ್ವತಿ ಸಂಪೂರ್ಣ ಆಶಿರ್ವಾದ ನೀಡಲಿ. ಅವರ ಕೃತಿಗಳೆಲ್ಲ ಅಜರಾಮರವಾಗಿ ಬೆಳಗಲಿ ಎಂದು ಅನನ್ಯ ಭಕ್ತಿಯಿಂದ ದೇವರಲ್ಲಿ ಬೇಡಿಕೊಂಡು ಅವರ ಕೃತಿಗಳನ್ನು ಪ್ರಕಾಶನಗೊಳಿಸಿದ ಮೆಸರ್ಸ ಪಿ. ಸಿ. ಶಾಬಾದಿಮಠ ಬುಕ್—ಡಿಪೋ ಗದಗ ಇವರಿಗೆ ನಾನು ಚಿರಋಣಿಯಾಗಿರುವೆ.

ತಮ್ಮ ವಿಧೇಯ

ಎಚ್. ಆರ್. ಭಸ್ಮೆ

ಮುನ್ನುಡಿ

ಕೇವಲ ಬೌದ್ಧಿಕವಾಗಿ ವಿಕಾಸಹೊಂದಿದ ಮಾನವನು ಅಧ್ಯಾತ್ಮಿಕ ತಳಹದಿಯ ಮೇಲೆ ಚಾರಿತ್ರ್ಯಕವಾಗಿ, ನೈತಿಕವಾಗಿ' ಶರಣ ಮಾರ್ಗದ ನೈಜಪಥವನ್ನರಿತು ಆಚರಿಸುವದರಿಂದ ಮಾತ್ರ ಅಂತರಂಗ ಮತ್ತು ಬಹಿರಂಗ ಶುದ್ಧಿ ಹೊಂದಿ ಇಹ-ಪರಗಳಲ್ಲಿ ನೈಜ ಸುಖ-ಶಾಂತಿಗಳನ್ನು ಪಡೆಯಲು ಅರ್ಹನಾಗುತ್ತಾನೆ.

ಈ ದಿಶೆಯಲ್ಲಿ ಶರಣರ, ಸಂತರ, ಶಿವಯೋಗಿಗಳ ಮಹಾನ್ ತತ್ವಗಳು, ಉಪದೇಶಗಳು, ಚರಿತ್ರೆಗಳು ದಾರಿದೀಪವಾಗಬಲ್ಲವು. ಇದನ್ನರಿತೇ ಪ್ರಸ್ತುತ "ಗದಗದ ಮಡಿವಾಳೇಶ್ವರ ಶಿವಯೋಗಿಗಳ ಚರಿತ್ರೆ" ಎಂಬ ಕೃತಿಯನ್ನು ಸಹೃದಯರಾದ ತಮ್ಮ ಕೈಯಲ್ಲಿ ಅರ್ಪಿಸಲು ನನಗೆ ತುಂಬಾ ಸಂತೋಷವಾಗುತ್ತದೆ. ತಾವುಗಳು ಈ ನನ್ನ ಕೃತಿಯನ್ನು ಸ್ವಾಗತಿಸುವಿರೆಂದು ನಂಬುತ್ತೇನೆ.

ಪವಾಡ ಪುರುಷ ಶ್ರೀ ಗುರು ಮಡಿವಾಳೇಶ್ವರ ಶಿವಯೋಗಿಗಳು ಸಾಕ್ಷಾತ್ ಶ್ರೀ ವೀರಭದ್ರನ ಅವತಾರಪುರುಷರು. ಇಂಥ ಘನಮಹಿಮರ ಚರಿತ್ರೆಯನ್ನು ಬರೆಯಲಾಶಿಸಿದ ನಾನು ಎಷ್ಟರಮಟ್ಟಿಗೆ ಯಶಸ್ವಿಯಾಗಿರುವೆ ನೆಂಬುವದು ವಾಚಕರಾದ ತಮಗೇ ಬಿಟ್ಟ ವಿಷಯ.

ನಾನು ಹೆಚ್ಚು ಕಲಿತ ಪ್ರತಿಭಾವಂತನಲ್ಲ. ಶ್ರೀ ಶಿವಯೋಗಿಗಳ ಪ್ರೇರಣೆಯೇ ಈ ಕೃತಿ ರಚನೆಗೆ ಕಾರಣವಾಯಿತು ಈ ಕೃತಿ ರಚನೆಗೆ ಅನೇಕರು ಸಹಾಯ ನೀಡಿದ್ದನ್ನು ಇಲ್ಲಿ ನಾನು ಮನಃಪೂರ್ವಕವಾಗಿ ಸ್ಮರಿಸುತ್ತೇನೆ ಅಲ್ಲದೆ ಈ ಕೃತಿಯ ಪ್ರಕಾಶನ ಕಾರ್ಯವನ್ನು ವಹಿಸಿಕೊಂಡು ಸಹಕರಿಸಿದ ಮೆ|| ಪಿ.ಸಿ. ಶಾಬಾದಿಮಠ ಬುಕ್ ಡಿಪೋ ಅವರಿಗೆ ನನ್ನ ಅನಂತ ವಂದನೆಗಳು

ಗದಗ
೧—೧—೮೦

ವೀರಪ್ಪ ಸಿದ್ದಪ್ಪ ಸಾಗರ,
ಸಾ|| ನಾಳವಾಡ

॥ ಶ್ರೀ ಗುರುಭ್ಯೋನಮಃ ॥

ಆಶೀರ್ವಚನ

ಪ್ರಪಂಚವೆಂಬ ಕಾಡಿನಲ್ಲಿ ಅಜ್ಞಾನಿಗಳಾದ ಮಾನವರ ಕೂಗಾಟವು, ವಿಷಯ ಸುಖದಾಸೆಯಿಂದ ನಿತ್ಯವೂ ನಡೆದೇ ಇರುವದು. ಇಂತಹ ವಿಷಯ ಸುಖದಾಸೆಯ ನರಿಗಳ ಕೂಗನ್ನು ಕುಗ್ಗಿಸಲು ಶ್ರೀ ಗುರು ಮಡಿವಾಳೇಶ್ವರ ಯೋಗಿಗಳಂತಹ ಮಹಾತ್ಮರಿಂದ ಲೀಲಾಪುರುಷ ಸಿಂಹರಿಂದ ಮಾತ್ರ ಸಾಧ್ಯ ವೆಂದು ಧಾರಾಳವಾಗಿ ಹೇಳಬಹುದು. ತಮ್ಮ ಅನೇಕ ಪವಾಡಗಳಿಂದ ಜಗವು, ಜಗದ ಮನವು ಎತ್ತ ಸಾಗಿದೆ ಎಂದು ಎತ್ತಿ ತೋರಿಸಿದರು "ಸತ್ತವರಿಗೆ ಸುಡಗಾಡ ಗೆದ್ದವರಿಗೆ ಗದ್ದುಗೆ ಎಂಬ ನಾಣ್ಣುಡಿಯಂತೆ ಅದನ್ನು ಸಮರ್ಥಿಸಿ ಶ್ರೀ ಗುರು ಮಡಿವಾಳೇಶ್ವರ ಸ್ವಾಮಿಗಳವರು ಹೇಳುವದೆನೆಂರೆ ವಿಷಯ ಸುಖದಾಸೆಬೇಕು ಆದರೆ ಅದು ಅವನಾಜ್ಞೆಯಂತೆ [ಶಿವನಾಜ್ಞೆಯಂತೆ] ಬಳಕೆಯಾಗಬೇಕೆಂದು ಅವರ ಮತ ಅದನ್ನು ಮರೆತು ಅರುವಿನ ಕಣ್ಣು ಮುಚ್ಚಿ ಕೈಗೆ ಸಿಕ್ಕದ್ದೆಲ್ಲ ಸುಖ ವೆಂದರೆ ಅದು ಮೂರ್ಖತನವಾದೀತೆ ಹೊರತು ಸುಖವೆನಿಸಲಾರದು ಸಂಸಾರದ ಜಂಜಾಟದಲ್ಲಿ ಸುಖ-ದುಃಖಗಳು ಸಮನಾಗಿ ಕರ್ಮಾನುಸಾರವಾಗಿ ಬರುವ ದುಂಟು. ನಿಜವಾದ ಸುಖದನ್ನು ಅರಿಯದೆ ತೊಳಲಾಡುವ ಮಾನವರೇ ಹೆಚ್ಚಾಗಿದ್ದಾರೆ. ಹೇಗೆಂದರೆ ಇಲ್ಲಿ ಒಂದು ರಂಬವಿದೆ, ಅದಕ್ಕೆ ಕಂಬ ಎಂದು ಕರೆದರೆ ಪಾಪವೆನಿಸುವದು, ಯಾಕೆ ಎಂದು ಕೇಳಿದರೆ ಕಂಬದ ಮೂಲ ವಸ್ತು ಕಟ್ಟಿಗೆ ಅಲ್ಲವೇ? ಆ ಕಟ್ಟಿಗೆಯನ್ನು ಮರೆತು ಕಂಬಕ್ಕೆ ಬೆಲೆ ಕೊಟ್ಟದ್ದೇ ಪಾಪ ಅದರಂತೆ ನಿತ್ಯ ನಿರ್ಮಲ ಶಿವಸ್ವರೂಪಿ ಗುರುವನ್ನು ಮರೆತುಸಿಕ್ಕವರ ಬೆನ್ನು ಹತ್ತಿ ತತ್ವ ಕೇಳುವದೇ ಪಾಪ ಸತ್ಪುರುಷರು' ಯೋಗಿಗಳು ಜಗದ ಉದ್ಧಾರ ಕ್ಕಾಗಿ ಮಾನವರ ಪಾಪ ಕರ್ಮಗಳನ್ನು ತೊಡೆದು ಹಾಕುವದಕ್ಕಾಗಿ ಅವತಾರ ಮಾಡುವರೆಂದು ಕವಿ ವೀರಣ್ಣನ ಬರವಣಿಗೆಯಲ್ಲಿ ಕಂಡು ಬರುವದು ಸ್ವಾತಂತ್ರ್ಯದ ವೀರ ಕಹಳೆಯನ್ನೂದಿ ಭಾರತ ಸ್ವಾತಂತ್ರ್ಯ ಸಂಗ್ರಾಮದ

ವೀರ ಕೇಸರಿ ಕಲಿ ಚನ್ನಮ್ಮ ರಾಣಿಯ ಪುಣ್ಯ ಭೂಮಿ. ಕಿತ್ತೂರ ರಾಜ ಗುರು ಪರಂಪರೆಯ ಪ್ರಕಾರ ಕಲ್ಮಠದ ನಿರಂಜನ ಗುರುವಾಗಬೇಕಿದ್ದ ಶ್ರೀಗುರು ಮಡಿವಾಳೇಶ್ವರ ಸ್ವಾಮಿಗಳು ಶಿವಲಿಂಗ ರುದ್ರಸರ್ಜನ ದೊರೆಯ ಅವಿವೇಕತನ ದಿಂದಾಗಿ ಕಿತ್ತೂರ ನಾಡದೇವಿಯ ಮುಖದ ಮೇಲೆ ಹೊಡೆದಂತೆ ಶಾಪವಾಣಿ ಯನ್ನು ಚಿಮ್ಮಿಸಿ ಕಿತ್ತೂರ ಮರೆತು, ತಳಕಿತ್ತು, ಸುತ್ತೆಲ್ಲ ದೇಶ ಸಂಚಾರದಲ್ಲಿ ನಿತ್ಯ ತಮ್ಮ ಪವಾಡಗಳನ್ನು ಬಿತ್ತರಿಸಿ ಕೊನೆಗೊಮ್ಮೆ ಗರಗ ಗ್ರಾಮವಾಸಿಗಳೆ ಲ್ಲರ ಮನದಲ್ಲಿ ಮೂಡಿ "ಕಿತ್ತೂರ ಶ್ರೀಗುರು ಮಡಿವಾಳೇಶ್ವರ ಸ್ವಾಮಿ''ಗಳೆನಿಸ ಬೇಕಿದ್ದ ಅವರ ''ಗರಗದ ಶ್ರೀಗುರು ಮಡಿವಾಳೇಶ್ವರ ಸ್ವಾಮಿ''ಗಳೆನಿಸಿದರು. ಇಂತಹ ಪವಾಡ ಪುರುಷರ ಪುಣ್ಯ ಚರಿತ್ರೆಯನ್ನು ಅಜ್ಞರಿಗೂ, ಸುಜ್ಞರಿಗೂ ತಿಳಿಯುವಂತೆ ರಸವತ್ತಾಗಿ ನಿರೂಪಿಸಿದ ಕವಿ ಕಲಾವಂತ ವಿರಪ್ಪ ಶಿದ್ದಪ್ಪ ಸಾಗರ ಸಾ|| ಮೂಳವಾಡ ಇವರಿಗೆ ಶ್ರೀಗುರು ಮಡಿವಾಳೇಶ್ವರರು ಸನ್ಮಂಗಲ ವನ್ನುಂಟು ಮಾಡಲೆಂದು ಶ್ರೀಗಳ ಅಪ್ಪಣೆಯಂತೆ ಆಶೀರ್ವದಿಸಿ ಈ ಆಶೀರ್ವಚ ನಕ್ಕೆ ವಿರಾಮ ಕೊಡುವ,

ಶ್ರೀ ಬಾಲ ಮಡಿವಾಳೇಶ್ವರ ದೇವರು,

ಗರಗ.

ಗದಗ ಕ್ಯಾಂಪ—ಶಿವಾನಂದ ಮಠ

ಕೋಣ.

॥ ಶ್ರೀ ಗುರು ಶಿವಯೋಗಿ ಮಡಿವಾಳೇಶ್ವರ ರಕ್ಷಿಸಲಿ ॥

ಗರಗದ

ಶ್ರೀ ಮಡಿವಾಳೇಶ್ವರ ಚರಿತ್ರೆ

(ಪವಾಡಗಳು ಸಹಿತ)

೧ನೇ ಪ್ರಕರಣ

ಕಿತ್ತೂರ ರಾಜಮನೆತನ

ಕಿತ್ತೂರಿನ ಇತಿಹಾಸದಲ್ಲಿ ಅಜರಾಮರ ಕೀರ್ತಿಶಾಲಿ ಎನಿಸಿ ಬಾಳಿ ಕನ್ನಡ ನಾಡಿನ ಜನತೆಯ ಹೃದಯದಲ್ಲಿ ಅಚ್ಚಳಿಯದ ಮೂರ್ತಿಯಾಗಿ ಸ್ಥಾಪಿತವಾದ ಕಿತ್ತೂರ ಸಿಂಹಿಣಿ ಸ್ವಾತಂತ್ರ್ಯ ಸಂಗ್ರಾಮದ ಕಹಳೆಯನ್ನೂದಿದಷ್ಟು ಆಂಗ್ಲರನ್ನು ಹಿಮ್ಮೆಟ್ಟಿಸಿದ ಕಿತ್ತೂರು ನಾಡತಾಯಿ ಕಲಿತನದ ಕಾದಾಟದಿಂದ ಬ್ರಿಟೀಷರನ್ನು ಬೆರಗುಗೊಳಿಸಿ ಪಾರತಂತ್ರ್ಯದ ಶೃಂಖಲೆಯನ್ನು ಹರಿದೊಗೆಯಲು ಯತ್ನಿಸಿದ ಕನ್ನಡಮ್ಮನ ಚೆಲ್ವಕುವರಿ ಚನ್ನಮ್ಮರಾಣಿಯ ಇತಿಹಾಸವನ್ನೊಳಗೊಂಡ ಈ ಕಿತ್ತೂರ ರಾಜಮನೆತನದ ಮೂಲ ಪುರುಷರಾದವರು ಶೂರರು ಧೀರರು ಪಾರತಂತ್ರನೆಂಬ ವಂಶಕ್ಕೆ ವಳಗಾದ ಸ್ವತಂತ್ರ ಶ್ರಮ ಜೀವಿಗಳು.

ಕಲಬುರಗಿ ಕಡೆಯಿಂದ ಬಂದ ಮೂಲ ಪುರುಷರೆನಿಸಿದ ಹಿರಿಮಲ್ಲ ಕಿರಿಮಲ್ಲಶೆಟ್ಟಿ ಎಂಬ ಇರ್ವರು ಅಣ್ಣತಮ್ಮರು ತಮ್ಮ ಕಲಿತನದ ಕಾದಾಟದಿಂದಲೂ ವೀರವೃತ್ತಿಯಿಂದಲೂ ಧರ್ಮ ನಿಷ್ಟೆಯಿಂದ ಸಾಮಿ ನಿಷ್ಟೆಯಿಂದಲೂ ವಿಜಾಪೂರ ಬಾದಶಹನಿಗೆ ಬೇಕಾದವರಾಗಿದ್ದರು. ಬರುಬರುತ್ತ ಈ ಶೂರ ವೀರ ಗಂಭೀರ ಬಂಧುಗಳ ಕಾರ್ಯ ಸಾಹಸಗಳಿಗೆ ಮೆಚ್ಚಿಕೊಂಡ ಮುಸಲ್ಮಾನದೊರೆಯು ಸಮರಸಿಂಹ, ಸಮರ ಶಾರ್ದೂಲ ಎಂಬ ಬಿರುದುಗಳನ್ನಿತ್ತು ಗೌರವಿಸಿ ತನ ದಂಡಿನ ದಂಡಾಧಿಪತಿಗಳನ್ನಾಗಿ ಮಾಡಿದನು. ಅಲ್ಲದೆ ಹಲವಾರು ಗ್ರಾಮಗಳನ್ನು ಉಂಬಳಿಯಾಗಿ ಬಿಟ್ಟುಕೊಟ್ಟನು. ಮುಂದೆ ಆದಿಲಶಾಹಿ ಪತನಗೊಂಡ ದಿಲ್ಲಿ ಔರಂಗಜೇಬನ ಆಳಿಕೆಯಲ್ಲಿ ವಳಪಟ್ಟ ನಂತರ ಔರಂಗಜೇಬನ ದಂಡನಾ

ಯಕ ಖಾನಸಾಹೇಬ ಶೆಟ್ಟರ ಮನೆತನಕ್ಕೆ ಉಂಬಳಿಯಾಗಿ ಬಂದ ಕೆಲವು ಸ್ಥಾನಗಳನ್ನು ಆಕ್ರಮಿಸಿ ವಶಪಡಿಸಿಕೊಂಡನು. ಆದರೂ ಮಲ್ಲಪ್ಪ ದೇಸಾಯಿ ಎಂಬುವ ಶೆಟ್ಟರ ವಂಶಜನು ಖಾನನೊಡನೆ ಒಪ್ಪಂದ ಮಾಡಿಕೊಂಡ ತನ್ನ ಆಳಿಕೆಯ ಕೆಲವು ಗ್ರಾಮಗಳನ್ನು ಉಳಿಸಿಕೊಂಡು ಹತ್ತೆಂಟು ವರುಷ ರಾಜ್ಯ ಭಾರ ಮಾಡಿ ಕಾಲವಶನಾದನು.

ಮುಂದೆ ಈ ಮನೆತನದ ಹಲವಾರು ಹಲವರು ವರುಷ ರಾಜ್ಯ ಭಾರ ಮಾಡುತ್ತ ಸುಖ ಸಂಪತ್ತಿನಲ್ಲಿ ಸೌಖ್ಯವಾಗಿ ಬಾಳಿಕೊಂಡಿದ್ದರು. ಬಳಿಕ ಕಿತ್ತೂರಿನ ಇತಿಹಾಸದಲ್ಲಿ ಅಜರಾಮರ ಕೀರ್ತಿ ಉಳಿಸಿದಂತಹ ಮಲ್ಲಸರ್ಜ ದೊರೆಯು ಕಿತ್ತೂರಿನ ಸಂಸ್ಥಾನವನ್ನು ಪೂರ್ವಜರಿಗಿಂತಲೂ ಉನ್ನತ ಉತ್ಕೃಷ್ಟ ವಿಶಾಲ ರೀತಿಯಲ್ಲಿ ಹಬ್ಬಿಸಿಕೊಂಡು ರಾಜ್ಯಭಾರ ಮಾಡಿದನು. ಧರ್ಮ ನೀತಿ ನ್ಯಾಯ ನಿಷ್ಠೆಗಳಿಗೆ ಬೆಲೆಕೊಡುವ ಪ್ರಭುವಾದನು. ಜಂಗಮ ಪ್ರೇಮಿಯಾಗಿ ಅನುದಿನವು ಜಂಗಮರಿಂದ ತೀರ್ಥ ಪ್ರಸಾದಗಳು ದೊರೆಯುವಂತೆ ವ್ಯವಸ್ಥೆ ಮಾಡಿಕೊಂಡನು. ದಾನ ಧರ್ಮ ವೃತ್ತಿಯಲ್ಲಿ ಮೇಲ್ಗೈ ಎನಿಸಿದನು. "ಪರೋಪಕಾರಾರ್ಥಂ ಇದಂ ಶರೀರಂ" ಎಂಬ ಆರ್ಯ ವಾಣಿಯನ್ನು ಸ್ಥಿರ ಗೊಳಿಸಲು ಹೊಣೆ ಹೊತ್ತು ಹೆಣಗಾಡಿದ ಮಲ್ಲಸರ್ಜದೊರೆಯು ಧರ್ಮನಿಷ್ಠನು, ಸತ್ಯ ಸಂಧನ್ನು ಪ್ರಜಾನುರಾಗಿಯೂ ಪರಮತವನ್ನು ಪ್ರೀತಿಸುವ ಮಹತ್ವ ಕಾಂಕ್ಷಿಯೂ ಎನಿಸಿ ಗೌರಿ ಗಂಗೆಯರನ್ನು ಹೋಲುವ ರುದ್ರಮ್ಮ ಚನ್ನಮ್ಮರ ಪತಿ ಎನಿಸಿ ಸಂಸಾರದಲ್ಲಿದ್ದರೂ ಸದ್ಗತಿ ಸಾಧನೆಗಾಗಿ ಶ್ರಮಿಸುವ ಸಂಸಾರಿಕನಾಗಿದ್ದನು. ವೀರಶೈವ ಮತೋದ್ಧಾರಕ್ಕಾಗಿ ಪ್ರಯತ್ನಿಸಿದ ಶಿವಭಕ್ತ ಸಂಪನ್ನತೆಯಂತೂ ಈತನಲ್ಲಿ ಸದಾ ಜಾಗ್ರತವಾಗಿರುತ್ತಿತ್ತು.

ವೀರಶೈವ ಮತ ಮಾನ್ಯಗಳ ಉತ್ತೀರ್ಣತೆಗಾಗಿಯೂ, ಶಿವಯೋಗಿ ಸಾಧು ಸಜ್ಜನ ಸತ್ಪುರುಷರ ಉನ್ನತಿಗಾಗಿಯೂ; ದೊರೆಯ ತುಂಬು ಹೃದಯದ ಸಹಾಯ ಸಹಕಾರ ಸಹಾನುಭೂತಿಗಳು ಅನುಕೂಲವಾಗಿದ್ದವು. ಮೂಲ ಪುರುಷರ ಮೂಲ ಗುರಿಯಂತೆ, ತನ್ನಾಳಿಕೆಯಲ್ಲಿಯೂ ಪ್ರಜರ ಕಷ್ಟ ನಷ್ಟಗಳನ್ನು ವಿಚಾರಿಸುತ್ತ ಅವರ ಬದುಕಿನ ಆಶೋತ್ತರಗಳನ್ನು ಈಡೇರಿಸಿ

ಸಕಲ ಪ್ರಜಾ ಜನರ ಹಾಗೂ ಅಧಿಕಾರಿ ವರ್ಗದವರ ಮೆಚ್ಚಿನ ದೊರೆಯಾಗಿದ್ದನು. ತನ್ನ ಬನುಕಿನ ಒಂದು ಗಳಿಗೆಯನ್ನು ಸಹ ಅನಾಚಾರ ಅತ್ಯಾಚಾರಗಳತ್ತ ಕಳೆಯದೇ, ಸದಾಚಾರ ಸದ್ಗುಣಿ ಸದ್ವಿವೇಕಿ ಎನಿಸಿ ಸಕಲ ಪ್ರಜಾ ಜನರು ದೇವರಂತೆ ಕಾಣುವ ತೆರದಿ ಬಾಳಿ, ಸತ್ಯ, ನ್ಯಾಯ, ನಿಷ್ಠುರದ ಧರ್ಮ ನೀತಿಯ ಪಾಲಕನಾಗಿದ್ದನು.

ಕನ್ನಡದ ನುಡಿಯಲ್ಲಿ ಕನ್ನಡದ ನಡತೆಯಲ್ಲಿ ಕನ್ನಡನ ವಹಿವಾಟದಲ್ಲಿ ಕನ್ನಡಮ್ಮನ ಕರುಣೆಯ ಕುವರನಾಗಿ ಕನ್ನಡಾಂಬೆಯ ನಿಷ್ಠಾವಂತ ಸೇವಕನಾಗಿ ಕನ್ನಡ ನೆಲ ಜಲ ಕನ್ನಡದ ನಾಡನುಡಿಗಾಗಿ ಪ್ರಾಣವನ್ನೇ ಪಣಕ್ಕೆ ಹಚ್ಚಿದ ಕನ್ನಡ ಪ್ರೇಮಿ ಕಲಿಕುವರನಾದ್ದು ಆತನ ಅಂಗಾಂಗಗಳಲ್ಲಿ ಹರಿಯುವ ರಕ್ತದ ಕಣ ಕಣಗಳಲ್ಲಿಯೂ ಸಹ ಕನ್ನಡದ ಅಕ್ಷರಗಳು ಅಚ್ಚಳಿಯದೆ, ಉಚ್ಚಸ್ವರದಿಂದ ಉಚ್ಚರಿಸುವ ಪಾವನಾತ್ಮ ಪುಣ್ಯಾತ್ಮ ಕನ್ನಡಮ್ಮನ ಚಲ್ವ ಕುವರ ಕಿತ್ತೂರನಾಡದೇವಿ ತಾಪಡೆದುಕೊಂಡಿಹ ಕುಲ ಕಂಠೀರವ ಸುಕುಮಾರ ಮಲ್ಲಸರ್ಜನೆ ದೊರೆ ಎಂದು ಕಿತ್ತೂರ ನಾಡ ಜನತೆ ಸಂತಸ ಉದ್ಗಾರ ತೆಗೆಯುತ್ತಿದ್ದರು.

ಇಂತಹ ಕನ್ನಡ ಪ್ರೇಮಿ ಪುತ್ರನನ್ನು ಹೆತ್ತ ತಂದೆತಾಯಿಗಳಂತೂ ಬಲು ಭಾಗ್ಯವಂತರು ಧರ್ಮರಾಜನಂತಹ ದೊರೆ ಮಲ್ಲಸರ್ಜನ ಆಳಿಕೆಯಲ್ಲಿ ಕಿತ್ತೂರ ನಾಡು ಸಮೃದ್ಧ ಬದುಕಿನ ಬೀಡು, ಕವಿ ಕಲಾವಿದ ಗಾಯಕ ಗಮಕಿಗಳ ನೆಲೆಬೀಡು. ಧರ್ಮ, ನ್ಯಾಯ, ನೀತಿಗಳ ಸಿವುಡು ಶಿವಭಕ್ತಿ ಶಿವತತ್ವ ಸಂಪತ್ತಿನಿಂದ ಧರ್ಮ. ಪರಾಯಣರೆನಿಸಿದ ಪ್ರಜರು ತಂದೆಯಂತೆ ಮಗಾ, ತಾಯಿಯಂತೆ ಮಕ್ಕಳು ಎನ್ನುವ ರೀತಿಯಲ್ಲಿ, ದೊರೆಯಂತೆ ಪ್ರಜರೂ ನೀತಿವಂತರೂ ಧರ್ಮವಂತರೂ ದಾನ ಧರ್ಮಗಳಲ್ಲಿ ಸದಾ ಹಸನ್ಮುಖಿಗಳಾಗಿ ದುಡಿಯುತ್ತಿದ್ದರು. ಇನಿತೆಲ್ಲ ಸೊಬಗಿನಿಂದ ಶೋಭಿಸುವ ಕಿತ್ತೂರ ನಾಡಿನಲ್ಲಿ ಶೂರ, ಧೀರ, ಗಂಭೀರ ಪ್ರಜರು ರಾಜನಿಷ್ಠುರ ಸ್ವಾಮಿನಿಷ್ಠೆ ಸೇವಕರು ಧರ್ಮ ನೀತಿಗಳ ಉಜ್ವಲ ಕೀರ್ತಿ ಬೆಳಗಿಸುವ ಶಿವಯೋಗಿಗಳು, ಸಜ್ಜನ ಸಾಧುಗಳು, ಸತ್ಪುರುಷರು ರಾಜ ಮನೆತನದ ಹಾಗೂ ನಾಡಿನ ಹಿತಾ ಹಿತಿಗಳ ದಿಶೆಯಲ್ಲಿ ಭವಿಷ್ಯವನ್ನೂ ಬಂಧುರಗೊಳಿಸುವ ಜಂಗಮಾರ್ಯ

ಮಠಾಧೀಶರು ಸದಾ ಕಿತ್ತೂರ ಭವಿಷ್ಯವನ್ನು ಉಜ್ವಲ ಗೊಳಿಸಲು ಹೆಣಗಾಡುತ್ತಿದ್ದರು.

ಕಿತ್ತೂರ ನಾಡ ತಾಯಿಯು ಕೀರ್ತಿಯು ಕಾವೇರಿಯಿಂದ ಗೋದಾವರಿಯ ವರೆಗೆ ಹಬ್ಬಿ ಪರರಾಜ್ಯದವರು ಅಚ್ಚರಿ ಪಡುವಂತೆ, ಹೆಚ್ಚಳಗೊಂಡಿತ್ತು. ಸಮೃದ್ಧ ಬದುಕಿನಿಂದಲೂ ಸಕಲೈಶ್ವರ್ಯಗಳಿಂದಲೂ, ಮಂಜುಳನಾದ ವೈಖರಿಯಲ್ಲಿ ಹರಿದು ನಲಿದು ನರ್ತಿಸುವ ಹಳ್ಳ ಕೊಳ್ಳ ಹೊಳೆಗಳಿಂದಲೂ ಕೆರೆ, ಭಾವಿ ತೋಟಪಟ್ಟಿ, ಹೊಲ, ಗದ್ದೆಗಳಿಂದಲೂ ವ್ಯಾಪಾರ ಉದ್ದಿಮೆ, ವ್ಯವಸಾಯಗಳಿಂದಲೂ ತುರಗ ಕರು ಬಸವಾದಿಪಶು ಸಂಗ್ರಹದಿಂದಲೂ ಜ್ಞಾನಸಂಪನ್ನ ವೈರಾಗ್ಯಮೂರ್ತಿ ತಪೋನಿಧಿಗಳಿಂದಲೂ ಪುರಾಣ ಪ್ರವಚನ ಪುಣ್ಯ ಕಾರ್ಯಗಳಿಂದಲೂ ದಾಸೋಹ ಧರ್ಮದಂತಹ ಅವ್ಯಾಹತವಾಗಿದ ಅನ್ನ ಪ್ರಸಾದದಿಂದ ಬಡವರು, ದೀನ ದಲಿತರು, ಜಂಗಮ ಚರಶ್ರೇಷ್ಠರು ಸಂತುಷ್ಟರಾಗಿ ಹರಿಸುವ ಶುಭಾಶೀರ್ವಾದಗಳಿಂದಲೂ ಕಿತ್ತೂರನಾಡ ಜನತೆ ಕೊರತೆಯನ್ನುವದನ್ನೇ ಅರಿಯದೆ, ಸಂತಸದ ಸವಿ ಬಾಳಿನ ಸುಗ್ಗಿಯನ್ನು ಸವಿಯುತ್ತಿದ್ದರು.

ಇದೆಲ್ಲವನ್ನೂ ಅರಿತ ಮಲ್ಲಸರ್ಜ ದೊರೆಯಾದರೂ ಪ್ರಜಾ ಜನರ ಯೋಗಕ್ಷೇಮದಲ್ಲಿ ತನಗರಿವಿಲ್ಲದಂತೆ ಅಪ್ಪಿ ತಪ್ಪಿ ಒಮ್ಮೆಯಾದರೂ ಶೋಭೆಗೆ ಕಾರಣನಾಗುತ್ತಿರಲಿಲ್ಲ, ತನ್ನನ್ನು ದೇವರಂತೆ ಕಾಣುವ ಪ್ರಜರನ್ನೂ ದೇವರಾಗಿಯೇ ಕಾಣುತ್ತ 'ರಾಜಾ ಪ್ರತ್ಯಕ್ಷ ದೇವತಾ' ಎಂಬ ನುಡಿಯನ್ನು ಸಾರ್ಥಕ ಪಡಿಸಿಕೊಂಡನು.

ಇಂತಿರ್ಪ ದೊರೆ ಮಲ್ಲಸರ್ಜನರಸಿ ತಲ್ಲೂರ ದೇಸಾಯರ ಮನೆತನದಲ್ಲಿ ಹುಟ್ಟಿ ಧರ್ಮಸಂಸ್ಕೃತಿಯಲ್ಲಿ ಬೆಳೆದು ಶಿವಧರ್ಮವನ್ನೂ ಅರಿತು ಅರಗಿಸಿಕೊಂಡು ಯಾವಾಗಲೂ ಶಿವಧ್ಯಾನ ಶಿವತತ್ವಗಳಲ್ಲಿ ಮನಸ್ಸು ಮೀಸಲಾಗಿಟ್ಟು ಜಂಗಮಾರ್ಯ ಪಾದಪೂಜಾಧಿಕಾರ್ಯಗಳಲ್ಲಿ ನಿಷ್ಠೆ ವಹಿಸಿ ಪರರನ್ನು ತಾಯಿಯಂತೆ, ಮಮತೆ ವಾತ್ಸಲ್ಯಗಳಿಂದ ಕಂಡು ಸಕಲ ಪ್ರಜಾ ಜನರರು ನಮ್ಮ ತಾಯಿ ನಮ್ಮ ಹಡೆದವ್ವ ಎಂದು ಮಮತೆಯ ಮೇಲು ಧ್ವನಿಯಿಂದ ಹಾಡಿ ಹೊಗಳುವಂತ ನಡೆದು ಬಂದ ರುದ್ರಮ್ಮ ಕಿತ್ತೂರ ಹಿರಿಅರಸಿ,

ಮಲ್ಲಸರ್ಜ ದೊರೆಯು ಬಾಳಸಂಗಾತಿಯಾಗಿ ಪತಿಯು ನೆರಳಿನೋಪಾದಿಯಲ್ಲಿ ಲಿಂಗನಿಷ್ಠೆಯಲ್ಲಿ ವೀರಶೈವ ಧರ್ಮತತ್ವದಲ್ಲಿ ಹುಟ್ಟಿದ ಮನೆಯ ಹೆಸರುಳಿಸಿ ಕೊಟ್ಟ ಮನೆಯ ಕೀರ್ತಿಮುಕುಟವಾಗಿದ್ದಳು. ಒಮ್ಮೆ ಪತಿಯಾದ ಮಲ್ಲಸರ್ಜ ದೊರೆಯು ಬೇಟೆಗೆಂದು ಕಾಕತಿಯ ಕಾಡಿನಲ್ಲಿ ಸಿಂಹ ಶಾರ್ದೂಲಗಳೊಡನೆ ಸೆಣಸ್ಯಾಡುವಾಗ ಧೀರತನದಲ್ಲಿ ಎದುರಾಗಿ ಒಂದು ಗಂಡುಡುಗೆಯ ಗಂಭೀರ, ನಾರಿ, ಕಲಿ ಕೇಸರಿ ಚನ್ನಮ್ಮನನ್ನು ಕಂಡು, ಕಲಿತನದ ಕಾದಾಟಕ್ಕೂ. ರತಿಯ ರೂಪಕ್ಕೂ. ಧೈರ್ಯಸಾಹಸಗಳಿಗೂ, ಮೋಹಿತನಾಗಿ ಅರಮನೆಗೆ ಹಿಂತಿರುಗಿದ ಮನು ವ್ಯಸನದಲ್ಲಿ ಅಶನದಾಸೆಯನ್ನು ಬಿಟ್ಟು ಮಣಿಮಂಚದಲ್ಲಿ ಮಂಡಿಸಿ ಯೋಚಿಸುತ್ತಿರಲು ಪತಿಯ ಆಸೆ ಆಕಾಂಕ್ಷೆಗಳೇನೆ ಇದ್ದರೂ ತೀರಿಸುವ ವಚನ ವಿತ್ತ ತನ್ನರಸರ ಆಸೆಯಂತೆ. ಕಾಕತಿಯ ಧೂಳಪ್ಪ ದೇಸಾಯರನ್ನೂ ಕಂಡು ಅವರ ಕುವರಿ ಕಲಿ ಕೇಸರಿ ಛಲವಂತೆ, ಚನ್ನಮ್ಮನನ್ನು ಪತಿಯ ಕೈ ಹಿಡಿದು ತನ್ನ ಧರ್ಮಪತ್ನಿ ಸ್ಥಾನದಲ್ಲಿ ಪಾಲನಿತ್ತು ಸಹಕರಿಸಿದ ಸದ್ಧರ್ಮಿಣಿ ರುದ್ರಮ್ಮನು ಚನ್ನಮ್ಮನ ಪಾಲಿಗೆ ಸವತಿ ಅಕ್ಕನಲ್ಲಾ ಹೆತ್ತೊಡಲ ಹಿತನೀಡುವ ತಾಯಿಯಾಗಿದ್ದಳು. ಬರುಬರುತ್ತ ಅಕ್ಕ ತಂಗಿಯರಿರ್ವರು ಮಲ್ಲಸರ್ಜ ದೊರೆ ಪಾಲಿಗೆ, ಗೌರಿಗಂಗೆಯರಂತೆ, ಲಕ್ಷ್ಮಿಪದ್ಮಾವತಿಯರಂತೆ, ಸಹಕಾರದ ಸಂಜೀವಿನಿಯರಾಗಿ ಅರಮನೆಯ ಆಡಳಿತದಲ್ಲಿ ಮಮತೆಯ ಮಾತೆಯರಾಗಿ ಗುರು ಲಿಂಗ ಜಂಗಮ ಪ್ರೇಮಿಗಳಾಗಿ ಬದುಕಿನ ಇತಿಹಾಸವನ್ನು ಭವ್ಯಗೊಳಿಸುತ್ತ ಬಂದರು.

ಮಲ್ಲಸರ್ಜದೊರೆಯ ಬಾಳಿನ ಇತಿಹಾಸದಲ್ಲಿ ವಿರಸ ವೈಮನಸ್ಸು ಜಿದ್ದು ಮತ್ಸರಗಳೆಂದರೆ ಏನು ಹೇಗೆ ಎನ್ನುವಂತಾಯಿತು. ಉತ್ಸಾಹ ಅನುವರತ ದೇವ ನೊಲುಮೆಯ ಧ್ಯಾನ ಸಂಕೀರ್ತನೆಯ ಸುಖಪ್ರದ ವಾತಾವರಣ ಹುಟ್ಟಿಕೊಂಡು ಬಾಳಿನಲ್ಲಿ ನೆಮ್ಮದಿ ದೊರೆಯಿತು.

ಇಂತಹ ಕಾಲದಲ್ಲಿ ಮಲ್ಲಸರ್ಜ ದೊರೆಯು ಒಂದು ದಿನ ಕೋಟೆಯ ಹೊರಬದಿಯಲ್ಲಿ ಸಿದ್ಧವಾದ ಉಪವನದಲ್ಲಿ ಸಂಚರಿಸುತ್ತಿರಲು ಉತ್ತರಪ್ರದೇಶದಿಂದ ನಾಲ್ವರು ವಿಭೂತಿ ಪುರುಷರು ಬಂದರು. ಆಗ ದೊರೆಯು ಮೊದಲೇ ಸತ್ಪುರುಷರೆಂದರೆ ಸಾಧು ಸಜ್ಜನರೆಂದರೆ ಶಿವಯೋಗಿ ಸಾಮ್ರಾಟರೆಂದರೆ

ಭಯಭಕ್ತಿಯಿಂದ ನಡೆದುಕೊಳ್ಳುವ ಭಾವನೆಯುಳ್ಳವನು ಅಂದಾಗ ಆ ವೈರಾಗ್ಯ ಮೂರ್ತಿಗಳನ್ನು ಕಂಡು ಭಯ ಭಕ್ತಿಯಿಂದ ನಮಸ್ಕರಿಸಿ ಅವರ ಪರಿಚಯ ಇರುವ ಗುರಿಯನ್ನು ಅರಿಯುವ ಸಾಹಸ ಮಾಡಿದನು.

ಆಗ ಹಿರಿಯ ಶಿವಯೋಗಿಗಳು ವೈರಾಗ್ಯನಿಧಿಗಳು ತಮ್ಮ ಪರಿಚಯವನ್ನು ತಿಳಿಸುತ್ತ ತಾವು ಮಡಿವಾಳೇಶ್ವರ ಶಿವಯೋಗಿ ತಮ್ಮೊಡನೆ ಸಂಚಾರದಲ್ಲಿ ಚಿತ್ತೈಸಿರುವ ಇವರು ವಿರೂಪಾಕ್ಷೇಶ್ವರ ಸ್ವಾಮಿಗಳು ಇವರು ಗುರುಸಿದ್ಧೇಶ್ವರ ಶಿವಯೋಗಿಗಳು ಹಾಗೂ ಅವರು ಮರ್ತೂಜಿ ಎಂಬ ಫಕೀರರು ಎಂದು ಪರಿಚಯನ ಮಾಡಿಕೊಟ್ಟರು. ಆಗ ಮಲ್ಲಸರ್ಜದೊರೆಯು ಅವರನ್ನು ಮಾನ್ಯಸನ್ಮಾನ ಸಕಲ ಸೌಕರ್ಯಗಳಿಂದ ಪರಾಂಬರಿಸುತ್ತ ಇದಿರ್ಗೊಂಡು ಭಯಭಕ್ತಿಯಿಂದ ಕರೆದುಕೊಂಡು ಬಂದು ಅರಮನೆಯಲ್ಲಿ ಉಳಿಸಿ ಅವರ ಪೂಜಾದಿ ಸಕಲ ಕಾರ್ಯಗಳಿಗೆ ಅನುಕೂಲ ಮಾಡಿಸಿದ್ದಲ್ಲದೇ ಮೃಷ್ಟಭೋಜ್ಯ ಗಳಿಂದ ತೃಪ್ತಿ ಪಡಿಸಿ ಅವರ ಸೇವೆಯನ್ನು ನಯವಿನಯ ವಿನೂತ ಭಕ್ತಿಯಿಂದ ಸಾಂಗಗೊಳಿಸಿದನು. ಅರಮನೆಯ ಆಂತರಿಕ ಒಡನಾಟದಲ್ಲಿದ್ದ ಶಿವಯೋಗಿ ಗಳು ಸಕಲ ವ್ಯವಸ್ಥೆಯಲ್ಲಿ ಶಿವಧ್ಯಾನದಲ್ಲಿ ಆನಂದವಾದ ಕಾಲ ಕಳೆಯು ತ್ತಿದ್ದರು. ರಾಣಿ ರುದ್ರಮ್ಮನಂತೂ ಮಡಿವಾಳೇಶ್ವರ ಸ್ವಾಮಿಗಳ ಸೇವೆ ಯಲ್ಲಿ ನಿರಂತರ ದವಡಿಯುತ್ತಿದಳು ಅದರಂತೆ ಕಿರಿಯರಾಣಿ ಚನ್ನಮ್ಮ ನಾದರೂ ಅಕ್ಕನ ಸಕಲಸೇವೆಯಲ್ಲಿ ಭಾಗವಹಿಸಿ ಸ್ವಾಮಿಗಳ ಕೃಪೆಯ ಪಾತ್ರಳಾದಳು.

ಹೀಗಿರಲು ಮಡಿವಾಳೇಶ್ವರ ಸ್ವಾಮಿಗಳು ಒಂದು ದಿನ ತಮ್ಮ ಲಿಂಗಾರ್ಚನೆಯನ್ನು ಮುಗಿಸಿ ಪಾದೋದಕವನ್ನು ರುದ್ರಮ್ಮರಾಣಿಗೆ ಕೊಡುತ್ತ ಮಗಳೇ ಸುಲಕ್ಷಣ ಪುತ್ರರತ್ನ ಜನನವಾಗುವ ಕಾಲ ಸನ್ನಿಹಿತವಾಗಿದೆ ಯಮ್ಮಾ ಆದರೆ ಎಂದು ನುಡಿಯನ್ನು ಅಷ್ಟಕ್ಕೆ ತೇಲಿಸಿಬಿಟ್ಟರು. ಹಾಗೆ ಚನ್ನಮ್ಮನಿಗೆ, ಪಾದೋದಕ ಕೊಡುತ್ತ ಮಗಳೇ ಮುಂದೆ ನಿನಗಿನ್ನೂ ಈ ರಾಜಕೀಯಭಾರ ಬಲವಾಗಿ ಬೀಳಬಹುದು ಹೆದರ ಬೇಡಮ್ಮ ಎಲ್ಲವೂ ಶ್ರೀ ಗುರು ಸಿದ್ಧೇಶ್ವರನ ಕೃಪೆಯೆಂದರು.

ಮಡಿವಾಳೇಶ್ವರ ಸ್ವಾಮಿಗಳ ಅಮರವಾಣಿಯಂತೆ ರುದ್ರಮ್ಮರಾಣಿಯು ಗಂಡು ಮಗುವನ್ನು ಹೆತ್ತು ಅರಮನೆಯ ವಾತಾವರಣವೇ ನಕ್ಕುನಲಿಯುವಂತಾಯಿತು. ಮಲ್ಲಸರ್ಜದೊರೆಯಂತೂ ಗಂಡು ಮಗುವಿನ ತಂದೆ ಎನಿಸಿ ಕಿತ್ತೂರ ರಾಜ್ಯದ ಉತ್ತರಾಧಿಕಾರಿಯ ಜನನವೆಂದು ಹಿಗ್ಗಿನಿಂದ ಬಲು ಉಬ್ಬಿನಿಂದ ಉತ್ಸವ ಜರಗಿಸಿ ಕಿತ್ತೂರ ಪುರವನ್ನು ತಳಿರು ತೋರಣಗಳಿಂದ ಶೃಂಗರಿಸಿ ಗುಡಿ ಗುಂಡಾರಗಳಲ್ಲಿ ಲಕ್ಷದೀಪೋತ್ಸವ ಜರಗಿಸಿ ಜಂಗಮಚರ ಬಳಗದವರಿಗೆ ದೀನ ದಲಿತರಿಗೆ ಬಡಬಗ್ಗರಿಗೆ ಅನ್ನದಾನ ವಸ್ತ್ರದಾನ ಎಥೇಚ್ಛವಾಗಿ ದೊರೆತು ದಕ್ಷಿಣೆಯ ಹಣವಂತೂ ಲಕ್ಷಕ್ಕೂ ಮೀರಿ ಸೂರೆಯಾಯಿತು ಆ ಸಂಭ್ರಮದ ಶೋಭೆಯಿಂದ ಕಿತ್ತೂರ ನಗರ ಇಂದ್ರನ ಅಮರಾವತಿಯನ್ನು ಹೋಲುವಂತೆ, ರಮ್ಯ ರಮಣೀಯವಾಗಿ ಕಂಗೊಳಿಸುವಂತಾಯಿತು.

ಕಳೆದವೀಗ ಆರುಮೂರು ತಿಂಗಳು ಉತ್ತರ ಪ್ರದೇಶದಿಂದ ಬಂದ ಯೋಗಿ ವೈರಾಗ್ಯ ಮೂರ್ತಿಗಳ ಮನಸ್ಸು ಕಿತ್ತೂರ ದೊರೆಯನ್ನು ಅಗಲದಷ್ಟು ನಿಶ್ಚಿಂತೆಯಿಂದ ಉಳಿದುಕೊಂಡೆವು ಆದರೆ ಜನ್ಮಭೂಮಿಯ ಋಣ ಎಲ್ಲಿಯವರೆಗೆ ಎನ್ನುವ ಮಾತಿನಂತೆ ಕಿತ್ತೂರ ಮಣ್ಣಿನ ಋಣ ಮುಗಿದಂತೆ ವೈರಾಗ್ಯ ಮೂರ್ತಿಗಳಾದ ಶ್ರೀ ಗುರು ಸಿದ್ಧ ಶಿವಯೋಗಿಗಳನ್ನೂ ಬಯಸಿ ಹುಬ್ಬಳ್ಳಿಯ ಸದ್ಭಕ್ತಮಂಡಳಿಯೊಂದು ಮಲ್ಲಸರ್ಜದೊರೆಗಳ ಸನ್ನಿಧಿಗೆ ಬಂದು ಮೂವರಲ್ಲಿ ಯಾರೊಬ್ಬರು ವೈರಾಗ್ಯ ವೀರ ವಿರಕ್ತ ತೇಜೋನಿಧಿಯನ್ನು ಕರುಣಿಸಬೇಕೆಂದು ಕೇಳಿಕೊಳ್ಳ ಹತ್ತಿದರು. ಆಗ ಮಲ್ಲಸರ್ಜದೊರೆಯು ಹಿರಿಯ ವೈರಾಗ್ಯ ಮೂರ್ತಿಗಳಾದ ಶ್ರೀಗುರು ಮಡಿವಾಳೇಶ್ವರ ಶಿವಯೋಗಿಗಳ ಅಪ್ಪಣೆಯ ಪ್ರಕಾರ ಗುರುಸಿದ್ಧಯೋಗೀಶ್ವರರನ್ನು ಹುಬ್ಬಳ್ಳಿಯ ಭಕ್ತ ಬಾಂಧವರಪಾಲಿಗೆ ಕಳುಹಿಸಿಕೊಟ್ಟನು. ಅದರಂತೆ ಮುಂದೆ ಒಂದು ದಿನ ಉಪ್ಪಿನ ಬೆಟಗೇರಿಯ ಹಲವು ಭಕ್ತರು ಬಂದು ನಮ್ಮ ಗ್ರಾಮದ ಧರ್ಮದೇಳಿಗೆಗೋಸ್ಕರ ಓರ್ವಯೋಗಿರಾಜನನ್ನು ಕರುಣಿಸುವ ಕೃಪೆಯಾಗಬೇಕೆಂದು ಬೇಡಿಕೊಳ್ಳಹತ್ತಿದರು. ಆಗ ಹಿರಿಯ ಶಿವಯೋಗಿ ಮಡಿವಾಳೇಶ್ವರರು ವಿರೂಪಾಕ್ಷೇಶ್ವರ ಸ್ವಾಮಿಗಳನ್ನು ಉಪ್ಪಿನಬೆಟಗೇರಿ ಭಕ್ತರ ಆಶೆಯಂತೆ ಕಳುಹಿಸಿದರು. ಈ ಮಹಿಮಾ ಶಾಲಿಗಳ ಮಹಿಮೆಗೆ ಬೆರಗಾಗಿ ಭಕ್ತ

ಜನತೆ ತಮ್ಮಿಂದ ತಾವೇ ಹುಡಿಕಿಕೊಂಡು ಬರಹತ್ತಿದರು.

ಒಂದು ದಿನ ಕಿತ್ತೂರಿನ ಮುಸಲ್ಮಾನ ಬಾಂಧವರೆಲ್ಲರೂ ಸವಿನಯ ಭಕ್ತಿಯಿಂದ ಮಲ್ಲಸರ್ಜನ ದೊರೆಗಳನ್ನು ಹಾಗು ಶ್ರೀ ಗುರು ಮಡಿವಾಳೇಶ್ವರ ಶಿವಯೋಗಿಗಳನ್ನು ಕಂಡು ತಮ್ಮ ಧರ್ಮದ ಪ್ರಕಾರ ಶ್ರೀ ಮುರ್ತುಜಾ ಫಕೀರನನ್ನು ಅನುಗ್ರಹಿಸಬೇಕೆಂದು ಬೇಡಿಕೊಳ್ಳಹತ್ತಿದರು ಆಗ ಸ್ವಾಮಿಗಳು ಅಯ್ಯಾ ಮುಸಲ್ಮಾನರಾದವರು ಸಹ ಶಿವ ಮಹಾದೇವ ಮುಕ್ಕಣ್ಣ ಹರನ ಒಲುಮೆಗಾಗಿ ಬಾಳುವ ಇಚ್ಛೆಯಿಂದ ನಡೆಯಬೇಕು. ಅಲ್ಲಾ ಅಲ್ಲಮ ಬೆರೆಯಲ್ಲ ಕಾಣಿರೊ ಜಾತಿಯ ಮತ್ಸರ ಕುಲ ಭೇಧ ಮಾಡುವದಕ್ಕಿಂತ ಗುಣಾವಗುಣಗಳಲ್ಲಿ ತಾರತಮ್ಯ ಕಲ್ಪಿಸಿರಿ ದೇವರು ಒಬ್ಬನೇ ನಾಮ ಹಲವು ಎಂಬ ಸಂಗತಿಯನ್ನರಿತು ಸಹಕಾರ ಭಾವನೆಯಿಂದ ಬಾಳುವವರಾಗಿರಿ ಕಿತ್ತೂರ ನಾಡದೇವಿ ಗುಡಿಯಶ್ರೇಯಸ್ಸಿಗಾಗಿ ಮುಸಲ್ಮಾನ ಬಂಧುಗಳೆನಿಸಿದ ನೀವುಗಳೆಲ್ಲ ಪ್ರಾಣವನ್ನೆ ಪಣಕ್ಕೆ ಹಚ್ಚಿ ಆ ತಾಯಿಯ ಮಾನ ರಕ್ಷಕರಾಗಿರಬೇಕು ಎಂದು ಬೋಧಿಸಿ ಮುರ್ತುಜೀ ಬಾಬಾನನ್ನು ಮುಸಲ್ಮಾನರ ಸಂಸ್ಕೃತಿಯ ಜಾಗ್ರತಿಗೋಸ್ಕರ ಕಿತ್ತೂರ ಮುಸಲ್ಮಾನ ಬಂಧು ಬಳಗದವ ವಶಕ್ಕೊಪ್ಪಿಸಿದರು.

ಬಳಿಕ ಮಲ್ಲಸರ್ಜ ದೊರೆಯು ಶ್ರೀ ಗುರು ಮಡಿವಾಳೇಶ್ವರ ಶಿವಯೋಗಿಗಳನ್ನು ಅನನ್ಯ ಭಕ್ತಿ ವಿಶ್ವಾಸಗಳಿಂದ ಸೇವಿಸುತ್ತ ಅವರ ಮನ ವಲಿಸಿ ಮೊದಲಿನ ಕಲ್ಮಠವನ್ನು ವಿಸ್ತಾರಗೊಳಿಸಿ ಉತ್ತಮ ಉನ್ನತ ವಿಶಾಲ ಮಟ್ಟದಲ್ಲಿ ಮಠ ಕಟ್ಟಿಸಿ ಗುರುಗಳ ಅನುಗ್ರಹ ಸಂಪಾದಿಸಿದ್ದಲ್ಲದೆ, ನಿತ್ಯವು ರುದ್ರಮ್ಮಾಜಿಯು ಮನದಾಸೆಯಂತೇ ಗುರುಗಳ ಪೂಜಾನುಷ್ಠಾನಾದಿಗಳು ಅರಮನೆಯಲ್ಲಿ ನಡೆಯುವ ಏರ್ಪಾಡು ಮಾಡಿದರು. ಪ್ರಸಂಗ ವಶಾತ್ ತಪ್ಪಿದರೂ ಗುರು ಮಡಿವಾಳೇಶ್ವರ ಪಾದೋದಕವು ಅರಮನೆಗೆ ತಲುಪಿ ರುದ್ರಮ್ಮಾಜಿಯವರು ಚನ್ನಮ್ಮನವರು ಇತರ ರಾಣಿ ವಾಸದ ಬಳಗ ಸೇವಿಸುವವರೆಗೆ ರುದ್ರಮ್ಮ ಅನ್ನಹಾರಾದಿಗಳನ್ನು ಮುಟ್ಟುತಿದ್ದಲ್ಲ. ಅಲ್ಲದೆ, ಮಲ್ಲಸರ್ಜ ದೊರೆಯು ಗುರು ಪರಂಪರೆಯನ್ನು ಕಾಯ್ದು ಉಳಿಸುವದರ ಸಲುವಾಗಿ ಶ್ರೀ ಗುರು ಮಡಿವಾಳೇಶ್ವರ ಶಿವಯೋಗಿಗಳನ್ನು

ರಾಜಗುರು ಪಟ್ಟದಿಂದ ಸಂತುಷ್ಟಗೊಳಿಸಿ ತನ್ನಿಷ್ಟದಂತೆ ಭೋಗ ಭಾಗ್ಯಗಳನ್ನು ಪಡೆದು ಗುರು ಶ್ರೀ ಮಡಿವಾಳೇಶ್ವರ ಸ್ವಾಮಿಗಳ ಕೃಪೆಗೆ ಪಾತ್ರನಾದನು.

———

೨ನೇ ಪ್ರಕರಣ

ಶಿಶು ಮಡಿವಾಳೇಶ್ವರರ ಉದಯ

ಶ್ರೀ ಗುರು ಮಡಿವಾಳೇಶ್ವರ ಸ್ವಾಮಿಗಳ ಲಿಂಗಪೂಜಾಕ್ರಮ ಗುರು ಮಡಿವಾಳ ಸ್ವಾಮಿಗಳ ನಿತ್ಯ ಕ್ರಮಗಳಾದ ಲಿಂಗಾರ್ಚನೆ ಅನುಷ್ಠಾನ ಕ್ರಮಗಳು ಮಲ್ಲಸರ್ಜ ದೊರೆಯನ್ನು ರಾಣಿ ರುದ್ರಮ್ಮ ಚನ್ನಮ್ಮರನ್ನೂ ಬೆರಗುಗೊಳಿಸಿದವು. ನಸುಕಿನ ವೇಳೆಯಲ್ಲಿ ಎದ್ದು ಏಳಯ್ಯ ಲಿಂಗಯ್ಯ ಏಳೇಳು ಬೆಳಗಾಯಿತು. ಎನ್ನ ಮನದ ಮಲಿನತೆಯು ಹೊಡೆದೋಡಿಸಲು ಏಳು ಬಾರಯ್ಯ ಲಿಂಗಯ್ಯ ಯನ್ನತನುಮನ ಶುದ್ಧಿಗೆ, ಬುದ್ಧಿಗೊಂಡು ಬಾರಯ್ಯ ತಂದೆ ಲಿಂಗಯ್ಯ ಎನ್ನ ಪುಣ್ಯವಂ ಬೆಳೆಯಿಸಿ ಕಾಪಾಡು ಬಾರಯ್ಯ ತಂದೆ ಲಿಂಗಯ್ಯ ಎನ್ನಸರ್ವ ಅಪರಾಧಗಳಂ ಕಳೆದು ಶಾಂತಿ ಸಮತಾ ಭಾವದ ಬೀಜವ ಬಿತ್ತಲು ಎದ್ದು ಬಾರಯ್ಯ ಲಿಂಗಯ್ಯ, ಯೋಗಸಾಧನೆಯ ಮೂಲಾಧಾರ ಎನಿಸಿ ಬಾರಯ್ಯ ಬಾ ಲಿಂಗಮೂರುತಿಯೇ ಎಂದು ಲಿಂಗಯ್ಯನನ್ನು ಸ್ತುತಿಸುತ್ತ ಬೆಳಗಿನ ಜಾವದಲ್ಲಿ ಎದ್ದು ಪ್ರಾತರ್ವಿಧಿಗಳನ್ನೂ ತೀರಿಸಿಕೊಂಡು ಮಲ್ಲಸರ್ಜನ ದೊರೆಯು ವ್ಯವಸ್ಥೆಯಿಂದ ಸಿದ್ಧವಾಗಿ ತರತರದ ಪುಷ್ಪ ವೃಕ್ಷಗಳಿಂದಲೂ ರಮ್ಯ ರಮಣೀಯವಾದ ಬಳ್ಳಿ ಗಿಡಗಳ ಸಾಲುಗಳಿಂದಲೂ ಹಾಸು ಬಂಡೆಗಳ ವಿಶ್ರಾಂತಿಯ ಕಲ್ಲು ಬಂಡೆಗಳಿಂದಲೂ ಪುಷ್ಪ ಪರಾಗ ಚಿಮ್ಮಿಸುವಾನೆಯ ಸುಗಂಧವನ್ನು ಗಾಳಿಯಲ್ಲಿ ತೇಲಿಸಿ ಸುಂದರ ಬದು ಕನ್ನು ಸುಮನೋಹರ ಗೊಳಿಸುವ ಮಲ್ಲಿಗೆ ಜಾಜಿ ಸಂಪಿಗೆ ಸೇವಂತಿಗೆ, ಕೇದಿಗೆಯುಗುಂಪು ಒಂದೇ ಎರಡೇ ಎತ್ತ ನೋಡಿದರೂ ಸುಂದರ ಸುಮನೋಹರ ವಾತಾವರಣವನ್ನೇ ಬಿತ್ತರಿಸುವ ಉಪವನದಲ್ಲಿ ಮೊಲ ಗಿಳಿ

ಕೋಗಿಲೆ ಇನ್ನೂ ಹಲವು ತರದ ಪ್ರಾಣಿಪಕ್ಷಿಗಳಿಗೂ ಕೇಂದ್ರ ಸ್ಥಾನವಾಗಿರುವ ಉಪವನಕ್ಕೆ ಚಿತ್ರೈಸಿದ ಮಡಿವಾಳೇಶ್ವರ ಸ್ವಾಮಿಗಳು ಪತ್ರಿಪುಷ್ಪಾದಿಗಳ ನ್ನೆತ್ತಿ ಒಯ್ದು ತಮ್ಮ ಲಿಂಗಾರ್ಚನೆಯನ್ನು ಸಾಂಗಗೊಳಿಸುವ ಹಿಂದಿನ ಶಿವಯೋಗ ಸಾಧನೆಯಂತೆ ಅಂದು, ಹೂಗಳನ್ನು ಬಿಡಿಸಲು ಮುಂದಾಗು ತ್ತಿರಲು ತಮ್ಮ ಎದುರಿನ ಜೇದಿಗೆಯ ಗುಂಪಿನಿಂದ ನಾಗರಾಜನು ಧಾವಿಸಿ ಬಂದು ಸ್ವಾಮಿಗಳನ್ನು ಕಂಡು ಗಕ್ಕನೇ ನಿಂತು ಹೆಡೆತೆರೆದು ನಮಸ್ಕರಿಸುವ ರೀತಿಯಲ್ಲಿ ಹೆಡೆಯನ್ನು ಮೂರು ನಾಲ್ಕು ಬಾರಿ ಪಾಲಿಸಿ ಬಿನ್ನೈಸಿಕೊಳ್ಳು ವದಾಯಿತು !

ಆಗ ಸರ್ಪರಾಜನ ಈ ವಿಚಿತ್ರ ರೀತಿಯಿಂದ ಸ್ವಾಮಿಗಳಿಗೆ ಅಚ್ಚರಿ ಯಾಯಿತು. ಸ್ವಾಮಿಗಳು ಅದೆಷ್ಟು ಹೊತ್ತು ನಿಂತುಕೊಂಡರೂ ಕಡೆಗೆ ಡೆದು, ಮಲ್ಲಿಗೆಯ ಕಂಟಿಯೊಂದರತ್ತ ಹೋಗುವಂತೆ, ಹಾವು ಮುಂದೆ ಸಾಗುವದು ಸ್ವಾಮಿಗಳು ಮುಂದಾಗದಿರೆ, ಮತ್ತೆ ನಿಲ್ಲುವದು. ಇದರಿಂದ ಗುರು ಮಡಿವಾಳೇ ಶ್ವರ ಸ್ವಾಮಿಗಳಿಗೆ ಮತ್ತಿಷ್ಟು ಅಚ್ಚರಿಯಾಯಿತು. ಬಳಿಕ ಮಡಿವಾಳೇಶ್ವರ ಸ್ವಾಮಿಗಳಿಗೆ ನಸುಕಿನ ವೇಳೆಯಲ್ಲಿ ಶಿವನು ಕನಿಸಿನಲ್ಲಿ ಕಂಡು ಕಥಿಸಿದ ನುಡಿಯು ಸ್ಮೃತಿಯಲ್ಲಿ ಮೂಡಿ ದೇವಾ ಏನಿದು ನಿನ್ನ ವಿಚಿತ್ರ ಲೀಲೆ? ಸಾಕ್ಷಾತ್ ದಕ್ಷಸಂಹಾರದ, ರುದ್ರಭಯಂಕರ ನಿನ್ನ ಸುತ ವೀರಭದ್ರನನ್ನು ಅನುಗ್ರಹಿಸಿ ಕಳುಹಿಸುವಾಗಿ ಪೇಟೆ ವೀರಭದ್ರಸ್ವಾಮಿಯು ಅಯೋನಿಜನಾಗಿ ದೊರೆ ಯುವ ಮಾರ್ಗವನ್ನು ತೋರಿಸುವದಕ್ಕಾಗಿ ಉರಗ ಭೂಷಣ ಉರಗ ನನ್ನೆ ಕಳುಹಿಸಿರುವಿಯಾ ? ಅರ್ಥವಾಯಿತು. ಅನಾದಿ ಪುರುಷಾ ನಿನ್ನ ಲೀಲೆ ಅಗಾಧ ಅಗಮ್ಯ, ಎಂದು ಶಿವನನ್ನು ಕೊಂಡಾಡುತ್ತ ನಾಗರಾಜ ಮುಂದಾಗ ದಾರಿ ಯನ್ನು ತೋರಿಸುತ್ತ ಸಾಗಿರಲು ಹಿಂದಿನಿಂದ ಮಡಿವಾಳೇಶ್ವರ ಸ್ವಾಮಿಗಳು ನಾಗರಾಜನನ್ನು ಬೆಂಬತ್ತಿ ಸಾಗಿದರು. ಸ್ವಲ್ಪದೂರ ಹೂದೋಟದಲ್ಲಿ ಮುಂದಾಗುತ್ತಿರಲು ಹಸುಗೂಸೊಂದು ಅಳುವ ಧ್ವನಿ ಕೇಳಹತ್ತಿತು.

ಆಗ ಸ್ವಾಮಿಗಳು ಧ್ವನಿಯು ಬರುತ್ತಿರುವ ಸ್ಥಾನಕ್ಕೆ ಬಂದು ನೋಡ ಲಾಗಿ ಹಸುಗೂಸೊಂದು ಮೆತ್ತನೆಯ ಹುಲ್ಲು ಹಾಸಿಗೆಯ ಮೇಲೆ ಮಲಗಿದೆ. ಮೇಲೆ ಮಲ್ಲಿಗೆಯ ಬಳ್ಳಿ ನೆರಳಾಗಿ ಪುಷ್ಪ ರಾಶಿಯಿಂದ ಕೂಸು ಮುಚ್ಚಿ

ಹೋಗಿದೆ ಅಲ್ಲಿ ಸಮೀಪದಲ್ಲಿ ನಾಲ್ಕಾರು ನಾಗಸರ್ಪಗಳೂ ಕೂಸನ್ನು ರಕ್ಷಿಸಲು ಬಂದ ಸೈನಿಕರಂತೆ, ಸುತ್ತಲೂ ಎಚ್ಚರಿಕೆ ವಹಿಸಿ, ಪಹರೆ ತಿರುಗುವಂತೆ, ಮಲ್ಲಿಗೆಯ ಕಂಟಿಯ ಸುತ್ತಲೂ ತಿರುಗಾಡುತ್ತಿವೆ, ಹಿರಿಯ ನಾಗರಾಜನು ಸ್ವಾಮಿಗಳನ್ನು ಕರೆದುಕೊಂಡುಬಂದು ಕೂಸು ಸ್ವಾಮಿಗಳ ದೃಷ್ಟಿಗೆ ಕಂಡೊಡನೆ ಅದೆಲ್ಲಿ ಮಾಯವಾದವೋ ? ಅದು ಹೇಗೆ ಮಾಯವಾದವೋ ? ಆ ಮಾಯಾರಿ ಶಿವನೇ ಬಲ್ಲ ಎನ್ನುವಂತೆ ಗುಪ್ತವಾಗಿ ಬಿಟ್ಟವು.

ಆಗ ಮಡಿವಾಳೇಶ್ವರ ಸ್ವಾಮಿಗಳಿಗೆ, ಮತ್ತಷ್ಟು ಆಶ್ಚರ್ಯವಾಯಿತಾದರೂ ತಮ್ಮ ಅನುಷ್ಠಾನದ ಫಲ ದೊರೆಯಿತೆಂದು ಶಿವನನ್ನು ಕುರಿತು ತಾವು ಗೈದ ತಪಸ್ಸು ಸಾರ್ಥಕವಾಯಿತೆಂದು ಕೂಸನ್ನು ತೆಗೆದುಕೊಂಡು ಲಗುಬಗೆಯಲ್ಲಿ ಮಠಕ್ಕೆ ಬಂದು ತಮ್ಮ ಮರಿದೇವರೆನಿಸಿದ ಪ್ರಭುದೇವರನ್ನು ಕರೆದು ತಾವು ಹೂದೋಟದಿಂದ ತೆಗೆದುಕೊಂಡುಬಂದ ಕೂಸನ್ನು ತೋರಿಸುತ್ತ ಅಯ್ಯಾ ಪ್ರಭುದೇವಾ, ಈ ಕೂಸಿನ ಸರ್ವ ಲಕ್ಷಣಗಳನ್ನು ಪರೀಕ್ಷಿಸಿ ನೋಡಯ್ಯಾ ಈಶ್ವರಾಂಶ ಸಂಭೂತನಂತೆ ತೋರುತ್ತಿದೆ. ಮಗುವಿನ ಲಕ್ಷಣಗಳು ನಮ್ಮ ಕಂಗಳಿಗೆ ಅಭೂತಪೂರ್ಣ ಆನಂದವನ್ನುಂಟು ಮಾಡುತ್ತಿರುವವು, ಎಂದು ಕೂಸನ್ನು ಹೊಗಳುತ್ತ, ಪ್ರಭುದೇವ, ನಿನ್ನೆ ಬೆಳಗಿನ ಜಾವದಲ್ಲಿ ಪರಶಿವನು ಕನಸಿನಲ್ಲಿ ಕಾಣಿಸಿಕೊಂಡು ಅಯ್ಯಾ ಶಿವಯೋಗಿ ಸತ್ಪುರುಷನೆ ನಿನ್ನ ತಪಸ್ಸಿನ ಫಲವಾಗಿ ನನ್ನ ಸುಕುಮಾರ ವೀರಭದ್ರನು ಅಯ್ಯೋ ನಿಜ ಕುಮಾರನಾಗಿ ಅನಾಥ ಶಿಶುವಾಗಿ, ಪತ್ರಿ ಪುಷ್ಪಾದಿಗಳನ್ನು ಎತ್ತುವ ಸಮಯದಲ್ಲಿ ಹೂ-ದೋಟದ ಮಧ್ಯದಲ್ಲಿ ಹುಲ್ಲು ಹಾಸಿಗೆಯಲ್ಲಿ ಕಾಣಿಸಿ ಕೊಳ್ಳುವನು, ಆತನು ನಿನಗೆ ದೊರಕುವವರೆಗೆ, ನಾಗಸಮೂಹವೆ, ಕಾವಲುಗಾರ ಸೈನಿಕರಾಗಿ ಕೂಸಿನ ಕಾವಲು ಮಾಡುತ್ತಿರುವರು, ಕೂಸನ್ನು ನೋಡಿ ಪಡೆದ ನಾನು, ನಿನ್ನ ಮುಂದಿನ ಅಧಿಕಾರಿ ಮದೇವರೆಂದು ತೀರ್ಮಾನಿಸಿ, ಪಾಲನೆ ಪೋಷಣೆ ಮಾಡುವದನ್ನು ಮಾತ್ರ ಮರೆಯಬೇಡಾ ಹಸುಳೆ ಹದವಳಿದುಬಾಲವಯದ ಅಲ್ಲಿ ಕಾಲಿಡುವ ಪರಿಭುಂತರ ಕಿತ್ತೂರ ನೆರೆದೊರೆಯ ಹಿರಿಯರಾಣಿ ರುದ್ರಮ್ಮನ ಪಾಲನೆಯಲ್ಲಿ ಮಗುವನ್ನು ಬಿಟ್ಟು ಕೊಡುವಂತೆ ತಿಳಿಸಿದ್ದಲ್ಲದೆ ಕಿರಿಯರಸಿ ಚನ್ನಮ್ಮನ ವೀರ ವೃತ್ತಿಗನುಸಾರವಾಗಿ ಶೂರ ಪುರುಷ ಉತ್ತಮ ನಾಗುವದರಲ್ಲಿ

ಸಂದೇಹವಿಲ್ಲವೆಂದು ಸವಿಸ್ತಾರವಾಗಿ ಈ ಕೂಸಿನ ಸರ್ವ ಲಕ್ಷಣಗಳನ್ನೂ ತಿಳಿಸಿ ಅಂತರ್ಧಾನನಾದನು. ಅಂದ ವೇಳೆ, ಪರಶಿವ ಪರಮಾತ್ಮನ ಆಜ್ಞೆಯಂತೆ ಈ ಕಂದನನ್ನು ರಾಣಿ ರುದ್ರಮ್ಮ ಚನಮ್ಮರ ಉಡಿಯಲ್ಲಿ ಹಾಕುವದು ನಮ್ಮ ಕರ್ತವ್ಯ ಮಠಾದಿ ಪತಿಗಳಾದ ನಿಮ್ಮಿಂದ ಹಸುಗೂಸಿನ; ಪಾಲನೆ ಸಾಧ್ಯವಿಲ್ಲ ಹೋಗು ರಾಣಿಯರೊಡನೆ ಮಲ್ಲಸರ್ಜದೊರೆಯನ್ನು ಬರಹೇಳು ಎಂದು ಪ್ರಭು ದೇವರನ್ನು ಅರಮನೆಗೆ ಕಳುಹಿಸಿದರು. ಪ್ರಭುದೇವರಾದರು. ಗುರುಗಳ ಅಪ್ಪಣೆ ಯಂತೆ ರಾಣಿವಾಸಕ್ಕೆ ತೆರಳಿದರು.

ಇತ್ತ ಸ್ವಾಮಿಗಳು ಹಸುಗೂಸನ್ನು ಎದುರು ಗದ್ದುಗೆಯ ಕಂಬಳಿಯಲ್ಲಿ ಹಾಕಿಕೊಂಡು ನಿತ್ಯ ನೇಮಕ್ಕಿಂತಲೂ ಅತಿ ಉತ್ಸವದಿಂದ ಲಿಂಗ ಪೂಜಾದಿ ಕಾರ್ಯವನ್ನು ಮಾಡತೊಡಗಿದರು. ಲಿಂಗಾರ್ಚನೆಯ ಸಮಯದಲ್ಲಿ ಸ್ವಾಮಿ ಗಳು ಲಿಂಗವನ್ನು ತಮ್ಮ ಅಂಗೈಯಲ್ಲಿ ಹಿಡಿದು ಭಸ್ಮ ಗಂಧಾಕ್ಷತೆ ಪತ್ರಿಪುಷ್ಪಾದಿ ಗಳಿಂದ ಅರ್ಪಿಸಿ ಪೂಜಿಸುವದನ್ನು ಒಟ್ಟಲಗಣ್ಣು ಬಿಟ್ಟು ನೋಡುತ್ತ ಮಲಗಿದ ಶಿಶು ಕಾಲಕಾಲನೇ ನಗುವಂತೆ ಸ್ವಾಮಿಗಳಿಗೆ ಕಂಡು ಬರುವದಾಯಿತು ಅಂದಿನ ಲಿಂಗಪೂಜಾಕ್ರಮವು ಎಂದಿಗಿಂತಲೂ ಎಥೇಚ್ಛ ಆನಂದದಿಂದಸಾಗಿ ಸ್ವಾಮಿಗಳು ಸಂತೋಷಪಡಹತ್ತಿದ್ದರು ಅಷ್ಟರಲ್ಲಿ ಮಲ್ಲಸರ್ಜದೊರೆ ಹಾಗೂ ರುದ್ರಮ್ಮ ಚನ್ನಮ್ಮ ರಾಣಿಯರು ಕಲ್ಮಠಕ್ಕೆ ಬಂದು ಮಡಿವಾಳೇಶ್ವರ ಶಿವಯೋಗಿಗಳ ಪಾದಕ್ಕೆ ಪೊಡಮಟ್ಟ ತಮ್ಮನ್ನು ಕರೆಯಿಸಿದ ಕಾರಣವನ್ನರುಹಿ ಕೃತಾರ್ಥನ್ನಾಗಿ ಮಾಡಬೇಕೆಂದು ತಮ್ಮಪ್ಪಣೆಯಂತೆ, ನಾವುಗಳು ನಡೆದುಕೊಳ್ಳಲು ಸಿದ್ಧರಿರುವ ದಾಗಿಯೂ ಬಿನ್ನೈಸಿಕೊಂಡರು.

ಆಗ ಸ್ವಾಮಿಗಳು ತಾವು ತೆಗೆದುಕೊಂಡು ಬಂದ ಅನಾಥ ಶಿಶುವನ್ನು ತೋರಿಸುತ್ತ ದೊರೆಗಳೇ ಈ ಶಿಶುವು ಸೃಷ್ಟಿಗಾರ ಆಜ್ಞೆಯಂತೆ ಭೂಮಿ ಯನ್ನೂ ತನ್ನ ಉಜ್ವಲ ತಪೋಬಲದಿಂದ ಯೋಗ ಬಲ ಸಾಮರ್ಥ್ಯದಲ್ಲಿ ಬೆಳಗಬಲ್ಲದೆಂದು ನಾವು ಅರಿತುಕೊಂಡಿರುವೆವು. ಕಾರಣ ಈ ಕಂದನನ್ನು ಸಾಕಿ ಸಲುಹಿ ಜಗತ್ಕಲ್ಯಾಣವನ್ನುಂಟು ಮಾಡುವದು ನಮ್ಮ ನಿಮ್ಮ ಕರ್ತವ್ಯ ವಾಗಿರುವದು ಈ ಜಗತ್ತು ಮೋಹ ಮಾಯಾ ಮದ ಮತ್ಸರಗಳಿಂದ ತುಂಬಿ ಅರುವಿನ ಕಣ್ಣುಮುಚ್ಚಿ ಮದಾಂಧತೆಯಲ್ಲಿ ಬಿದ್ದು ಒದ್ದಾಡುತ್ತಿರುವ

ದರಿಂದ ಪರಶಿವನು ಜಗತ್ಕಲ್ಯಾಣಕ್ಕಾಗಿ ಲೋಕಹಿತಾರ್ಥವಾಗಿ ಜನತೆಯ ಅಭ್ಯುದಯಕ್ಕಾಗಿ ತನ್ನ ಅವತಾರವನ್ನು ಈ ತೆರನಾಗಿ ರೂಪಗೊಳಿಸುವನೆಂದು ತಿಳಿ. ಮಹಾತ್ಮರಾಗಿ ಯೋಗಿಗಳೆನಿಸಿ ಹುಟ್ಟಿ ಬಂದವರು. ಅನಾಥರಂತೆ ಅವತರಿಸಿ ಯೋನಿ ಜನ್ಮದ ಕೀಳುತನದಿಂದ ಹೊರತಾಗಿ ಜಗದ ಜೀವಿಗಳ ಉದ್ಧಾರಗೈಯುವವರೆನ್ನುವ ನುಡಿಯಲ್ಲಿ ತಿಲಮಾತ್ರವು ಸಂಶಯವಿಲ್ಲ.

ಕಿತ್ತೂರ ನಾಡು ಅದರಲ್ಲಿ ಕರ್ನಾಟಕ ಜನತೆಯು ಅಜ್ಞಾನದ ಅಂಧಕಾರದಲ್ಲಿ ಸಿಲುಕಿ ಮುಂಬರುವ ಕಷ್ಟನಷ್ಟಗಳಿಗೀಡಾಗಿ ಇರಲೆಂದು ಸುಜ್ಞಾನದ ಸುಪ್ರಭೆಯ ಉಜ್ವಲ ಬೆಳಕು ಈ ಕಂದನೆಂದು ತಿಳಿದು ಈತನ ಲಾಲನೆ ಪಾಲನೆಯ ಹಿರಿದಾದ ಹೊರೆಯನ್ನು ನಿಮ್ಮಗಳ ಪಾಲಿಗೆ ಒಪ್ಪಿಸಬೇಕೆಂದು ಕರೆ ಕಳುಹಿಸಬೇಕಾಯಿತು. ಅನಾಚಾರವನ್ನು ತೊಲಗಿಸಿ ಸದಾಚಾರದ ಮಾರ್ಗವನ್ನು ಕರುಣಿಸುವ ಮಹಾತ್ಮನಾಗಿ ಬಂದು ನಿನ್ನ ನಾಡಿನ ಕೀರ್ತಿಯನ್ನು ಮತ್ತಷ್ಟು ಹೆಚ್ಚಿಸುವ ಈ ಶಿಶು ಸಾಮಾನ್ಯವಾದದ್ದಲ್ಲ. ನಾವು ಲಿಂಗಾರ್ಚನೆಯಲ್ಲಿದ್ದಾಗಲೇ ಕೂಸಿನ ಲೀಲಾ ವಿಲಾಸವನ್ನು ಕಂಡು ಬೆರಗುಗೊಂಡಿದ್ದೇವೆ. ಹೇಗೂ ರುದ್ರಮ್ಮರಾಣಿಯವರು ದೈವನಿರ್ಣಯದಂತೆ ಹಸುಗೂಸಿನ ತಾಯಿ ಎಂದ ಬಳಿಕ ಈ ಕೂಸಿನ ಪೋಷಣೆಗೆ ಮತ್ತಿಷ್ಟು ಅನುಕೂಲವಾಯಿತು ಎಂದು ನುಡಿದವರು ಧರ್ಮವಿಧಿಯ ಪ್ರಕಾರ ಮಡಿವಾಳೇಶ್ವರ ಶಿವಯೋಗಿಗಳು ಪರಶಿವ ಪರಂಜ್ಯೋತಿ ಪರಮಾತ್ಮ ನಿನ್ನ ಲೀಲೆ ಅಗಾಧನೆಂದು ಶಿವನನ್ನು ಕೊಂಡಾಡುತ್ತ ಕೂಸಿಗೆ ಲಿಂಗ ಸಂಸ್ಕಾರ ಕೊಟ್ಟು ಹಣೆಯನ್ನು ಭಸ್ಮದಿಂದ ಅಲಂಕರಿಸಿ ಮನದಣಿಯುವಂತೆ ಮುದ್ದಾಡಿ ರಾಣಿ ರುದ್ರಮ್ಮನ ಮಡಿಲಲ್ಲಿ. ಹಾಕಿ ಹೃದಯ ತುಂಬ ಆಶೀರ್ವದಿಸಿ ನಿಮ್ಮ ಸುಕುಮಾರನೊಡನೆ ಈ ಶಿಶುವನ್ನು ಜೋಪಾನ ಮಾಡುವ ತಾಯಿಯಾಗಬೇಕೆಂದು ರುದ್ರಮ್ಮರಾಣಿಯನ್ನು ಹರಿಸಿ ಚನ್ನಮ್ಮನತ್ತ ಹೊರಳಿ ತಾಯಿ ನಿನ್ನ ವೀರ ವೃತ್ತಿಗನುಗುಣವಾಗಿ ವಿರೋಜನ ವಿದ್ಯಾ ಬುದ್ಧಿಗಳನ್ನು ಈ ಕಂದನಿಗಿತ್ತು ಪಡೆದವ್ವಗಳ ಕರ್ತವ್ಯ ಮಾಡಿರಿ ಎಂದು ಅಪ್ಪಣೆ ಮಾಡಿ ಮಡಿವಾಳ ಸ್ವಾಮಿಗಳ ವಚನವನ್ನು ಅಕ್ಷರಸಹ ಪಾಲಿಸುವ ಭರವಸೆ ಎಂದು ಶ್ರೀ ಸ್ವಾಮಿಗಳ

ಶ್ರೀಪಾದ ಮುಟ್ಟಿ ನಮಸ್ಕರಿಸಿ ಮಗುವನ್ನು ಪಡೆದುಕೊಂಡು ಹೃದಯತುಂಬಿ ಬಂದ ಆನಂದದಿಂದ ಅಕ್ಕತಂಗಿಯರೀರ್ವರು ದೊರೆ ಮಲ್ಲಸರ್ಜನೊಡಗೂಡಿ ಮತ್ತೊಮ್ಮೆ ಇನ್ನೊಮ್ಮೆ ಮುನ್ನೊಮ್ಮೆ ಮಡಿವಾಳೇಶ್ವರ ಸ್ವಾಮಿಗಳ ಕರುಣೆಯನ್ನು ಕೊಂಡಾಡುತ್ತಾ ಅರಮನೆಗೆ ತೆರಳಿದರು.

———

೩ ನೇ ಪ್ರಕರಣ

ಮಡಿವಾಳೇಶ್ವರರ ಬಾಲ್ಯ

ಹಾಗೂ ಹಿರಿಯ ಮಡಿವಾಳೇಶ್ವರ

ಸ್ವಾಮಿಗಳು ಲಿಂಗೈಕ್ಯರಾದದ್ದು ಮತ್ತು ಪ್ರಭುದೇವರಿಗೆ ರಾಜಗುರು ಪರಂಪರೆಯ ಪಟ್ಟ ಕಲ್ಮಠದ ಅಧಿಕಾರದಿಂದ ಪ್ರಭುದೇವರು ಪ್ರಭುಸ್ವಾಮಿಗಳಾದರು. ಹಿರಿಯ ರಾಣಿ ರುದ್ರಮ್ಮನು ತನ್ನೊಡೆಯ ಸತ್ತು ಹಾಗು ತನ್ನೊಡಲ ಮುತ್ತಾಗಿ ಬೆಳೆಯುತ್ತಿರುವ ಕಂದನಿಗೆ ಹೆಸರಿಡುವ ಕಾರ್ಯವನ್ನು ವೈಭವದಿಂದ ಜರುಗಿಸಬೇಕೆಂದು ಕಿರಿಯರಾಣಿ ಚನ್ನಮ್ಮನೊಡಗೂಡಿ ಆಪ್ತಾಲೋಚನೆ ಮಾಡಿದಳು. ಆಗ ಕಿರಿಯರಸಿ ಚನ್ನಮ್ಮ ಸಂತಸವನ್ನು ಸೂಚಿಸುವಂತೆ, ಅಕ್ಕ ರುದ್ರಮ್ಮನನ್ನು ಅಪ್ಪಿ ಆಲಂಗಿಸಿ ಕಂದರುಗಳ ಪಾಲನೆಯ ಭಾರವನ್ನು ತಾ ವಹಿಸಿಕೊಂಡು ಸಿಂಹ ಗರ್ಜನೆಯನ್ನು ಕೇಳಿದರೂ ಬೆದರದೆ ಕೆಚ್ಚೆದೆಯ ಕಲಿಗಳನ್ನಾಗಿಸುವ ಹೊಣೆಗಾರಿಕೆಯನ್ನು ವ್ಯಕ್ತಪಡಿಸಿದಳು. ಅವರೊಡನೆ ಧರ್ಮಪರಾಯಣರಾಗಿ ಸತ್ಯದ ನಿತ್ಯ ಬೆಳಕನ್ನು ಕಾಣುವ ಮಹಾ ಮೇಧಾವಿಗಳನ್ನಾಗಿ ಮಾಡುವ ಮಾತು ಕೊಟ್ಟಳು. ಧರ್ಮ ಪಾಲನೆ ಪ್ರಜಾಪಾಲನೆ, ಲಿಂಗನಿಷ್ಠೆ ಗುರುಚರ ಬಳಗದಲ್ಲಿ ಭಯಭಕ್ತಿ ಹುಟ್ಟುವಂತೆ ಮಕ್ಕಳ ಪೋಷಣೆಯ ಬಾಲ್ಯಾವಸ್ಥೆಯಲ್ಲಿ ಮೆದುಳು ಅರಿತು ಆಚರಿಸುವ ರೀತಿಯನ್ನು ಅರುಹುವ ಗುರು ಮಾತೆಯಾಗಿ ಪೋಷಿಸುವ ಜವಾಬ್ದಾರಕಳಾದಳು. ತಂಗಿ ಚನ್ನಮ್ಮನ ವೀರರಕ್ತದಿಂದ ವಿರೋಚಿತ ವಾಕ್ಯಗಳು ಹೊರಟು ಅಕ್ಕ

ರುದ್ರಮ್ಮರಾಣಿ ನಿಶ್ಚಿಂತಳಾದಳು, ಪೂರ್ವಪುಣ್ಯಬಲ ವಿಶೇಷದಿಂದ ಮತ್ಸರವನ್ನರಿಯದ ಮತ್ತೆ ಗಾಂಭೀರ್ಯ ವೃತ್ತಿಯ ಸಕಲ ಸದ್ಗುಣಗಳು ಮೈವೆತ್ತ ಚನ್ನಮ್ಮ ತಂಗಿಯ ರೂಪದಲ್ಲಿ ನನಗಿಂದು, ಕಿತ್ತೂರ ನಾಡಿಗಿಂದು, ನಾಡ ಜನತೆಗಿಂದು ದೊರೆಯಿತಲ್ಲ ಎಂದು ಹರುಷಿತಳಾದಳು. ಅಲ್ಲದೆ ಅರಮನೆಯ ಅರಸಿಯಾದ ನಾನು ಇನ್ನು ಮೇಲೆ ಸಕಲ ಕಾರಭಾರವನ್ನು ತಂಗಿ ಚನ್ನಮ್ಮಳಿಗೆ ಒಪ್ಪಿಸಿ ಪತಿಸೇವೆಯಲ್ಲಿ ಪರಮಾತ್ಮನ ಧ್ಯಾನದಲ್ಲಿ ಗುರು ಚರ ವೃಂದಗಳ ಸೇವಾಕಾರ್ಯದಲ್ಲಿ ಕಾಲಕಳೆಯುವದು ಒಳಿತೆಂದು ತೀರ್ಮಾನಿಸಿದ್ದಲ್ಲದೆ, ಅಂದಿನ ತೊಟ್ಟಿಲಕಾರಣದ ಶೋಭೆಯ ಸಂತಸದಲ್ಲಿ ಸವತಿಯಾಗಿ ಬಂದ ಕಿರಿಯರಸಿ ಚನ್ನಮ್ಮನ್ನು ಪಾಲ್ಗೊಳ್ಳುವಂತೆ ವ್ಯವಸ್ಥೆ ಮಾಡಿ ಈರ್ವರೂ ಕಂಡರೂ ಉಜ್ವಲ ಕೀರ್ತಿಪ್ರಭೆಯಿಂದ ನಾಡತಾಯಿಯ ನಿಜ ಪುತ್ರರಾಗಿ ಬಾಳಲಿ ಎಂದು ಹೆಮ್ಮೆಯಿಂದ ತನ್ನಿನಿಯ ಮಲ್ಲಸರ್ಜ ದೊರೆಯನ್ನೂ ಪ್ರೋತ್ಸಾಹಿಸಿ ಕಿತ್ತೂರ ನಗರದ ಯಾವತ್ತೂ ಗುಡಿ ಗೋಪುರಗಳನ್ನು ಲಕ್ಷ ದೀಪಾರಾಧನೆಯಿಂದ ಅಲಂಕರಿಸಿ ಜಂಗಮ ಮೂರುತಿಗಳಿಗೂ ದೀನದಲಿತ ಬಡಬಗ್ಗರಿಗೂ ಎಥೇಚ್ಛವಾಗಿ ದಾನ ದಕ್ಷಿಣೆಗಳು ದೊರೆಯುವಂತೆ ವ್ಯವಸ್ಥೆ ಮಾಡಿಸಿದಳು.

ಅಂದಿನ ಕಿತ್ತೂರ ವೈಭವ ಶೋಭಾಯಮಾನವಾದ ಆ ಪ್ರಸಂಗ ವರ್ಣಮಯವಾಗಿತ್ತು. ದಾನಧರ್ಮಗಳಿಂದಲೂ ಭಾರಿ ಭೋಜನದಿಂದಲೂ ತೃಪ್ತರಾದರು. ಮಲ್ಲಸರ್ಜ ದೊರೆಯನ್ನು ನಮ್ಮನಾಡಿನ ತಂದೆ ಎಂದೂ, ಬಂಧು ಎಂದೂ, ದೇವಸಮಾನ ಧರ್ಮಾತ್ಮನೆಂದು ಮನಸಾರೆ ಹಾಡಿ ಹೊಗಳಿದರಲ್ಲದೇ ರಾಜಗುರು ಶಿವಯೋಗಿ ಸಾಮ್ರಾಟ ಶ್ರೀ ಮಡಿವಾಳೇಶ್ವರ ಸ್ವಾಮಿಗಳ ಅಪ್ಪಣೆಯಂತೆ ಗುರುಜಂಗಮರಿಗೆ ದಾನರೂಪದಲ್ಲಿ ಭೂಮಿಯನ್ನು ಹಂಚಲಾಯಿತು. ಕಲ್ಮಠದಲ್ಲಿ ಪ್ರತಿದಿನವು ದಾಸೋಹ ಸಾಗುವ ವ್ಯವಸ್ಥೆ ಯಾಯಿತು, ತಮ್ಮ ಮಠದಾಸೆಯಂತೆ, ವಯಸ್ಸಿನ ಒತ್ತಡದಲ್ಲಿ ಸಿಲುಕಿದ ಶ್ರೀ ಮಡಿವಾಳೇಶ್ವರ ಸ್ವಾಮಿಗಳು ತಮ್ಮ ರಾಜಗುರು ಪಟ್ಟಾಧಿಕಾರವನ್ನು, ಕಲ್ಮಠದ ಸ್ವಾಮಿತ್ವವನ್ನು ಸಕಲರಾಜಪರಿವಾರ ಸಮಕ್ಷಮದಲ್ಲಿ ಪ್ರಜಾಜನರು ಅಚ್ಚರಿಪಟ್ಟು ಅವಲೋಕಿಸುವಂತೆ ತಮ್ಮ ಮರಿದೇವರಾದ ಪ್ರಭುದೇವ ಸ್ವಾಮಿಗಳಿಗೇ ಒಪ್ಪಿಸಿ ವಿರಕ್ತಮಠದ ಸ್ವಾಮಿಗಳನ್ನಾಗಿ

ಮಾಡಿದರು. ಪ್ರಭು ದೇವರಿಂದು ಪ್ರಭುಸ್ವಾಮಿಗಳೆನಿಸಿದರು; ಅಲ್ಲದೇ ಸ್ವಾಮಿ ಮಡಿವಾಳೇಶ್ವರರು ಗುರುವಿನ ಕರುಣಾರಸಭರಿತ ಶಿವತತ್ವದ ನುಡಿಗಳನ್ನು ಪ್ರಭುಸ್ವಾಮಿಗಳಿಗೇ ಪ್ರಸಾದಿಸುತ್ತ ಕಿತ್ತೂರ ರಾಜ್ಯದ ಪರಂಪರೆಯು ಗುರುಸೇವಾ ಕಾರ್ಯದಲ್ಲಿ ನಿರಂತರ ನಿಮ್ಮ ಶ್ರಮ ಅವಶ್ಯವಾದದ್ದು ಎಂದು ಆಶೀರ್ವದಿಸಿದರು. ಮಲ್ಲಸರ್ಜದೊರೆ ಹಾಗೂ ರುದ್ರಮ್ಮ ಚನ್ನಮ್ಮ ಅರಸಿಯರ ಅಭಿಲಾಷೆಯಂತೆ; ಉಪವನದಲ್ಲಿ ದೊರೆತ ಕೂಸು ಶ್ರೀ ಮಡಿವಾಳೇಶ್ವರ ಶಿವಯೋಗಿಗಳ ಸಕಲ ಸುಲಕ್ಷಣಗಳನ್ನೂ ಹೋಲುತ್ತಿರುವದರಿಂದಲೂ ವೀರವಿರತಿ ವೈರಾಗ್ಯದ ಸತ್ವಪೂರ್ಣ ಕಳೆಯಿಂದ ಒಪ್ಪುತ್ತಿರುವದರಿಂದಲೂ ಬಾಲ್ಯದಲ್ಲಿಯೇ, ಅಚ್ಚರಿಪಡುವ ಲೀಲೆಗಳನ್ನು ತೋರುತಿರ್ಪ ಕಂಡ ಲೀಲಾ ಪುರುಷನಾಗುವದರಲ್ಲಿ ಸಂದೇಹವಿಲ್ಲ. ಅವತಾರಿಕ ಪುರುಷನಂತೇ ತೋರುವ ಈತನಿಗೆ, ಶ್ರೀ ಗುರುಶಿವಯೋಗಿ ಸಾಮ್ರಾಟ್ ಮಡಿವಾಳೇಶ್ವರ ಸ್ವಾಮಿಗಳು ಉಜ್ವಲ ಕೀರ್ತಿಯಂತೆ ಹೆಸರಿಟ್ಟು ಕರೆಯುವದು ಉಚಿತವೆಂದು ತಮ್ಮ ಹಿರಿಯಾಸೆಯನ್ನು ಗುರುಗಳ ಸನ್ನಿಧಿಯಲ್ಲಿ ಭಿನ್ನೈಸಿಕೊಂಡರು.

ಆಗ ರಾಜ ಪರಿವಾರದವರ ಆಸೆಯನ್ನು ಸತ್ಯಗೊಳಿಸುವಂತೆ ಮಡಿವಾಳೇಶ್ವರ ಸ್ವಾಮಿಗಳು ಅನಾಥನಾಗಿ ಅವತಾರಗೊಂಡ ವೀರಭದ್ರನ ಅಂಶೀಭೂತ ಕೂಸಿಗೆ, ಮಡಿವಾಳೇಶ್ವರನೆಂದು ನಾಮಕರಣವಾಯಿತು. ಇನ್ನು ಮಲ್ಲಸರ್ಜ ರುದ್ರಮ್ಮರಾಣಿಯರ ಹರುಷದ ಉಸುರಿನಲ್ಲಿ ಜನಿಸಿದ ದೊರೆಮಗನಿಗೆ, ಶಿವಭಕ್ತ ಸಂಪನ್ನ ದಂಪತಿಗಳ ಕುರುಹು ಈ ರಾಜಕುಮಾರ ಶಿವಲಿಂಗರುದ್ರಸರ್ಜ ಎಂದು ಶಿವ-ಲಿಂಗ-ರುದ್ರ ಎಂಬ ಮಹಾದೇವನ ವರಪ್ರಸಾದರೂಪ ಹೆಸರು ಸ್ಥಿರವಾಯಿತು.

ಆಗ ಮಲ್ಲಸರ್ಜದೊರೆಯು ಆನಂದ ಉತ್ಸಾಹ ಪೂರ್ಣ ಅಂದಿನ ಶುಭದಿನವನ್ನು ರಾಣಿಯರೊಡಗೂಡಿ ರಾಜಗುರು ಮಡಿವಾಳೇಶ್ವರ ಸ್ವಾಮಿಗಳ ಸನ್ನಿಧಿಯಲ್ಲಿ ಹಬ್ಬದಂದದಿ ಆಚರಿಸಿ ಉಬ್ಬಿನಿಂದ ನಾಡಿಗೆ, ನಾಡಿ ಹರುಷದ ಹೊನಲಿನಲ್ಲಿ ಈಜಾಡುವಂತೆ, ಅವರ ಒಡಲಿನ ಆಸೆಯಲ್ಲಿ

ಬಯಸಿದ್ದನ್ನು ಯಥೇಚ್ಛವಾಗಿ ದಾನರೂಪದಲ್ಲಿ ಅರ್ಪಿಸುವವನಾದನು. ಮಲ್ಲಸರ್ಜ ದೊರೆಯ ಧರ್ಮಕಾರ್ಯ, ದಾನದಕ್ಷಿಣೆಗಳು ಅವ್ಯಾಹತವಾಗಿ ಸಾಗಿರಲು ಮಡಿವಾಳೇಶ್ವರ ಸ್ವಾಮಿಗಳು,ತಮ್ಮ ಮನಸ್ಸು ಹಗುರಾಗುವಂತೆ, ಆಶೀರ್ವದಿಸಿ ಶಿಶು ಮಡಿವಾಳೇಶ್ವರನ ಪಾಲನೆ, ಪೋಷಣೆಯನ್ನು ರುದ್ರಮ್ಮ ಚನ್ನಮರ ಪಾಲಿಗೆ ಬಿಟ್ಟುಕೊಟ್ಟು, ತಮ್ಮ ನಿತ್ಯ ಕಾಯಕವಾದ ಲಿಂಗಪೂಜಾದಿಗಳನ್ನು ಸಾಂಗವಾಗಿ ನಡೆಯಿಸಿಕೊಂಡು ಸಾಗಿರಲು ನೂರೆಂಟು ಸಂವತ್ಸರಗಳು ಗತಿಸಿ, ಶಿವನು ಹಿರಿಯ ಮಡಿವಾಳೇಶ್ವರ ಸ್ವಾಮಿಗಳನ್ನು ತನ್ನತ್ತ ಕರೆಯಿಸಿಕೊಳ್ಳುವ ಮನಸ್ಸು ಮಾಡಿದನು.

ಶಿವನಾಸೆಯ ಅರ್ಥವನ್ನೂ ಅರಿತ ಮಡಿವಾಳಜ್ಜನವರು ತಮ್ಮ ಉತ್ತರಾಧಿಕಾರಿ ಪ್ರಭುದೇವರನ್ನು ಕರೆದು ನಾವು ಶಿವನ ಸನ್ನಿಧಿಗೆ ಹೊರಡುತ್ತೇವೆ ಎಂದು ತಿಳುಹಿಸಿ, ದೊರೆ ಮಲ್ಲಸರ್ಜರನ್ನು ಕಲ್ಮಠಕ್ಕೆ ಕರೆಯಿಸಿಕೊಂಡು ಸಕಲವನ್ನೂ ತಿಳಿಸಿದ್ದಲ್ಲದೆ, ಶಿವನ ಆಜ್ಞೆಯನ್ನು ನಿರಾಕರಿಸಬಾರದೆಂಬ ತತ್ವದಂತೆ, ತಮ್ಮ ಕೊನೆಯ ಉಸುರಿನಲ್ಲಿ ಬಾಲ ಮಡಿವಾಳೇಶ್ವರನನ್ನು ಕುರಿತು ಪ್ರಭುಸ್ವಾಮಿಗಳಿಗೆ, ತಿಳಿಸುತ್ತ, ಪರಂಪರೆಯ ಪ್ರಕಾರ ಪ್ರಾಪ್ತ ವಯಸ್ಸಿಗೆ ಬರಲು ಅವನಿಗೆ ಕಲ್ಮಠದ ಅಧಿಕಾರ ದೊರೆಯಲಿ, ರಾಜಗುರುತ್ವದ ಸ್ಥಿರಪಟ್ಟಕ್ಕೆ ಆತನೇ ಬಾಧ್ಯನೆಂದು. ತಿಳುಹಿಸಿ ಲಿಂಗಾರ್ಚನೆಯಲ್ಲಿ ಕುಳಿತು ಅಂಗೈಯಲ್ಲಿ ಹಿಡಿದ ಲಿಂಗಯ್ಯನೊಡನೆ ಮಾತನಾಡುತ್ತ ತಮ್ಮ ಉಸಿರನ್ನು ಲಿಂಗಯ್ಯನಲ್ಲಿ ಲೀನಗೊಳಿಸಿ–ಐಕ್ಯತೆಯನ್ನು ಹೊಂದಿದರು.

ಶ್ರೀ ಗುರು ಮಡಿವಾಳೇಶ್ವರ ಸ್ವಾಮಿಗಳು ಲಿಂಗೈಕ್ಯರಾದರೆಂಬ ಸುದ್ದಿಯಿಂದ ಕಿತ್ತೂರರಸಿಯರಾದ ರುದ್ರಮ್ಮ, ಚನ್ನಮ್ಮರು ದುಃಖ ಸಾಗರದಲ್ಲಿ ಮುಳುಗಿ ಗೋಳೋ ಎಂದು ಗೋಗರೆದರು. ಮಲ್ಲಸರ್ಜ ದೊರೆಯಂತೂ ತನ್ನ ಅರುವಿನ ಕಣ್ಣು ಕಳೆದುಕೊಂಡವನಂತೆ, ಕಂಗೆಟ್ಟು ಹಲುಬಿದನು. ಪ್ರಭುದೇವರಂತೂ ತಾಯಿಯನ್ನೂ ಕಳೆದುಕೊಂಡು ಕುರುವಿನಂತೆ, ಗೋಳಾಡಿದರು. ಪುರಜನರೆಲ್ಲ ಕಲ್ಮಠದತ್ತ ಬಂದು ಸ್ವಾಮಿಗಳನ್ನು ಇನ್ನಷ್ಟು ಕಾಲ ಉಳಿಸಿಕೊಳ್ಳುವ ಪುಣ್ಯವನ್ನು ನಾವು ಪಡೆದಿಲ್ಲವೆಂದು ಅತ್ತು ಕರೆದು ಸುಸ್ತಾದರು. ಆದರೆ, ಮಹಾದೇವನ ಮಹದಾಜ್ಞೆಯನ್ನು ಮೀರುವದು

ಯಾರಿಂದಲೂ ಸಾಧ್ಯವಿಲ್ಲ. ದೊರಿ ಮಲ್ಲಸರ್ಜನನ ಗುರು ಮಡಿವಾಳೇಶ್ವರ ಸ್ವಾಮಿಗಳ ದಿವ್ಯ ಜೀವನದ ಜ್ಞಾಪಕಾರ್ಥವಾಗಿ ಕಲ್ಮಠದ ಕೃರ್ತ ಗದ್ದುಗೆಯ ಬಳಿಯಲ್ಲಿ ಅವರ ಸಮಾಧಿಯನ್ನು ನಿರ್ಮಿಸಿದನು. ಜಂಗಮಾದಿಗಳಿಗೆ ಪ್ರಕುಲ ಧನ, ಧಾನ್ಯ, ವಸ್ತ್ರ, ಸುವರ್ಣಸಹಿತವಾಗಿ ದಾನಗೈದನ್ನು ಇತ್ತ ಶಿವನ ಲೀಲೆ ಯೇನೋ ಎನ್ನುವ ಹಾಗೆ ಅರಮನೆಯ ತೊಟ್ಟಿಲದಲ್ಲಿ ಮಲಗಿದ್ದ ಮರಿ ಮಡಿವಾಳೇಶ್ವರನು ಜೋರಾಗಿ ಅಳತೊಡಗಿದನು. ಏನು ಮಾಡಿದರೂ ಏನೇ ಕೊಟ್ಟರೂ ಸುಮ್ಮನಾಗದೆ, ಅರಮನೆಯು ಬಳಗವೇ ಗಾಬರಿಯಾಗುವಂತೆ ಚೀರ ಅಳಹತ್ತಿದನು. ಈ ಕೂಸಿನ ಆರ್ತನ ನಭೋ ಮಂಡಲವನ್ನು ಭೇದಿಸುವಷ್ಟು ಹೆಚ್ಚಾಗಹತ್ತಿತು ಅತ್ತ ಕಲ್ಮಠದಲ್ಲಿ ಸ್ವಾಮಿಗಳನ್ನು ಸಮಾಧಿಗೊಳಿಸುವ ಕಾರ್ಯದಲ್ಲಿದ್ದ ಮಲ್ಲಸರ್ಜನ ದೊರೆಯತ್ತ ಧಾವಿಸಿ ಬಂದ ರಾಣಿ ವಾಸದವರು ಮರಿ ಮಡಿವಾಳೇಶ್ವರನ ಅಳುವ ಸ್ಥಿತಿಯನ್ನು ವಿವರಿಸಿದರು. ಆಗ ಪ್ರಭು ಸ್ವಾಮಿಗಳು ಗುರುಕಾರುಣ್ಯದಲ್ಲಿ ದೊರೆತ ಕೂಸಿನ ಆರ್ತನಾದದ ಕಾರಣವನ್ನು ಕಂಡು ಹಿಡಿದವರಾಗಿ ಬೇಗನೇ ಕೂಸನ್ನು ಸಮಾಧಿಯ ಬಳಿಗೆ ತರುವಂತೆ ಅಪ್ಪಣೆ ಮಾಡಿದರು. ಗುರುಗಳ ಅಜ್ಞೆಯಂತೆ, ರುದ್ರಮ್ಮನವರು ಮಗುವನ್ನು ತೆಗೆದುಕೊಂಡು ಸಮಾಧಿಯ ಬಳಿಗೆ ಬಂದಾಗ ಕೂಸಿನ ಅಳು ಮತ್ತಷ್ಟು ಹೆಚ್ಚಿತು. ಬಳಿಕ ಪ್ರಭು ಸ್ವಾಮಿಗಳು ಕೂಸನ್ನು ತೆಗೆದುಕೊಂಡು ಲಿಂಗಾನಂದದಲ್ಲಿ ಕಣ್ಣು ಮುಚ್ಚಿದ ಗುರು ಮಡಿವಾಳೇಶ್ವರ ಸ್ವಾಮಿಗಳ ಪಾದಗಳ ಮೇಲೆ ಹಾಕಿ ಗುರು ಪರಂಪರೆಯ ಪುಂಡಾಸವನ್ನು ಕೂಸಿನ ತಲೆಯ ಮೇಲಿಟ್ಟು ಸ್ವಾಮಿಗಳ ಬೆತ್ತ ಜೋಳಿಗೆಯನ್ನು ಕೂಸಿಗೆ ಕಾಣಿಕೆಯಾಗಿ ಅರ್ಪಿಸಲು ಮರಿ ಮಡಿವಾಳೇಶ್ವರನು ಅಳುವದನ್ನು ನಿಲ್ಲಿಸಿ, ಶ್ರೀ ಗುರು ಶಿವಯೋಗಿ ಹಿರಿಯ ಮಡಿವಾಳೇಶ್ವರರ ಪಾದ ಪದ್ಮಂಗಳಿಗೆ ಪದೇ ಪದೇ ನಮಸ್ಕರಿಸುವದಾಯಿತು, ಕೂಸಿನ ಈ ಬಾಲ ಲೀಲೆಯಿಂದ ಪುರಜನರು ಅಚ್ಚರಿಗೊಂಡು ಹುಚ್ಚರಾದರು. ಪ್ರಭುದೇವರ ಸದಿಚ್ಛೆಯಂತೆ ತಮ್ಮ ತರುವಾಯ ಗುರು ಪರಂಪರೆಯಲ್ಲಿ ಮರಿ ಮಡಿವಾಳೇಶ್ವರನಿಗೆ ಮಠಾಧಿಕಾರ ಒಪ್ಪಿಸುವ ತೀರ್ಮಾನ ಮಾಡಿದರು. ಅಲ್ಲದೇ ತಮ್ಮ ಮನವಾಸೆಯನ್ನು ಮಲ್ಲಸರ್ಜ ದೊರೆಗೂ ತಿಳುಹಿಸಿದರು.

ಬಳಿಕ ವೀರಶೈವ ಧರ್ಮ ಸಂಸ್ಕೃತಿಯ ಪ್ರಕಾರ ಗುರು ಮಡಿವಾಳೇಶ್ವರರ ಸಮಾಧಿ ಕಾರ್ಯವನ್ನು ಸಾಂಗಗೊಳಿಸಿ, ನೊಂದ ಮನದ ವ್ಯಸನದ ಉಸಿರು ಚಿಮ್ಮಿ, ಮೂಕ ವೇದನೆಯಲ್ಲಿ ಮಲ್ಲಸರ್ಜ ದೊರೆ, ರುದ್ರಮ್ಮ, ಚನ್ನಮ್ಮ, ರಾಜ ಪರಿವಾರವೆಲ್ಲ ತೆರಳುವದಾಯಿತು. ಆದರೆ ಪ್ರಭುದೇವರು ಮಾತ್ರ ತಾಯಿಯನ್ನಗಲಿದ ಕಂದನ ಹಾಗೆ ಗುರುಗಳ ಸಮಾಧಿಯ ಬಳಿಯಲ್ಲಿ ಮೌನ ಗಂಭೀರವದನರಾಗಿ ಕುಳಿತಿದ್ದರು.

————

೪ನೆಯ ಪ್ರಕರಣ

ಮರಿ ಮಡಿವಾಳೇಶ್ವರನ ಬಾಲ್ಯ ತುಂಟತನ ಹಾಗೂ ಹಟ ಸ್ವಭಾವಗಳು

(ಸ್ಪರ್ಶ ಮಾತ್ರದಲ್ಲಿ ಗಿಳಿಯ ರೂಪದ ಬೇಡನು ಮಾನವನಾದದ್ದು)

ಎಳೆಂಟು ತಿಂಗಳ ಮಗುವಾಗಿ ಬೆಳೆದ ಮರಿ ಮಡಿವಾಳೇಶ್ವರನು ತನ್ನ ಇಚ್ಛೆಯಂತೆ ಬಯಕೆಯ ವಸ್ತುಗಳನ್ನು ಬಲು ಬಿಗುಮಾನದಲ್ಲಿ ಬಯಸ ಹತ್ತಿದನು. ರಾಣಿ ರುದ್ರಮ್ಮನ ವಾತ್ಸಲ್ಯದಲ್ಲಿ, ಕಿರಿಯ ರಾಣಿ ಚನ್ನಮ್ಮನ ಮಮತೆಯ ಆಳದಲ್ಲಿ ಸಿಲುಕಿದ ಮಡಿವಾಳೇಶ್ವರನು ಹಟ ಸ್ವಭಾವದವನಾಗುತ್ತ ಪರಿಚಾರಿಕೆಯರನ್ನು ಕಾಡುವ ಕಿಡಿಗೇಡಿ ಎನಿಸಿಕೊಳ್ಳ ಹತ್ತಿದನು. ಬರುಬರುತ್ತ ಪರಿಚಾರಿಕೆಯರು ಈತನ ತುಂಟತನಕ್ಕೆ ಬೇಸತ್ತಿದ್ದರು. ಯುವರಾಜ ಶಿವಲಿಂಗರುದ್ರ ಸರ್ಜನನ್ನು ಅಪ್ಪಿ ಆಲಂಗಿಸಿ ಮುದ್ದಿಸುವಂತೆ ಮರಿ ಮಡಿವಾಳೇಶನನ್ನು ಮುಟ್ಟಲು ಅಜ್ಜಿ ಹಿಂಜರಿಯುತ್ತಿದ್ದರು. ಪರಿಚಾರಿಕೆಯರ ಅಂಜಿಕೆಗೆ ಕಾರಣವು ಇಲ್ಲದಿರಲಿಲ್ಲ. ಮಮತೆಯಲ್ಲಿ ಮುದ್ದಿಸ ಬಂದ ನಾರಿಯರನ್ನು ಅಂಗಾಲಿನಿಂದ ಒದ್ದು ಕೆಂಡದುಂಡಿಗಳನ್ನುಗುಳುವ ಕಣ್ಣ ವೃಷ್ಟಿಯಿಂದ, ಎಂಜಲದ ಜಲ ನಿಮ್ಮ ಬಾಯಿ ಮುತ್ತು, ಎಂದು ಮೂದಲಿಸುವಂತೆ ನೋಡುತ್ತಿದ್ದನು. ಅಪ್ಪಿ ಆಲಂಗಿಸುವ ತರುಣಿಯರ ತೋಳುಗಳಿಂದ ತಪ್ಪಿಸಿಕೊಳ್ಳುತ್ತ ವಿವೇಕಶೂನ್ಯ ಕಾಮುಕತನದ ಕಾಮಿನಿಯರೆಂದು ಹೀಯಾಳಿಸುವ ಹಾಗೆ ಕಿಡಿಯ ಕಾರುವ ಸವಾರಿಯಂತೆ

ಸಿಟ್ಟಿನ ದೃಷ್ಟಿ ಚಿಮ್ಮುವನು. ಹಾಲು ಕುಡಿಸಲು ಬಂದ ಹಲವಾರು ಹೆಂಗಳೆಯರ ದೃಷ್ಟಿಯಲ್ಲಿ ಕಂಡು ಬರುವ ಔಪಚಾರಿಕ ಉಪಚಾರಕ್ಕೆ ಊಳಿಗದವರ ಮಮತೆಯಿಂದ ವಾತ್ಸಲ್ಯ ಬೆಳೆದು ಬರಲಾರದು. ಮಮತೆ ಉದ್ಭವಿಸಲಾರದು, ಕರುಣೆಯು ನೆಲೆಗೊಳ್ಳಲಾರದು, ಸರಿಯುರತ್ತ ಕಾಮಾಂಧ ಪಶುವೃತ್ತಿಯು ಹೀನ ಹೆಂಗಳೆಯರೇ, ಎನ್ನುವಂತೆ ಸರಿ ಸೀದು ಹಾಲಿನ ಒಟ್ಟಿಲವನ್ನೇ ಒಡೆದು ಬಿಸಾಕುವ ಕೇಡಾಳಿಯಾಗುವನು. ಅದೇ ರುದ್ರಮ್ಮ ರಾಣಿಯಾಗಲಿ, ಚನ್ನಮ್ಮನಾಗಲಿ ಬಂದು ಮಮತೆಯಿಂದ ಅಪ್ಪಿ, ಆಲಿಂಗಿಸಿ ಮುದ್ದಿಸಿ ಹಾಲ್ಕುಡಿಸಲು ಪ್ರಯತ್ನಿಸಿದರೆ, ನಗುವ ಚಿಮ್ಮಿ, ಮಂದಹಾಸ ಬೀರಿ ಹೆತ್ತವರ ಹಿರಿತನದಲ್ಲಿ ಕಾಣುವ ವಾತ್ಸಲ್ಯದ ಉಪ ಚಾರಕ್ಕೆ ಮಣಿದು ಹಾಲ್ಕುಡಿದು, ಚಿನ್ನಾಟದ ಚಲುವ ಚಿನ್ನದ ಪುಥ್ಥಳಿ ಯಂತೆ ಕೈಕಾಲು ಬಡಿದು ಮಾಯ ಮರ್ಮವನರಿತ ಮದನಾರಿಯ ಮಗ ವೀರಭದ್ರನಂತೆ, ತೇಜೋನಿಧಿಯಾಗಿ ನಲುಮೆಯಿಂದ ನಗು ನಗುತ್ತ ವರ್ತಿಸುವನು. ರುದ್ರಮ್ಮನಿಗೆ ಮರಿ ಮಡಿವಾಳೇಶ್ವರನ ಬಾಲ ಲೀಲೆಗಳು ಅಚ್ಚರಿಯನ್ನುಂಟು ಮಾಡಿದವು. ಬಾಲನ ಶೂರ, ಗಂಭೀರ, ಉಜ್ವಲ ತೇಜಸ್ಸು ಕಂಡು ಚೆನ್ನಮ್ಮ ಆನಂದಗೊಂಡವಳಾಗಿ ತನ್ನ ಅಕ್ಕನ ಮಗ ಶಿವಲಿಂಗ ರುದ್ರಸರ್ಜನೊಡನೆ ಈತನಿಗೂ ಮಲ್ಲ ಕಾಳಗ, ಕತ್ತಿ ಕೋವಿ ಗಳನ್ನು ಹಿಡಿದು ಸೆಣಸಾಡುವ ಯುದ್ಧ ವಿದ್ಯೆಯನ್ನು ಕಲಿಸಬೇಕೆಂದು ಇಚ್ಛಿಸಿದಳು.

ಆದರೆ ವೈರಾಗ್ಯದ ವಿರತಿಯನ್ನು ಪಡೆದುಕೊಂಡು ಬಂದ ಮರಿ ಮಡಿವಾಳೇಶ್ವರನು ಹುಟ್ಟು ಗುಣದ ಪ್ರತೀಕವಾಗಿ ಯಾವಾಗಲೂ ತಪಸ್ಸಿನ ಇಚ್ಛೆಯನ್ನೂ, ಜಂಗಮ ಗುರು ಮೂರ್ತಿಗಳ ಸೇವೆಯನ್ನೂ, ಆತ್ಮ ಬಲ ದೇಹಬಲ ಸಾಧನೆಯ ಗುಣಧರ್ಮವನ್ನೂ ಇಚ್ಛಿಸುವಂತೆ ಬಾಲ ಲೀಲಾ ವಿನೋದಗೈಯುತ್ತಿರುವನು. ಅತ್ತ ಶಿವಲಿಂಗ ರುದ್ರಸರ್ಜನು ತನ್ನ ಜಾಣ್ಮೆ, ಶೌರ್ಯ ಧೈರ್ಯ ಸಾಹಸಗಳಿಂದ ರಾಜ ಠೀವಿಯನ್ನು ಪ್ರದರ್ಶಿಸು ತ್ತಿದ್ದನು. ವಯೋಮಾನಕ್ಕನುಗುಣವಾಗಿ ಪ್ರಾಪಂಚಿಕ ಚೇಷ್ಟೆ, ಕುಚೇಷ್ಟೆ ಗಳಿಗೆ ಒಳಗಾದ ಯುವ ದೊರೆಯಂತೆ ಹರೆಯದ ಹೆಂಗಳೆಯರಾದ ಪರಿಚಾರಿಕೆಯನ್ನು ಮುಟ್ಟಿ ಮುದ್ದಿಸುವ ನುಡುತ್ಕಾಳ ವೃತ್ತಿ ಎದ್ದು ಕಾಣು

ವಂತೆ ಬಾಲ ವಯದಲ್ಲಿಯೇ ಈರ್ಷೆ ಮತ್ಸರಗಳೂ ಅವನಲ್ಲಿ ಕಾಣುತ್ತಿದ್ದವು. ತನ್ನ ಪಾಲಿನ ಹಾಲು, ಹಣ್ಣು ತಪ್ಪಿ ಪರರ ಪಾಲಿಗಾದರೆ ಹಟ ಹಿಡಿದು ಜಿದ್ದಿನಿಂದ ಅದನ್ನು ಅಪಹರಿಸುವ ಪ್ರಯತ್ನ ಮಾಡುತ್ತಿದ್ದನು. ಪರಿಚಾರಿಕೆಯರಾದ ಹೆಂಗಸರು ಶಿವಲಿಂಗ ರುದ್ರಸರ್ಜ ರಾಜಕುಮಾರನ ನೆವದಲ್ಲಿ ಹಾಲು ಸಕ್ಕರೆ, ಹಣ್ಣು ಹಂಪಲಗಳನ್ನು ಅಪಹರಿಸಿ ತಮ್ಮ ತಮ್ಮ ಮನೆ ಗೊಯ್ದು ಮಕ್ಕಳ ಉದರ ಪೋಷಣೆಗೆ ಉಪಯೋಗಿಸುವ ಕಾರ್ಯವು ದಿನ ನಿತ್ಯವು ನಡದೇ ಇತ್ತು. ಮರಿ ಮಡಿವಾಳೇಶ್ವರನು ಯಾವ ಆಶೆ ಆಕಾಂಕ್ಷೆ ಗಳಿಗೂ ಇಚ್ಛೆ ಮಾಡದ ನಿಶ್ಚಿಂತ ಮನದವನೆಂದು ಎಲ್ಲರಿಗೂ ತಿಳಿದ ವಿಷಯವಾಗಿತ್ತು. ಹೀಗಾಗಿ ಮರಿ ಮಡಿವಾಳ್ವೇಶರನ ಹೆಸರಿನಲ್ಲಿ ಅಪಹರಿಸುವದು ಪರಿಚಾರಿಕೆಯರಿಗೆ ಅಸಾಧ್ಯವಾಯಿತು. ಅಂತೂ ಶಿವಲಿಂಗ ರುದ್ರಸರ್ಜ ಹಾಗೂ ಮರಿ ಮಡಿವಾಳೇಶ್ವರರ ಜೀವನ ಇತಿಹಾಸ ತದ್ವಿರುದ್ಧ. ರೀತಿಯಲ್ಲಿ ಸಾಗಿ ಮಡಿವಾಳೇಶ್ವರನು ಕೆಲವು ಸ್ವಾರ್ಥ ಸಾಧಕರಿಗೆ ಬೇಡಾದವ ನಾದನು. ಆದರೆ ರುದ್ರಮ್ಮ ಚನ್ನಮ್ಮನವರ ಮಮತೆಯು ಮಗುವಾಗಿದ್ದ ನಲ್ಲದೆ ಅವನ ಬಗ್ಗೆ ಅರಸಿಯರಲ್ಲಿ ಪೂಜ್ಯಭಾವನೆ ಕೂಡ ಮೂಡಿತು. ಸಾಕ್ಷಾತ್ ಗುರು ಶ್ರೀ ಮಡಿವಾಳೇಶ್ವರನ ಪ್ರತಿರೂಪವೇ ಈ ಕಂದನೆಂದು ಅವರು ಗೌರವದಿಂದ ಕಾಣುತ್ತಿದ್ದರು.

ಹೀಗಿರಲು ಒಂದು ದಿನ ಅರಮನೆಯ ಅಂಗಳಲ್ಲಿ ಪರಿಚಾರಿಕೆಯ ರೊಡನೆ, ರುದ್ರಮ್ಮ, ಚನ್ನಮ್ಮ ರಾಣಿಯರು ಮಕ್ಕಳಾದ ಶಿವಲಿಂಗ ರುದ್ರ ಸರ್ಜ ಹಾಗೂ ಮರಿ ಮಡಿವಾಳೇಶ್ವರೊಡನೆ ಶಿವ ನಮಸ್ಮರಣೆಯಲ್ಲಿ ಜಂಗಮ ಚರಮೂರ್ತಿಗಳಿಂದ ಶಿವಲೀಲಾಮೃತ ಕಥಾ ಸಾರವನ್ನು ಸವಿ ಯುತ್ತ ಕುಳಿತುಕೊಂಡಿದ್ದರು. ಆಗ ಸುಂದರ ಗಿಳಿಯೊಂದು ಹಾರಿ ಬಂದು ಪಕ್ಕದ ಬಕುಲ ವೃಕ್ಷದಲ್ಲಿ ಕುಳಿತುಕೊಂಡಿತು. ಅದನ್ನು ಕಂಡ ಮರಿ ಮಡಿವಾಳೇಶ್ವರನು ಅದು ತನಗೆ ಬೇಕು ಎನ್ನುವಂತೆ ಮರದತ್ತ ಕೈಮಾಡಿ ಅಳಹತ್ತಿದನು. ಆಗ ರುದ್ರಮ್ಮ ಗಿಳಿಯನ್ನು ತೋರಿಸಿ ಆ ಶುಕ ನಿನಗೆ ಬೇಕೆ ಕಂದಾ ಎಂದೊಡನೆ ನಗುತ್ತ ತಲೆ ಹಾಕಿ ಸಮ್ಮನಾದನು. ಮಗುವಿನ ಮನದರ್ಥವನ್ನು ತಿಳಿದುಕೊಂಡ ರುದ್ರಮ್ಮ ರಾಣಿಯು ಆ ಗಿಳಿಯನ್ನು ಹಿಡಿದು ತರಲು ಪರಿಚಾರಿಕೆಯರಿಗೆ ಆಜ್ಞೆ ಮಾಡಿದಳು. ಪರಿಚಾರಿಕೆಯರು

ವಡತಿಯ ಆಜ್ಞೆಯಂತೆ ಗಿಳಿಯನ್ನು ಹಿಡಿಯಲು ಪ್ರಯತ್ನಿಸಿದರು. ಆದರೆ ಅದು ಹಾರಿಹಾರಿ ಹೋಗಿ ಗಿಡಮರಗಳಲ್ಲಿ ಅವಿತುಕೊಳ್ಳತೊಡಗಿತು. ಅದನ್ನು ಹಿಡಿಯಲು ಪ್ರಯತ್ನಿಸಿ ನಿರಾಶರಾದ ಪರಿಚಾರಿಕೆಯರಿಗೆ ಆ ಗಿಳಿ ಕಣ್ಮರೆಯಾದರೆ ಸಾಕೆಂದು ಎನ್ನಿಸಿತು. ಆದರೆ ಅದು ಪ್ರತಿ ಕ್ಷಣಕ್ಕೆ ಕಾಣಿಸಿಕೊಳ್ಳುವದು ಮತ್ತೊಂದು ಕ್ಷಣದಲ್ಲಿ ಮಾಯವಾಗುವದು. ಗಿಳಿಯ ವಿಷಯ ಮಲ್ಲಸರ್ಜ ದೊರೆಯವರೆಗೆ ಹೋಯಿತು. ಆಗ ದೊರೆಯು ಹಾಗೂ ಸುಬೇದಾರ ಲಿಂಗಪ್ಪನು, ಸರದಾರ ಗುರುಸಿದ್ಧಪ್ಪನು ದಂಡನಾಯಕ ರುದ್ರನಾಯಕನು ಸಾಕಷ್ಟು ಪ್ರಯತ್ನಿಸಿ ಶುಕರಾಜನನ್ನು ವಶಮಾಡಿಕೊಳ್ಳದೇ ಸೋತು ಸಣ್ಣಾದರು.

ಆದರೂ ಮಡಿವಾಳೇಶನ ಹಟ ತೀರಲಿಲ್ಲ. ಆಗ ಚೆನ್ನಮ್ಮ ರಾಣಿಯು ಬಿಲ್ಲು ಬಾಣಗಳನ್ನು ಹಿಡಿದು ಮರಿ ಮಡಿವಾಳೇಶನ ಪಾದಗಳಿಗೆ ವಂದಿಸಿ ಸನ್ಮೋಹಿನಿ ಮಂತ್ರದಿಂದ ಅಭಿಮಂತ್ರಿಸಿ ಶ್ರೀ ಗುರು ಶಿವಯೋಗಿ ಸಾಮ್ರಾಟ ಮಡಿವಾಳೇಶ್ವರ ಯಶ ನೀಡು ಎಂದು ಗುರು ನಾಮಸ್ಮರಣೆಯಿಂದ ಗಿಳಿಯು ಕುಳಿತ ಗಿಡದ ಹರಿಯತ್ತ ಬಾಣಗಳನ್ನೆಸೆದಳು. ಹಲವಾರು ಬಾಣಗಳು ಗಿಳಿಯ ರೆಕ್ಕೆ ಪುಚ್ಚಗಳಿಗೆ ಸಹ ತಾಕದಂತೆ ಗಿಳಿರಾಯನ ಸುತ್ತಲೂ ಗೂಡು ಕಟ್ಟಿದ ರೀತಿಯಲ್ಲಿ ಕೂತು ಗಿಳಿಯನ್ನು ಬಂಧಿಸಿದವು. ಆಗ ಏಳೆಂಟು ತಿಂಗಳ ಮಗುವಾಗಿದ್ದ ಮರಿ ಮಡಿವಾಳೇಶ್ವರನು ಆನಂದದಿಂದ ನಕ್ಕು ಕೇಕೇ ಹಾಕಿದನು ಈ ವಿಚಿತ್ರ ಪ್ರಸಂಗವನ್ನರಿತ ಜನತೆ ಹುಚ್ಚರಾಗಿ ಮಗುವನ್ನು, ಚನ್ನಮ್ಮನನ್ನೂ ತದೇಕ ದೃಷ್ಟಿಯಿಂದ ನೋಡಹತ್ತಿದರು. ಬಳಿಕ ಗಿಳಿಯನ್ನು ಮಲ್ಲಸರ್ಜ ದೊರೆಯು ಹಿಡಿದು ತಂದು ಬಾಲ ಮಡಿವಾಳೇಶನ ಹಸ್ತ ತಾಕಿಸಲು ಗಿಳಿಯು ಮಾನವ ರೂಪ ಧರಿಸುವದಾಯಿತು.

ಕೂಡಿದ ಜನರು ಅಚ್ಚರಿಯಿಂದ ಗಿಳಿಯ ಮಾನವ ರೂಪವನ್ನು ಕಂಡು ಒಬ್ಬರ ಮುಖವನ್ನೊಬ್ಬರು ನೋಡುತ್ತ ಶಿಲಾ ಪ್ರತಿಮೆಗಳಂತೆ ನಿಂತರು. ಆಗ ಗಿಳಿಯ ಜನ್ಮದಿಂದ ಬಿಡುಗಡೆ ಹೊಂದಿದ ಮಾನವನು ಪುರಜನರನ್ನೂ ಮಲ್ಲಸರ್ಜ ದೊರೆಯನ್ನೂ ಉದ್ದೇಶಿಸಿ ತನ್ನ ಪೂರ್ವ ಜನ್ಮದ ಕರ್ಮ ಕಥೆಯನ್ನು ಹೇಳುತ್ತಿದ್ದನು.

ಈಗ ಹನ್ನೆರಡು ವರ್ಷಗಳ ಹಿಂದೆ ನಾನೋರ್ವ ಬೇಡನಾಗಿದ್ದೆನು. ಬೇಟೆಯಾಡುವದು, ಗಿಳಿ ಗೊರವಂಕ, ಹಂಸ ಮಯೂರಗಳನ್ನು ಹಿಡಿದು ತಂದು ಶ್ರೀಮಂತ ರಾಜಮನೆತನದವರಿಗೆ ಅವುಗಳನ್ನು ವ್ಯಾಪಾರ ಮಾಡಿ ಉಪಜೀವಿಸುತ್ತಿದ್ದದಲ್ಲದೆ ಅನೇಕ ಪ್ರಾಣಿ, ಪಕ್ಷಿಗಳ ಗೋಣು ಮುರಿದು ತಿಂದು ಜೀವಿಸುತ್ತಿದ್ದೆನು. ಹೀಗಿರಲು ಒಂದು ದಿನ ಮಲಪ್ರಭಾ ತಟಾಕದಲ್ಲಿ ಸಂತಸದಿಂದ ಸರಸವಾಡುತ್ತಿರುವ ಗಿಳಿವಿಂಡಿನತ್ತ ನನ್ನ ದೃಷ್ಟಿ ಹರಿದು ರತಿವಿಲಾಸದಲ್ಲಿ ಮಗ್ನಳಾದ ಹೆಣ್ಣು ಗಿಳಿಯನ್ನು ಬಾಣದೇಟಿನಿಂದ ಗಾಯಗೊಳಿಸಿ ಗಂಡು ಗಿಳಿರಾಯನಿಂದ ಅಗಲಿಸುವ ಅನುಚಿತ ಕಾರ್ಯ ಮಾಡಿದೆನು. ಬಳಿಕ ಗಂಡು ಗಿಳಿಯ ರೂಪದಲ್ಲಿದ್ದ ಗಂಧರ್ವ ಕುಮಾರನ್ನು ನನ್ನನ್ನು ಉದ್ದೇಶಿಸಿ ಎಲೈ ಬೇಡನೇ ನನ್ನ ಮೋಹದ ರಾಣಿಯನ್ನು ನಿನ್ನ ಬಾಣದ ಅಲಗಿನಿಂದ ಗಾಯಗೊಳಿಸಿ ಜೀವ ಹರಣ ಮಾಡಿದ ನಿನ್ನ ಈ ಹೀನ ಕಾರ್ಯದಿಂದ ನನ್ನ ಮನವೀಗ ಕುದಿಯುತ್ತದೆ. ನಾನೀಗ ವಿರಹ ವೇದನೆಯಲ್ಲಿ ಬಳಲಿ ಬೆಂಡಾಗಿ ದಾರಿ ಕಾಣದೇ ದಿಕ್ಕು ತೋಚದಂತೆ ತಿರುಗುವ ಪರಿಸ್ಥಿತಿಯನ್ನು ತಂದ ನಿನಗೆ ನನ್ನೀ ಶುಕ ಜನ್ಮ ಪ್ರಾಪ್ತವಾಗಿ ಮನದ ಸ್ವಾಸ್ಥ್ಯವನ್ನೇ ಕಳೆದುಕೊಂಡು ಕ್ಷಣಕ್ಕೊಂದು ಠಾವಿನಲ್ಲಿ ನಿನ್ನ ಬದುಕಾಗಲಿ ಎಂದು ಶಾಪವಿತ್ತಿತು. ಆಗ ನಾನು ನನ್ನ ತಪ್ಪಿನ ಮರ್ಮವನ್ನು ಅರಿತವನಾಗಿ ಗಂಧರ್ವ ಕುಮಾರನ ಪಾದಗಳ ಮೇಲೆ ಬಿದ್ದು ಕೊನೆಗೆ ವಿಶಾಪವನ್ನು ಕರುಣಿಸಬೇಕೆಂದು ಅನನ್ಯ ಭಕ್ತಿ ಭಾವದಿಂದ ಬೇಡಿಕೊಳ್ಳ ಹತ್ತಿದೆನು. ಆಗ ಶುಕ ರೂಪದಿಂದ ಬಿಡುಗಡೆ ಹೊಂದಿದ ಗಂಧರ್ವನು ಅಯ್ಯಾ ಬೇಡನೆ ನಿನ್ನ ಪೂರ್ವ ಜನ್ಮದ ಸುಕೃತವು ಇನ್ನು ಪರಿಶೋಭಿಸುತ್ತಿದೆಯಾದ ಕಾರಣ ನನ್ನೀ ಶಾಪದಿಂದ ಮುಕ್ತನಾಗುವ ಕಾಲವನ್ನು ಉಸುರುತ್ತೇನೆ, ಕೇಳನ್ನುತ್ತ ಹನ್ನೆರಡು ಸಂವತ್ಸರಗಳು ಗತಿಸಿ ವೀರಭದ್ರ ದೇವರ ಪ್ರತಿರೂಪದ ಅವತಾರವಾಗುವದು. ಆ ಮಹಾತ್ಮನು ಶಿಶು ರೂಪದಲ್ಲಿರುವಾಗಲೆ ಆತನ ದೃಷ್ಟಿಗೆ ನಿನ್ನ ಗಿಣಿ ರೂಪವನ್ನು ಕಂಡು ನಿನ್ನಂ ಮುಟ್ಟಿ ಶಾಪವಿಮೋಚನೆಗೈವ ಸಾಹಸ ಮಾಡುವ ಕಂದನ ಆಸೆಗೆ ಸಿಂಹಿಣಿಯಂತಹ ಚನ್ನಮ್ಮ ರಾಣಿಯಿಂದ ನಿನ್ನ ಬಂಧನವಾಗಿ ದೊರೆಯು ನಿನ್ನಂ ಹಿಡಿದು ಕೊಡಲು ಶಿಶುವಿನ ಶ್ರೀಹಸ್ತಸ್ಪರ್ಶದಿಂದ ನಿನ್ನ ಮೊದಲಿನ

ರೂಪ ಕಾಣಿಸಿಕೊಳ್ಳುವದೆಂದು ಉದ್ಯಾಪನವನ್ನು ಕರುಣಿಸಿ ಕಾಣದಾದನು. ಅವನ ಅಂದಿನ ನುಡಿಯಂತೆ ಈಗ ನನ್ನನ್ನು ಪುನರ್ಜನ್ಮಕ್ಕೆ ಪರಿವರ್ತಿಸಿದ ಈ ಕೂಸು ಸಾಮಾನ್ಯವಾದದ್ದಲ್ಲ. ವೀರಭದ್ರನ ಕಳೆ ಹೊತ್ತು ಭೂಮಿಗಿಳಿದ ಶಿವಯೋಗಿ ಸಮ್ರಾಟ ಎಂದು ಮಡಿವಾಳೇಶನ ಪಾದಗಳಿಗೆ ಪದೇ ಪದೇ ವಂದಿಸಿ ಚನ್ನಮ್ಮ ತಾಯಿಯ ಬಳಿಯಲ್ಲಿ ಬಂದು ಅವ್ವಾ ಗಂಧರ್ವ ಕುಮಾರ ಹೇಳಿದಂತೆ ನಿಜವಾಗಿ ತಾವು ಸಿಂಹಣಿಯೇ ಎಂದು ನುಡಿಯುತ್ತ ರಾಜ ಪರಿವಾರವನ್ನು ವಂದಿಸಿ ಹೊರಟು ನಿಂತಿರಲು ಪ್ರಭು ಸ್ವಾಮಿಗಳು ಅಯ್ಯಾ ಬೇಡನೇ ಮುಂದೆ ನೀನೆಲ್ಲಿ ಹೋಗಿ ಬದುಕಿನ ಮಾರ್ಗ ಕಂಡು ಕೊಳ್ಳುವೆ ಎಂದು ಕೇಳಿದರು. ಆಗ ಬೇಡನು ಶಿವನು ಕರುಣಿಸಿದ ಕಾಯಕದಲ್ಲಿ ಸತ್ಯ ನೀತಿಯ ಬದುಕಿನಲ್ಲಿ ಸಾಗುವ ಇಚ್ಛೆಯನ್ನು ವ್ಯಕ್ತಪಡಿಸಿದನು. ಆಗ ರಾಜ ಗುರುಗಳಾದ ಪ್ರಭು ಸ್ವಾಮಿಗಳು ಆಲೋಚನೆ ಮಾಡಿ ಬೇಡನಿಗೆ ತಮ್ಮಲ್ಲಿಯೇ ಉಳಿದುಕೊಂಡು ಸತ್ಯ ನೀತಿ ಧರ್ಮದಿಂದ ಜೀವನ ಸಾಗಿಸುವಂತೆ ಅಪ್ಪಣೆ ಮಾಡಿದರು. ಗುರುಗಳ ಅಪ್ಪಣೆಯನ್ನು ಶಿರಸಾ ವಹಿಸಿ ಬೇಡನು ಕಲ್ಮಠದಲ್ಲಿ ಭಕ್ತಿ ವಿಶ್ವಾಸಗಳಿಂದ ಸೇವೆ ಸಲ್ಲಿಸುತ್ತ ಜೀವನ ಸಾಗಿಸುವ ನಿರ್ಧಾರದಿಂದ ಕಿತ್ತೂರಲ್ಲಿ ಉಳಿದುಕೊಂಡನು. ಬರಬರುತ್ತ ಮರಿ ಮಡಿವಾಳೇಶನು ಬಾಲ್ಯದ ತುಂಟತನದ ಹಟ ಸ್ವಭಾವದಿಂದ ಅನೇಕ ವಿಚಿತ್ರವೆನಿಸುವ ಪವಾಡಗಳನ್ನೆಸಗಿ ಜನರನ್ನು ಅಚ್ಚರಿಪಡಿಸುತ್ತ ಬೆಳೆಯಹತ್ತಿದನು.

೫ನೆಯ ಪ್ರಕರಣ

ಮರಿ ಮಡಿವಾಳೇಶನು ಅರಮನೆಯನ್ನು ತೊರೆದು ಕಲ್ಮಠ ಸೇರಿದ್ದು

ಮರಿ ಮಡಿವಾಳೇಶನಿಗೆ ನಾಲ್ಕಾರು ವರುಷದ ಬಾಲಕನಾಗಿ ಬೆಳೆದವನು. ರಾಣಿ ರುದ್ರಮ್ಮನವರ ಹೊರತಾಗಿ. ಯಾರ ಮಾತನ್ನೂ ಲಕ್ಷ್ಯಕ್ಕೆ ತಾರದೆ ಹಟ ಸ್ವಭಾವದಿಂದಲೂ, ಅತಿಯಾದ ತುಂಟತನದಿಂದಲೂ ನಿತ್ಯವೂ

ಒಂದಲ್ಲವೊಂದು ರೀತಿಯ ಜಗಳ ತೆಗೆದು ಸರಿಕರೆನಿಸುವ ಹುಡುಗರನ್ನು ಹೊಡೆದು ಗಾಯಗೊಳಿಸಿ ಬಾಲಕರ ಗೋಳಿಗೆ ಕಾರಣನಾಗಹತ್ತಿದನು

ಬರಬರುತ್ತ ರಾಣಿರುದ್ರವ್ವ, ಚನ್ನವ್ವರ ಮಮತೆಯ ಮಡಿಲಲ್ಲಿ ಬೆಳೆದು ಬಾಳುತ್ತಿರುವ ಮಡಿವಾಳೇಶ್ವರನು, ಹಿರಿ ಕಿರಿಯರು ಎಂಬ ತಾರತಮ್ಯವನ್ನು ಮರೆತು ಮನಬಂದಂತೆ, ವರ್ತಿಸಹತ್ತಿದನು. ಹಲವು ಸಾರೆ ಮಹಾಮಂತ್ರಿ ಗುರುಸಿದ್ದಪ್ಪನವರು ದಂಡಾಧಿಪತಿ ರುದ್ರಪ್ಪ ನಾಯಕನು ಹಾಗೂ ದೊರೆ ಮಲ್ಲಸರ್ಜರ ಚಿತ್ತ ಭಿತ್ತಿಯನ್ನೇ ಸೆಳೆಯುವ ವಿಚಿತ್ರ ಘಟನೆಗಳು ಜರಗಹತ್ತಿದವು. ಒಮ್ಮೆ ಸರಕಾರದ ದೊರೆಯಾಗ ಶಿವಲಿಂಗ ರುದ್ರಸರ್ಜ ಹಾಗೂ ಇತರ ರಾಜ ಪರಿವಾರದ ಮಕ್ಕಳೊಡನೆ ಮಡಿವಾಳೇಶನು ಚಂಡಿನ ಆಟ ಆಡುವವನಾದನು. ಬಿಸಿ ಒಗೆದ ಚಂಡಿನೇಟು ತಾಕಿ ಹತ್ತೆಂಟು ಹುಡುಗರು ಗಾಸಿಯಾದರು ಪುಟಿದೇಳುವ ಚಂಡಿನ ಪೆಟ್ಟುಗಳ ಪಡಪಡಾಟದ ಆ ಶಬ್ದದಿಂದ ರಾಜಾಂಗಣವೆಲ್ಲ ಮಾರ್ಧನಿಗೊಂಡಿತು. ಶಿವಲಿಂಗ ರುದ್ರಸರ್ಜನ ತುರುಸಿನ ಆಟಸಾಗಿದೆ ಎಂದು ಪರಿವಾರದವರೆಲ್ಲ ಮಕ್ಕಳ ಆ ಆಟವನ್ನು ಕಂಡು ಆನಂದಿಸಬೇಕೆಂದು ಸುತ್ತುವರಿದು ಸೇರಿದರು. ಆದರೆ ಇಲ್ಲಿ ಚಂಡಿನ ಸೆಣಸಾಟದ ವೈಖರಿ ಸಾಗಿದ್ದುದು ಮಡಿವಾಳೇಶನಿಂದ ಎಂಬುದನ್ನು ಕಂಡು ಆನಾಥ ಶಿಶುವಿನ ಆಗಾಧ ಶೌರ್ಯ ಸಾಹಸಕ್ಕೆ ಬೆರಗಾಗಿ ನೋಡುತ್ತ ನಿಂತುಕೊಂಡರು. ಅಷ್ಟರಲ್ಲಿ ಶಿವಲಿಂಗ ರುದ್ರಸರ್ಜ ಬೀಸಿ ಒಗೆದ ಚಂಡು ಮಡಿವಾಳೇಶನಿಗೆ ತಾಕದೆ ಮುದ್ದಾನೆಯನ್ನು ಕಟ್ಟಿದ ಲಾಯದಲ್ಲಿ ಪುಟಿಯುತ್ತ ಹೋಗಿ ಕರಿಯ ಮುಂಗಾಲ ಬಳಿಯಲ್ಲಿ ಬಿದ್ದು ಬಿಟ್ಟಿತು. ಆಗ ಮಡಿವಾಳೇಶನ ವಿಕಟಸಾಹಸದಿಂದ ನಗುತ್ತಲೇ ಬಾಪ್ಯಾ ಚಂಡು ತಂದು ಮತ್ತೆ ಆಟಕ್ಕೆ ಮುಂದಾಗೋ ಎಂದು ಹಾಸ್ಯದಿಂದ ನುಡಿಯನ್ನು ತೇಲಿಸಿ ನಗಹತ್ತಿದನು. ಶಿವಲಿಂಗ ರುದ್ರಸರ್ಜ ಚನ್ನಮ್ಮ ರುದ್ರಮ್ಮ, ಮಲ್ಲಸರ್ಜ ದೊರೆಗಳು ಪ್ರೀತಿಯಿಂದ ಬಾಪೂ ಎಂದೆ ಕರೆಯುತ್ತಿದ್ದರು ಅಂತೇ ಆತನನ್ನು ಮಡಿವಾಳೇಶನೂ ಬಾಪೂ ಬಾಪೂ ಎಂದೇ ಕರೆಯುತ್ತಿದ್ದನು. ಮಡಿವಾಳೇಶನು ತನ್ನನ್ನು ಏಕ ವಚನದಲ್ಲಿ ಕರೆಯುವನಲ್ಲಾ ಎಂದು ಬಾಪೂ ಒಳಒಳಗೆ ಕುದಿಯುತ್ತ ತನ್ನ ಅವಮಾನದ ಸೇಡು ತಿರಿಸಿಕೊಳ್ಳಲು ಸಮಯ ಕಾಯುತ್ತಿದ್ದನು. ಚಂಡು ಮದವೇರಿದ ಆನೆಯ ಬಳಿ

ಬಿಟ್ಟದೇ ಶಿವಲಿಂಗರುದ್ರಸರ್ಜನಿಗೆ ಒಂದು ಸದಾವಕಾಶವೆನಿಸಿತು. ಈ ಸಮಯದ ಸದುಪಯೋಗ ಪಡಿಸಿಕೊಂಡು ಆನೆಯಿಂದಲೇ ಮಡಿವಾಳೇಶನ ಪರ್ಯವಸಾನ ಹೋಗುವಂತೆ ಮಾಡಿ ಸೇಡು ತೀರಿಸಿಕೊಳ್ಳುವ ಹಂಚಿಕೆಯಿಂದ ಮೃದು ನುಡಿಗಳಿಂದ ಮಡಿವಾಳೇಶಾ ನಿನಗಾಗಿ ಒಗೆದ ಚೆಂಡನ್ನು ನೀನೇ ತೆಗೆದುಕೊಂಡು ಬರುವದು ನ್ಯಾಯವಾದದ್ದು ನೋಡು. ಅಷ್ಟೊಂದು ಬಲವಿದ್ದರೆ ಲಾಯದಲ್ಲಿ ಪೊಕ್ಕು ಚೆಂಡು ತಂದು ಒಗೆಯುವ ಧೀರನಾಗು ಎಂದು ಮೂದಲಿಕೆಯ ಮಾತುಗಳನ್ನಾಡಿದನು.

ಆಗ ಮಡಿವಾಳೇಶನು ಹುಸಿ ನಗೆಯ ಚಿಮ್ಮಿ ಒಂದೇ ನೆಗೆತಕ್ಕೆ ಲಾಯದಲ್ಲಿ ಪೊಕ್ಕು ಕರಿಯ ಕಾಲ ತಳದಲ್ಲಿ ಬಿದ್ದ ಚೆಂಡಿಗೆ ಕೈ ಹಾಕುತ್ತಿರುವಾಗ ಹಿಂದಿನಿಂದ ಒಳಗೆ ಹೋದ ಶಿವಲಿಂಗರುದ್ರಸರ್ಜ ಹಾಗೂ ಇತರ ಹುಡುಗರು ಸೇರಿ ಕರಿಯ ಬಾಲವನ್ನು ಹಿಡಿದು ಕಟ್ಟಿಗೆಯ ತುಂಡಿನಿಂದ ತಿವಿದು ಬೇಕೆಂದೇ ಅದನ್ನು ಸಿಟ್ಟಿಗೆಬ್ಬಿಸಿದರು. ಮೊದಲೇ ಮದ ಬಂದ ಆನೆ ಈಗ ಕೇಳುವದೇನು ಬಾಲ ಬಡಿದು ಕಾಡಿನ ಕಿಡಿಗೇಡಿಗಳಿಂದ ಮತ್ತಷ್ಟು ರೋಷಗೊಂಡ ಮುಂಗಾಲ ಬಳಿಯಲ್ಲಿ ಬಗ್ಗಿ ಚೆಂಡುತೆಗೆದುಕೊಳ್ಳುತ್ತಿದ್ದ ಮರಿ ಮಡಿವಾಳೇಶನನ್ನು ಸೊಂಡಿಲ ಹಿಡಿದು ತಿರುಗಿಸುವ ಸಾಹಸ ಮಾಡಹತ್ತಿತ್ತು.

ಆಗ ಮಡಿವಾಳೇಶನಿಗೆ ಅದೆಲ್ಲಿಯ ಸಿಟ್ಟು ಪ್ರಾಪ್ತವಾಯಿತೋ ಏನೋ ಆನೆಯ ಸೊಂಡಿಲನ್ನು ಹಿಡಿದು ಲೀಲಾಜಾಲವಾಗಿ ತಿರುಗಿಸುತ್ತ ಕಟ್ಟಿದ ಸರಪಳಿಯ ಬಂಧನದಿಂದ ಆನೆಯನ್ನು ಬಿಚ್ಚಿಕೊಂಡು ರಾಜಾಂಗಣದ ಬಯಲಿಗೆ ಎಳೆದುಕೊಂಡು ಬಂದು ಕರಿಯರಾಯನೊಡನೆ ಮಲ್ಲ ಕಾಳಗವನ್ನೆ ಸುರುವು ಮಾಡಿದನು. ಆನೆಯಾದರೂ ಮತ್ತಷ್ಟು ಸಿಟ್ಟಿನಿಂದ ಸುತ್ತುವರೆದು ಸೊಂಡಿಲಿನಿಂದ ತಿರುಗಿಸುವ ಸಾಹಸ ಮಾಡುತಿರುವದು ಆಗ ಕೂಡಿದ ಪರಿವಾರವೇ ಮರಗುತ್ತಿತ್ತು ಮರಿ ಮಡಿವಾಳೇಶನನ್ನು ಏನು ಮಾಡುವದೋ ನೆಲಕ್ಕೆ ಅಪ್ಪಳಿಸಿ ತುಳಿದು ಬಿಟ್ಟರೇ ಹೇಗೆಂದು ಮಾವುತನಿಗೆ ಆನೆಯನ್ನು ಹಿಡಿದುಕೊಳ್ಳುವಂತೆ ದೊರೆ ಹಾಗೂ ಸುಭೇತಾರ ಮಂತ್ರಿಗಳಾದಿಯಾಗಿ ಅಂಗಲಾಚಿ ಹೇಳುತ್ತಿದ್ದರು. ಆದರೆ ಮರಿ ಮಡಿವಾಳೇಶನಾಗಲೀ ಮದ್ದಾನೆಯಾಗಲಿ ಮಾವುತ ಮಹಾಶಯನನ್ನು ಸನಿಹಕ್ಕೆ ಬರಗೊ

ಡದಾದರು. ಕೊನೆಗೂ ಮರೆಗುತ್ತ ನಿಂತು ನೋಡುತ್ತಿರುವವರೇ ವಿನಃ ಯಾವ ಆಟವೂ ಸಾಗದಾಯಿತು.

ಬಳಿಕ ಕೆಲಸಮಯದಲ್ಲಿ ಮಡಿವಾಳೇಶನ ಹೊಡೆತ ಬಡಿತಗಳಿಗೆ ಹಣ್ಣಾದ ಮದ್ದಾನೆಯು ಮಡವಿಳಿದು ಸೋತು ಸಣ್ಣಾಗಿ ನೆಲವನ್ನು ಆಶ್ರಯಿಸಿ ನೆಲಕ್ಕೆ ಕುಪ್ಪಳಿಸಿತು. ನೆರೆದವರೆಲ್ಲ ಮಡಿವಾಳೇಶನ ಧೀರ ಗಂಭೀರ ಸಾಹಸಕ್ಕೆ ಬೆರಗಾಗಿ ಬೆರಳುಕಚ್ಚಿದರು. ಚನ್ನಮ್ಮನಂತೂ ತನ್ನ ಸ್ವಭಾವ ಸಹಜ ಗುಣಧರ್ಮದಂತೆ ಧಾವಿಸಿ ಒಂದು ಮರಿ ಮಡಿವಾಳೇಶನನ್ನು ಹಿಡಿದಪ್ಪಿಕೊಂಡು ಲಟಲಟನೆ ಮುದ್ದಿಕ್ಕಿ ತನ್ನ ಮಾತೃ ವಾತ್ಸಲ್ಯದ ಸವಿ ಉಣ್ಣಿಸಿದಳು. ರುದ್ರಮ್ಮತಾಯಿ ಬೆಕ್ಕಸ ಬೆರಗಾಗಿ ತನ್ನ ಲಾಲನೆ ಪಾಲನೆಯಲ್ಲಿ ಬೆಳೆದ ಅನಾಥ ಮಗು ಇಂದು ಮದ್ದಾನೆಯನ್ನು ಮರ್ಧಿಸುವಷ್ಟು ಧೀರನಾದನೆಂದು ಉಬ್ಬಿಹೋದಳು. ಗುರುವಿನ ಅಂತಃಕರುಣೆಯಿಂದ ದೊರೆತ ಗುರು ಪುತ್ರನ ಪರಾಕ್ರಮಕ್ಕೆ ಕಿತ್ತೂರ ಪುರವಾಸಿಗಳು ಮಣಿದು ಭಯ ಭಕ್ತಿಯಿಂದ ನಮಸ್ಕರಿಸಿ ದೇವಾಂಶ ಸಂಭೂತ ಸುಕುಮಾರ ಎಂದು ಹಾಡಿ ಹೊಗಳಿದರು.

ಆದರೆ ಬಾಲ್ಯಾವಸ್ಥೆಯಲ್ಲಿ ಈರ್ಷೆ. ಮತ್ಸರಗಳಿಗೆ ಒಳಗಾದ ಶಿವಲಿಂಗ ರುದ್ರಸರ್ಜನು ಮುಖಭಂಗಿತನಾದವನಂತೆ ಒಣಗಿದ ಮುಖ ಹೊತ್ತುಕೊಂಡು ಮರೆಯಾದನು. ರುದ್ರಮ್ಮ, ಚನ್ನಮ್ಮರ ಪ್ರೀತಿ ವಾತ್ಸಲ್ಯಗಳು ಮಡಿವಾಳೇಶನಿಗಾಗಿ ಬರಬರುತ್ತ ಹೆಚ್ಚಾಗಿ ಮೆಚ್ಚಿನ ಮಗುವಾಗಿ ಬೆಳೆಯ ಹತ್ತಿದನು. ಆದರೆ ತುಂಟತನ, ಹಟದ ಸ್ವಭಾವದಿಂದಾಗಿ ಅರಮನೆಯ ವಾತಾವರಣದಲ್ಲಿ ಮಡಿವಾಳೇಶ ಬೇಸರವಾಗಹತ್ತಿದನು. ದಾಸಿಯರಂತೂ ಮಡಿವಾಳೇಶನು ಯಾವ ಹೊತ್ತಿಗೆ ಯಾರನ್ನು ಏನು ಮಾಡುವನೋ ಎಂದು ಅಂಜಿಕೆಯಿಂದ ವರ್ತಿಸುತ್ತಿದ್ದರು. ಕಾಲಕ್ರಮೇಣ ಮಡಿವಾಳೇಶನು ಮಲ್ಲಸರ್ಜ ದೊರೆಯ ಮಗ ಶಿವಲಿಂಗ ರುದ್ರಸರ್ಜನಿಗೆ (ಬಾಪೂನಿಗೆ) ವೈರಿಯಂತೆ ತೋರಹತ್ತಿದನು. ಮಲ್ಲಸರ್ಜ ದೊರೆಗಳು ಅದೆಷ್ಟೋ ತಿವನಾಗಿ ಬುದ್ಧಿ ಹೇಳಿದರೂ ತನ್ನ ಸ್ವಭಾವದಿಂದ ಬದಲಾಗದೆ ಕೆಟ್ಟ ಹುಡುಗರ ಸಂಗಡ ಆಟವಾಡಿ, ಕ್ಷುದ್ರ ಜೀವಿಗಳ ಒಡನಾಟ ಬಿಡಲಿಲ್ಲ. ಹೀಗಾಗಿ ದೊರೆ ಮಲ್ಲಸರ್ಜನಿಗೂ ಮಡಿವಾಳೇಶನ ಬಗ್ಗೆ ಬೇಸರ ಉಂಟಾಯಿತು.

ನಿತ್ಯವೂ ನೆರೆಹೊರೆಯ ಹುಡುಗರನ್ನು ಬಾಪೂನನ್ನು ಹೊಡೆದು ಗೋಳಾಡಿಸುವದು ತಪ್ಪದಾಯಿತು. ಮಡಿವಾಳೇಶನ ಬಗ್ಗೆ ಊರಿನ ಪ್ರಮುಖರಿಂದ ಅಪನಾದ ಬರಹತ್ತಿದವು ಹಲವು ಸಾರಿ ರಾಜ ಗುರುಗಳಾದ ಪ್ರಭುಸ್ವಾಮಿಗಳಲ್ಲಿಯೂ ಮಡಿವಾಳೇಶನ ಬಗ್ಗೆ ದೂರುಗಳು ಬಂದದ್ದು ಆಯಿತು. ಆದರೆ ಯಾರು ಏನು ಹೇಳಿದರೂ ತನ್ನ ಗುಣ ಸ್ವಭಾವದಿಂದ ಮಡಿವಾಳೇಶ ಬದಲಾಗಲಿಲ್ಲ. ಪಾಠಶಾಲೆಯ ಅಭ್ಯಾಸಕ್ಕೆ ಕಳುಹಿಸಿದರೆ ಶಾಲಾ ಗುರುಗಳಿಗೇ ಪಾಠ ಹೇಳಿಕೊಟ್ಟು ಅವರ ಬಾಯಿ ಕಟ್ಟಿಬಿಡುತ್ತಿದ್ದನು. ಹೀಗಾಗಿ ಗುರುಗಳು ಈ ಮಗುವಿಗೆ ಪಾಠ ಹೇಳುವದು ನಮ್ಮಿಂದ ಆಗದ ವಿಷಯವೆಂದು ಮಡಿವಾಳೇಶನ ತಂಟೆಗೆ ಬರುವದನ್ನೇ ಬಿಟ್ಟರು.

ಹೀಗಾಗಿ ಮಲ್ಲಸರ್ಜ ದೊರೆಯು ರುದ್ರಮ್ಮ ಚನ್ನಮ್ಮರೊಡನೆ ಮಡಿವಾಳೇಶನ ಬಗ್ಗೆ ಹಲವು ರೀತಿಯಿಂದ ವಿಚಾರಮಾಡಹತ್ತಿ ಗೊಂದಲದಲ್ಲಿ ಸಿಲುಕಿದನು. ರುದ್ರಮ್ಮ ಚನ್ನಮ್ಮರು ಮರಿ ಮಡಿವಾಳೇಶನನ್ನು ಬಿಟ್ಟಿರಲು ಸಿದ್ಧರಿಲ್ಲ ಅರಮನೆಯಲ್ಲಿ ಒಂದುಕ್ಷಣ ಮಡಿವಾಳೇಶ ಕಾಣದಿದ್ದರೆ ರಾಣಿಯರಿಬ್ಬರೂ ಒಂದೇ ಸಮನೆ ಹಲಬುತ್ತಿದ್ದರು. ಇಂತಹ ಇಕ್ಕಟ್ಟಿನ ಪ್ರಸಂಗದಲ್ಲಿ ದೊರೆಗಳಿಗೆ ಏನು ಮಾಡಬೇಕೆಂಬುದೇ ತಿಳಿಯದಾಗಲು ರಾಜ ಗುರುಗಳ ಸನ್ನಿಧಿಗೆ ಬಂದು ಮರಿ ಮಡಿವಾಳೇಶನಿಂದಾಗುವ ಅನಾಹುತಗಳನ್ನು ವಿವರಿಸಲು ಪ್ರಭುಸ್ವಾಮಿಗಳು ತಮಗೆ ಗುರುಗಳು ತಿಳಿಸಿದಂತೆ ಮಡಿವಾಳೇಶನನ್ನು ಕಲ್ಮಠದ ತಮ್ಮ ತರುವಾಯದ ಮರಿ ದೇವರನ್ನಾಗಿ ಮಾಡಲು ಕರೆಯಿಸಿಕೊಳ್ಳುವದಾಗಿ ಹೇಳಿ ದೊರೆಯನ್ನು ಸಂತೈಸಿ ಕಳುಹಿಸಿ ಕೊಟ್ಟರು.

ಅವ್ಯಾಹತವಾಗಿ ಬೆಳೆಯುತ್ತಿರುವ ಮಡಿವಾಳೇಶನ ಅನುಚಿತ ಕೃತಿಗಳಿಂದ ದೊರೆಗಳಿಗೆ ಈಗಂತೂ ಸಹಿಸಲಸಾಧ್ಯವಾಯಿತು. ಆದರೆ ತನ್ನ-ರಸಿಯರಿಗೆ ಈ ಕಿಡಿಗೇಡಿಯಿಂದ ದೂರವಿರಲು ಸಾಧ್ಯವಿಲ್ಲ. ಈ ಸಮಸ್ಯೆಯನ್ನು ಹೇಗೆ ಪರಿಹರಿಸುವದೆಂಬ ಧರ್ಮ ಸಂಕಟದಲ್ಲಿ ದೊರೆಗಳು ದಿಕ್ಕು ತೋಚದವರಾದರು. ಇದೇ ಸಮಯಕ್ಕೆ ರಾಜಗುರುಗಳಾದ ಶ್ರೀ ಪ್ರಭುದೇವರು ಅರಮನೆಗೆ ದಯಮಾಡಿಸಿದರು ಮಲ್ಲಸರ್ಜ ದೊರೆಗಳು, ಮತ್ತು

ಚೆನ್ನಮ್ಮ ರುದ್ರಮ್ಮನವರೂ ಗುರುಗಳಿಗೆ ವಂದಿಸಿ ಉಚಿತಾಸನದಲ್ಲಿ ಕುಳ್ಳಿರಿಸಿದರು.

ಮನಶ್ಶಾಂತಿಯನ್ನು ಕಳೆದುಕೊಂಡು ದೊರೆಗಳು ಪ್ರಚಲಿತ ಸಮಸ್ಯೆಯನ್ನೇ ಗುರುಗಳ ಮುಂದಿಟ್ಟು. ಪರಿಹಾರಕ್ಕಾಗಿ ಬಿನ್ನವಿಸಿಕೊಂಡರು. ಇದೇ ವೇಳೆಗೆ ದೊರೆಗಳ ವಾದಕ್ಕೆ ಪುಷ್ಟಿಯೀಯುವಂತೆ, ಭಕ್ತಶ್ರೇಷ್ಠನೆನಿಸಿಕೊಂಡಿದ್ದ ಬಸವಶೆಟ್ಟರು ತಮ್ಮ ಪತ್ನಿ–ಪುತ್ರ ಸಮೇತರಾಗಿ ದೊರೆಗಳ ಆಸ್ಥಾನಕ್ಕೆ ಬಂದು, ಮಡಿವಾಳೇಶನ ಅಕ್ರಮ ಅನುಚಿತ ವರ್ತನೆಗಳಿಗೆ ಮಹಾರಾಜರೇ ಹೊಣೆಯಾಗಬೇಕಾದೀತೆಂದು ಎಚ್ಚರಿಸಿದರು.

ಚೆನ್ನಮ್ಮ ಮತ್ತು ರುದ್ರಮ್ಮ ರಾಣಿಯರಿಗೆ ಮಾತ್ರ ತಮ್ಮ ನೆಚ್ಚಿನ ಮಡಿವಾಳೇಶನ ಬಗ್ಗೆ ದೊರೆಗಳಾಗಲಿ, ಶೆಟ್ಟರಾಗಲಿ ಆಡಿದ ಮಾತುಗಳು ಸರಿಯೆನಿಸಲಿಲ್ಲ. ಮಡಿವಾಳನನ್ನೂ ಮುದ್ದು ಹಸುಳೆ ಏನೂ ಅರಿಯದೆ ಮಾಡಿದ ತಪ್ಪುಗಳಿಗೆ ಕಥೆ ಕಟ್ಟುತ್ತ ಹೋದರೆ ಹೇಗೆ ಎಂಬುದು ಅವರ ಮಾತೃ ಹೃದಯದ ತಳಮಳ ಮಲ್ಲಸರ್ಜ ದೊರೆಗಳು ಎಲ್ಲ ಭಾರವನ್ನೂ ಗುರುಗಳಿಗೆ ಹಾಕಿ ಕುಳಿತುಬಿಟ್ಟರು.

ಆಗ ಪ್ರಭುಸ್ವಾಮಿಗಳು ಈ ಒಳಗಾಗಿ ತೀರ್ಮಾನಿಸಿದಂತೆ ಮರಿ-ಮಡಿವಾಳೇಶನನ್ನು ಕಲ್ಮಠಕ್ಕೆ ಕರೆದುಕೊಂಡು ಹೋಗುವದಾಗಿ ತಿಳಿಸಿ, ತಾವು ಸಹ ಶೆಟ್ಟರನ್ನು ಸಮಾಧಾನಪಡಿಸುತ್ತ ಅಯ್ಯಾ ಶಿವಭಕ್ತ ಶಿಖಾಮಣಿಯೇ, ಮಡಿವಾಳೇಶನ ಬಾಲಲೀಲೆಗಳು ಸಾಮಾನ್ಯ ಜನರಿಗೆ ತಿಳಿಯವು. ಅವನು ಅವತಾರಿಕ ಪುರುಷನೆಂದು ತಿಳಿ.

"ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ! !

ಅಭ್ಯುತ್ಥಾನಮ್, ಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ" ಎಂಬಂತೆ ಯಾವ ಯಾವ ಕಾಲದಲ್ಲಿ ಧರ್ಮವು ನಶಿಸಿ ಅಧರ್ಮ ಅತ್ಯಾಚಾರಗಳ ಹೆಚ್ಚಳವಾಗುವದೋ ಆಗ, ದೇವನು ಧರ್ಮ ಸ್ಥಾಪನೆಗಾಗಿ ತಾನು ಇಲ್ಲವೇ ತನ್ನ ಅನುಯಾಯಿಗಳನ್ನು ಭೂಮಿಯಲ್ಲಿ ಅವತರಿಸಲು ಕಳುಹಿಸುವನು. ಪಾಪಿಗಳ ನಾಶಕ್ಕಾಗಿ, ಪರಪೀಡಕರ ಸಂಹಾರಕ್ಕಾಗಿ ದೇವಾಂಶ ಸಂಭೂತರ ಅವತಾರವಾಗಿರುವದೆಂದು ತಿಳಿ. ಅವರ ಇರುವನ್ನು ಅರಿಯುವದು ಅಷ್ಟು

ಸುಲಭವಲ್ಲಾ, ಈಗ ಮರಿ ಮಡಿವಾಳೇಶನ ಬಾಲ್ಯಲೀಲೆಗಳಿಂದ ನಿಮ್ಮಂಥವರನ್ನು ಪೀಡಿಸಿದರೂ ಅದರ ಹಿನ್ನೆಲೆಯಲ್ಲಿ ನಿಮ್ಮ ಉತ್ಕೃಷ್ಟ ಉಜ್ವಲತೆ ಅಡಗಿದೆ, ಎಂದು ಹೇಳಿ ಸಮಾಧಾನಪಡಿಸಿ ಕಳುಹಿಸಿದರು ಬಳಿಕ ರುದ್ರಮ್ಮ ಚನ್ನಮ್ಮ ರಾಣಿಯುವರ ದೊರೆ ಮಲ್ಲಸರ್ಜನು ಮನಸ್ಸಿಲ್ಲದ ಮನಸ್ಸಿನಿಂದ ಮಡಿವಾಳೇಶನನ್ನು ಗುರುಗಳ ಸಂಗಡ ಕರ್ಮಠಕ್ಕೆ ಕಳುಹಿಸಿದರು.

---

೬ ನೆಯ ಪ್ರಕರಣ

ಮಡಿವಾಳೇಶನ ವಿದ್ಯಾರ್ಜನೆ

ತುಂಟತನದಲ್ಲಿ ಪ್ರಸಿದ್ಧನಾದ ಮಡಿವಾಳೇಶನನ್ನು ಮಠಕ್ಕೆ ಕರೆದುಕೊಂಡು ಬಂದ ಪ್ರಭುಸ್ವಾಮಿಗಳು ಪರಶಿವನ ಲೀಲಾ ವಿನೋದಕ್ಕೆ ಅಚ್ಚರಿಪಟ್ಟರು. ಅರಮನೆಯನ್ನು ತೊರೆದು ಮಠದ ವಾತಾವರಣದಲ್ಲಿ ಬೆಳೆಯುತ್ತಿರುವ ಮಡಿವಾಳೇಶನು ಮತ್ತಷ್ಟು ತುಂಟ ಸ್ವಭಾವದವನಾಗಹತ್ತಿದನು. ಮರಿ ಬಿಚ್ಚಿದ ಸರ್ಪದಂತೆ ಮನಬಂದಂತೆ ವರ್ತಿಸಹತ್ತಿದನು. ಗುರುಗಳ ಕಣ್ಣು ತಪ್ಪಿಸಿ ಗಿಡಮರಗಳನ್ನು ಹತ್ತಿ ಕೋತಿಯಾಟವಾಡುತ್ತ ಕುಣಿಯುತ್ತಿದ್ದನು. ಪರವಾಸಿಗಳಾದ ಹುಡುಗರು ಆಟವಾಡುವ ಕಣ್ಣಿಗೆ ಬಿದ್ದರೆ ಸಾಕು ಜಿದ್ದಿನಿಂದ ಮುಂದಾಗಿ ಹೋಗಿ ತನ್ನನ್ನು ಆಟಕ್ಕೆ ಕರೆದುಕೊಳ್ಳುವಂತೆ ಪೀಡಿಸುವನು. ಇವನ ಹೊಡೆತ ಬಡಿತಗಳಿಗೆ, ಬೇಸತ್ತ ಬಾಲಕರು ಮಡಿವಾಳೇಶನು ಆಟಕ್ಕೆ ಬರಕೂಡದೆಂದು ಖಂಡಿತವಾಗಿ ನಿರಾಕರಿಸಿಬಿಡುತ್ತಿದ್ದರು. ಆಗ ಮಡಿವಾಳೇಶ ಬಾಲಕನು ಅವರು ಆಡುತ್ತಿರುವ ಆಟಗಳನ್ನು ಕೆಡಿಸಿ ನೆತ್ತಿಯ ಮೇಲೆ ನಾಲ್ಕು ಏಟು ಗುದ್ದಿ ಪ್ರತಿಸ್ಪರ್ಧಿಯಾಗಿ ನಿಲ್ಲುತ್ತಿದ್ದನು ಅವರೆಲ್ಲರೂ ಗುಂಪು ಕಟ್ಟಿಕೊಂಡು ಇವನ ಮೇಲೆ ಬೀಳಬೇಕೆಂದು ಹವಣಿಸಿದರೆ, ಕೊನೆಗು ಪಾರಾಗುವನು. ಅವರ ಕೈಗೆ ಸಿಗದಂತೆ, ಓಡಿ ಹೋಗುತ್ತಿದ್ದನು ಬಳಿಕ, ಆ ಹುಡುಗರು ಪಾಲಕರಾದ ತಂದೆ, ತಾಯಿ ಹಿತಬಾಂಧವರಲ್ಲಿಗೆ ಹೋಗಿ ದೂರು ಹೇಳಿ ಆತನಿಂದ ತಮಗಾದ ನೋವನ್ನು ತೋರಿಸಿ ಅಳುತ್ತಿದ್ದರು. ಹೀಗಾಗಿ ಪುರಪ್ರಮುಖರು ಪ್ರಭುಸ್ವಾಮಿಗಳ ಕಲ್ಮಠಕ್ಕೆ ಬಂದು ಮರಿ ಮಡಿವಾಳೇಶನ ಕೃತಿಯನ್ನು ತಿಳುಹಿಸಿ

ಗ್ರಾಮದ ಮಕ್ಕಳು ನೆಮ್ಮದಿಯಿಂದ ಬಾಳಿಕೊಂಡರುವದೇ ದುಸ್ತರವಾಗಿದೆ ಮತ್ತು ಮಡಿವಾಳೇಶನ ಉಪಟಳದಿಂದ ನಮ್ಮ ಮಕ್ಕಳು ನಿಶ್ಚಿಂತೆಯಿಂದ ಆಡಿಕೊಂಡು ಬಾಳುವದು ಕಠಿಣವಾಗಿದೆ ಎಂದು ಹೇಳಿ ಯೋಗ್ಯ ಕ್ರಮ ತೆಗೆದುಕೊಳ್ಳುವಂತೆ, ಬೇಡಿಕೊಳ್ಳುತ್ತಿದ್ದರು, ಪ್ರಭುಗಳಿಗೆ, ಈಗ ಧರ್ಮ ಸಂಕಟದಂತಹ ಕಠಿಣ ಪ್ರಸಂಗ ಪ್ರಾಪ್ತವಾಯಿತು. ಪರಶಿವನ ಆಜ್ಞೆಯಂತೆ ಭೂಮಿಯನ್ನು ಬೆಳಗ ಬಂದ ಲೀಲಾಮೂರ್ತಿ ಪವಾಡಪುರುಷ ವೀರಭದ್ರನ ಅವತಾರವೇ ಮಡಿವಾಳೇಶನೆಂದು ಅರಿತು ತಾವು ಆತ ನೋಡನೆ, ವಿನಯಶೀಲರಾಗಿ ವರ್ತಿಸುತ್ತಿದ್ದವರು ಮರಿದೇವರಿಗೆ ಏನು ಹೇಳಬೇಕೆಂದು ಚಿಂತಿಸಹತ್ತಿದರು. ಮೊದಲೇ ಸಾತ್ವಿಕ ಗುಣ ಸಂಪತ್ತಿನವ ರಾದ ಪ್ರಭು ಸ್ವಾಮಿಗಳು ಮಡಿವಾಳೇಶನಿಗಾಗಿ ಬಲು ನೊಂದು ಗಾಸಿಯಾದರು.

ಒಂದು ದಿನ ಪ್ರಭುಸ್ವಾಮಿಗಳು ಹಾಗು ಮಲ್ಲಸರ್ಜ ದೊರೆಯು ಮಾತ ನಾಡುತ್ತ ಕುಳಿತಾಗ ದೊರೆ, ಮಲ್ಲಸರ್ಜನು ಮಡಿವಾಳೇಶನ ಬಗ್ಗೆ ಜನತೆ ಯಿಂದ ಬರುವ ದೂರುಗಳನ್ನು ವಿವರಿಸುತ್ತ ಗುರುದೇವಾ ಮರಿದೇವರ ಉಪಟಳ ದಿಂದ ಕಿತ್ತೂರಿನ ಜನತೆ ರೋಷಿ ಹೋಗಿದೆ ಎಂದುವಿವರಿಸಿದರು. ಆಗ ಪ್ರಭುಸ್ವಾಮಿಗಳು ತಮಗೆ ತಿಳಿದಂತೆ ಮಡಿವಾಳೇಶನ ಚೇಷ್ಟೆಯಲ್ಲಿ ಅಡಗಿದ ತತ್ವಗಳು ಜಡಮತಿಗಳಿಗೆ ಕುಚೇಷ್ಟೆ ಕೆಡುಕುತನವೆಂದು ಕಂಡರೂ ಆದರೆ ಹಿನ್ನೆಲೆಯಲ್ಲಿ ದೇವನೊಲುಮೆಯ ಸಾಧನೆ ಅಡಕವಾಗಿದೆ ಎಂದು ತಾವು ಅರಿತು ಕೊಂಡದ್ದನ್ನು ತಿಳಿಸಿದ್ದಲ್ಲದೇ ಒಂದೊಂದು ಕಾರ್ಯದಲ್ಲಿ ಒಂದೊಂದು ತರ ಹದ ಸತ್ವಪೂರ್ಣ, ಅರ್ಥಪೂರ್ಣಪವಾಡಗಳೇ ಅಡಕವಾಗಿವೆ ಎಂದು ತಿಳಿಸಿ ಶಿವನ ಆಜ್ಞೆಯಂತೆ ಧರ್ಮ ಜಾಗೃತಗೋಸ್ಕರ ಶ್ರೀಗುರು ಶಿವಯೋಗಿ ಮಡಿವಾ ಳೇಶ್ವರ ಸ್ವಾಮಿಗಳ ಉಗ್ರ ತಪಸ್ಸಿನ ಪ್ರತಿಫಲವಾಗಿ ದೊರೆತ, ಅನಾಥ ಬಾಲಕ ಮಡಿವಾಳೇಶನು ಸಾಕ್ಷಾತ್ ವೀರಭದ್ರನ ಅಂಶಭೂತನೆಂದೂ ಈತನಿಂದ ಜನ ಜಾಗೃತಿ, ಧರ್ಮಜಾಗೃತಿಯಾಗುವ ಪ್ರಸಂಗ ದೂರಿಲ್ಲವೆಂದು ತಿಳಿಸಿದರು.

ಆಗ ಮಲ್ಲಸರ್ಜ ದೊರೆಯು ಮಡಿವಾಳೇಶನ ಬಗ್ಗೆ ಅತಿಯಾದ ಭಯಭಕ್ತಿಗಳಿಂದ ಕಾಣುತ್ತಿದ್ದನಲ್ಲದೇ ಮಡಿವಾಳೇಶ ಮಾಡಿದ್ದೇ ಮಾನ್ಯ

ಆದಿದ್ದೇ ವೇದವಾಕ್ಯ ನುಡಿಯಲ್ಲಿ ನಡೆಯಲ್ಲಿ ಯಾವ ತರದ ಸಂಕೋಚ ಮಾಡದಂತೆ, ತನ್ನ ಅರುವಿನ ಅಂತರಾತ್ಮವನ್ನು ಪರಿಶುದ್ಧಗೊಳಿಸಿಕೊಂಡು, ನಿರ್ಮಲಚಿತ್ತನಾಗಿ ಕಲ್ಮಠದ ಗುರುಪರಂಪರೆಗೆ ಮಣಿದು ನಡೆಯುವ ಮಹಾ ಶಿವಭಕ್ತ ಸಂಪನ್ನನಾದನು. ರುದ್ರಮ್ಮರಂತೂ ಪ್ರಭು ಸ್ವಾಮಿಗಳನ್ನು ಮಡಿವಾಳೇಶನ ಮರಿದೇವರನ್ನು ಬಲು ಪೂಜ್ಯ ಭಾವನೆಯಿಂದ ಕಾಣುತ್ತ ಪ್ರತಿನಿತ್ಯ ತಪ್ಪದೇ ಅವರ ಪಾದೋದಕಸೇವನೆ ಇಲ್ಲದೇ ಮುಂದಿನ ಕಾರ್ಯಜರಗುವಂತಿಲ್ಲ ಎನ್ನುವ ಪರಿಪಾಠವು ಸರಳವಾಗಿ ಸಾಗಿಬಂದಿತು.

ಇಂತಹ ಸಮಯದಲ್ಲಿ ಮಲ್ಲಸರ್ಜ ದೊರೆಯು ಮರಿ ಮಡಿವಾಳೇಶನ ಜಾಣತನವನ್ನು ಅರಿತವನಾಗಿ ಪಂಡಿತೋತ್ತಮರಿಂದ ವಿದ್ಯೆ ಕಲಿಸಿದರೆ ಮಡಿವಾಳೇಶನ ತುಂಟತನ ಅಳಿದು ಅಲೌಕಿಕ, ಪಾರಮಾರ್ಥ ಜ್ಞಾನ ಬೆಳೆದು ಕಿತ್ತೂರನಾಡಿನ ಕಣ್ಮಣಿಯಾಗಬಹುದೆಂದು ಸಂಸ್ಕೃತ ಶಾಸ್ತ್ರ ಪುರಾಣ ಪ್ರವಚನಗಳಲ್ಲಿ ಪಂಡಿತರೆನಿಸಿದ ಹಾನಗಲ್ಲ ಚನ್ನಬಸವ ಶಾಸ್ತ್ರಿಗಳು ವೆಂಗಿ ಎಂಬ ಘನ ಪಂಡಿತರನ್ನು ಕರೆಯಿಸಿ ಮಡಿವಾಳೇಶ ಮರಿದೇವರಿಗೆ ಪಾಠ ಹೇಳುವ ಏರ್ಪಾಡು ಮಾಡಿದನು.

ಸಕಲ ವಿದ್ಯಾನಿಧಿಯಾದ ಚನ್ನಬಸವ ಶಾಸ್ತ್ರಿಗಳ ಪತ್ನಿ ಎನಿಸಿ ಕೈ ಹಿಡಿದ ನಾಗಲಾಂಬಿಕೆಯು ಲಿಂಗಪೂಜಾನಿಷ್ಠಳು. ಪತಿಯು ನೆರಳ ಸೋಪಾದಿಯಲ್ಲಿ ಬಾಳುವ ಪತಿವ್ರತಾ ಶಿರೋಮಣಿಯು ಸಕಲ ಸದ್ಗುಣ ಭರಿತ ಸಾಧ್ವಿಯು ಗುರುಚರ ಮೂರ್ತಿಗಳಲ್ಲಿ ಭಯಭಕ್ತಿಯಿಂದ ವರ್ತಿಸುವ ಶಿವಭಕ್ತಿ ಸಂಪನ್ನಳು ಆಗಿದ್ದಳು. ಮಲ್ಲಸರ್ಜ ದೊರೆಗಳು ಹಾಗು ಪ್ರಭುಗಳು ಕೂಡಿ ಇಂತಹ ಪುಣ್ಯ ದಂಪತಿಗಳನ್ನು ಕಿತ್ತೂರ ನಾಡು ತಾಯಿಯ ಮಡಿಲಲ್ಲಿ ಬೀಳಲು ಅಹ್ವಾನಿಸಿಕೊಂಡು ಮುಖ್ಯವಾಗಿ ಮರಿ ಮಡಿವಾಳೇಶನ ಪಾಲನೆಯ ಜವಾಬ್ದಾರಿಯನ್ನು ನಾಗಲಾಂಬಿಕೆಯು ಹೊತ್ತುಕೊಂಡು, ಶಿಸ್ಯತ್ವದ ಹೊಣೆಯನ್ನು ಚನ್ನಬಸವಶಾಸ್ತ್ರಿಗಳು ಒಪ್ಪಿಕೊಂಡು ಕಿತ್ತೂರ ನಾಡ ತಾಯಿಯ ಪುಣ್ಯಪರಿಸರದಲ್ಲಿ ಬಾಳಹತ್ತಿದರು.

ರಾಜಗುರುಗಳ ಅಪ್ಪಣೆಯಂತೆ ಮಡಿವಾಳೇಶನನ್ನು ಸಲಹುವ ತಾಯಿಯಾಗಿ ಒಪ್ಪಿಕೊಂಡ ನಾಗಲಾಂಬಿಕೆಯು ಹೆತ್ತ ಮಗನಿಗಿಂತಲೂ

ಹೆತ್ತಿರದವರನ್ನು ಹಚ್ಚಿಕೊಂಡು ಜೋಪಾನ ಮಾಡಹತ್ತಿದಳು. ಮಡಿವಾಳೇಶ ನಾದರೂ ಪ್ರಭುಸ್ವಾಮಿಗಳಿಗೆ, ಬಾಬಾ ಎಂದು ಕರೆಯುವಂತೆ ನಾಗ ಲಾಂಬಿಕೆಯನ್ನು ಅಮ್ಮಾ ಎಂದು ಸಂಭೋಧಿಸುತ್ತಿದ್ದನು. ಮಡಿವಾಳೇಶನು ನಾಗಲಾಂಬಿಕೆಯ ಅಮೃತಮಯ ಕೈ ತುತ್ತಿನಿಂದ ಮತ್ತಷ್ಟು ಸ್ವೇಚ್ಛೆ ಯಾಗಿ ಬೆಳೆಯಹತ್ತಿದ್ದನು. ಹೀಗಾಗಿ ಈತನ ತುಂಟತನಕ್ಕೆ ಮತ್ತಷ್ಟು ಪುಟಕೊಟ್ಟಂತಾಗಿ ಪುರಜನರ ಮಕ್ಕಳನ್ನು, ಶಿವಲಿಂಗ ರುದ್ರಸರ್ಜನನ್ನು ಪೀಡಿಸುವದು ಅತಿಯಾಯಿತು. ಪ್ರಭುಸ್ವಾಮಿಗಳಿಗೆ ದೂರುಗಳು ಬರುವದು ತಪ್ಪಲಿಲ್ಲ ಹೀಗಾಗಿ ಸ್ವಾಮಿಗಳು ಬೇಸತ್ತು ಮಡಿವಾಳೇಶನ ಸಲುವಾಗಿ ಚಿಂತಿಸಹತ್ತಿದರು.

---

೭ ನೇ ಪ್ರಕರಣ

ಕೋಣೆಯಲ್ಲಿ ಭದ್ರಪಡಿಸಿದರೂ ಮಾಯದಿಂದ ಹೊರಗೆ ಬಂದದ್ದು

ಮಡಿವಾಳ ಮರಿದೇವರು, ಎಂಟು ಹತ್ತು ವರುಶದ ಬಾಲಕ ನಾದರೂ ತನ್ನ ತುಂಟತನವನ್ನು ಅತಿಗೊಳಿಸಿದನೆ ಹೊರತು ಕಡಿಮೆ ಯಾಗಲಿಲ್ಲ. ಪುರಜನರು ಮೇಲಿಂದ ಮೇಲೆ ಪ್ರಭುಸ್ವಾಮಿಗಳನ್ನು ಕಂಡು ನಮ್ಮ ಮಗನನ್ನು ಹೊಡೆದು ಗಾಯಗೊಳಿಸಿದ್ದಾನೆ ನನ್ನ ಮಗನ ಮೊಳ ಕಾಲು ಮಂಡಿ ಕೆತ್ತಿ ರಕ್ತ ಬರುವಂತೆ ಮಾಡಿದ್ದಾನೆ ಎಂದು ಒಂದಿ ಲ್ಲೊಂದು ರೀತಿಯ ಅಪವಾದಗಳನ್ನು ತರುತ್ತಿದ್ದರು. ಅದಕ್ಕಾಗಿ ಮಡಿ ವಾಳೇಶನನ್ನು, ಹೊರಗೆ ಬಿಡಬಾರದೆಂದು ತೀರ್ಮಾನಿಸಿ ಪ್ರಭುಸ್ವಾಮಿಗಳು ಅವನನ್ನು ಒಂದು ಕೋಣೆಯಲ್ಲಿ ಹಾಕಿ ಬೀಗ ಜಡಿದು ಬಿಟ್ಟರು.

ಒಳಗೆ ಕೋಣೆಯಲ್ಲಿ ಕುಳಿತ ಮಡಿವಾಳೇಶನು ತನ್ನನ್ನು ಹೊರಗೆ ಬಿಡುವಂತೆಯಾಗಲಿ, ಇನ್ನು ಮೇಲೆ ಹಾಗೆ ಉಡಾಳತನ ಮಾಡುವದಿಲ್ಲ ಎಂಬ ಮಾತನ್ನಾಗಲಿ ಆಡದೆ, ಪ್ರಭುದೇವರ ಅಪ್ಪಣೆಯಂತೆ ಅವರ ಮನ ಇಚ್ಛೆಯಂತೆ ಕೋಣೆಯಲ್ಲಿ ಉಳಿದುಕೊಂಡನು ಅಂದು ಸೋಮವಾರ

ಸಾಯಂಕಾಲ ರುದ್ರವೀರ ಕವಿಗಳೆಂಬ ಸಾಹಿತ್ಯ ಪಂಡಿತರೊಬ್ಬರು ಸಂಪಗಾಂವಿಯಿಂದ ಕಲ್ಮಠಕ್ಕೆ ಆಗಮಿಸಿದರು. ಕಿತ್ತೂರಿನ ಕಲ್ಮಠದ ಮರಿ ದೇವರಾದ ಮಡಿವಾಳೇಶನು ಎಂಟು ಹತ್ತು ವರುಷದ ಈ ಬಾಲ ವಯಸ್ಸಿನಲ್ಲಿ ಅನೇಕ ಪವಾಡಗಳನ್ನೆಸಗಿದ ಲೀಲಾ ಮೂರ್ತಿಯಾಗಿದ್ದಾನೆ. ದಕ್ಷಯಜ್ಞ ಸಂಹಾರಕ್ಕೆ ಅವತಾರಗೊಂಡ ವೀರಭದ್ರನ ಪ್ರತಿರೂಪವೆನಿಸಿದ್ದಾನೆ. ಬಾಲಕನ ನುಡಿಯಿಂದ ಜಾರಿ ಬಂದ ಶಬ್ದವೆಂದಿಗೂ ಹುಸಿಯಾಗದೇ ದಿಟವಾದ ಪ್ರಸಂಗಗಳು ಸಾಕಷ್ಟು ಉಂಟೆಂದೂ ಮದ್ಯಾನೆಯನ್ನು ಮರ್ದನ ಮಾಡಿದ ಗಂಭೀರ ಘನವಂತನೆಂದೂ ಇನಿತೆಲ್ಲ ಪ್ರಭಾವಗಳಿಂದ ಕೂಡಿದ ಮರಿದೇವ ಮಡಿವಾಳೇಶನನ್ನು ಕಣ್ಣಾರೆ ಕಂಡು ಮನಸಾರೆ ಹಾಡಿ ಹೊಗಳ ಬೇಕೆಂದು ಬಯಸಿ ಕಿತ್ತೂರ ಕಲ್ಮಠದ ಪ್ರಭುಸ್ವಾಮಿಗಳ ಸನ್ನಿಧಿಗೆ ಬಂದರು.

ವರಕವಿಗಳಾದ ರುದ್ರವೀರ ಕವಿಗಳು ಪ್ರಭುಸ್ವಾಮಿಗಳಿಗೆ ಭಕ್ತಿ ಭಾವದಿಂದ ನಮಸ್ಕರಿಸಿ ಮರಿದೇವರಾದ ಮಡಿವಾಳೇಶನ್ನು ಕಾಣುವ ತಮ್ಮ ಮನದಾಸೆಯನ್ನು ತಿಳಿಸುತ್ತ ವೆಂಗಿ ಚನ್ನಬಸವ ಶಾಸ್ತ್ರಿಗಳಂತಹ ಘನಪಂಡಿತರ ಶಿಷ್ಯೋತ್ತಮನನ್ನು ಕಂಡು ಆನಂದ ಹೊಂದಬೇಕೆಂದಿರುವ ತಮ್ಮಾಸೆಯನ್ನು ಗುರುಗಳು ಈಡೇರಿಸಿಕೊಡುತ್ತಾರೆ ಎಂದು ನಂಬಿ ಬಂದಿರುವದಾಗಿ ವಿನಂತಿಯಿಂದ ಬೇಡಿಕೊಳ್ಳಹತ್ತಿದರು.

ಆಗ ಪ್ರಭುಸ್ವಾಮಿಗಳು ರುದ್ರವೀರ ಕವಿವರನ ವಿನಂತಿಯನ್ನು ಮಾನ್ಯಮಾಡಿ ಬಾಲಕ ಮಡಿವಾಳೇಶನನ್ನು ತೋರಿಸುವದಕ್ಕಾಗಿ ಕೋಣೆಯ ಬಾಗಿಲಿಗೆ ಹಾಕಿದ ಕೀಲಿಯನ್ನು ತೆಗೆದನು ಒಳಗಿರುವ ಮಡಿವಾಳೇಶನನ್ನು ಕೂಗಹತ್ತಿದರು. ಒಳಗೆ ಮಡಿವಾಳೇಶ ಇಲ್ಲವಾದ ಕಾರಣದಿಂದ ಮಡಿವಾಳೇಶನು ಸ್ವಾಮಿಗಳ ಕೂಗುವಿಕೆಗೆ ಓಗೊಡದಾದನು. ಸ್ವಾಮಿಗಳಂತೂ ಸಂಪೂರ್ಣ ಗಾಬರಿಯಿಂದ ಕೋಣೆಯ ಒಳಗೆ ಹೋಗಿ ಹುಡುಕಹತ್ತಿದರು. ರುದ್ರವೀರ ಕವಿಯು ಅಷ್ಟೇ ಆಶ್ಚರ್ಯದಿಂದ ಭದ್ರವಾಗಿ ಕೀಲಿ ಹಾಕಿ ಬಂಧಿಸಿದ ಮಡಿವಾಳೇಶನು ಎಲ್ಲಿ ಹೋದನು, ಏನಾದನು, ಅಯ್ಯೋ ಶಿವನೇ ಏನಿದು ನಿನ್ನ ಲೀಲಾ ವಿಲಾಸವೆಂದು ಭಯ ಆಶ್ಚರ್ಯಗಳಿಂದ ಹಳಹಳಿಸಹತ್ತಿದರು. ಪ್ರಭುಸ್ವಾಮಿಗಳಂತೂ ಉಪ್ಪು ತಿಂದವರಂತೆ ತಮ್ಮ ತಪ್ಪಿ

ನಿಂದಾಗಿ ಮಗು ಏನಾಯಿತೋ ಏನೋ ಎಂದು ಮಡಿವಾಳೇಶಾ, ಮಗು ಮಡಿವಾಳೇಶಾ, ಎಂದು ಹಲುಬಹತ್ತಿದರು. ಸ್ವಾಮಿಗಳ ಆರ್ತನಾದವನ್ನು ಕೇಳಿದ ನಾಗಲಾಂಬಿಕೆಯು ಮರಿದೇವರಾದ ಮಡಿವಾಳೇಶನಿಗೆ ಉಣಬಡಿಸುತ್ತಿದ್ದವಳು ಹೊರಗೆ ಬರುತ್ತ ಗುರುವರೇ ಮಡಿವಾಳೇಶ ಮರಿದೇವರು ಒಳಗೆ ಊಟಮಾಡುತ್ತಿದ್ದಾನೆ ಕಳುಹಿಸಿ ಕೊಡಬೇಕೇನು ಎಂದಳು ಆಗ ರುದ್ರವೀರ ಕವಿಯು, ಪ್ರಭುಸ್ವಾಮಿಗಳು ಆನಂದ ಆಶ್ಚರ್ಯಗಳಿಂದ ಕೂಡಿದವರಾಗಿ ಪರಮಾತ್ಮನ ಲೀಲಾ ವಿನೋದಕ್ಕಾಗಿಯೇ ಅವತಾರಕೊಂಡಿರುವ ಮರಿದೇವರನ್ನು ಬಂಧಿಸಲು ಅಷ್ಟು ಸುಲಭ ಸಾಧ್ಯವಲ್ಲವೆಂದು ಅರಿತು, ಅತಿ ಆನಂದದಿಂದ ಮಗು ಮಡಿವಾಳೇಶಾ, ಎಂದು ತಾವೇ ಕೂಗಿದರು. ಆಗ ಊಟ ಮಾಡುತ್ತಿದ್ದ ಮಡಿವಾಳೇಶನು ಓಡುತ್ತ ಬಂದು ಏನು ಬಾಬಾ ಎಂದು ಅಪ್ಪಿಕೊಂಡನು. ಪ್ರಭುಸ್ವಾಮಿಗಳು ಆನಂದದ ಅತಿರೇಕದಲ್ಲಿ ಬಾಲ ಮಡಿವಾಳೇಶನನ್ನು ಎತ್ತಿಕೊಂಡು ಲಟಪಟನೆ ಮುದ್ದಿಸಿ ಆನಂದಾಶ್ರುಗಳನ್ನು ಸುರಿಸಿದರು.

ಬಳಿಕ ರುದ್ರವೀರ ಕವಿಯು ತಂದೆ ಪ್ರಭು ಗುರು ತೇಜೋನಿಧಿಯೇ ಸಾಕ್ಷಾತ ರುದ್ರರೂಪನೇ ಕಿತ್ತೂರ ನಾಡ ಜನತೆಯ ಮನೋ ಮಂದಿರದಲ್ಲಿ ಕವಿದ ಅಜ್ಞಾನದ ಅಂಧಃಕಾರವನ್ನು ಹೊಡೆದೋಡಿಸಲು ಅವತರಿಸಿದ ಕವಿ ತೇಜಸ್ವಿಯೇ ಎಂದು ಮರಿ ಮಡಿವಾಳೇಶನ ಗುಣಗಾನ ಮಾಡ ಹತ್ತಿದನು. ಬಳಿಕ ಕರಜೋಡಿಸಿ ಗುರುವೇ ನರನು ನಾ, ನಿನ್ನಂ ಬಣ್ಣಿಪುದೆಂತು ಸುರುಭತೇಜದ ಸುಕುಮಾರ ಕಳೆಯಲ್ಲಿ ಬ್ರಹ್ಮಜ್ಞಾನದ ವೈರಾಗ್ಯ ವೃತ್ತಿಯು ವೀರ ವಿರತಿ ಕಳೆ, ಷಟಸ್ಥಲ ಸದ್ಗುಣ, ತಾಮಸ ಗುಣ ಕಳೆವ ಸಾತ್ವಿಕ ಗುಣದ ಅಲಗಿನೋಪಾದಿಯಲ್ಲಿ ಥಮಕಿಸುವ ಕಣ್ಣು ದಿಟ್ಟ ಭವದ ಬಂಧನವ ಬಿಸುಟ ಮಾಯ ಮರ್ಮವ ತರಿದು ಕಾಮ ಕ್ರೋಧಾದಿ ಅಖಿಲ ವಿಷಯ ವಾಸನೆಗಳನ್ನು ಹರಿದು, ಸರಿದು ಸಾಗಿದ ಸರ್ಪವನ್ನೇ ಅಲಂಕಾರದಾಭರಣವೆಂದು ಧರಿಸಿ, ಸುಡುವ ಬೆಗೆಯನ್ನುಂಡು ಬೂದಿಯಲ್ಲಿ ಬಿದ್ದು ಸ್ಮಶಾನ ವಾಸಿ ಎನಿಸಿ ಕಪಾಲವ ಪಿಡಿದು ಭಿಕ್ಷಾಟನೆಯ ಕಾಯಕದಿ ಸಕಲ ಚರಾಚರ ಜೀವಿಗಳಿಗೆ ಒಡೆಯನಾಗಿ ಕಾಮಹರ ಕಾಲಹರ ಕರುಣಾಕರನಾಗಿ ಮತ್ತೆ ಹಟಯೋಗಿ ಶಿವಯೋಗಿಯಾಗಿ ಬ್ರಹ್ಮಾಂಡ ಬದುಕನ್ನೇ ಉಳಿಸಲು

ವಿಷಪಾಶ ಗ್ರೈದ ನೀಲಕಂಠ ಪುತ್ರ ಉಪಾಖ್ಯಾನ ವೀರಭದ್ರಾವತಾರಿ ಗುರು ಮೂರ್ತಿ ನಮೋ ನಮೋ ಶ್ರೀಪಾದ ಪದ್ಮಂಗಳಿಗೆ ಎಂದು ಮಡಿವಾಳೇಶನ ಗುಣ ಸಂಕೀರ್ತನೆ ಮಾಡಹತ್ತಿದನು.

ಪ್ರಭು ಸ್ವಾಮಿಗಳು ರುದ್ರವೀರ ಕವಿ ವಾಣಿಯಲ್ಲಿ ಕಂಡು ಬರುವ ಪರಶಿವನ ನಾಮ ಸಂಕೀರ್ತನೆಯನ್ನು ಕೇಳಿ ಆನಂದಗೊಂಡರು. ಮರಿ ಮಡಿವಾಳೇಶನು ಶಿವನ ಪರಿಚಯದ ಪುರಾಣವನ್ನೇ ಹೇಳುವ ಕವಿಯನ್ನು ಆದರ ಭಾವದಿಂದ ಕಾಣುತ್ತ ಪದೇ ಪದೇ ಶಿವನಪರಿಚಯವನ್ನು ಬಣ್ಣಿಸಿ ಹಾಡುವಂತೆ ಒತ್ತಾಯ ಪಡಿಸುತ್ತಿದ್ದನು, ರುದ್ರವೀರ ಕವಿವರನ ಆಗಮನದ ಸುದ್ದಿಯು ಹಾಗೂ ಮಡಿವಾಳೇಶನ್ನ ಮರಿಯು ಕೋಣೆಯಲ್ಲಿ ಭದ್ರಪಡಿಸಿದರೂ ಮಾಯದಿಂದ ಹೊರಗೆ ಬಂದು ಮಠವ ಉಗ್ರಾಣದಲ್ಲಿ ನಾಗಲಾಂಬೆಯೊಡನೆ ಊಟ ಮಾಡುತ್ತಿದ್ದ ವಿಷಯವೂ ಕಿತ್ತೂರ ಪುರವಾಸಿಗಳನ್ನು ಅಚ್ಚರಿಗೊಳಿಸಿತಲ್ಲದೆ, ದೊರೆ ಮಲ್ಲಸರ್ಜ ಹಾಗೂ ರಾಣಿಯರಾದ ರುದ್ರಮ್ಮ' ಚನ್ನಮ್ಮ ಯಾನತ್ತರೂ ಕೇಳಿ ಹಿಗ್ಗಿನಿಂದ ಕ್ಮಲಠಕ್ಕೆ ಧಾವಿಸಿ ಬರಹತ್ತಿದರು ಗ್ರಾಮದ ಜನರಲ್ಲಿ ಮಡಿವಾಳೇಶನ ಬಗ್ಗೆ ಇಲ್ಲಿಯ ವರೆಗಿದ್ದ ಮತ್ಸರ ಭಾವನೆ, ತಾತ್ಸಾರ ಬುದ್ಧಿ ಮಾಯವಾಗಿ ಪೂಜ್ಯ ಭಾವನೆ ಹುಟ್ಟಿದವು. ಅಂದಿನಿಂದ ಸಕಲ ಪ್ರಜಾ ಜನರು ಮಡಿವಾಳೇಶ್ವರನೊಬ್ಬ ಅವತಾರಿಕ ಪುರುಷನೆಂದು ಅರಿತುಕೊಂಡರು. ಮಲ್ಲಸರ್ಜ ದೊರೆಯಂತೂ ಪ್ರಭು ಸ್ವಾಮಿಗಳಿಗಾಗಿ ಮಡಿವಾಳೇಶನಿಗಾಗಲಿ, ಕಲ್ಮಠದ ರಾಜ ಗುರು ಅಧಿಕಾರಕ್ಕಾಗಲಿ ಎಳ್ಳಷ್ಟೂ ವ್ಯಥೆಯಾಗದಂತೆ ನೋಡಿಕೊಂಡಿದ್ದನಲ್ಲದೆ ರಾಜಭವನದಲ್ಲಿ ಸ್ವಾಮಿಗಳಿಗೂ, ಮರಿದೇವರಿಗೂ ಲಿಂಗಪೂಜಾದಿ ಕ್ರಿಯಾಚರಣೆ ಸಾಗುವ ವ್ಯವಸ್ಥೆ ಮಾಡಿ ರುದ್ರಮ್ಮ ಚನ್ನಮ್ಮರ ಆಶೆಯಂತೆ ಸ್ವಾಮಿಗಳ ಪಾದೋದಕ ದೊರೆಯುವಂತಾಯಿತು. ಕಿತ್ತೂರ ಜನತೆಯಂತೂ ಮರಿದೇವರ ಲೀಲೆಗಳನ್ನು ಕೇಳಿ ಕಂಡು ಮಣಿದು ವಿನಯಶೀಲರಾಗಿ ವರ್ತಿಸಹತ್ತಿದರು. ಆದರೆ ದೊರೆಯ ಮಗ ಶಿವಲಿಂಗ ರುದ್ರಸರ್ಜ (ಬಾಪೂ) ಮಾತ್ರ ವಿಧಿವಶಾತ್ ಮಡಿವಾಳೇಶನ ಬಗ್ಗೆ ಮತ್ಸರ ತುಂಬಿ ಕೊಂಡವನು. ಒಂದಿಲ್ಲೊಂದು ಕಾರಣದಿಂದ ಮಡಿವಾಳೇಶನನ್ನು ಅವಮಾನ ಪಡಿಸಬೇಕು, ತನ್ನ ಸೇಡಿನ ಬುದ್ಧಿಯನ್ನು ಸದುಪಯೋಗಪಡಿಸಿಕೊಳ್ಳಲು

ಬೇಕೆಂದು ಸಮಯವನ್ನು ಕಾಯುತ್ತಿದ್ದನು. ಆದರೂ ಮರಿದೇವರಾದ ಮಡಿವಾಳೇಶನು ಇವೆಲ್ಲವನ್ನು ಅರಿತವನಾದರೂ ಯಾವ ಪ್ರತೀಕಾರಕ್ಕೆ ಒಳಗಾಗದೇ ಗುರುಗಳ ಹೇಳಿಕೆಯಂತೆ ಪಾಠ, ಹೇಳಿಕೊಡಲು ಬಂದು ಜಾನ ಗಲ್ಲ ಚನ್ನಬಸವ ಶಾಸ್ತ್ರಿಗಳ ನೆರಳಿನಲ್ಲಿ ವಿದ್ಯಾ ಬುದ್ಧಿ ಕಲಿಯುತ್ತ ನಾಗ ಲಾಂಬೆಯ ನೆಚ್ಚಿನ ಮಗನಾಗಿ ಬಾಳಹತ್ತಿದನು.

....

೮ ನೇ ಪ್ರಕರಣ

ಸರ್ಪದೊಡನೆ ಬಾಲ ಮಡಿವಾಳನ ಚಿನ್ನಾಟ

ಒಂದು ದಿನ ವೆಂಗಿ ಚನ್ನಬಸವ ಶಾಸ್ತ್ರಿಗಳು, ಪ್ರಭು ಸ್ವಾಮಿಗಳು ಹಾಗೂ ರುದ್ರವೀರ ಕವಿ ಪುಂಗವನು ಪರಶಿವನ ಲೀಲೆಗಳನ್ನು ಕುರಿತು ಚರ್ಚೆ ಮಾಡುತ್ತ ತೋಟದ ಮುಂಭಾಗದಲ್ಲಿ ಕುಳಿತುಕೊಂಡಿದ್ದರು. ಆಗ ಮಡಿವಾಳ ಮರಿದೇವನು ತೋಟದ ಒಳಭಾಗದಲ್ಲಿ ಹೋದವನು ಬಹಳ ಸಮಯವಾದರೂ ಬಾರದಿರಲು, ಅದೇನು ಕಾರಣ ಇಷ್ಟು ಸಮಯ ವಾದರೂ ಬರಲೇ ಇಲ್ಲವಲ್ಲಾ ಎಂದು ಮೂವರೂ ಎದ್ದು ತೋಟದಲ್ಲಿ ಹೋಗಿ ನೋಡುತ್ತಾರೆ. ಅಲ್ಲಿ ಮಡಿವಾಳೇಶನು ಸರಸರನೇ ಸಂದು ಸಾಗುತ್ತಿರುವ ಘಟ ಸರ್ಪವನ್ನು ಹಿಡಿದೆಳೆದು ತನ್ನ ಕೊರಳಿಗೆ ಮಾಲೆಯಂತೆ ಹಾಕಿಕೊಳ್ಳು ವದು ಮತ್ತೆ ಕೊರಳೊಳಗಿಂದ ತೆಗೆದು ಹೆಡೆಯ ಮುಂಭಾಗವನ್ನು ಮಮತೆ ಯಿಂದ ಚುಂಬಿಸುವದು ಮತ್ತೆ ಸಿಟ್ಟಿಗೆದ್ದವನಂತೆ ಸರ್ಪ ರಾಜನ ಬಾಲ ವನ್ನು ಹಿಡಿದು ಗರಗರ ತಿರುಗಿಸಿ ಬೀಸಿ ಒಗೆಯುವನು. ತಪ್ಪಿಸಿಕೊಂಡ ಸರ್ಪವು ಹೇಗಾದರೂ ಈ ಪುಣ್ಯಾತ್ಮನಿಂದ ತಪ್ಪಿಸಿಕೊಂಡೆನಲ್ಲಾ ಎಂಬ ಉಬ್ಬಿನಲ್ಲಿ ಮುಂದೆ ಸಾಗಿ ಹೋಗುತ್ತಿತು. ಇದೆಲ್ಲವನ್ನೂ ನೋಡುತ್ತ ತಬ್ಬಿಬ್ಬಾಗಿ ಶಿಲಾಪ್ರತಿಮೆಗಳಂತೆ ನಿಂತುಕೊಂಡಿದ್ದರು ಪ್ರಭುದೇವರಾದಿಗಳು ಇದೆಲ್ಲವನ್ನು ನೋಡುತ್ತಿರುವ ಪ್ರಭು ಸ್ವಾಮಿಗಳಿಗೆ ಈಗ ತಡೆಯುವ ದಾಗಲಿಲ್ಲ. ತಾವೇ ಮುಂದಾಗಿ ಹೋಗಿ ಮಡಿವಾಳೇಶಾ, ಏನಿದು ಬಿಡಪ್ಪಾ; ಪಾಪ ಸುಮ್ಮನೆ ದನಕ್ಕೆ ಹಿಂಸೆ ಕೊಡಬೇಡವೆಂದು ನಾಗರಾಜನ ಪರವಾಗಿ ತಾವು ಬೇಡಿಕೊಳ್ಳಹತ್ತಿದರು.

ಆಗ ಮಡಿವಾಳೇಶನು ಪ್ರಭು ಸ್ವಾಮಿಗಳ ಮಾತಿಗೆ ಉತ್ತರವಾಗಿ ನೋಡು ಬಾಬಾ ಈ ವಿಷ ಜಂತು ಅದೆಷ್ಟು ಸೊಕ್ಕಿಗೆ ಬಂದಿದೆ ಎಂದು ಮೇಲಕ್ಕೆ ಎತ್ತಿ ಮತ್ತೆ ನೆಲಕ್ಕೆ ಅಪ್ಪಳಿಸಿ ಗೋಳಾಡಿಸಹತ್ತಿದನು. ಆಗ ಪ್ರಭು ಸ್ವಾಮಿಗಳು ತಮ್ಮಲ್ಲಿ ತಾವೇ ಯೋಚಿಸಿ ಉಪಾಯದಿಂದ ಈತನನ್ನು ರಮಿಸಿ ಹಾದಿಗೆ ತಂದರೇನೆ ಹಾವು ಮರಣಾಂಕಿತ ಕುತ್ತಿನಿಂದ ಪಾರಾಗುವದೆಂದು ಅರಿತು ಅಪ್ಪಾ ಮಡಿದೇವರೇ ಪಾಪ ಹೋಗಲಿ ಬಿಡು ನೊಂದಲೇ ವಿಷ ಜಂತು ಅಲ್ಲವೇ ಅದಕ್ಕೆ ಬುದ್ಧಿ ಕಡಿಮೆಯಿದ್ದ ಕಾರಣ ಯಾರೊಡನೆ ಹೇಗೆ ವರ್ತಿಸಬೇಕು ಎನ್ನುವ ತಿಳುವಳಿಕೆ ಅಳಿದು ಈ ಗೋಳಾಟಕ್ಕೆ ಸಿಲುಕಿಕೊಳ್ಳುತ್ತಿದೆ. ಅಲ್ಪರು; ಅಜ್ಞಾನಿಗಳು ಮಾಡಿದ ತಪ್ಪನ್ನು ಮನ್ನಿಸಿ ಸುಖ ಬಾಳಿನ ಸನ್ಮಾರ್ಗ ತೋರುಣಿಸುವದು ಬುದ್ಧಿವಂತರ ಲಕ್ಷಣ ಈಗ ನಾನು ಕೊಟ್ಟಿರುವ ಪೆಟ್ಟಿನಿಂದ ನಾಗರಾಜನಿಗೆ ಸಾಕಷ್ಟು ಬುದ್ಧಿ ಬಂದಿದೆ. ಯಪ್ಪಾ ಪಾಪ ಬಿಟ್ಟು ಬಿಡಪ್ಪಾ ಹೋಗಲಿ ಎಂದರು ಇದೆಲ್ಲವನ್ನು ಕೇಳುತ್ತ ದೊರೆಗಳು ಹಾಗೂ ಚನ್ನಬಸವ ಶಾಸ್ತ್ರಿಗಳು ಮೂಕರಂತೆ ಸುಮ್ಮನೆ ನಿಂತು ನೋಡುತ್ತಿದ್ದರು.

ಬಳಿಕ ಮಡಿವಾಳೇಶನು ಪ್ರಭು ಸ್ವಾಮಿಗಳ ಮಾತನ್ನು ಮನ್ನಿಸುತ್ತ ಇನ್ನೊಮ್ಮೆ ಈ ರೀತಿ ಈ ನಾಗರಾಜ ಅವತಾರವಾದರೆ ನಾನೇನು ಸುಮ್ಮನೆ ಬಿಡುವದಿಲ್ಲ ಮತ್ತು ತನಗಿರುವ ದರ್ಪ ದೌಲತ್ತುಗಳ ಸಹಾಯದಿಂದ ತನಗಿಂತಲೂ ಕಡಿಮೆ ದರ್ಜೆಯವರ ಸಮ್ಮುಖದಲ್ಲಿ ಗರ್ವದಿಂದ ಸಂಚರಿಸುವ ಅಧಿಕಾರಮತ್ತರಾದವರ ಬಲವಂತರಾದವರ ಈ ಕೇಡು ಗುಣ ಕಳೆಯಬೇಕು ಅಂದರೇನೆ ದೇಶದಲ್ಲಿ ಸಮತಾಭಾವ, ಸಮದೃಷ್ಟಿ ಗುರುಹಿರಿಯರು ಎಂಬ ಭಯಭಕ್ತಿ ಹುಟ್ಟುವದು, ಎಂದು ದೊರೆಯ ಮಗನ ನಡತೆಯ ಹಿನ್ನೆಲೆಯಲ್ಲಿ ತೋರಿಸಿಕೊಡುವಂತೆ ಹೇಳಹತ್ತಿದನು.

ಆಗ ಪ್ರಭು ಸ್ವಾಮಿಗಳು ನೀನು ಹೇಳುವದೆಲ್ಲವೂ ಸತ್ಯ ಮಡಿವಾಳೇಶ, ಅದರಿ ಏನು ಮಾಡುವದು ಕಾಲಮಾನಕ್ಕೆ ತಕ್ಕಂತೆ ಸ್ವಭಾವ, ಧರ್ಮವು ಬದಲಾಗುದು ಸ್ವಾಭಾವಿಕ ಎಂದರು ಅದಕ್ಕೆ ಮಡಿವಾಳೇಶನು ಬಾಬಾ, ಸ್ವಭಾವವನ್ನು ತಿದ್ದುವ ಬುದ್ಧಿಶಾಲಿಯಾಗುವದಕ್ಕೆ ಪ್ರಯತ್ನಿಸಬೇಕಲ್ಲವೇ ಎಂದು ಮರು ಪ್ರಶ್ನೆ ಮಾಡಿದನು. ಪ್ರಭು ಸ್ವಾಮಿಗಳು ಹಾದೆನ್ನುವಂತೆ

ತಲೆ ಹಾಕಿ ಒತ್ತಾಯದಿಂದ ಹಾವನ್ನು ಮಡಿವಾಳೇಶನ ಮುಷ್ಟಿ ಬಂಧನದಿಂದ ಬಿಡುಗಡೆ ಮಾಡಿಸಿ ಬೀಳ್ಕೊಟ್ಟರು.

ಇತ್ತ ಮಡಿವಾಳೇಶನು ಹಾವು ಹಿಡಿದು ಆಟವಾಡಿದ್ದು, ಕೊರಳಲ್ಲಿ ಸರದಂತೆ ಹಾಕಿಕೊಂಡು ಚಿನ್ನಾಟವಾಡಿದ್ದು ನಿಮಿಷದಲ್ಲಿ ಕಿತ್ತೂರ ಪುರವಾಸಿಗಳಿಗೆಲ್ಲ ತಿಳಿದು ತಂಡೋಪತಂಡವಾಗಿ ಕಲ್ಮಠಕ್ಕೆ ಬರಹತ್ತಿದರು. ಪ್ರತಿಯೋರ್ವ ಜನರ ಬಾಯಿಯಲ್ಲಿ ಬಾಲಕ ಮಡಿವಾಳೇಶನ ಈ ಅಘಟಿತ ಘಟನೆಯ ವಿಷಯವೇ ವಿಷಯ. ಈ ಸಂಗತಿಯನ್ನು ಕೇಳಿದ ನಾಗಲಾಂಬಿಕೆಯಂತೂ ಹಿರಿಹಿರಿ ಹಿಗ್ಗಿ ಹೋದಳು. ತೋಟದಿಂದ ಹೊರಟು ಬಂದ ಶಾಸ್ತ್ರಿಗಳು, ದೊರೆಗಳು, ಪ್ರಭುಸ್ವಾಮಿಗಳು ಮಗು ಮಡಿವಾಳೇಶನನ್ನು ಮಠಕ್ಕೆ ಕರೆದುಕೊಂಡು ಬರಬೇಕಾದ ಸಾಕುಸಾಕಾಗಿ ಹೋಯಿತು. ಕೊನೆಗೊಮ್ಮೆ ರಮಿಸಿ ಅವನ ಇಚ್ಛಾನುಸಾರ ಒಪ್ಪಿಕೊಳ್ಳುತ್ತ ಮಠಕ್ಕೆ ಬರಲು ನಾಗಲಾಂಬಿಕೆಯು ಮುಂದಾಗಿ ಹೋಗಿ ಮಡಿವಾಳೇನನ್ನು ಮನದಣಿಯುವಂತೆ ಮುದ್ದಿಸಿದಳು. ಮಡಿವಾಳೇಶನನ್ನು ಕಾಣಲು ಬಂದ ಪುರಜನರು ಹರುಷದಿಂದ ಈ ಬಾಲಕನು ಲೀಲಾಪುರುಷನೆಂದು ಹಾಡಿ ಹೊಗಳಿ ಭಕ್ತಿವಿಲಾಸಗಳಿಂದ ಅವನ ಪಾದಮುಟ್ಟಿ ನಮಸ್ಕರಿಸಿದರು.

ಆದರೆ ಇದು ಶಿವಲಿಂಗ ರುದ್ರಸರ್ಜ (ಬಾಪೂ) ನಿಗೆ ಮಾತ್ರ ವಿರೋಧಿಯಂತೆಯೇ ಕಾಣಹತ್ತಿತು. ವಿನಾಶಕಾಲೇ ವಿಪರೀತ ಬುದ್ಧಿ ಎನ್ನುವಂತೆ ಬಾಪೂ ದೊರೆಗೆ ಅದೇನು ವಿಧಿ ಕಾಡುತ್ತಿರುವದೊ ಎಂದು ಪುರಜನರೊಡನೆ ಮಲ್ಲಸರ್ಜ ದೊರೆಯು ವ್ಯಸನದ ಉಸುರೆಳೆದನು.

…. ……….….

೯ ನೇ ಪ್ರಕರಣ

ಪಂಡಿತರಿಗೆ ಮೀರಿದ ಪಂಡಿತನಾದದ್ದು

ದೊರೆ ಮಲ್ಲಸರ್ಜ ಹಾಗೂ ಪ್ರಭುಸ್ವಾಮಿಗಳ ಮೇಲ್ವಿಚಾರಣೆಯಲ್ಲಿ ಚನ್ನಬಸವ ಶಾಸ್ತ್ರಿಗಳಿಂದ ಕುಮಾರ ಮಡಿವಾಳೇಶನಿಗೆ ವಿದ್ಯಾಭ್ಯಾಸ ಯಥಾರೀತಿ ಸಾಗುವದಾಯಿತು. ಇನ್ನೂ ಹೆಚ್ಚಿದ ಜ್ಞಾನ ಸಂಪಾದನೆಯಾಗಲೆಂದು ಬಯಸಿದ ದೊರೆಗಳು ಕೊಳ್ಳಿ ರಂಗರಾಯರೆಂಬ ವಿದ್ವಾಂಸ

ರನ್ನು ಕರೆಯಿರಿ ತರ್ಕ ಶಾಸ್ತ್ರಾಭ್ಯಾಸಕ್ಕೆ ಅನುಕೂಲ ಮಾಡಿದರು. ಈರ್ವರು ಗುರುಗಳು ಸೇರಿ ಮಡಿವಾಳೇಶನ ವಿಧ್ಯಾಭ್ಯಾಸ ಮಾಡಿಸುತ್ತಿದ್ದರಲ್ಲದೆ ಅವನ ಜೊತೆಗೆ ಅನೇಕ ಪುರಪ್ರಮುಖರ ಶ್ರೀಮಂತ ಮಕ್ಕಳು ಬರುತ್ತಿದ್ದರು. ಯುವಜೋರಿ ಶಿವಲಿಂಗ ರುದ್ರಸರ್ಜನು ವಿಧಾರ್ಥಿಯಾಗಿ ಪಾಠಶಾಲೆಗೆ ಬರುವರು ಮೊದಲಾಯಿತು ಯಾವತ್ತರಿಗೂ ಗುರುಗಳಿರ್ವರು ಪಾಠ ಸಾಗುವದಾಯಿತು.

ಬರುಬರುತ್ತ ಮಡಿವಾಳೇಶ ಬಾಲಕನ ಸ್ಮರಣಶಕ್ತಿ, ವಾಕ್ಪಟುತ್ವ ಪ್ರಭೆಯು ಗೆಳೆಯರ ಬಳಗದಲ್ಲಿ ಪ್ರಜ್ಜಲಿಸಹತ್ತಿತು ಗುರುಗಳಾದ ಚನ್ನಬಸವ ಶಾಸ್ತ್ರಿಗಳು ರಂಗರಾಯರು ಮಡಿವಾಳೇಶನ ಅತುಲ, ವಿಧ್ಯಾಬುಧ್ಧಿಗಳನ್ನು ಮೆಚ್ಚಿಕೊಂಡರಲ್ಲದೆ ಇಂತಹ ದೈವದತ್ತ ಪಂಡಿತ ದೇವಾಂಶ ಸಂಭೂತನಿಗೆ ಪಾಠ ಹೇಳಿ ಕೊಡುವಷ್ಟು ಧೈರ್ಯಶಾಲಿಗಳು ನಾವೆಲ್ಲವೆಂದು ಒಪ್ಪಿಕೊಂಡರು. ಮಡಿವಾಳೇಶ ಮರಿದೇವರು ಗುರುಗಳಿಂದ ತಿಳಿದುಕೊಂಡ ಶಬ್ದದ ಅರ್ಥವನ್ನು ಅರೆಕ್ಷಣದಲ್ಲಿ ಬಿಡಿಸಿ ಲೆಖ್ಖ ತರ್ಕಶಾಸ್ತ್ರಗಳನ್ನು ಸರಳವಾಗಿ ವಿಂಗಡಿಸಿ ಸಂಸ್ಕೃತದಲ್ಲಿಯಂತೂ ಎತ್ತಿದ ಕೈ ಎನಿಸಿ ಗುರುಗಳ ಮೆಚ್ಚುಗೆಯನ್ನು ಗಳಿಸಿದನು. ಇದನ್ನು ಕೇಳಿದ ಮಲ್ಲಸರ್ಜ ದೊರೆಯು ಹಿಗ್ಗಿನಿಂದ ಉಬ್ಬಿ ಹೋದನು. ಗುರುಗಳಂತೂ ಇಂತಹ ಬುದ್ಧಿವಂತ ಬಾಲಕನಿಗೆ ವಿಧ್ಯಾದಾನ ಮಾಡಿದ ನಾವೇ ಧನ್ಯರೆಂದು ಹೆಮ್ಮೆ ಪಡಹತ್ತಿದರು. ಆದರೆ ಶಿವಲಿಂಗ ರುದ್ರಸರ್ಜನು ಇದನ್ನು ನೋಡಿ ಮತ್ಸರಪಟ್ಟನು. ಒಂದಿಲ್ಲೊಂದು ಕಾರಣದಿಂದ ಮಡಿವಾಳೇಶಗೂ ದೊರೆಯ ಮಗನಿಗೂ ವೈರತ್ವ ಬೆಳೆದು ಬಂತು. ಒಂದು ದಿನ ಪಾಠಶಾಲೆಯಿಂದ ಅರಮನೆಗೆ ಸಾಗಿದ ಬಾಪೂನನ್ನು ಕಂಡು ಮಡಿವಾಳೇಶನು ಬಾರೋ ಬಾಪ್ಯಾ ಸ್ವಲ್ಪ ಸಮಯ ಚಂಡು ಆಡೋಣ ಎಂದು ಕರೆದನು ಮಡಿವಾಳೇಶನು ಏಕವಚನದಿಂದ ಸಂಭೋಧಿಸುವ ಆ ಗ್ರಾಮ್ಯ ಶಬ್ದಕ್ಕೆ ಅಪಮಾನ ಹೊಂದಿದವನಾಗಿ ಬಾಪೂ ಸಾಹೇಬನ ಅಭಿಮಾನದ ಮನಸ್ಸು ಕೆರಳಿದ ಹುಲಿಯಂತಾಯಿತು. ಹೊಟ್ಟೆ ಕಿಚ್ಚಿನ ರೊಚ್ಚಿನ ಉರಿಯಲ್ಲಿ ಎಣ್ಣೆ ಸುರುವಿದಷ್ಟು ಸಂತಾಪವಾಯಿತು.

ಆದರೆ ಪಾಪ ದೊರೆಯ ಮಗನೇನು ಬಲ್ಲ ಮರಿದೇವರ ಅಗಾಧ ಮಹಿಮಾ ಗುಣವನ್ನು, ಪವಾಡ ಪರಿಚಯವನ್ನು, ಮದಾಂಧತೆಯ ಧೂಳು ಮುಸುಕಿ

ದೊಡ್ಡಸ್ಥನದ ಮಬ್ಬಿನಲ್ಲಿ ಅವಮಾನವಾಯಿತೆಂದು ಬಿಗುಮಾನದ ಬುದ್ಧಿಯ ಕೋಟೆಯಲ್ಲಿ ಉಳಿಯದೆ ಸಮಯ ಸಾಧಿಸಿ ಪ್ರಸಂಗ ಪ್ರಾಪ್ತವಾದಾಗ ಮಡಿವಾಳೇಶನ ಮೇಲೆ ಸೇಡು ಸಾಧಿಸುವ ಛಲತೊಟ್ಟು ಕೆಂಗಣ್ಣಿನಿಂದ ಉರಿಯನ್ನು ಕಾರುವನೇನೋ ಎನ್ನುವಂತೆ ಮರಿದೇವರನ್ನು ನೋಡುತ್ತ ತೀವ್ರ ಗತಿಯಲ್ಲಿ ಹೋಗಿಬಿಟ್ಟನು.

ಅವಮಾನ ಹೊಂದಿದರೂ ಸುಮ್ಮನೆ ಹೋಗುವದಕ್ಕೆ ಕಾರಣ ಇಲ್ಲದಿರಲಿಲ್ಲ. ಹೊಟ್ಟೆಯಲ್ಲಿಯ ಸಿಟ್ಟು ರಟ್ಟೆಯಲ್ಲಿ ಇಲ್ಲ ಎನ್ನುವಂತೆ ಈ ಒಳಗಾಗಿ ಹಲವಾರು ಸಾರೆ ಮಡಿವಾಳೇಶನನ್ನು ತಡವಿ ಪೆಟ್ಟು ತಿಂದು ಗಾಯಗೊಂಡು ನೋವು ಅನುಭವಿಸಿದ ನೆನಹು ಶಿವಲಿಂಗ ರುದ್ರಸರ್ಜ(ಬಾಪೂ)ನ ಸ್ಮೃತಿಯಲ್ಲಿ ಸದಾ ಜಾಗ್ರತಾವಸ್ಥೆಯಲ್ಲಿ ಉಳಿದುಕೊಂಡಿತ್ತು. ಅಂತೆ ಸಮಯ ಸಾಧಿಸಿ ಸೇಡು ತೀರಿಸಿಕೊಳ್ಳುವ ತೀರ್ಮಾನದಲ್ಲಿ ಮನಸ್ಸನ್ನು ಬಿಗಿ ಹಿಡಿದುಕೊಂಡು ಹೊರಟು ಹೋದನು.

ಮಡಿವಾಳೇಶನಲ್ಲಿ ತುಂಟತನದ ಜೊತೆಗೆ ವಿನಯಶೀಲತೆಗೆ ಕೊರತೆ ಇರಲಿಲ್ಲ. ಯಾರೊಡನೆ ಯಾವ ರೀತಿ ನಡೆದುಕೊಳ್ಳಬೇಕೋ ಆ ರೀತಿ ನಡೆದುಕೊಳ್ಳುತ್ತಿದ್ದನು. ತುಂಟರಿಗೆ ತುಂಟನಾಗಿಯು ಕೇಡಾಳಿಗಳಿಗೆ ಬಲ ಕೇಡಾಳಿಯಾಗಿಯು ಕಾಣಿಸಿಕೊಳ್ಳುತ್ತಿದ್ದನು. ಮಡಿವಾಳೇಶನ ವರ್ತನೆ ವಿಚಿತ್ರವೆನಿಸಿ ಸಕಲ ಕಿತ್ತೂರ ಜನತೆಯ ದೃಷ್ಟಿಯಲ್ಲಿ ಈತನು ಸಮಸ್ಯಾಪೂರ್ಣ ಲೀಲಾಪುರುಷನಾಗಿ ತೋರಹತ್ತಿದನು. ಪ್ರತಿಯೊಂದು ಕಾರ್ಯಕ್ಷೇತ್ರದಲ್ಲಿ ಮಡಿವಾಳೇಶನು ಪುರಜನರಿಗೂ ಬಲು ಮೆಚ್ಚಿನವನಾಗಹತ್ತಿದ್ದನು. ಮಲ್ಲಸರ್ಜ ದೊರೆಯಂತೂ ಮರಿದೇವ ಮಡಿವಾಳೇಶನ ಪ್ರತಿಭೆ ಪಾಂಡಿತ್ಯಗಳನ್ನು ಕೇಳಿ ಕಂಡು ಸಂತುಷ್ಟನಾಗಿ ಅಭಿಮಾನದಿಂದ' ಆದರದಿಂದ ಕಾಣಹತ್ತಿದನಲ್ಲದೆ ಪಂಡಿತರಿಗೆ ಮೀರಿದ ಪಂಡಿತನೆಂದು ಹೊಗಳಿ ಹಾಡುತ್ತಿದ್ದನು.

....

೧೦ ನೆಯ ಪ್ರಕರಣ

ದೊರೆಗಳಿಗೆ ಮಾನವನ ಗುಣಾವಗುಣಗಳು ಭಿನ್ನತೆ ತೋರಿಸಿದ್ದು

ಒಂದು ದಿನ ಸಾಯಂಕಾಲ ಗುರುಗಳಾದ ಚನ್ನಬಸವ ಶಾಸ್ತ್ರಿಗಳು ಧೈರ್ಯ ತಂದುಕೊಂಡು ನಿರ್ವಾಹವೆನ್ನುವಂತೆ ಶಾಸ್ತ್ರಾಭ್ಯಾಸವನ್ನು ಹೇಳಿ ಇಂದಿನ ಕರ್ತವ್ಯ ಮುಗಿಯಿತೆಂದು ಸ್ವಲ್ಪ ಸಮಯ ಆಡಿಕೊಂಡಿದ್ದು ಬಳಿಕ ಮರಿದೇವರ ಕರ್ತವ್ಯದತ್ತ ಹೊರಳಿ ಬರಬೇಕೆಂದು ಹೇಳಿ ಕಳುಹಿಸಿದರು.

ಗುರುಗಳಿಂದ ಬಿಡುಗಡೆ ಹೊಂದಿದ ಮಡಿವಾಳೇಶನು ತಾಯಿಯಂತೆ ಸಲಹುತ್ತಿದ್ದ ಶಾಸ್ತ್ರಿಗಳ ಮಡದಿ ನಾಗಲಾಂಬೆಯ ಬಳಿಕ ಹೋಗಿ ಅವ್ವಾ ಎಂದು ಅಪ್ಪಿಕೊಂಡು ಆ ತಾಯಿ ಮಮತೆಯಿಂದ ಇತ್ತ ಮುತ್ತಿನ ಸವಿಯನ್ನು ಸವಿದು ಸಂತಸನಿಂದ ಹೊರಗೆ ಆಟ ಆಡಿಕೊಂಡು ಬರಲು ಹೇಳಿ ಹೊರಟು ನಿಂತನು. ಆಗ ನಾಗಲಾಂಬೆಯು ಮಮತೆಯಿಂದ ಮಗು. ಮಡಿವಾಳೇಶನನ್ನು ಸಮಾಧಾನ ಪಡಿಸುವ ರೀತಿಯಲ್ಲಿ ಪ್ರೀತಿಯಿಂದ ಕರೆದು ಕೂಡ್ರಿಸಿ ಕೆನೆಗಟ್ಟುವಂತೆಕಾಸಿ ಸಕ್ಕರೆಯನ್ನು ಸುರುವಿ ಸಿದ್ಧಗೊಳಿಸಿದ ಹಸುವಿನ ಹಾಲನ್ನು ಬಟ್ಟಲು ತುಂಬ ತುಂಬಿಕೊಡುತ್ತ ಕುಡಿಯಲು ಒತ್ತಾಯಿಸಿದಳು. ಹೆತ್ತವಳ ಹಿತನೀಡುವ ನಾಗಲಾಂಬಿಕೆಯು ಮಮತೆಯ ಸಲು ನುಡಿಗೆ ಮಣಿದು ವಾತ್ಸಲ್ಯದ ನುಡಿ ಮುತ್ತುಗಳಿಂದ ತಣಿದು ಸಂತಸದಿಂದ ಹಾಲು ಸ್ವೀಕರಿಸಿ ಹೊರಗೆ ಓಡಿದನು.

ಹೊರಗೆ ಹೋದ ಮಡಿವಾಳೇಶನಿಗೆ ಅದೇನು ತಿಳಿಯಿತೋ ಏನೋ ಬರಬರನೆ ಸಾಗಿದವನು ತೋಟದ ಬದಿಯಲ್ಲಿ ಬಲು ಎತ್ತರವಾಗಿ ಗಗನ ಮುಟ್ಟುವ ತೆರದಿ ಬೆಳದು ನಿಂತ ಟೆಂಗಿನ ಮರಗಳನ್ನು ಸರಸರನೆ ಹತ್ತಿ ಮರದಲ್ಲಿ ರಾಶಿಯಾಗಿ ಕಂಗೊಳಿಸುತಿರ್ಪ ತೆಂಗುಗಳನ್ನೆಲ್ಲ ಪರೀಕ್ಷಿಸುವಂತೆ ಎತ್ತಿ ಎತ್ತಿ ನೋಡಹತ್ತಿದನು, ಅದೇ ಸಮಯಕ್ಕೆ ಸರಿಯಾಗಿ ಪ್ರಭುಸ್ವಾಮಿಗಳೊಡನೆ ಮಲ್ಲಸರ್ಜ ದೊರೆಯು ತೋಟದಲ್ಲಿ ತಂಗಾಳಿ ಸೇವೆಯ ಆಸೆಯಿಂದ ಸುತ್ತಾಡಿಕೊಂಡು ಹೋಗಲು ಬಂದವರು ಆಗ ಮರದ ಮೇಲೆ ಕುಳಿತ ಮಡಿವಾಳೇಶನು ಪ್ರಭುಸ್ವಾಮಿಗಳನ್ನು ಕಂಡು ಆನಂದ ಅತಿರೇಖದಲ್ಲಿ

ಬಾಬಾ ಎಂದು ಕೂಗಿದನು. ಮಡಿವಾಳೇಶನ ಅಮೃತ ವಾಣಿಯಿಂದ ಸಿಡಿದು ಬಂದ ಬಾಬಾ ಎಂಬ ನುಡಿಯತ್ತ ದೃಷ್ಟಿ ಹರಿಸಿ ಮೇಲೆ ನೋಡಿದ ಸ್ವಾಮಿಗಳಿಗೂ ಹಾಗೂ ದೊರೆ ಮಲ್ಲಸರ್ಜರಿಗೂ ಅಚ್ಚರಿಯಾಯಿತಾದರೂ ಅಷ್ಟೊಂದು ಎತ್ತರದಿಂದ ಕೈತಪ್ಪಿ ಕೆಳಗೆ ಬಿದ್ದರೆ, ಬಾಲಕನ ಗತಿ ಏನೆಂದು ಭಯವೂ ಹುಟ್ಟಿತು. ಅದಕ್ಕಾಗಿ ಒಬ್ಬ ಮನುಷ್ಯನನ್ನು ಕರೆಯಿಸಿ ಏಣಿ ಹಚ್ಚಿ ಇಳಿಸಿಕೊಳ್ಳುತ್ತೇವೆ. ತಾಳು ಮಡಿವಾಳೇಶಾ ಎಂದು ಕನಿಕರದಿಂದ ತಿಳಿಸಿ ಹೇಳಹತ್ತಿದರು. ಸ್ವಾಮಿಗಳೇನೋ ತಿಳಿಸಿ ಹೇಳಿದರು, ಆದರೆ ಮಡಿವಾಳೇಶನ ಮರಿಯು ತನ್ನ ಕರ್ತವ್ಯದಂತೆ ಎರಡು ಟೆಂಗಿನ ಕಾಯಿಗಳನ್ನು ಆರಿಸಿ ಹರಿದುಕೊಂಡು ಮೇಲಿಂದ ಟಣ್ಣನೇ ಕೆಳಗೆ ಜಿಗಿದನು. ಆಗ ಗಾಯವಾಗಲಿ ಇನ್ನಿತರ ನೋವಾಗಲಿ ಮಡಿವಾಳೇಶನ ಸಮೀಪ ಸುಳಿಯಲಿಲ್ಲ ಬಳಿಕ ಸ್ವಾಮಿಗಳು, ದೊರೆಯು ಆನಂದ ಆಶ್ಚರ್ಯಗಳಿಂದ ಕೂಡಿದ ಕಣ್ಣು ಬಿಟ್ಟು ನೋಡುತ್ತ ತಬ್ಬಿಬ್ಬಾಗಿ ನಿಂತುಕೊಂಡರು ಆಮೇಲೆ ಮಡಿವಾಳೇಶ ಮರಿಯು ಎರಡು ಕಾಯಿಗಳನ್ನು ಲೀಲಾಜಾಲವಾಗಿ ಕಲ್ಲಿಗೆ ಹೊಡೆದು ಸುಲಿದು ಸಿಪ್ಪಿಯನ್ನು ಸರಿಸಿ ಎರಡೂ ಕಾಯಿಗಳನ್ನು ಸೀಳಿ ಪ್ರಭು ಸ್ವಾಮಿಗಳ ಸನ್ನಿಧಿಯಲ್ಲಿ ಇಡುತ್ತ ಒಂದನ್ನು ತೋರಿಸಿ ಬಾಬಾ ಈ ಟೆಂಗು ಇನ್ನೂ ಪೂರ್ಣತ್ವವನ್ನು ಹೊಂದಿಲ್ಲ ಅಲ್ಲವೆ, ಅಂತೇಗೊಳ್ಳು ಪೊಳ್ಳು ಕಾಯಿಯಾಗಿ ಗಿಡಕ್ಕೆ ಭಾರವಾಗಿತ್ತು ನೋಡು ಎಂದು ನುಡಿದು ಮಾನವ ಪ್ರಾಣಿಯಾದರೂ ಈ ಟೆಂಗಿನಂತೆ ಪೂರ್ಣ ಮಾನವನಾಗಿ ಬಾಳದೇ ಭೂಮಿಗೆ ಭಾರವಾಗಿದ್ದಾನೆ, ಹೌದಲ್ಲ ಬಾಬಾ ಎಂದು ಕೇಳಿದನು.

ಮರಿದೇವರ ದಿವ್ಯಜ್ಞಾನ ವೈರಾಗ್ಯದ ನಿಜ ನುಡಿಗೆ ಪ್ರಭು ಸ್ವಾಮಿಗಳು ತಲೆದೂಗಿ ಹೌದು ಮಡಿವಾಳೇಶಾ ಎಂದು ಉತ್ತರ ಕೊಟ್ಟರು. ಬಳಿಕ ಮಡಿವಾಳೇಶನು ಪರಿಪೂರ್ಣಗೊಂಡ ಮತ್ತೊಂದರ ಕಾಯಿಯ ಹೋಳುಗಳಲ್ಲಿಯ ಕೊಬ್ರಿಯು ಬೆಳವಣಿಗೆ ಹೊಂದಿ ಪೂರ್ಣ ಕಾಯವಾಗಿ ಕಂಗೊಳಿಸುವದನ್ನು ತೋರಿಸುತ್ತ ಬಾಬಾ ಇದು ನೋಡಿ ಅದೇ ಗಿಡದಲ್ಲಿ ಹುಟ್ಟಿ ಬೆಳೆದು ಪೂರ್ಣಗೊಂಡು ಪರಿಪೂರ್ಣತೆಯನ್ನು ಪಡೆದ ಶ್ರೇಷ್ಠ ಕಾಯಿ. ಇದರಂತೆ ಮಾನವ ಜೀವಿ ಜೀವನದ ಪರಿಪೂರ್ಣ ಬೆಳವಣಿಗೆ

ಯಂತಹ ಜ್ಞಾನ ಸಂಪಾದನೆಯನ್ನು ಪಡೆದು ಶ್ರೇಷ್ಠ ಮಾನವ ಜೀವಿಯಾಗಿ ಬಾಳಬೇಕಲ್ಲವೇ ಎಂದು ಕೇಳಿದನು. ಸ್ವಾಮಿಗಳು ಮಡಿವಾಳೇಶನ ತರ್ಕ ಜ್ಞಾನಕ್ಕೆ ತಲೆದೂಗಿ ಮರಿದೇವ ಮಡಿವಾಳೇಶಾ ನಿನ್ನ ತರ್ಕ ನಿನ್ನ ಜಾಣ್ಮೆ ಅಲ್ಪಬುದ್ಧಿಯ ಅಜ್ಞಾನಿಗಳಿಗೆ ತಿಳಿಯುವದು ಸುಲಭ ಸಾಧ್ಯವಲ್ಲ ಎಂದು ಹೇಳಿ ಸಮಾಧಾನಪಡಿಸಿದರು. ಆಗ ಮಡಿವಾಳೇಶನು ಒಂದೇ ಮರದಲ್ಲಿ ಹುಟ್ಟಿ ಬೆಳೆದ ಈ ಕಾಯಿಗಳಲ್ಲಿರುವ ತಾರತಮ್ಯದಂತೆ ತಾಯಿಯ ಗರ್ಭದಿಂದ ಉದಯಿಸಿದ ಮಮತೆಯ ಮಕ್ಕಳಿಬ್ಬರಲ್ಲಿ ಭಿನ್ನ ಭಿನ್ನ ಸ್ವಭಾವ ಹುಟ್ಟಿಕೊಂಡಿರುವದು ಸ್ವಾಭಾವಿಕವಲ್ಲವೇ, ಬಾಬಾ ಎಂದು ಕೇಳುತ್ತ ದೊರೆ ಮಲ್ಲಸರ್ಜನತ್ತ ತಿರುಗಿ ನಾನು ಹಾಗೂ ನಿನ್ನಕುಮಾರ ಬಾಪ್ಯಾ ಒಬ್ಬರೇ ತಾಯಿಯ ಮೊಲೆಹಾಲಿನಿಂದ ಪೋಷಣೆಗೊಂಡು ಬೆಳೆದವರಾದರೂ ಬಾಪ್ಯಾನದು ಮತ್ಸರ ಗುಣವಾಯಿತು. ನನ್ನದು ತುಂಟತನದ ಗುಣ ವೈರಾಗ್ಯ ವೃತ್ತಿಯಾಯಿತು. ನಿನ್ನ ಮಗನದು ಭೋಗ, ರಾಗ ದ್ವೇಷಾಸೂಯೆಗಳಿಂದ ಕೂಡಿದ ಕಲಂಕಪ್ರಾಯ ವೃತ್ತಿ ಇದೆಲ್ಲವನ್ನು ಕಂಡು ನಿನ್ನ ಮನಸ್ಸಿಗೆ ವೇದನೆಯಾಗಿರಬೇಕೆಂದು ತರ್ಕಿಸಿ ಈ ಸತ್ಯ ಘಟನೆಯ ಚಿತ್ರವನ್ನು ತೋರಿ ಟೆಂಗಿನ ಭಿನ್ನ ಗುಣ ಸ್ವಭಾವದಂತೆ, ಮಾನವ ಗುಣಧರ್ಮದ ಹೋಲಿಕೆ ಎಂದು ಸಿದ್ಧಪಡಿಸಬೇಕಾಯಿತು ಎಂದು ಬಿರುಸಿನಿಂದ ಬಿತ್ತರಿಸಿದನು.

ಆಗ ಪ್ರಭುಸ್ವಾಮಿಗಳು—ಮಡಿವಾಳೇಶಾ, ದೊರೆಗಳು ತನ್ನ ತಂದೆಯ ಸ್ಥಾನವನ್ನು ಪಡೆದವರು. ಅವರಿಗೆ ಏಕವಚನದಿಂದ ಸಂಭೋದಿಸಬಾರದಪ್ಪಾ ಎಂದು ಹಿತನುಡಿಯನ್ನು ಉಸುರಿದರು. ಆಗ ಮಡಿವಾಳೇಶನು ಕೊಂಚ ಶಿಡುಕಿನ ಶಬ್ದದಿಂದ ಬಾಬಾ ನಾನು ಜಗದ ತಂದೆಯೆನಿಸಿದ ಪರಶಿವನ ಮಗನು ಆದ ಕಾರಣ ಈ ಮಾನವರೂಪಿ ದೊರೆಯನ್ನು ತಂದೆ ಎಂದು ತಿಳಿದುಕೊಳ್ಳುವದು ಅದು ಹೇಗೆ ಸಾಧ್ಯವೆಂದು ಹೇಳುತ್ತ ಗುರುಗಳು ಕರುಣಿಸಿದ ವೇಳೆಯದು ಸರಿದು ಹೋಯಿತು ನೀವು ಆಮೇಲೆ ಮಠಕ್ಕೆ ಬನ್ನಿ ಬಾಬಾ ಎಂದು ಹೇಳಿದವನು ಅವರ ಉತ್ತರಕ್ಕೂ ಕಾಯದೆ, ಅಲ್ಲಿಂದ ತೀವ್ರಗತಿಯಲ್ಲಿ ಮಠಕ್ಕೆ ಹೊರಟು ಹೋದನು.

ಕೇವಲ ಹನ್ನೆರಡು ವರುಷದ ಬಾಲಕನಾದ ಮರಿದೇವರ ವೈರಾಗ್ಯ ವೃತ್ತಿಯ ನುಡಿಗಳೊಡನೆ ಜ್ಞಾನಗಂಗೆಯಂತೆ ನಿರ್ಮಲ ನಿರ್ವಿಕಾರದ

ಗುಣವನ್ನು ಅರಿತು ಅರಸನು ಹಾಗೂ ಗುರುಗಳಾದ ಪ್ರಭುಸ್ವಾಮಿಗಳು ಮಾತನಾಡಲಿಕ್ಕೆ ಬಾರದೇ ಜಗದುದ್ಧಾರಕ್ಕೆ ಅವತರಿಸಿದ ಚಂದ್ರಮೌಳಿಯ ಚಲ್ವ ಕುವರನಾದ ಇಂಥವನಿಗೆ ಬುದ್ಧಿ ಹೇಳುವದು ನಮ್ಮಂಥ ನರಮಾನವರಿಗೆ ಸಾಧ್ಯವಾಗಲಾರದೆಂದು ತಿಳಿದುಕೊಂಡು ಜಗದಾದಿಪಿತ ಜಗದೀಶನ ಲೀಲೆಯಿಂದ ನಡೆದು ಬಂದಿರುವ ಜಗದಾಟವನ್ನು ತಿಳಿದುಕೊಂಡು ವರ್ತಿಸುವ ಈ ಬಾಲಕನು ಪರಮಾತ್ಮನ ಪ್ರತಿರೂಪದ ನಿರ್ಮಲ ಜ್ಯೋತಿ, ಜ್ಞಾನ ಜ್ಯೋತಿ ಎಂದು ಗ್ರಹಿಸಿಕೊಂಡು ಪ್ರಭುಸ್ವಾಮಿಗಳು ಹಾಗೂ ಮಲಸರ್ಜ ದೊರೆಯು ಮಠದತ್ತ ಸಾಗಿದರು.

---

೧೧ ನೆಯ ಪ್ರಕರಣ

ಬಾಪೂ ಸಾಹೇಬನಿಗೆ ಮರಿದೇವರ ಬಗ್ಗೆ ಮತ್ಸರ ಹುಟ್ಟಿದ್ದು

ಬರುಬರುತ್ತ ಮರಿ ಮಡಿವಾಳೇಶನು ಗುರು ವಾಕ್ಯವನ್ನು ವಿನಯದಿಂದ ಪಾಲಿಸುವ ಸಜ್ಜನನಾಗಹತ್ತಿದನು. ಗುರು ವಾಕ್ಯವನ್ನು ಮೀರಿ ವರ್ತಿಸುವ ಮೊದಲಿನ ಕೇಡು ಗುಣ ಮಾಯವಾಗಿ ಪೂಜ್ಯ ಭಾವನೆಯಿಂದ ಗುರುಗಳ ಸೇವೆಯಲ್ಲಿ ಕಾಲ ಕಳೆಯಹತ್ತಿದನು. ಆದರೆ ಇತರರೊಡನೆ ಆತನ ತುಂಟ ವೃತ್ತಿ ಕಡಿಮೆಯೆನಿಸಲಿಲ್ಲ. ಆದರೂ ಪ್ರಭು ಸ್ವಾಮಿಗಳಿಗೆ ನಿರಭಿಮಾನದ ಮಡಿವಾಳೇಶನ ಸೇವಾ ಕಾರ್ಯವನ್ನು ಕಂಡಾಗ ಮತ್ತಷ್ಟು ಆಶ್ಚರ್ಯವೂ ಅಭಿಮಾನವೂ ಆಗುತ್ತಿತ್ತು. ವಯಸ್ಸಿನ ಎತ್ತರ ಅತಿಯಾದಂತೆ ಮರಿ ಮಡಿವಾಳೇಶನ ಬುದ್ಧಿ ವಿಕಾಸಗೊಂಡು ಪಾಂಡಿತ್ಯ ಪ್ರಭೆಯೊಡನೆ ಮಾತೆಯ ಮಮತೆಯಲ್ಲಿ ಕಾಣುವ ಚನ್ನಮ್ಮ ರಾಣಿಯಿಂದ ಯುದ್ಧ ಕಲೆಯನ್ನು ಶರೀರ ಬಲವನ್ನು, ಕುದುರೆ ಆನೆಗಳ ಮೇಲೆ ಹತ್ತಿ ಸೆಣಸಾಡುವ ಸಾಧನವನ್ನು, ಅರಿಯುವನಾದನು. ಹನ್ನೆರಡರ ಹದ್ದಿಗೆ ಬರುತ್ತಿರುವ ಶರೀರವನ್ನು ಬ್ರಹ್ಮಚರ್ಯ ವ್ರತ ಪಾಲನೆಯಿಂದ ಮತ್ತಷ್ಟು ಬಲಪಡಿಸಿ ಬ್ರಹ್ಮಚಾರಿಯ ಗುಣ ಗೌರವನ್ನು ಕಾಯ್ದುಕೊಳ್ಳುವ ಕರ್ತವ್ಯ

ಶಾಲಿಯಾಗಬೇಕೆಂದನು. ಚನ್ನಮ್ಮ ರಾಣಿಯು ಸಂತೋಷಕ್ಕೆ ಸೀಮೆ ಉಳಿಯದಂತೆ ಆನಂದ ಉಕ್ಕಿ ಅವರ ಸಂತಸದಲ್ಲಿ ಲೋಲಾಡುವಂತೆ ಮರಿ ಮಡಿವಾಳೇಶನ ಇರುವಿಕೆಯಾಯಿತು. ಈತನನ್ನು ಕಂಡೊಡನೆ ರಾಣಿ ಚನ್ನಮ್ಮ ತಾಯಿ ರುದ್ರಮ್ಮ ಅರಸಿಯರು ಬಲು ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರಲ್ಲದೆ, ಅಭಿಮಾನ ಆನಂದಗಳಿಂದ ಕೂಡಿ ಮೂರು ವರುಷದ ಮುದ್ದು ಮಗನಾಗಿದ್ದಾಗ ಮುದ್ದಿಸಿ ನಲಿಯುತ್ತಿರುವಂತೆ ಈಗಲೂ ಮರಿದೇವನನ್ನು ಮಮತೆ, ವಾತ್ಸಲ್ಯ, ಅಂತಃಕರಣ, ಅಭಿಮಾನಗಳ ಅತಿರೇಕದಲ್ಲಿ ಮನತಣಿಯುವಂತೆ ಹಣೆ ಮುಟ್ಟಿ ಮುದ್ದಿಸಿ ಪಾದ ಮುಟ್ಟಿ ನಮಸ್ಕರಿಸಿ ದೇವತ್ವದ ನಿಜ ರೂಪವನ್ನು ಕಂಡವರಂತೆ ಆನಂದಗೊಳ್ಳುತ್ತಿದ್ದರು.

ಇದೇ ರೀತಿಯಾಗಿ ಮಡಿವಾಳೇಶನನ್ನು ಬಿಟ್ಟಿರಲು ಚನ್ನಮ್ಮ ರುದ್ರಮ್ಮರು ವ್ಯಥೆಪಡುತ್ತಿದರು. ಪ್ರಭುಸ್ವಾಮಿಗಳೂ ಅಷ್ಟೆ ಗುರುಮೂರ್ತಿಗಳ ತಪಸ್ಸಿನ ಫಲವಾಗಿ ದೊರೆದ ದೇವಾಂಶ ಮರಿದೇವನನ್ನು ಅರೆಕ್ಷಣ ಅಗಲಿದರೆ ಚಟಪಡಿಸುತ್ತಿದ್ದರು. ಮಡಿವಾಳೇಶನೂ ಅಷ್ಟೆ, ಗುರುಗಳಾದ ಪ್ರಭುಸ್ವಾಮಿಗಳನ್ನು ಮರೆತು ಮಲಗುವದು ಸಹ ನಿಲ್ಲಿಸಿ ಸದಾ ಅವರ ಒಡನಾಟದಲ್ಲಿ ಇರುತ್ತಿದ್ದನು. ಊಟ ಉಪಚಾರ ಪೂಜಾ ವಿಧಿ ಕಾರ್ಯಗಳು ಸಾಗಿದಾಗ ನಾಗಲಾಂಬೆಯು ಮಮತೆಯ ಮಗುವಾಗಿ ಕಾಲ ನೂಕಿದರೆ ಅಭ್ಯಾಸದ ವೇಳೆಯಲ್ಲಿ ಸ್ವಾಮಿಗಳ ಸಮ್ಮುಖದಲ್ಲಿಯೆ ಪಾಠ ಸಾಗಬೇಕು. ಪಾಠ ಸಾಗಿದ ಸಮಯದಲ್ಲಿ ಜಡಮತಿಗಳಾದ ಮಾನವಂಗೆ ತಿಳಿಯುವಂತಹ ಹಲವಾರು ವೇದಾಂತಪೂರ್ಣ ಪ್ರಶ್ನೆಗಳನ್ನು ಪಾಠಕ ಗುರುಗಳಿಗೆ ಕೇಳಿ ಅವರಿಂದ ತಿಳಿಯದಿರೆ ತಾನು ಅವುಗಳ ಅರ್ಥವನ್ನು ಹೇಳಿ ಗುರುಗಳನ್ನು ಬೆರಗುಗೊಳಿಸ ಹತ್ತಿದನು. ದೊರೆ ಮಗನು ಮಡಿವಾಳೇಶನ ನಾದ ವೈಖರಿಗೆ ಮತ್ತಷ್ಟು ಮೆತ್ತಗಾಗಿ ಹುಟ್ಟಿ ಮೊರೆಯನ್ನು ಹೊತ್ತುಕೊಂಡು ರಾಜವಾಡೆ ಸೇರುವದು ತಪ್ಪಲಿಲ್ಲ. ಆದರೆ ಮಡಿವಾಳೇಶನನ್ನು ಅವಮಾನಪಡಿಸಲು ಸಮಯ ಕಾಯುತ್ತಲೇ ಇದ್ದನು.

ಒಂದು ದಿವಸ ಮಲ್ಲಸರ್ಜ ದೊರೆಗಳು ಪ್ರಭುಸ್ವಾಮಿಗಳನ್ನು ಕಂಡು ರಾಣಿಯರ ಮನದಾಸೆಯಂತೆ ತಾವು ಪಾದಪೂಜೆಗಾಗಿ ಅರಮನೆಗೆ ಬರು

ವಾಗ ಇನ್ನು ಮೇಲೆ ಮಡಿವಾಳೇಶ ಮರಿದೇವರನ್ನು ಕರೆದುಕೊಂಡು ಬರುವ ಕೃಪೆಯಾಗಬೇಕೆಂದು ಭಿನ್ನೈಸಿಕೊಂಡನು. ದೊರೆಯು ಮನಸ್ಸನ್ನು ಮುರಿಯು ಬಾರದೆಂದು ಸ್ವಾಮಿಗಳು ಮಲ್ಲಸರ್ಜನ ಮಾತಿನಂತೆ ಪ್ರತಿ ನಿತ್ಯ ಅರಮನೆಗೆ ಪಾದಪೂಜಾದಿ ಕರ್ಮಗಳನ್ನು ತೀರಿಸಿಕೊಂಡು ಬರಲಿಕ್ಕೆ ಹೋಗುವ ಸಮಯ ದಲ್ಲಿ ಮರಿದೇವರನ್ನು ಸಂಗಡ ಕರೆದುಕೊಂಡು ಹೋಗುತ್ತಿದ್ದರು. ಆದರೆ ಮಡಿವಾಳೇಶ ಮರಿಗಳಿಗೆ ಅದೇನು ಹೊಳೆಯಿತೋ ಬರುಬರುತ್ತ ಗುರುಗಳ ಸಂಗಡ ಹೊಗುವಾಗ ಸಗಣಿಯ ಉಂಡೆಗಳನ್ನು ಮಾಡಿ ವಾಡೇದ ಬಾಗಿಲಿಗೆ ಎಸೆದು ಬರುತ್ತಿದ್ದನು.

ಒಂದು ದಿವಸ ಅರಮನೆಯಲ್ಲಿ ರಾಣಿ ರುದ್ರಮ್ಮಗೆ ಕರುಣ ಪ್ರಸಾದ ಕೊಟ್ಟು ಮರಳಿ ಬರುತ್ತಿರುವಾಗ ಬಾಪೂ ಎದುರಾಗಿ ಬಂದವನು ಮಡಿವಾ ಳೇಶನನ್ನು, ಪ್ರಭು ಸ್ವಾಮಿಗಳನ್ನು ಕಂಡು ಅರಮನೆಯ ಅನ್ನದಿಂದ ಕೊಬ್ಬಿದ ಗೂಳಿಯಾಗಿದ್ದಾನೆ. ಈ ಅನಾಥ ಸನ್ಯಾಸಿ ಹುಡುಗ ಎಂದು ಮೂದಲಿಸಿ ಮಾತನಾಡಿದನು. ಇದರಿಂದ ಮಡಿವಾಳೇಶನ ಮನಸ್ಸಿಗೆ ಬಲು ನೋವಾಯಿತು. ಹಾಗೆ ಪುಟನೆಗೆದು ಬಾಪೂನತ್ತ ಸಾಗಿ ಮೈ ಹಣ್ಣಾಗು ವಂತೆ ಮಲ್ಲ ಕಾಳಗದಲ್ಲಿ ಹೊಡೆದು ಹಣ್ಣು ಹಣ್ಣು ಮಾಡಿದನಲ್ಲದೇ ಬಾಪ್ಯಾ ನಿಮ್ಮಪ್ಪ ನಿಮ್ಮ ಮುತ್ತಜ್ಜರ ಪುಣ್ಯದಿಂದ ನಿನ್ನ ಬದುಕು, ನಿನ್ನಾ ಳಿಕೆಯಲ್ಲಿ ಏನಿದೆ ಮಣ್ಣು ಸೆಗಣಿಯ ಉಂಡಿ ರಾಜವಾಡೆಯಲ್ಲಿ ಬೀಳುವ ಕಾಲ ದೂರಿಲ್ಲ ಹೋಗು ಹೋಗಲೇ ಎಂದು ದಬ್ಬಿಕೊಟ್ಟನು. ಗುರುಗಳು ಉಪಾಯಗಾಣದೇ ಮಡಿವಾಳೇಶನನ್ನು ರಂಬಿಸಿ ಮಠಕ್ಕೆ ಕರೆದುಕೊಂಡು ಬಂದರು. ಅತ್ತ ಹೊಡೆತ ತಿಂದು ಹಣ್ಣಾದ ಬಾಪೂ ಸಾಹೇಬನು ತಂದೆ ಯಾದ ದೊರೆ ಮಲ್ಲಸರ್ಜನ ಹತ್ತಿರ ಹೋಗಿ ಮಡಿವಾಳೇಶನಿಂದ ತನಗಾದ ಸ್ಥಿತಿಯನ್ನು ವರ್ಣಿಸಿಕೊಂಡನಲ್ಲದೆ ಬಾರಿಬಾರಿಗೂ ಆ ಅನಾಥ ಬಾಲಕನು ನನ್ನನ್ನು ಬಾಪ್ಯಾ ಬಾಪ್ಯಾ ಎಂದು ಏಕ ವಚನದಲ್ಲಿ ಕರೆಯುತ್ತಾನೆ ಎಂದು ತಿಳಿಸಿದನು ಮತ್ತು ಒತ್ತಾಯದಿಂದ ಪ್ರಭುಸ್ವಾಮಿಗಳಿಗೆ ತಿಳಿಸಿ ಆತನಿಗೆ ಸರಿಯಾದ ಶಿಕ್ಷೆ ಮಾಡಬೇಕೆಂದು ಹಟ ಹಿಡಿದನು. ಆದರೆ ಮಲ್ಲಸರ್ಜ ದೊರೆ ಮಡಿವಾಳೇಶನ ತುಂಟುತನವನ್ನು ಅರಿತವರಾಗಿ ಅವನ ಲೀಲಾ ವಿನೋದವನ್ನು ತಿಳಿದುಕೊಂಡವನಾದ ಕಾರಣ ಮಡಿವಾಳೇಶನನ್ನು ಶಿಕ್ಷಿ

ಸುವ ಸಾಮರ್ಥ್ಯ ನಮ್ಮಲ್ಲಿ ಇಲ್ಲವೆಂದು ಮಗನನ್ನು ಸಮಾಧಾನಪಡಿಸುತ್ತ ಕೊನೆಗೊಮ್ಮೆ ಬಾಪೂ ಒತ್ತಾಯದಿಂದ ವಿಷಯವನ್ನಾದರೂ ಪ್ರಭು ಸ್ವಾಮಿಗಳಿಗೆ ತಿಳಿಹಿಸುವದಾಗಬೇಕೆಂದು ತಂದೆಯನ್ನು ಒಪ್ಪಿಸುತ್ತಿದ್ದನು. ಇತ್ತ ಮಡಿವಾಳೇಶನೊಡನೇ ಸ್ವಾಮಿಗಳು ಮಾತಿನಲ್ಲಿ ಕುಳಿತುಕೊಂಡು ತರ್ಕಶಾಸ್ತ್ರದಲ್ಲಿ ಪ್ರವೀಣ ಎನಿಸಿತು ಅವರೊಡನೆ ನಗುನಗುತ್ತ ಅವನ ತರ್ಕ ಬದ್ಧವಾದ ನುಡಿಗಳನ್ನು ಕೇಳಿ ಆನಂದಿಸುತ್ತಿದ್ದನು.

ಇತ್ತ ಮಲ್ಲಸರ್ಜ ದೊರೆಯು ಪರಿಪರಿಯ ಬೋಧನೆಯಿಂದ ಮಗನನ್ನ ಸಮಾಧಾನ ಪಡಿಸುತ್ತ ಮಗು ಮಡಿವಾಳೇಶ ಮರಿದೇವರೆಂದರೆ ಸಾಮಾನ್ಯ ಮಾನವನಲ್ಲಪ್ಪಾ ಆತನ ಮಹಿಮೆಯನ್ನು ನಾನು ನೀನು ಅಷ್ಟೇ ಅಲ್ಲ ಕಿತ್ತೂರ ನಾಡ ಜನತೆಯಲ್ಲಿಂತೂ ಅವನ ಬಗ್ಗೆ ಭಯಭಕ್ತಿಯಿಂದ ನಡೆದುಕೊಳ್ಳುವ ಸಂಗತಿ ನಿನಗೆ ಅರಿಯದೇನು ಕಂದಾ ಹಾಗೆಲ್ಲ ಅವತಾರಿಕ ಪುರುಷರ ಬಗ್ಗೆ ಅಪಚಾರದ ನುಡಿಗಳನ್ನಾಡಬಾರದು ಅಂಥವರನ್ನು ತೆಗಳುದೆಂದರೆ ನಮ್ಮ ವಿನಾಶವನ್ನು ನಾವೇ ಕೈಯಾರೆ ಮನಸಾರೆ ಆಸೆಪಟ್ಟು ಆಮಂತ್ರಿಸಿಕೊಂಡಂತೆ ಎಂದು ಹೇಳಿದ್ದಲ್ಲದೆ ನೀನು ದುರಭಿಮಾನದ ದಳ್ಳುರಿಯಲ್ಲಿ ಬೆಂದು ಹೋಗುವುದು ಉಚಿತವಲ್ಲ. ದ್ವೇಷವು ದ್ವೇಷವನ್ನು ಹುಟ್ಟಿಸುವದೇ ವಿನಃ ಮನಸ್ಸಿಗೆ ಶಾಂತಿಯನ್ನೀಯಲಾರದು ಸದಾಚಾರ ಸದ್ಗುಣಿ ರಾಜವಂಶನಾದ ನೀನು ಸದಾಚಾರಿಯಾಗಿ ಸದ್ಗುಣಿ ಭರಿತ ಮಾನವನಾಗಿ ಮಡಿವಾಳೇಶ ಮರಿದೇವರನ್ನು ಗುರುವೆಂದು ಮನ್ನಿಸಿ ಪೂಜ್ಯ ಭಾವನೆಯಿಂದ ನಡೆದುಕೊಂಡರೆ ನಿನ್ನ ಹಾಗೂ ನಿನ್ನ ವಂಶದ ಉದ್ಧಾರ ಖಂಡಿತವೆಂದು ತಿಳಿ. ವಿರಸ ವೈಮನಸ್ಸು, ಮಾನವನ ಕೇಡಿಗೆ ಮೂಲ ಕಾರಣವೆಂದು ಅರಿತು ಬಾಳುವವನಾಗು ಮಹಿಮಾಶಾಲಿಯಾದ ಗುರು ಮಡಿವಾಳೇಶ ಮರಿದೇವರು ಕಟುವಾಗಿ ಟೀಕಿಸಿ ಮಾತನಾಡಿದ್ದರೂ ಅವರ ನುಡಿಯಲ್ಲಿ ಅವರ ಅಮರವಾಣಿಯಲ್ಲಿ ಭಕ್ತೋದ್ಧಾರದ ಕರುಣಾಮಯ ಸಂಗತಿಯು ಅಡಕವಾಗಿರಬೇಕೆಂದು ತಿಳಿಸಿ ವರ್ತಿಸುವವನಾಗು ಎಂದು ಮರಿದೇವರ ಬಗ್ಗೆ ಅಳಿಸಿ ಹೇಳಿದರೂ ವಿನಾಶಕಾಲೇ ವಿಪರೀತ ಬುದ್ಧಿ ಎನ್ನುವಂತೆ ತಂದೆಯ ಅಮೃತಮಯ ವಾಣಿಯು ವಿಷವಾಗಿ ಪರಿಣಮಿಸಿತೆ ವಿನಃ ಬಾಪೂ ಸಾಹೇಬನ ದುರಭಿಮಾನದ ಹೃದಯ ಪರಿವರ್ತನೆ

ಯಾಗಲಿಲ್ಲ. ತಂದೆಯ ಮಾತುಗಳಿಂದ ಮಡಿವಾಳೇಶನ ಬಗ್ಗೆ ಮತ್ತಿಷ್ಟು ದ್ವೇಷ ದಲ್ಲಿ ಉರಿ ಕಾರುವ ಕೇಡಾಳಿಯಾದನೇ ಹೊರತು ಸಹಕಾರದ ಮರ್ಮವನ್ನರಿತು ಗುರು ವಾಕ್ಯವೇ ವೇದವಾಕ್ಯವೆಂದು ತಿಳಿದು ಪೂಜ್ಯಭಾವನೆಯಿಂದ ನಡೆದು ಕೊಳ್ಳಬೇಕೆಂಬ ಸದ್ಭಾವನೆ ಸದ್ವಿವೇಕ ಮೂಡಲಿಲ್ಲ.

ಹೀಗಾಗಿ ಮಗನ ವರ್ತನೆಯನ್ನು ಕಂಡು ಮಲ್ಲಸರ್ಜ ದೊರೆಗಳು, ರಾಣಿ ರುದ್ರಮ್ಮ ಚೆನ್ನಮ್ಮರು ಚಿಂತಿಸಹತ್ತಿದರು. ಜಗಜಟ್ಟಿಗಳಿಗೂ ಮಣಿಯದ ಮದ್ದಾನೆಯು ಬಾಲ ಮಡಿವಾಳೇಶನ ಹೊಡತ ಬಡಿತಗಳಿಂದ ಮೆತ್ತಗಾಗಿ ಮಣಿದು ಹಣ್ಣಾಗಿ ವರ್ತಿಸಬೇಕಾದರೆ, ಇಂತಹ ನೂರಾರು ಲೀಲೆಗಳನ್ನು ಈ ಬಾಲವಯದಲ್ಲಿ ಲೀಲಾಜಾಲವಾಗಿ ಜರುಗಿಸಬೇಕಾದರೆ ಈತನು ಅಸಮಾನ್ಯ ಕಾರಣಪುರುಷನು. ಕಾರಣ ನಮ್ಮ ವಂಶದ ಅಳಿವು ಉಳಿವು ಎಲ್ಲವೂ ಗುರು ಮಡಿವಾಳೇಶ ಮರಿ ದೇವರನ್ನೇ ಅವಲಂಬಿಸಿದೆ ಎಂದರು.

೧೨ನೆಯ ಪ್ರಕರಣ

ಚರಮೂರ್ತಿಗಳ ಲಿಂಗವನ್ನು ಅಪಹರಿಸಿ ಪುನಃ ಅವರಿಗೆ ಕರುಣಿಸಿದ್ದು

ಕಾಲಕ್ರಮೇಣ ಮರಿದೇವರಾದ ಮಡಿವಾಳೇಶನ ಬಗ್ಗೆ ಕಿತ್ತೂರ ಜನತೆಯಂತೂ ಭಯಭಕ್ತಿಗಳಿಂದಲೂ ಶ್ರದ್ಧಾವಿಶ್ವಾಸಗಳಿಂದಲೂ ನಡೆದು ಕೊಳ್ಳಹತ್ತಿದರು. ಸುತ್ತಲಿನ ಗ್ರಾಮವಾಸಿಗಳು ಮರಿದೇವರ ಮಹಿಮೆ ಯನ್ನು ಕೇಳಿ ಅವರ ದರ್ಶನದಿಂದ ಪುನೀತರಾಗಬೇಕೆಂದು ಭಾವಿಸಿ ಬರ ಹತ್ತಿದರು ಅದರಲ್ಲಿ ಹಲಕೆಲವು ಜನರು ವಾಕ್ಯಸಿದ್ಧಿಯನ್ನು ಪಡೆದು ಬಂದು ಅವತಾರಿಕ ಮಹಾತ್ಮನೀತ, ಏನಾದರೂ ಬಿರುಸು ನುಡಿಯನ್ನಾಡಿದರೆ ನಮ್ಮ ಗಳ ಕೇಡಿಗೆ ಮತ್ತಷ್ಟು ಪುಟ ದೊರೆತಂತಾಗಬಹುದೆಂದು ಸುಮ್ಮನೆ ಬಂದು ನಮಸ್ಕರಿಸಿ ದೂರಾಗುವರು. ಅವನಾಗಲೆ ನಗುನಗುತ್ತ ಮಾತನಾಡಿಸಿದರೆ ತಮ್ಮ ಕಷ್ಟ ಕಾರ್ಪಣ್ಯಗಳನ್ನು ತಿಳಿಸುವರು, ಪ್ರಭುಸ್ವಾಮಿಗಳ ಮುಖಾಂತರ ಮರಿದೇವರ ವಾಣಿಯಿಂದ ಸಿಡಿದು ಬಂದು ಶಬ್ದಗಳ ಅರ್ಥವಿವರಣೆ ಪಡೆದು

ಕೊಂಡು ಹೋಗುವ ವಾಡಿಕೆಯಾಯಿತು. ಕರ್ಮ ಧರ್ಮ ಸಂಯೋಗದಿಂದ ಮರಿದೇವರು ಹಲವರಿಗೆ ಒಳ್ಳೆಯ ಉತ್ಕೃಷ್ಟ ನುಡಿಯನ್ನು ಸುರಿದರೆ ಕೆಲವರಿಗೆ ಕೇಡಿನ ಬುತ್ತಿಯನ್ನು ಬೆನ್ನಿಗೆ ಕಟ್ಟಿಕೊಂಡಿರುವಿರೆನ್ನುವಂತೆ ನುಡಿದು ಬಿಡುತ್ತಿದ್ದರು. ಬರುಬರುತ್ತ ಮರಿದೇವರ ಮಹಿಮೆ ಕಿತ್ತೂರಿನ ಹಾಗೂ ಸುತ್ತಲಿನ ಜನತೆಯ ಹೆಮ್ಮೆಯ ವಿಷಯವಾಗಿ ಬಿರುಗಾಳಿಯಂತೆ ಬಲು ಬೇಗ ಹಬ್ಬುವಂತಾಯಿತು.

ಒಮ್ಮೆ ಶ್ರಾವಣ ಮಾಸದ ಪುಣ್ಯಕಾಲದಲ್ಲಿ ಮುರಡಿಮಠದ ಗುರು ಪಟ್ಟ ಚರಮೂರ್ತಿಗಳು ಪ್ರಭುಸ್ವಾಮಿಗಳ ಬೆಟ್ಟಿಗೋಸ್ಕರ ಕಿತ್ತೂರ ಕಲ್ಮಠಕ್ಕೆ ದಯಮಾಡಿಸಿದರು. ಆಗ ಪ್ರಭುಸ್ವಾಮಿಗಳು ತಮ್ಮ ದರ್ಶನಕ್ಕೆ ದಯಮಾಡಿಸಿದ ಚರಮೂರ್ತಿಗಳನ್ನು ತಮ್ಮ ಸ್ವಭಾವದಂತೆ ಆದರಿಂದ ಸ್ವಾಗತಿಸಿ ಅವರ ಸ್ನಾನ ಪೂಜಾದಿ ಕ್ರಿಯಾಚರಣೆಗೆ ಅನುಕೂಲ ಮಾಡಿ ಕೊಟ್ಟರು. ಒಂದು ದಿನ ಚರಮೂರ್ತಿಗಳನ್ನು ಸ್ನಾನ ತೀರಿಸಿ ಲಿಂಗಪೂಜೆಗೆ ಕುಳಿತುಕೊಂಡಿರಲು ಮರಿ ಮಡಿವಾಳೇಶನು ಸದ್ದು ಸುಳುವಿಲ್ಲದಂತೆ ಅವರ ಸಮೀಪದಲ್ಲಿ ಬಂದು ಸಪ್ಪಳವಾಗದ ಹೆಜ್ಜೆಯಿಂದ ಮುಂದಾಗಿ ಅಂಗೈಯಲ್ಲಿ ಪಿಡಿದು ಕುಳಿತುಕೊಂಡಿರುವ ಅವನ ಲಿಂಗವನ್ನು ಅಪಹರಿಸಿಕೊಂಡು ಓಡಿ ಹೋದನು.

ಮಡಿವಾಳೇಶನ ಈ ಕೃತಿಯನ್ನು ಕಂಡು ಪ್ರಭುಸ್ವಾಮಿಗಳು ಕೊಂಚ ಸಿಟ್ಟಿನಿಂದ ಮಡಿವಾಳೇಶಾ, ಮಡಿವಾಳೇಶಾ, ರೀತಿಯಲ್ಲವೋ ಇದು ಅವರ ಲಿಂಗವನ್ನು ಕೊಡಬಾರೋ, ಎಂದು ಕೂಗುತ್ತ ಬೆನ್ನುಹತ್ತಿದರು ಆಗಲೂ ಮಡಿವಾಳೇಶನು ಪ್ರಭುಸ್ವಾಮಿಗಳ ನುಡಿಯನ್ನು ಕೇಳಿಯೂ ಕೇಳದವನಂತೆ ಓಡಿ ತೋಟದ ಭಾವಿಯ ಹತ್ತಿರ ಬಂದನು. ಬೆನ್ನಟ್ಟಿ ಬಂದ ಗುರು ಪ್ರಭುಸ್ವಾಮಿಗಳು ಒಂದೇ ಸವನೇ ಹಲಬುತ್ತ ಮಡಿವಾಳೇಶಾ ಲಿಂಗಪೂಜಾಕಾರ್ಯಕ್ಕೆ ಭಂಗವನ್ನುಂಟು ಮಾಡಬಾರದು ಕೊಡೋ ಲಿಂಗವನ್ನು ಎಂದು ಬೆದರಿಸಿ ಮುಂದಾಗಲು ಮರಿ ಮಡಿವಾಳೇಶನು ತ್ವರಿತದಲ್ಲಿ ತೋಟದ ಬಾವಿಯಲ್ಲಿ ಜಿಗಿದುಬಿಟ್ಟನು.

ಆಗ ಬಾವಿಯಲ್ಲಿ ಮುಳುಗಿದ ಮರಿದೇವರಿಗಾಗಿ ಪ್ರಭುಸ್ವಾಮಿಗಳು ಚಿಂತಿಸಿ ಮಠದಲ್ಲಿದ್ದವರನ್ನೆಲ್ಲ ಕೂಗುತ್ತ ಅಯ್ಯೋ ಮಠದಲ್ಲಿ ಯಾರಿದ್ದೀರಿ

ಶೀವ್ರ ಬನ್ನಿರಿ ಬಾಲಕ ಮಡಿವಾಳೇಶನು ಭಾವಿಯಲ್ಲಿ ಹಾರಿದ್ದಾನೆ ಶೀವ್ರ ಬನ್ನಿರೋ, ಶೀವ್ರ ಬನ್ನಿರಿ ಎಂದು ಒಂದೇ ಸವನೆ ಹಲುಬಹತ್ತಿದರು. ಸ್ವಾಮಿಗಳ ಕೂಗುವಿಕೆಯಿಂದ ಮಠದಲ್ಲಿದ್ದವರು ಹಾಗೂ ಸ್ವಾಮಿಗಳ ದರ್ಶನಕ್ಕೆ ಬಂದ ಅನೇಕ ಭಕ್ತರು ಅಂತೂ ಇಂತೂ ಹತ್ತಿಪ್ಪತ್ತು ಜನರು ಧಾವಿಸಿ ಭಾವಿಯ ಹತ್ತಿರ ಬಂದು ನಾ ಮುಂದೆ ನೀ ಮುಂದೆ, ಎಂದು ಭಾವಿಯಲ್ಲಿ ಇಳಿದ ಮರಿದೇವರನ್ನು ಹುಡುಕಹತ್ತಿದರು. ಆದರೆ ಮಡಿವಾಳೇಶನು ಭಾವಿಯಲ್ಲಿ ಇದ್ದರಲ್ಲವೆ ಸಿಗುವದು ಅದೇ ಸಮಯಕ್ಕೆ ಅಡಿಗೆಯ ಮನೆಯಲ್ಲಿದ್ದ ನಾಗ ಲಾಂಬಿಕೆ ಮಡಿವಾಳೇಶನು ಭಾವಿಯಲ್ಲಿ ಬಿದ್ದ ಸುದ್ದಿ ತಿಳಿದು ಎದೆ ಎದೆ ಹೊಡೆದುಕೊಳ್ಳುತ್ತ ಬೋರಾಡಿ ಅಳುತ್ತ ಭಾವಿಗೆ ಬಂದು ಆಯ್ಯೋ ನನ್ನ ಕಂದಾ, ಚಿನ್ನಾ ಎಂದು ರೋಧಿಸಹತ್ತಿದಳು. ಇತ್ತ ಭಾವಿಯಲ್ಲಿ ಇಳಿ ದವರು ಮಡಿವಾಳೇಶನನ್ನು ಶೋಧಿಸಿ ಸೋತು ಸಣ್ಣಾಗಹತ್ತಿದರು. ನಾಗ ಲಾಂಬೆಯ ರೋಧನ ಹೆಚ್ಚಾಯಿತು. ಆಗ ಮಡಿವಾಳೇಶ ಮರಿದೇವರು ತಾಯಿ ಎಂದೆನಿಸಿದ ನಾಗಲಾಂಬೆಯ ಹಿಂದಿನಿಂದ ಬಂದು ಮಮತೆಯಿಂದ ಅವಳನ್ನು ಅಪ್ಪಿಕೊಂಡು ಯಾಕಮ್ಮಾ ಅಳುತ್ತಿರುವೆ ಏನಾಯಿತು ? ಎಂದು ಸಮಾಧಾನಪಡಿಸುವ ರೀತಿಯಲ್ಲಿ ಕೇಳಹತ್ತಿದನು. ಆಗ ಮಡಿವಾಳೇಶ ನನ್ನು ಕಂಡು ಪ್ರಭುಸ್ವಾಮಿಗಳಂತೂ ಆಶ್ಚರ್ಯ ಆನಂದಗಳಲ್ಲಿ ಉಬ್ಬಿ ಹೋದರು. ನಾಗಲಾಂಬೆಯು ಮೂರು ವರುಷದ ಮಗುವನ್ನು ಕಂಕುಳದ ಲ್ಲಿಟ್ಟುಕೊಳ್ಳುವಂತೆ ಮಡಿವಾಳೇಶನನ್ನು ಎತ್ತಿಕೊಂಡು ಮುದ್ದಿಸಿ ಆನಂದಿಸ ಹತ್ತಿದಳು. ಕೂಡಿದ ಜನರು ಆಶ್ಚರ್ಯದ ಕಣ್ಣುಗಳನ್ನು ಅಲಗಿಸ ದಂತೆ ನಿಂತುಕೊಂಡಿದ್ದರು. ಆಗ ಪ್ರಭುಸ್ವಾಮಿ ವಿನಯದಿಂದ ರಂಭಿಸುತ್ತ ಹರಮೂರ್ತಿಗಳ ಲಿಂಗವೆಲ್ಲಿದೆ ಕೊಡಪ್ಪಾ ಎಂದು ಕೇಳಲು ಏನು, ಬಾಬಾ, ನಾನವರ ಲಿಂಗವನ್ನು ಒಯ್ದಿಲ್ಲ ಲಿಂಗವು ಆ ಪಟ್ಟ ಮೂರ್ತಿಗಳ ಕೈಯಲ್ಲಿದೆ ಎನ್ನುತ್ತಿರುವಂತೆ ಚರಮೂರ್ತಿಗಳು ಲಿಂಗಪೂಜೆಯನ್ನು ಮುಗಿಸಿ ಹೊರಗೆ ಬಂದದ್ದನ್ನು ಕಂಡು ಅವರ ಲಿಂಗವು ಅವರ ಬಳಿಯಲ್ಲಿ ಅದೆ ಎನ್ನುವದು ತಿಳಿದು ಎಲ್ಲರಿಗೂ ಸಂತೋಷ ಆಶ್ಚರ್ಯಗಳು ಏಕಕಾಲಕ್ಕೆ ಉದ್ಭವಿಸಿ ಇದೆ ಲ್ಲವೂ ಈ ಮರಿದೇವರ ಮಹಿಮೆಯೆಂದು ತಮ್ಮ ತಮ್ಮ ಆಶ್ಚರ್ಯವನ್ನು ಆನಂದವನ್ನು ವಕ್ತಪಡಿಸಿ ಭಕ್ತ ಮಹಾಶಯರು ಮರಿದೇವರಾದ ಮಡಿ

ಮಡಿವಾಳೇಶನ ಪಾದಗಳಿಗೆ ಸಾಷ್ಟಾಂಗ ನಮಸ್ಕಾರ ಹಾಕಿ, ತಂದೆ ಗುರುವೆ ನಮ್ಮನ್ನು ಉದ್ಧರಿಸಲು ಬಂದ ಕರುಣಾನಿಧಿಯೇ,ಕಾಪಾಡುವ ಕರುಣೆ ಇರಲೆಂದು ಬೇಡಿಕೊಳ್ಳಹತ್ತಿದರು. ಮಡಿವಾಳೇಶನು ಲೋಕದ ರಕ್ಷಣೆಯ ಭಾರ ಹೊತ್ತು ಶಿವರು ಕಣ್ಣು ಮುಚ್ಚಿಲ್ಲ ಹೋಗಿರೋ ಕಾಲೇನ ತಪ್ಪೈಯೆ ಎನ್ನುವಂತೆ ಕಾಲ ಬದಲಾದಂತೆ ನೀವು ಬದಲಾದೀರಿ. ಏನ ದೊಡ್ಡ ಮಾತು ನಿಮ್ಮ ಧರ್ಮ ಕರ್ಮಗಳು ಹ್ಯಾಗೊ ಹಾಗೆ ಬದುಕು ಪಾಪಪುಣ್ಯ ಹ್ಯಾಗೊ ಹಾಗೆ ಜೀವನ ಬಾರದು ಬಪ್ಪುದು ತಪ್ಪದು ಎನ್ನುವಂತೆ ಬಂದದ್ದನ್ನು ಭೋಗಿಸಲು ಸಿದ್ಧರಾಗಿರಿ. ಆದರೆ ಪಾಪಪುಣ್ಯ, ಧರ್ಮ, ಕರ್ಮ, ಸಹಕಾರ ಅಸಹಕಾರ, ವಿವೇಕ ಅವಿವೇಕತನ, ಶಾಂತಿ, ಕ್ರಾಂತಿ, ಪೂಜ್ಯರು, ಗುರುಹಿರಿಯರು ಎಂಬ ತತ್ವಗಳಿಂದ ಎಚ್ಚತ್ತು ಬಾಳಿದರೆ ಭವಿತವ್ಯ ಬದಲಾಗುವದರಲ್ಲಿ ಸಂದೇಹವಿಲ್ಲೆಂದು ನುಡಿದನು.

ಮಡಿವಾಳೇಶನ ನುಡಿಗಳನ್ನು ಕೇಳಿದ ಚರಮೂರ್ತಿಗಳು ಪ್ರಭುಸ್ವಾಮಿಗಳು ಕೂಡಿದ ಭಕ್ತ ಜನರು ತಬ್ಬಿಬ್ಬಾಗಿ ಮಹಿಮಾಶಾಲಿ ಬಾಲಕನೆಂದು ಹೊಗಳುತ್ತ ತಮ್ಮ ತಮ್ಮ ಕಾರ್ಯ ಕ್ಷೇತ್ರಗಳಲ್ಲಿ ಸಾಗಿ ಹೋದರು.

....

೧೪ ನೆಯ ಪ್ರಕರಣ

ಗತಿಹೀನ ಅನಾಥರಿಗೆ ಸುವರ್ಣನಾಣ್ಯ ಹಂಚಿದ್ದು

ಒಮ್ಮೆ ಕಿತ್ತೂರ ದೊರೆಗಳಾದ ಮಲ್ಲಸರ್ಜರು ಕಲ್ಮಠದ ಪ್ರಭುಸ್ವಾಮಿಗಳ ದರ್ಶನಕ್ಕೆ ಬಂದರು. ಆಗ ಪ್ರಭುಸ್ವಾಮಿಗಳು ಮರಿದೇವರ ಸಂಗಡ ವಿನೋದದಲ್ಲಿ ಅಧ್ಯಾತ್ಮದ ಚರ್ಚೆಯಲ್ಲಿ ಕಾಲ ಕಳೆಯುತ್ತ ಆನಂದದಿಂದ ಮಡಿವಾಳೇಶನ ಅಮರವಾಣಿಯಿಂದ ಬರುವ ವಿಷಯವನ್ನು ಆಲಿಸುತ್ತಿದ್ದರು. ಅದೇ ಸಮಯಕ್ಕೆ ಸರಿಯಾಗಿ ಮಲ್ಲಸರ್ಜ ದೊರೆಗಳ ಸವಾರಿ ಆಗಮಿಸಲು, ಪ್ರಭುಸ್ವಾಮಿಗಳು ದೊರೆ ಮಲ್ಲಸರ್ಜನು ಬರುತ್ತಿರುವದನ್ನು ಕಂಡು ಮರಿದೇವರಿಗೆ ವಿನಯದ ಪಾಠ ಕಲಿಸುವದಕ್ಕಾಗಿ ಸೌಜನ್ಯದ ಸವಿ ಉಣ್ಣಿಸುವದಕ್ಕಾಗಿ ನಯ ನಡಾವಳಿಕೆಯ ಬುದ್ಧಿ ಕಲಿಸುದಕ್ಕಾಗಿ ಹಿರಿಯರೆಂಬ

ಗೌರವದ ಗುರುತು ತೋರಿಸಿಕೊಡುವದಕ್ಕಾಗಿ ನಮ್ರತೆಯು ತಿರುವನ್ನು ತೀಡುವದಕ್ಕಾಗಿ ಮಗು ಮಡಿವಾಳೇಶ, ದೊರೆಗಳು ಚಿತ್ತೈಸುತ್ತಿದ್ದರೆ ಅವರನ್ನು ಗೌರವಿಸಿ ಆದರದಿಂದ ಬರಮಾಡಿಕೊಳ್ಳುವದು ನಮ್ಮ ಧರ್ಮ ವಲ್ಲವೆ ಹೋಗು ದೊರೆಗಳನ್ನು ಆದರದಿಂದ ಗೌರವದಿಂದ ಕರೆದುಕೊಂಡು ಬಾ ಎಂದರು. ಆಗ ಮಡಿವಾಳೇಶನು ಹುಸಿನಗೆ ಚಿಮ್ಮಿ ಬಾಬಾ ಜಗ ದೊಡೆಯ ಶಿವಶಂಕರನಿಗೆ ಮತ್ತಾವ ದೊರೆಯುಂಟು ಈ ಜಗದಿ ಸೊಬಗಿ ನಿಂದ ದೊರೆಪಟ್ಟವನ್ನು ಪಿಡಿಸುವ ನಿಮಿತ್ಯ ಮಾತ್ರ, ನರದೊರೆಗೆ ಜಗ ದೊಡೆಯನ ಮಗ ನಾನು ದೊರೆಯೆಂದು ಸತ್ಕರಿಸಬೇಕೆ, ಆದರ ಗೌರವ ತೋರಬೇಕೆ ಎಂದನು. ಮಡಿವಾಳೇಶನ ಮಾರ್ಮಿಕ ನಿರ್ಮಲಯುಕ್ತ ವಾದ ನಿಜ. ನುಡಿಗಳನ್ನು ಕೇಳಿದ ಮಲ್ಲಸರ್ಜ ದೊರೆಯು ಮರಿದೇವರ ನುಡಿ ಸತ್ಯವಾದದ್ದು. ಗುರುಗಳೇ- ಜಗನ್ನಿಯಾಮಕ ಸೃಷ್ಟಿಗೊಡೆಯ ಶಿವಕುಮಾರ ವೀರಭದ್ರನ ಪ್ರತಿ ಛಾಯೆಯಂತಿರುವ ಮರಿದೇವರಿಗೆ ನಾನೆಂತು ದೊರೆ ಯಾಗಬಲ್ಲೆ ಎಂದು ಸಂತಸ ಉಕ್ಕಿ ಮರಿದೇವರನ್ನು ಪಿಡಿದೆತ್ತಿಕೊಂಡು ಮಮತೆ ವಾತ್ಸಲ್ಯಗಳಿಂದ ಮುದ್ದಿಸುತ್ತ ಅಪ್ಪಾ, ಮರಿದೇವರೆ ನಿಮ್ಮ ಜಾಣ ತನದ ಚಲುನುಡಿಗೆ ಹೃದಯ ತುಂಬಿ ಆನಂದ ಉಕ್ಕುತ್ತದೆ. ಕಾರಣ ತಾವು ಕೇಳಿದ್ದನ್ನು ಕೊಟ್ಟು ನನ್ನ ಹೃದಯದ ಸಂತಸವನ್ನು ಹಗುರುಗೊಳಿಸಿ ಕೊಳ್ಳಬೇಕೆಂದಿರುವೆ ಎಂದು ನಮಸ್ಕರಿಸಿ ನಯ ವಿನಯ ವಿನೂತ ಭಾವಾ ವೇಶದಲ್ಲಿ ನುಡಿದನು.

ಆಗ ಮರಿದೇವನು ಅಯ್ಯಾ ದೊರೆಯೆಂಬ ಹಮ್ಮಿನಲ್ಲಿ ಶ್ರೀಮಂತ ನೆಂಬ ಸೊಕ್ಕಿನಲ್ಲಿ ನಾ ಕೊಡುವನೆಂಬ ಮಾತು ನಿನ್ನಿಂದ ಬಂದಿರುವಾಗ ಇದು ಶುದ್ಧ ತಪ್ಪು ಜಗದ ಜೀವಿಗಳಿಗೆಲ್ಲ ಕೊಟ್ಟು ಸಾಕಿ ಸಲುಹುವ ಶಿವನು ಸಮರ್ಥನಿರುವಾಗ, ನೀನೇನಯ್ಯಾ ನನಗೆ ಕೊಡುವೆ, ಬೇಡುವದು ನಮ್ಮ ಧರ್ಮದಲ್ಲಿಯೇ ಸುಳಿಯಬಾರದು. ಅದಕ್ಕೂ ಮಿಕ್ಕಿ ನಿನ್ನ ಸಂತಸವು ಕೊಡಲೇಬೇಕೆಂಬ ಹಠವನ್ನು ಒತ್ತಿ ಬಿತ್ತರಿಸುತ್ತಿರುವದಾದರೆ ಮಠದ ಉತ್ತೀರ್ಣತೆಗಾಗಿ ಜೋಗಿ ಜಂಗಮ ಬಡಬಗ್ಗರ ಸುಖ ಜೀವನಕ್ಕೆ ಸಹಾಯ ಕವಾಗುವ ದಾಸೋಹ ಧರ್ಮ ಅವನರತ ಸಾಗಬೇಕು. ಅಂತೆ ನಾ ಬೇಡಿ ದಷ್ಟು ಸುವರ್ಣ ನಾಣ್ಯಗಳನ್ನು ಕೊಡುವಿಯಾ ಎಂದು ಕೇಳಿದ್ದಲ್ಲದೆ

ನಾನು ನನ್ನ ಮನಸ್ಸಿಗೆ ಬಂದಂತೆ ಖರ್ಚುಮಾಡಲು ಒಪ್ಪಿಗೆ ಕೊಡಬೇಕು ಎಂದನು. ಆಗ ದೊರೆ ಮಲ್ಲಸರ್ಜನು ಆನಂದದಿಂದ ಒಪ್ಪಿ ಅಪ್ಪಣೆಯಾಗಬೇಕೆಂದನು. ಆಗ ಮಡಿವಾಳೇಶನು ಎರಡೂ ಕರಗಳನ್ನು ಮುಂದೆ ಚಾಚಿ ಅಂಗೈಗಳೆರಡನ್ನು ಕೂಡಿಸಿ ಬೊಗಸೆಯಂತೆ ಹಿಡಿದು ಈ ನನ್ನ ಕೈ ಬೊಗಸಿ ತುಂಬುವಷ್ಟು ಸುವರ್ಣದ ನಾಣ್ಯಗಳನ್ನು ಬೊಕ್ಕಸದಿಂದ ತರಿಸಿದರೆ ಸಾಕು ಎಂದನು. ಮರಿದೇವರು ಒಪ್ಪಿಕೊಂಡು ಉತ್ತರಿಸಿದ್ದೆ ತಡ ದಂಡಾಧಿಪ್ಪನವರನ್ನು ಕಳುಹಿಸಿ ಸುವರ್ಣದ ನಾಣ್ಯಗಳನ್ನು ತರಿಸಿದನು. ಸುವರ್ಣನಾಣ್ಯಗಳಿಂದ ತುಂಬಿದ ಹಮ್ಮಿಣಿಯನ್ನು ಬಿಚ್ಚಿ ಮರಿದೇವರ ಮುಂದೆ ಹಿಡಿದು ಸ್ವೀಕರಿಸುವ ಕೃಪೆಯಾಗಬೇಕೆಂದು ಬೇಡಿಕೊಳ್ಳಲು ಮತ್ತೆ ಬೊಗಸೆಯನ್ನು ಸಿದ್ಧಗೊಳಿಸಿ ನನ್ನ ಬೊಗಸೆ ತುಂಬುವಷ್ಟು ನಾಣ್ಯ ಸುರಿದು ಉಳಿದವುಗಳನ್ನು ತಿರುಗಿ ಒಯ್ಯಲು ಹೇಳಿದರು. ಮರಿದೇವರ ನುಡಿಯಂತೆ ಬೊಗಸೆಯಲ್ಲಿ ನಾಣ್ಯಗಳನ್ನು ಸುರುವಿದರು. ಆದರೆ ಮೊಳ ಉದ್ದ ಮೊಳ ಅಗಲದ ಹಮ್ಮಿಣಿಯಲ್ಲಿ ತುಂಬಿ ತಂದ ಸುವರ್ಣದ ನಾಣ್ಯಗಳು ಮಡಿವಾಳೇಶನ ಬೊಗಸೆಯನ್ನು ಪೂರ್ಣ ತುಂಬದಾದವು. ಅದನ್ನು ಕಂಡು ದೊರೆ ಹಾಗೂ ಪ್ರಭುಸ್ವಾಮಿಗಳು ಇನ್ನಿತರರು ಅಚ್ಚರಿಗೊಂಡು ಹನ್ನೆರಡು ವರುಷದ ಬಾಲಕ ಬೊಗಸೆಯ ವಿಶಾಲತೆಯನ್ನು ಕಂಡು ಬೆರಗಾಗಿ ನಿಂತರು ಆಗ ಮಡಿವಾಳೇಶನು–ದೊರೆಗಳೇ ಕೊಡುವ ಮಾತು ಒಡೆತನ ಮಾತು ಮುಗಿದಿವೆ ಎಂದು ಮೂದಲಿಸಿದನು. ಆಗ ಮಲಸರ್ಜ ದೊರೆಯು ನಾಚಿಕೆಯಿಂದ ತಲೆತಗ್ಗಿಸಿ ಕರಜೋಡಿಸಿ ಅಪರಾಧಿಯಂತೆ ನಿಂತುಕೊಂಡನು. ಬಳಿಕ ಮಡಿವಾಳೇಶನು ಹೋಗಲಿಬಿಡು ನಮಗೆ ಕೊಡುವ ಶಿವ ಸಮರ್ಥನಿದ್ದಾನೆ ಎಂದು ಯಾವತ್ತು ನಾಣ್ಯಗಳನ್ನು ಬಡಬಗ್ಗರಿಗೆ ಅನಾಥ ಅಂಗಹೀನರಿಗೆ ಹಂಚಿ ಶಿವ ಧಾನ್ಯವಂದೇ ನನ್ನ ಸಂಪತ್ತು ಎಂದು ಹೇಳಿದರು. ಮಡಿವಾಳೇಶನ ವಾಣಿಯನ್ನು ಕೇಳಿದವರೆಲ್ಲರೂ ಭಯ ಭಕ್ತಿಯಿಂದ ನಡೆದುಕೊಳ್ಳಹತ್ತಿದರು.

....

೧೪ ನೆಯ ಪ್ರಕರಣ

ಚರಮೂರ್ತಿಗಳ ಲಿಂಗ ಅಪಹರಿಸಿ ತಿರುಗಿ ಅವರಲ್ಲಿಯೇ ತೋರಿಸಿದ್ದು

ಒಂದು ದಿನ ಪ್ರಭುಸ್ವಾಮಿಗಳು, ಲಿಂಗಪೂಜೆಯ ಮಹಿಮೆಯನ್ನು ಲಿಂಗಾಂಗ ಸಾಮರಸ್ಯದ ಸವಿಯನ್ನು ಸವಿಸುತ್ತ ಲಿಂಗ ನಿಷ್ಠೆಯಿಂದ ಯೋಗ ಸಾಧನೆಯಿಂದ ಮನುಷ್ಯನು ಸಾಧಿಸುವ ಗುರಿಯೇನು ಎಂದು ಮಡಿವಾಳೇಶನಿಗೆ ಕೇಳಿದರು. ಆಗ ಮಡಿವಾಳೇಶನು ಬಾಬಾ ಜಗವೆಲ್ಲ ಲಿಂಗಮಯವಾಗಿರಲು ಅಂಗೈಯೊಳು ಲಿಂಗವ ಪಿಡಿದು ತದೇಕ-ದೃಷ್ಟಿ ಯಿಂದ ಲಿಂಗದ ರೂಪದಲ್ಲಿ ರಚಿಸಿದ ಪರಮಾತ್ಮನನ್ನು ಧ್ಯಾನಿಸುವದರಿಂದ ಮನುಷ್ಯನ ಮನಸ್ಸು ನಿರ್ಮಲಗೊಳ್ಳುವದು, ಚಿತ್ತ ಶುದ್ಧಿಯಾಗುವದು ಭಕ್ತಿಯ ಬಲವತ್ತರವಾದ ಬೆಳೆ ಹುಲುಸಾಗಿ ಬೆಳೆದು ಬರುವದು, ಲಿಂಗವೇ ಪ್ರಾಣ, ಲಿಂಗವೇ ಮಾನ, ಲಿಂಗಯ್ಯನೊಲುಮೆಯೇ ಶಿವಶಂಕರನ ಒಲುಮೆ ಇತ್ಯಾದಿ ಗುಣಗಳಿಂದ ಪರಿಪೂರ್ಣತೆಯನ್ನು ಹೊಂದಿ ಷಟಸ್ಥಲ ಬ್ರಹ್ಮಜ್ಞಾನ ಸಂಪಾದನೆಯನ್ನರಿತು ಯೋಗಬಲ ಸಾಧನೆಯಲ್ಲಿ ಕಾಲ ಕಳೆಯುತ್ತ ಪಾಪ ಪುಣ್ಯಗಳನ್ನರಿತು ವಿವೇಕವುಳ್ಳವನಾಗಿ ಪರರ ಸುಖ ನೋವುಗಳು ತನ್ನವೆಂದು ಯಾವನು ತಿಳಿದುಕೊಳುವನೋ ಆತನಿಗೆ ಲಿಂಗ ಮೂರ್ತಿಯ ಒಲುಮೆ ತೀವ್ರ ದೊರೆಯುವದು. ಮನದಲ್ಲಿ ಅನಂತ ದುರ್ಗಣಗಳನ್ನು ಹುಟ್ಟಿಸಿಕೊಂಡು ಅನ್ಯಾಯವಾಗಿ ಅನಾಚಾರಿಯಾಗಿ ಇನ್ನೊಬ್ಬರ ಕುತ್ತಿಗೆ ಕೊಯ್ದು ತನ್ನ ಹೊಟ್ಟೆ ತುಂಬಿಕೊಳ್ಳುವ ಸ್ವಾರ್ಥಿ ಯಾಗಿ ಸದಾಚಾರವನ್ನೇ ಮರೆತು, ಆಚಾರದ ಅವಹೇಳನ ಮಾಡುವ ಅವಿವೇಕಿಯು ಎಷ್ಟೊಂದು ಸಾರೆ ಲಿಂಗ ಪೂಜೆ ಮಾಡಿದರೇನು ಅದೆಷ್ಟು ಸೊಬಗಿನಿಂದ ಅರ್ಚಿಸಿದರೇನು, ಲಿಂಗಮೂರ್ತಿಯ ಒಲುಮೆ ತೋರದು. ಅಲ್ಲದೇ ಏಕನಿಷ್ಠೆ, ನಿಶ್ಚಲ ಭಕ್ತಿಯಿಲ್ಲದೇ ಡಾಂಭೀಕತನದಿಂದ ನಾನೊಬ್ಬ ಪೂಜಾನಿಷ್ಠ, ಆಚಾರಸಂಪನ್ನ ಎಂದು ತೋರಿಸಿಕೊಳ್ಳುವವನಿಗಂತೂ ಆತನ ಒಲುಮೆ ಕನಸಿನ ಮಾತು, ಮುಖ್ಯವಾಗಿ ನಿಷ್ಠೆಯಿಂದ ನಿರ್ಮಲ ಚಿತ್ತದಿಂದ ಅರ್ಚಿಸುವವನೇ ನಿಜವಾಗಿ ಸಾಧನೆಯ ಗುರಿ ಎನಿಸಿದ ಸದ್ಗತಿ

ಯನ್ನು ಪಡೆಯುವನು. ಪರಮಾತ್ಮನ ಪ್ರೀತಿಗೆ ಪಾತ್ರನಾಗುವನು ಎಂದನು. ಆಗ ಪ್ರಭುಸ್ವಾಮಿಗಳು ಬಾಲಕ ಬುದ್ಧಿಯನ್ನು ಮೀರಿ ಅದೆಷ್ಟು ವಿವೇಕಶಾಲಿ ಯೋಗಬಲ ಸಾಧನೆಯನ್ನು ಅರಿತವನಾದೆಯಪ್ಪಾ, ನಿನ್ನಂತಹ ಮರಿದೇವರನ್ನು ಪಡೆದ ನಾವೇ ಧನ್ಯರು ಎಂದು ನುಡಿದು, ಮಡಿವಾಳೇಶಾ ನಿನ್ನ ತತ್ವಗಳು ಜಗತ್ತಿಗೇನೇ ಆದರ್ಶವೆನಿಸಬಲ್ಲವಪ್ಪಾ ಎಂದು ಸಂತೋಷಪಟ್ಟರು.

ಅದೇ ಸಮಯಕ್ಕೆ ಸರಿಯಾಗಿ ಉತ್ತರದ ಕಡೆಯಿಂದ ಬಂದವರಾದ ಓರ್ವ ಚರಮೂರ್ತಿಗಳು ಪ್ರಭುಸ್ವಾಮಿಗಳ ಸನ್ನಿಧಿಗೆ ಬಂದರು. ಪ್ರಭು ದೇವರು ಅವರನ್ನು ಆದರದಿಂದ ಬರಮಾಡಿಕೊಂಡು ಮಠದ ಪದ್ಧತಿಯಂತೆ ಉಪಚರಿಸಲು ಅಪ್ಪಣೆ ಕೊಟ್ಟರು. ಚರಮೂರ್ತಿಗಳಾದರೂ ಪ್ರಭುಸ್ವಾಮಿಗಳ ಮಾತಿನಂತೆ ಕಲ್ಮಠದಲ್ಲಿ ಉಳಿದುಕೊಂಡರು. ಅಲ್ಲದೆ. ಈ ಒಳಗಾಗಿ ಮಡಿವಾಳೇಶ ಮರಿದೇವರ ಮಹಿಮೆಯನ್ನು ಹಲವು ಕಡೆ ಕೇಳಿ, ಈಗ ಕಂಡು ಆನಂದಿಸುವ ಅಭಿಲಾಷೆಯಿಂದ ಕಲ್ಮಠದಲ್ಲಿ ಉಳಿದರು.

ಒಂದು ದಿನ ಉತ್ತರದ ಚರಮೂರ್ತಿಗಳು 'ಸ್ನಾನ ತೀರಿಸಿ ಲಿಂಗ ಪೂಜೆಗಾಗಿ ಮಠದಲ್ಲಿರುವ ಪೂಜಾ ಮಂದಿರದಲ್ಲಿ ಕುಳಿತುಕೊಂಡಿದ್ದರು. ಆಗ ಮಡಿವಾಳೇಶನು ಎತ್ತಲಿಂದ ಬಂದನೋ, ಏನೋ ಚರಮೂರ್ತಿಗಳು ಲಿಂಗಪೂಜೆಗೆ ಕುಳಿತಿರುವದನ್ನು ಕಂಡು ಪೂಜಾ ವಿಧಾನವನ್ನು ಅರಿತುಕೊಳ್ಳುವ ಅಭಿಲಾಷೆಯಿಂದ ಏಕ ದೃಷ್ಟಿಯಲ್ಲಿ ಅವರ ಲಿಂಗಪೂಜೆಯ ಪದ್ಧತಿಯನ್ನು ನೋಡುತ್ತ ಒಂದೆಡೆ ಕುಳಿತುಕೊಂಡಿದ್ದನು ಕೆಲವು ಸಮಯ ಗತಿಸಿದ ನಂತರ ಬಾಲಕ ಮಡಿವಾಳೇಶನ ಬಾಲ ಬುದ್ಧಿಗೆ ಅದೇನು ಹೊಳೆಯಿತೋ ಏನೋ ಸಾವಕಾಶವಾಗಿ ಮೆಲ್ಲನೆದ್ದು ಲಿಂಗಪೂಜೆಯಲ್ಲಿ ಕುಳಿತಿರುವ ಚರಮೂರ್ತಿಗಳನ್ನು ಸಮೀಪಿಸಿ ಅವರಿಗೆ ತಿಳಿಯದಂತೆ ಅಂಗೈಯಲ್ಲಿ ಪ್ರತಿಷ್ಠಾಪನೆಯಾದ ಲಿಂಗವನ್ನು ತೆಗೆದುಕೊಂಡು ಮೆಲ್ಲನೆ ಸರಿದು ದೂರಾದನು ಇದನ್ನು ಪ್ರಭುಸ್ವಾಮಿಗಳು ಕಾಣದಿರಲಿಲ್ಲ. ಕಂಡವರು ಏನೋ ಮಡಿವಾಳೇಶಾ, ಎಂತಹ ತುಂಟತನದ ಬುದ್ಧಿಯೋ ನಿಂದು ಪಾಪ ಚರಮೂರ್ತಿಗಳ ಲಿಂಗವನ್ನು ಅಂಗೈಯಿಂದ ಸೆಳೆದುಕೊಂಡು ಬಂದೆಯಲ್ಲೋ ಎಂದು ಕೈಯಲ್ಲಿರುವ ಬೆತ್ತವನ್ನು ಮೇಲೆತ್ತಿ ಹೊಡೆಯುವವರಂತೆ ಹೆದರಿಕೆ

ಹಾಕುತ್ತ ಮುಂದಾದರು ಆದರೆ ಲಿಂಗವನ್ನು ಅಪಹರಿಸಿದ ಮಡಿವಾಳೇಶಗೆ ಇನ್ನು ಬಾಬಾ ಅವರು ತನ್ನನ್ನು ಬೆತ್ತದಿಂದ ಹೊಡೆಯುತ್ತಾರೆ ಎಂದು ತಿಳಿದು ಅಂಜಿ ನಾಗಲಾಂಬಿಕೆಯ ಬಳಿಗೆ ಓಡಿ ಬಂದು ಅವಳ ಹಿಂದೆ ಅಡಗಿಕೊಂಡನು. ಆಗಲೂ ಪ್ರಭುಸಾಮಿಗಳು ಏ ಮಡಿವಾಳೇಶಾ ಕೊಡು ಬೇಗ ಚರಮೂರ್ತಿಗಳ ಲಿಂಗವನ್ನು ಎಂದು ಬೆದರಿಸುತ್ತ ಮುಂದಾದರು. ನಾಗಲಾಂಬಾ ತಾಯಿಯ ಬೆನ್ನ ಹಿಂದೆ ಅಡಗಿದ ಮಡಿವಾಳೇಶನನ್ನು ಹುಡುಕುತ್ತ ಕೊನೆಗೊಮ್ಮೆ ನಾಗಮ್ಮನ ಹಿಂದೆ ಅಡಗಿರುವ ಮಡಿವಾಳೇಶನು ಪ್ರಭುಸ್ವಾಮಿಗಳ ಕೈಗೆ ಸಿಕ್ಕನು. ಆಗ ಪ್ರಭುಸ್ವಾಮಿಗಳು ಸಿಟ್ಟು ಮಾಡುತ್ತ ಜಂಗಮ ಚರಮೂರ್ತಿಗಳ ಲಿಂಗವನ್ನು ಕಸಿದುಕೊಂಡು ಅವರ ಪೂಜೆಗೆ ವಿಘ್ನವನ್ನುಂಟು ಮಾಡಬಾರದಪ್ಪಾ ಎಲ್ಲಿ ಲಿಂಗವದು ಕೊಟ್ಟು ಬಿಡು ಎಂದು ರಮಿಸಹತ್ತಿದರು. ಆಗ ಲಿಂಗವನ್ನು ಕನ್ನು ತಂದಿರಬೇಕೆಂದು ನಾಗಲಾಂಬೆಯು ಮಮತೆಯಿಂದ ರಮಿಸುತ್ತ ಮಗು ಮಡಿವಾಳೇಶಾ, ನಾನು ನಿನಗೆ ಕಲ್ಲುಸಕ್ಕರೆ ಹಣ್ಣು ಕೊಡುತ್ತೇನೆ ಅವರ ಲಿಂಗವನ್ನು ತೀವ್ರ ಕರುಣಿಸಿ ಬಿಡು ಕಂದಾ ಎಂದು ಹೇಳಿದಳು.

ಆಗ ಮರಿದೇವರಾದ ಮಡಿವಾಳೇಶನು ಅಮ್ಮಾ ಆ ಚರಮೂರ್ತಿಗಳು ಪೂಜಿಸುವ ಲಿಂಗವು ಜಗವನ್ನೆಲ್ಲ ತುಂಬಿರುವದೆಂದ ಮೇಲೆ ಇಲ್ಲಿ ನನ್ನಲ್ಲಿ ಇರುವಂತೆ ಈಗ ಅವರ ಬಳಿಯಲ್ಲಿ ಲಿಂಗ ಉಂಟಮ್ಮಾ ಎಂದು ನುಡಿದನು. ಮೇಲಾಗಿ ಅವರ ಲಿಂಗವನ್ನು ನಾನೇಕೆ ತರಲಿ ಅವರ ಎಡದೊಡೆಯ ಮೇಲೆ ಇದೆಯೋ ಇಲ್ಲವೊ ಬೇಕಾದರೆ ಹೋಗಿ ನೋಡಿ ಬಾಬಾ ಎಂದು ಅಭಿಮಾನದಿಂದ ನುಡಿದನು. ಅವನ ಮಾತಿನಂತೆ ಪ್ರಭು ಸ್ವಾಮಿಗಳು ನಾಗಲಾಂಬೆಯು ಪೂಜಾ ಮಂದಿರದಲ್ಲಿ ಬಂದು ನೋಡಲಾಗಿ ಜಂಗಮ ಚರಮೂರ್ತಿಗಳ ತೊಡೆಯ ಮೇಲಿನ ಬಟ್ಟೆಯಲ್ಲಿ ಲಿಂಗವು ವಿರಾಜಮಾನವಾಗಿರುವದನ್ನು ಕಂಡು ಪ್ರಭುಸ್ವಾಮಿಗಳು, ನಾಗಮ್ಮ ಹಾಗೂ ವಿರಕ್ತ ಚರಮೂರ್ತಿಗಳಿಗೆ ಆಶ್ಚರ್ಯದೊಡನೆ ಈತನೊಬ್ಬ ಮಹಿಮಾಶಾಲಿ ಪುರುಷನೆಂದು ಹೆಮ್ಮೆಯು ಉಪಾಗ್ರ ಚಿಮ್ಮಿದವು ಸ್ವಾಮಿಗಳ ಆನಂದಕ್ಕಂತೂ ಸೀಮೆ ಇಲ್ಲದಂತಾಗಿ ಮಡಿವಾಳೇಶನನ್ನು ಬಿಗಿದಪ್ಪಿಕೊಂಡು ಸಂತೋಷಪಟ್ಟರು.

---

೧೪ ನೇ ಪ್ರಕರಣ

ಮಡಿವಾಳೇಶನನ್ನು ಸಂಸ್ಕೃತ ಅಭ್ಯಾಸಕ್ಕಾಗಿ ಕಾಶಿಗೆ ಕಳುಹಿಸುವ ವಿಚಾರ ಮಾಡಿದ್ದು

ಒಂದು ದಿನ ಮಡಿವಾಳೇಶ ಮರಿದೇವರ ಗುರುಗಳಾದ ವೆಂಗಿ ಚನ್ನ ಬಸವ ಶಾಸ್ತ್ರಿಗಳ ಹಾಗೂ ಕೊಳ್ಳಿ ರಂಗಾಚಾರ್ಯರು ಮರಿದೇವರು ಸಕಲ ವಿದ್ಯೆಗಳಲ್ಲಿ ಪಾರಂಗತನಾಗಿರುವದನ್ನು ಅರಿತು ಹಿಗ್ಗಿನಿಂದ ಪ್ರಭುಸ್ವಾಮಿ ಗಳನ್ನು ಕಂಡು ಭಕ್ತಿಯಿಂದ ನಮಸ್ಕರಿಸಿ, ಅಪ್ಪನವರೇ ನಾವು ನಮ್ಮ ಕರ್ತವ್ಯದಂತೆ, ನಿಮಿತ್ಯ ಮಾತ್ರರಾಗಿ ಮರಿದೇವರಿಗೆ ವಿದ್ಯಾಬುದ್ಧಿಗಳನ್ನಿತ್ತು ದಾಯಿತು. ಆದರೆ ನಾವು ಹೇಳುವ ಪಾಂಡಿತ್ಯದ ಹತ್ತು ಪಾಲು ಹೆಚ್ಚಿನ ಪಾಂಡಿತ್ಯ ಪ್ರಭೆಯು ಮರಿದೇವರಲ್ಲಿ ದೈವದತ್ತವಾಗಿ ಬಂದಿದೆ ಎಂದು ಬೇರೆ ಹೇಳಬೇಕಾಗಿಲ್ಲ. ನವಲ್ಲಿರುವ ಸಕಲ ಶಾಸ್ತ್ರಗಳ, ನ್ಯಾಯ ಮೀಮಾಂಸ, ಧರ್ಮ ಸಂಸ್ಕೃತಿಯ ತಿರುಳು, ಎಲ್ಲವನ್ನು ತಿಳಿದಷ್ಟು ಹೇಳಿಕೊಟ್ಟದ್ದಾ ಯಿತು ನ್ಯಾಯ ಶಾಸ್ತ್ರದಲ್ಲಿ, ಸಾಹಿತ್ಯರಂಗದಲ್ಲಿ, ವೇದಾಂತ, ವ್ಯಾಕರಣ ಸಿದ್ಧಿಯಲ್ಲಿ ನಮಗಿಂತಲೂ ನೂರು ಪಾಲು ಮುಂದುವರೆದ ಮರಿದೇವರನ್ನು ಹೆಚ್ಚಿನ ಸಂಸ್ಕೃತ ಅಭ್ಯಾಸಕ್ಕೆ ಕಾಶಿಗೆ ಕಳುಹಿಸುವ ಮನಸ್ಸು ಮಾಡ ಬೇಕೆಂದು ಬಿನ್ನವಿಸಿಕೊಂಡರು. ಬಳಿಕ ರಂಗಾಚಾರ್ಯರು ಮುಂದಾಗಿ ಅಪ್ಪಾಜಿ ಯವರೆ ಮಡಿವಾಳೇಶಾ ಮರಿದೇವರು ನಮ್ಮಂತೆ ಸಾಮಾನ್ಯ ಮಾನವರಲ್ಲ. ಅವತಾರಿಕ ಪುರುಷೋತ್ತಮ ಅಂತಹ ದೇವಾಂಶ ಬಾಲಕನಿಗೆ ವಿದ್ಯೆ ಹೇಳಿ ಕೊಡುವಷ್ಟು ಧೈರ್ಯವಾಗಲಿ ಬುದ್ಧಿಯಾಗಲಿ ನಮ್ಮಲ್ಲಿ ಇಲ್ಲವೆಂದು ಧಾರಾಳ ವಾಗಿ ಹೇಳಬಹುದು. ಆದ ಕಾರಣ, ಕಾಶಿ ಸುಕ್ಷೇತ್ರದ ಸಂಸ್ಕೃತ ಪಂಡಿತರ ಬಳಿಯಲ್ಲಿ ಮರಿದೇವರ ವಿದ್ಯಾರ್ಜನೆ ಸಾಗುವದಾಗಬೇಕೆಂದು ಬೇಡಿಕೊಳ್ಳು ತ್ತೇವೆ ಎಂದು ಕರ ಜೋಡಿಸಿದರು.

ಆಗ ಗುರುಗಳಾದ ಪ್ರಭುಸ್ವಾಮಿಗಳು ಈ ವಿಷಯವನ್ನು ದೊರೆ ಗಳಾದ ಮಲ್ಲಸರ್ಜರನ್ನು ವಿಚಾರಿಸುವದು ನಮ್ಮ ಧರ್ಮ ಅಲ್ಲದೆ ಬಾಲಕ ಮಡಿವಾಳೇಶನ ಮನದುದ್ದೇಶವನ್ನಷ್ಟು ತಿಳಿದು ಮುಂದಿನ ಏರ್ಪಾಡು

ಮಾಡೋಣ ಎಂದು ಶಾಸ್ತ್ರಿಗಳನ್ನು ಆಚಾರ್ಯರನ್ನು ಸಮಾಧಾನಪಡಿಸಿ ಬೀಳ್ಕೊಟ್ಟರು.

ಆಗ ಸ್ವಲ್ಪ ಸಮಯದ ನಂತರ ಮಲ್ಲಸರ್ಜ ದೊರೆಯು ಪ್ರಭುಗಳ ದರ್ಶನಕ್ಕಾಗಿ ಕಲ್ಮಠಕ್ಕೆ ಬಂದು ಸ್ವಾಮಿಗಳ ಪಾದಕ್ಕೆ ನಮಸ್ಕರಿಸಿ ಕುಶಲ ವಿಷಯದ ಮಾತಿನತ್ತ ತಿರುಗುವವನಾದನು. ಆಗ ಗುರುಗಳು ತಮ್ಮ ಹಾಗು ಶಾಸ್ತ್ರಿಗಳ ಮತ್ತು ರಂಗಾಚಾರ್ಯರವಿಚಾರವನ್ನು ತಿಳಿಸುತ್ತ ಮರಿದೇವರು ಸಂಸ್ಕೃತ ಪಾಂಡಿತ್ಯ ಪ್ರಭೆಯಿಂದ ಪರಿಶೋಭಿಸುವಂತಾದರೆ ಕಿತ್ತೂರ ನಾಡಿನ ಕೀರ್ತಿ ಕಲ್ಮಠದ ಗುರು ಪರಂಪರೆಯ ಕೀರ್ತಿ ಇಡೀ ಕರ್ನಾಟಕವನ್ನೇ ಅಷ್ಟೇ ಏಕೆ, ಇಡೀ ಹಿಂದೂಸ್ತಾನವನ್ನೇ ಬೆಳಗಬಲ್ಲದೆಂದು ತಿಳಿಸಿದರು. ಆಗ ಮಲ್ಲಸರ್ಜ ದೊರೆ ಆನಂದದ ತುತ್ತ ತುದಿಯನ್ನೇ ಮುಟ್ಟಿ ಬೊಕ್ಕಸ ಬರಿದಾಗುವಷ್ಟು ಖರ್ಚು ವೆಚ್ಚಗಳು ಕಾಣಿಸಿಕೊಂಡರೂ ನನ್ನನಾಡಿನ ಗುರುಮೂರ್ತಿಗಳೊಬ್ಬರು ಸಂಸ್ಕೃತ ಪಂಡಿತರೆನಿಸುವದು ನನಗೂ ಹೆಮ್ಮೆಯ ವಿಷಯವೆಂದು ಆದಷ್ಟು ತೀವ್ರವೆ ಮರಿದೇವರನ್ನು ಕಾಶಿಗೆ ಕಳುಹಿಸುವ ಏರ್ಪಾಡು ಮಾಡುವದಾಗಿ ವಚನವಿತ್ತು ಪೂಜ್ಯ ಸ್ವಾಮಿಗಳ ಪಾದಕ್ಕೆ ನಮಸ್ಕರಿಸುತ್ತ, ಅಪ್ಪಾಜಿಯವರೆ, ತನ್ನ ಅರಸಿಯರ ಮರಿದೇವರ ದರ್ಶನಕ್ಕಾಗಿ ಹಾತೊರೆದಿರುವರು. ಕಾರಣ ಅದು ಬಾಪೂನಿಂದ ಜರುಗಿದ ಘಟನೆಯನ್ನು ಮನಸ್ಸಿನಲ್ಲಿ ಹಿಡಿಯದೆ ಮರಿದೇವರನ್ನು ತನ್ನೊಡನೆ ಅರಮನೆಗೆ ಪ್ರಸಾದಕ್ಕೆ ಕರೆದುಕೊಂಡು ಬರುವದಾಗಬೇಕೆಂದು ಬೇಡಿಕೊಂಡನು.

ದೊರೆಗಳ ಮಾತಿಗೆ ಸ್ವಾಮಿಗಳು ಕೊಂಚ ಸೆಡುವಿನಿಂದ, ಏಕೋ ಏನೋ ದುರ್ದೈವದಿಂದ ಮರಿದೇವರನ್ನು ಕಂಡರೆ ಬಾಪೂವಿಗೆ ಆಗುವದಿಲ್ಲ ಬಾಪೂವನ್ನು ಕಂಡರೆ ಮುಡಿವಾಳೇಶನಿಗೆ ಆಗಿ ಬರುವದಿಲ್ಲ ಹೋಗಲಿ ಬಿಡು. ಹೇಗೂ ನಾವು ರುದ್ರಮ್ಮ' ಚನ್ನಮ್ಮ ಅರಸಿಯರಿಗೆ ಕರುಣ ಪ್ರಸಾದ ಕಳುಹಿಸಿ ಬರುವ ವಾಡಿಕೆಯಿದ್ದೇ ಇದೆಯಲ್ಲ. ಮರಿದೇವರು ರಾಜವಾಡೇಗೆ ಬರುವದೇ ಬೇಡವೆಂದರು ಬಾಲಕನ ಬಾಲಬುದ್ಧಿಯನ್ನು ಮರೆತು ತನ್ನ ಅರಸಿಯರಿಗಾಗಿ ಗುರುಗಳು ಕೃಪೆದೋರಬೇಕು ಎಂದು ದೊರೆ ಬೇಡಿಕೊಳ್ಳಹತ್ತಿದನು ಬಳಿಕ ಅನಿವಾರ್ಯವೆಂದು ರಾಜಗುರುಗಳಾದ ಪ್ರಭುಸ್ವಾಮಿಗಳು

ಆಗಬಹುದೆಂದು ಅಪ್ಪಣೆ ಕೊಟ್ಟು ಮಲ್ಲಸರ್ಜ ದೊರೆಯನ್ನು ಬೀಳ್ಕೊಟ್ಟರು. ಆದರೆ ಹಟವಾದಿ ಮರಿದೇವರನ್ನು ಅರಮನೆಗೆ ಕರೆದೊಯ್ಯುವರು ಅಷ್ಟು ಸುಲಭ ಸಾಧ್ಯವಾಗಿರಲಿಲ್ಲ. ಇದನ್ನರಿತ ಪ್ರಭು ಸ್ವಾಮಿಗಳನ್ನು ಈ ಕಾರ್ಯವು ನಾಗಲಾಂಬಿಕೆಯಿಂದ ಯಶಸ್ವಿಯಾಗುವದೆಂದು ಮನಗಂಡು, ಈ ಕಾರ್ಯ ಪೂರೈಸಲು ಅವಳಿಗೆ ಅಪ್ಪಣೆ ಮಾಡಿದರು.

ಬಳಿಕ ನಾಗಮ್ಮನು ಮರಿದೇವರನ್ನು ನಯವಾಗಿ ಹಿತವಚನಗಳಿಂದ ರಮಿಸುತ್ತ ಅಪ್ಪಾ ನನ್ನ ಮಾತೊಂದು ನಡೆಯಿಸುವ ವಚನ ಕೊಡು ಮಗು ಎಂದು ಮಮತೆಯ ಕರವನ್ನು ಮುಂದೆ ಮಾಡಿದಳು. ಆಗ ಮಡಿವಾಳೇಶನು ಹೆತ್ತೊಡಲ ಹಿತನೀಡುವ ಅಮ್ಮನ ಮಾತು ನಡೆಯಿಸದಷ್ಟು ಅವಿವೇಕಿಯಾಗಲಾರೆ ಹೇಳಮ್ಮಾ ಎಂದು ಕೈಯಿಟ್ಟನು. ಬಳಿಕ ನಾಗಲಾಂಬಿಕೆಯು ಮತ್ತಷ್ಟು ವಿನಯದಿಂದ ಮಗು ನಾಳೆಯಿಂದ ನೀನು ಸ್ವಾಮಿಗಳ ಸಂಗಡ ಅರಮನೆಗೆ ಊಟಕ್ಕೆ ಹೋಗಬೇಕಪ್ಪಾ, ರುದ್ರಮ್ಮ ಚನ್ನಮ್ಮ ರಾಣಿಯರು ನಿನ್ನ ದರ್ಶನಕ್ಕಾಗಿ ಕಂಗೆಟ್ಟು ಕಂಗಾಲಾಗಿರುವರಂತೆ, ಮೊಲೆ ಹಾಲಿತ್ತು ಜೋಪಾನ ಮಾಡಿದ ರುದ್ರಮ್ಮ ತಾಯಿಯ ಮನಶ್ಶಾಂತಿಗಾಗಿ ನಿನ್ನ ಹಟವನ್ನು ಮರೆತು ಅರಮನೆಗೆ ಹೋಗಲೇಬೇಕು ಕಂದಾ, ರುದ್ರಪ್ಪ ಚನ್ನಪ್ಪರನ್ನು ಆನಂದಗೊಳಿಸುವದಕ್ಕೆ ನಿನ್ನ ಜಿದ್ದು ಧ್ಯಾವಗಳನ್ನು ಮರೆಯಬೇಕು ಕಂದಾ. ದೊರೆಗಳ ಮನಸ್ಸಿನ ತೃಪ್ತಿಗಾಗಿ ದೊರೆ ಮಗನ ಮಾತನ್ನು ಮನದಲ್ಲಿ ಹಿಡಿಯಬೇಡ ಕಂದಾ. ಗುರುಗಳಾದ ಪ್ರಭುಸ್ವಾಮಿಗಳು ನಿನ್ನನ್ನು ಅರಮನೆಗೆ ಕರೆತರುವದಾಗಿ ದೊರೆ ಮಲ್ಲಸರ್ಜನಿಗೆ ವಚನವಿತ್ತಿದ್ದಾರೆ. ಅವರ ವಚನವನ್ನು ಪೂರೈಸುವದಕ್ಕೆ ದೊರೆ ಮಗನ ಮೇಲಿರುವ ವೈಮನಸ್ಸು ತೊಡೆದು ಹಾಕು ಕಂದಾ ಎಲ್ಲದಕ್ಕೂ ಮಿಗಿಲಾಗಿ ಕಲ್ಮಠದ ರಾಜಗುರು ಪರಂಪರೆಯನ್ನು ಕಾಯ್ದುಕೊಳ್ಳುವದಕ್ಕಾಗಿ ಈ ಕಿತ್ತೂರ ನಾಡಿನ ಉತ್ತೀರ್ಣತೆಗಾಗಿ, ನೀನು ಈ ಕಾರ್ಯವನ್ನು ನಡೆಸಿಕೊಡಲೇಬೇಕು ಎಂದು ಮಾತೃವಾತ್ಸಲ್ಯದಿಂದ ಹೇಳಿದಳು.

ಆಗ ಮಡಿವಾಳೇಶನು ಮಾತೆಯು ಹಿತ ನೀಡಿದ ರುದ್ರಮ್ಮ ರಾಣಿಗಾಗಿ, ಸಕಲ ಶಸ್ತ್ರಾಸ್ತ್ರ ವಿದ್ಯಾನಿಪುಣನನ್ನಾಗಿಸಿದ ಧೀರಮಾತೆ ಚನ್ನಮ್ಮ ಕಿರಿಯರಸಿಗಾಗಿ, ಎಲ್ಲದಕ್ಕೂ ಮಿಗಿಲಾಗಿ ಗುರುವಚನ ಪಾಲನೆಗಾಗಿ

ಅರಮನೆಯ ಊಟಕ್ಕೆ ಹೋಗಲು ಒಪ್ಪಿಕೊಂಡನು ಬಳಿಕ ಸಾಗಾಂಬಿಯಿಂದ ಮಡಿವಾಳೇಶ ಒಪ್ಪಿದ ವಿಷಯವನ್ನರಿತ ಪ್ರಭು ಸ್ವಾಮಿಗಳು ಸಂತೋಷದ ಉಸಿರೆಳೆದು ಲಿಂಗಪೂಜೆಯ ವೇಳೆಯಾದ್ದರಿಂದ ಸ್ನಾನಕ್ಕಾಗಿ ಹೊರಟು ಹೋದರು.

....

೧೬ ನೇ ಪ್ರಕರಣ

ಶಾಪವಾಣಿಯಿಂದ ನುಡಿದದ್ದು

ಪ್ರಭು ಸ್ವಾಮಿಗಳು ಮಲ್ಲಸರ್ಜ ದೊರೆಗೆ ಮಾತು ಕೊಟ್ಟಂತೆ ಮರಿದೇವರೆನಿಸಿದ ಮಡಿವಾಳೇಶನನ್ನು ಕರೆದುಕೊಂಡು ನಿತ್ಯವೂ ಅರಮನೆಗೆ ಹೋಗಿ ರಾಣಿಯರಿಗೆ ಕರುಣ ಪ್ರಸಾದ ಕೊಟ್ಟು ಭೋಜನ ತೀರಿಸಿಕೊಂಡು ಬರುವದು ಯಥಾ ಪ್ರಕಾರ ಸಾಂಗವಾಯಿತು. ಮರಿದೇವರನ್ನು ಅವಮಾನ ಪಡಿಸಬೇಕೆಂಬ ಹವಣಿಕೆಯಲ್ಲಿ ಸದಾ ಆ ಸಂದರ್ಭವನ್ನು ಕಾಯುತ್ತಿದ್ದ ಶಿವಲಿಂಗ ರುದ್ರಸರ್ಜನಲ್ಲಿ ತನಗೆ ವಿನಾಶ ಸಮೀಪಿಸಬಹುದೆಂಬ ಅರಿವಿಲ್ಲದೆ ಮದಾಂಧತನದಿಂದ ವರ್ತಿಸುವ ದುರ್ಬುದ್ಧಿ ಹುಟ್ಟಿಕೊಂಡಿತು. ಅಂತೇ ಯಾವದೊಂದು ಹಂಚಿಕೆಯಿಂದ ಮಡಿವಾಳೇಶನನ್ನು ಅವಮಾನಗೊಳಿಸಬೇಕೆಂದು ಸೇಡಿನ ಛಲ ತೊಟ್ಟನು.

ಒಂದು ದಿನ ಪ್ರಭುಸ್ವಾಮಿಗಳು ಅರಮನೆಗೆ ತಮ್ಮ ಸಂಗಡ ಮರಿದೇವರನ್ನು ಕರೆದುಕೊಂಡು ಬಂದಾಗ ಅವರನ್ನು ಒಳಗೆ ಬಿಡದೇ ರಾಜವಾಯ ಬಾಗಿಲನ್ನು ಹಾಕಿ ಹೊರಗೆ ನಿಲ್ಲಿಸುವಂತೆ ಅವಮಾನಕರ ಕಾರ್ಯಗೈದನು. ಈ ಕಲಂಕವನ್ನರಿತ ಮಡಿವಾಳೇಶನು ಮುಂದೆ ಹೋಗುತ್ತಿರುವ ಪ್ರಭು ಸ್ವಾಮಿಗಳಿಗೆ ಬನ್ನಿ ಬಾಬಾ ಮರಳಿ ಮಠಕ್ಕೆ ಹೋಗೋಣ, ರಾಜವಾಡೆಯ ಬಾಗಿಲವೇ ಮುಚ್ಚಿತೆಂದ ಮೇಲೆ ಇಲ್ಲಿ ನಮ್ಮಗಳ ಕೆಲಸವೇನು ಎಂದು ತಟ್ಟನೇ ನುಡಿದು ಬಿಟ್ಟನು.

ಆಗಮುಂದಾಗಿ ಹೋಗುತ್ತಿರುವ ಪ್ರಭುಸ್ವಾಮಿಗಳು ಸಹಿತ ಮರಿದೇವರ ನುಡಿಯಲ್ಲಿರುವ ಕಠೋರತೆಯನ್ನು ಅರಿತು ಅಳುಕಿದರು. ಇದೇ ಸಮಯಕ್ಕೆ ಆಗಮಿಸಿದ ಮಲ್ಲಸರ್ಜ ದೊರೆ ಮಗನಿಂದ ಘಟಿಸಿದ ಅನುಚಿತ

ಕಾರ್ಯದಿಂದಾಗಿ ಬಹಳ ನೊಂದನು. ಅಲ್ಲದೆ ನಡೆದು, ಹೋದ ಪ್ರಮಾದ ಮರೆತು, ನಮ್ಮನ್ನು ಕ್ಷಮಿಸಿ, ಉದ್ಧರಿಸಬೇಕೆಂದು ಪ್ರಭುಗಳ ಅಡಿ ಹಿಡಿದು ದೈನ್ಯವಾಗಿ ಬೇಡಿಕೊಳ್ಳ ಹತ್ತಿದನು.

ಆಗ ಮಡಿವಾಳೇಶನು ಮುಂದಾಗುತ್ತ ದೊರೆಯೇ ನಿನ್ನ ಮನಿಗೆ ನಾನು ದೊರೆ ಮಗನೆಂಬ ಅಹಂಕಾರ ತುಂಬಿಕೊಂಡಿದೆ ಎಂದು ನಿಷ್ಠುರವಾಗಿ ನುಡಿಹತ್ತಿದನು. ಆಗ ಪ್ರಭುಸ್ವಾಮಿಗಳು ಮಡಿವಾಳೇಶನ ನುಡಿಯನ್ನು ಪುಷ್ಟೀಕರಿಸುತ್ತ ದೊರೆಯೇ ಮರಿದೇವರನ್ನು ಒತ್ತಾಯದಿಂದ ಅಪಮಾನವೆಂದು ತಿಳಿದೆಯಾ? ಇಂದಿನಿಂದ ನಿನ್ನ ಅರಮನೆಯು ನಮ್ಮ ಪಾಡಿಗೆ ಸೆರೆಮನೆಯೇ ಸರಿ. ಇನ್ನೊಂದು ಈ ಅರಮನೆಯತ್ತ ನಾವು ಹೊರಳಿ ಸಹ ನೋಡಲಾರೆವು. ಮರಿದೇವರಿಗಾದ ಅಪಮಾನ ನಮ್ಮದಲ್ಲವೇನು ? ಬಾ ಮಡಿವಾಳೇಶಾ, ಈ ದೊರೆಯು ಕೂಳು ನಾಯಿ ನರಿಗಳು ತಿನ್ನಲಿ ಎಂದು ಸಿಟ್ಟಿನಿಂದ ಕಲ್ಮಠಕ್ಕೆ ಹೊರಟು ಹೋದರು.

ನಡೆದು ಹೋದ ಘೋರ ಘಟನೆಯಿಂದ ರುದ್ರಮ್ಮ ರಾಣಿಯರ ಮನಸ್ಸು ಬಹಳ ನೊಂದಿತು. ರುದ್ರಮ್ಮ ಸಂಪೂರ್ಣ ಇಳಿದು ಹೋದಳಲ್ಲದೆ, ಕ್ಷಣದಲ್ಲಿ ಮನಸ್ಸಿನ ಆಘಾತದಿಂದಾಗಿ ಮೂರ್ಛಿತಳಾದಳು. ಆಗ ಚನ್ನಮ್ಮನ ಉಪಚಾರದಿಂದ ಕೆಲವು ಸಮಯದಲ್ಲಿ ಎಚ್ಚತ್ತು ದುಃಖದಿಂದ ಪತಿಯ ಮುಖವನ್ನು, ತಂಗಿ ಚನ್ನಮ್ಮನ ಮುಖವನ್ನು ನೆಟ್ಟದೃಷ್ಟಿಯಿಂದ ನೋಡುತ್ತ ಪ್ರಭೂ ಮರಿದೇವರ ಶಾಪವಾಣಿಯಂತೆ ಈ ಅರಮನೆ. ಈ ಕಿತ್ತೂರ ನಾಡು. ಈ ವೈಭವ ಹೇಳ ಹೆಸರಿಲ್ಲದಂತೆ ಸರಿದು ಇಲ್ಲೇನಿದೆ ಎನ್ನುವಂತಾಗುವದೇ ಖಂತವೆಂದು ನನ್ನ ಮನಸ್ಸು ವಿಲಿವಿಲಿ ಒದ್ದಾಡುತ್ತಿದೆ ಇನ್ನು ಮೇಲೆ ಈ ರಾಜ್ಯಕ್ಕೆ ಕೇಡು ಕಾಯ್ದು ಬರುವದೆಂಬುದನ್ನು ಲಕ್ಷ್ಯದಲ್ಲಿಟ್ಟುಕೊಳ್ಳಿ ನನ್ನ ದೊರೆಯೇ ಎಂದು ದುಃಖಿಸಹತ್ತಿದಳು.

ರುದ್ರಮ್ಮ ರಾಣಿಯರು ವ್ಯಸನದಿಂದ ಹಾಸಿಗೆ ಹಿಡಿದರು. ಮಗನು ಮಾಡಿದ ಘನ ಅಪರಾಧದಿಂದ ರುದ್ರಮ್ಮ ಚನ್ನಮ್ಮರು ತುಂಬಾ ಗಾಸಿಯಾದರು ಮರಿದೇವರ ಮಾತು ಹುಸಿಯಲ್ಲವೆಂದು ತಿಳಿದುಕೊಂಡು ಅವರು ವ್ಯಸನದಿಂದ ಉಸಿರುಗರೆದು ಕಿತ್ತೂರ ನಾಡಿನ ಗತಿ ಯಾವ

ಸ್ಥಿತಿಗೆ ಮುಟ್ಟುವದೋ ಏನೋ ಅವತಾರಿ ಪುರುಷನನ್ನು ಅವಮಾನಿಸಿ ನಾವು ಅವಮಾನದ ಹೊರೆಯನ್ನೇ ಹೊತ್ತುಕೊಂಡಂತಾಯಿತೆಂದು ಚಿಂತಿಸಹತ್ತಿದರು. ಬಳಿಕ ಕೊನೆಗೊಂಡು ನಿರ್ಧಾರಕ್ಕೆ ಬಂದು ದೊರೆಗಳ ಸಮ್ಮುಖದಲ್ಲಿ ಮರಿದೇವರ ಹಾಗೂ ಪ್ರಭುಸ್ವಾಮಿಗಳಿಂದ ಕರುಣ ಪ್ರಸಾದ ದೊರೆಯುವವರೆಗೆ ಅನ್ನ ನೀರು ಮುಟ್ಟುವದಿಲ್ಲವೆಂದು ಹಟ ದಿಂದ ಪ್ರತಿಜ್ಞೆಯನ್ನು ಮಾಡಿದರು. ಅರಮನೆಯ ತುಂಬೆಲ್ಲ ದುಃಖ ಆವರಿಸಿ, ಎಲ್ಲರ ಜೀವನವೇ ಅಸ್ತವ್ಯಸ್ತಗೊಂಡು ವಿಕಾರಗೊಂಡ ಸ್ಥಿತಿಯಲ್ಲಿ ಕಾಣಹತ್ತಿತು. ಹೀಗಾಗಿ ಮಲ್ಲಸರ್ಜ ದೊರೆಯೂ ಒಂದು ತರಹದ ವೇದನೆಯಿಂದ ಬಳಲಹತ್ತಿದನು. ಕೊನೆಗೆ ಪ್ರಭು ಸ್ವಾಮಿಗಳನ್ನು ಕಂಡು ರಾಣಿಯರ ದುಃಸ್ಥಿತಿಯನ್ನು ಅರಿಕೆ ಮಾಡಿಕೊಂಡು ಅವರ ಮನಸ್ಸನ್ನು ಅರಮನೆಯತ್ತ ತಿರುಗಿಸಬೇಕೆಂಬ ಬಲವಾದ ಆಶೆಯಿಂದ ಪ್ರವಾಸಿ ಗುರು ಸಿದ್ದಪ್ಪನನ್ನೂ, ದಂಡನಾಯಕ ರುದ್ರನಾಯಕನನ್ನೂ ; ಶೆಟ್ಟರ ಶಿವ ಬಸಪ್ಪನನ್ನೂ, ಸಾಹುಕಾರ ಸಂಗಪ್ಪನನ್ನೂ, ಸುಭೇದಾರ ಲಿಂಗಪ್ಪನನ್ನೂ ಕರೆದುಕೊಂಡು ಪ್ರಭುಸ್ವಾಮಿಗಳ ಸನ್ನಿಧಿಗೆ ಬಂದು ಅರಮನೆಯ ದುಃಸ್ಥಿತಿ ಯನ್ನು ಅರಸಿಯರ ಮನದಾಶೆಯನ್ನು ವಿವರಿಸಿ ನಡೆದು ಹೋದ ಅಪ ರಾಧವನ್ನು ಮನ್ನಿಸಿ, ಅರಮನೆಗೆ ದಯಮಾಡಿಸಲು ಭಿನ್ನವಿಸಿಕೊಂಡನು.

ಆಗ ಪ್ರಭುಸ್ವಾಮಿಗಳು ಅಯ್ಯಾ ದೊರೆಯೇ ನಮ್ಮಂತವರನ್ನು ಭಿಕ್ಷುಕರಂತೆ ಅವಮಾನಪಡಿಸಿ ಅಧಿಕಾರ ಮದಾಂಧತೆಯನ್ನು ಸಾರ್ಥಕ ಪಡಿಸಿಕೊಳ್ಳುವದು ನಿಮ್ಮ ದೊರೆ ಪಟ್ಟಕೊಂದು ಭೂಷಣವಾಗಿದೆ ಎಂದ ಮೇಲೆ ನಿಮ್ಮಿಂದ ಅಪಮಾನ ಹೊಂದುವದು ಬೇಡಾ ; ನಿಮ್ಮ ಸಹವಾಸ ವಂತೂ ಮೊದಲೇ ಬೇಡಾ ಹೊರಟು ಹೋಗಿ ಎಂದು ಗಂಭೀರವಾಗಿ ಮುಖ ತಿರುಗಿಸಿದರು.

ಆಗಲೂ ದೊರೆ ಮಲ್ಲಸರ್ಜನು ನನ್ನ ಮಗನು ಶತಾಪರಾಧಗೈದ ಶರ್ತಮೂರ್ಖನಾಗಿದ್ದಾನೆ, ಮಹಾತ್ಮರನ್ನು ತಡೆದು ನಿಲ್ಲಿಸಿ ತೀರಿಸಲಾರದ ದ್ರೋಹವನ್ನು ಆಮಂತ್ರಿಸಿಕೊಂಡಿದ್ದಾನೆ ತಂದೆ, ಬುದ್ಧಿ ಇಲ್ಲದ ಅವಿವೇಕಿ ಬಾಲಕನ ಆಚರಣೆಯನ್ನು ಮನ್ನಿಸುವ ಕೃಪೆಯಾಗಬೇಕು ಗುರುದೇವಾ, ಎಂದು ದುಃಖದಿಂದ ಪ್ರಭುಸ್ವಾಮಿಗಳ ಸನ್ನಿದಿಯಲ್ಲಿ ಭಿನ್ನವಿಸಿಕೊಳ್ಳ

ಹೆತ್ತಿದನು. ಪ್ರಮುಖರೆನಿಸಿ ಬಂದವರೆಲ್ಲೂ ಸ್ವಾಮಿಗಳ ಪಾದದೆಡೆಯಲ್ಲಿ ದೊರೆ ಮಗನ ಅಪರಾಧವನ್ನು ಕ್ಷಮಿಸಬೇಕೆಂದು ಪರಿಪರಿಯಿಂದ ಬೇಡಿಕೊಳ್ಳ ಹತ್ತಿದರು.

ಬಳಿಕ ಸ್ವಾಮಿಗಳು ಏನೆಂದರೂ ಜಾಪು ಸಾಹೇಬನ ಪುಣ್ಯ ಸರಿದುಹೋಯಿತು. ಮುರಿದೇವರ ವಾಕ್ಯದಂತೆ ದೊರೆಗಳ ತರುವಾಯ ಈ ಕಿತ್ತೂರ ರಾಜಲಕ್ಷ್ಮಿ ಪರರ ವಶವಾಗುವಳೆಂದೂ, ಈ ರಾಜವಾಡೆ ಮುಚ್ಚುವದೆಂದೂ ನಮ್ಮ ಮನೋದೇವತೆಯು ನಿಚ್ಚಳದ ಉತ್ತರ ನೀಡುತ್ತಿದ್ದಾಳೆ. ಹುಡುಗನ ಮಾತೆಂದು ನಾವು ಮನ್ನಿಸಿದರೂ ಶಿವನ ಸ್ವರೂಪವನ್ನೇ ಪಡೆದು ಈ ಭೂಮಿಯ ಅಜ್ಞಾನವನ್ನು ಹೊಡೆದೋಡಿಸಲು ಅವತಾರಗೊಂಡಿರುವ ಮುರಿದೇವರ ಮನಸ್ಸಿಗಾದ ವೇದನೆ ಸಾಮಾನ್ಯವಲ್ಲ ಒಮ್ಮೆ ಆತನ ಬಾಯಿಂದ ಬಂದ ನುಡಿ ಅದು ಸತ್ಯವಾಗಲೇಬೇಕು ಎಂದು ತಿಳಿಸಿ ಹೇಳಿದರು.

ಆಗ ಗುರುಸಿದ್ಧಪ್ಪನವರು ಬಾಲ ಬುದ್ಧಿಯಿಂದ ಆಗಿ ಹೋದ ಸಂಗತಿಯನ್ನು ಮರೆತು ರಾಣಿ ರುದ್ರಮ್ಮ ಚನ್ನಮ್ಮ ತಾಯಿಯವರ ಆಶೆಯಂತೆ ತಮ್ಮ ಕೃಪಾಶೀರ್ವಾದ ದೊರೆಯದೇ ಗತಿಯಿಲ್ಲ, ಹಿರಿ ಅರಸಿಯರಂತೂ ತಮ್ಮ ಕರುಣ ಪ್ರಸಾದ ದೊರೆಯದೇ ಅನ್ನ ನೀರು ಮುಟ್ಟುವದಿಲ್ಲವೆಂದು ಹಟ ಹಿಡಿದು ಕುಳಿತುಕೊಂಡಿದ್ದಾರೆ. ಅರಮನೆಯ ವಾತಾವರಣ ಸ್ಮಶಾನ ರೂಪ ಕಂಡಿತೆ ಎಂದು ಅರಮನೆಯನ್ನು ಆವರಿಸಿದ ದುಃಸ್ಥಿತಿಯನ್ನು ವಿವರಿಸಿದನು.

ಆಗ ಪ್ರಭುಸ್ವಾಮಿಗಳ ಮನಸ್ಸು ರುದ್ರಮ್ಮ, ಚನ್ನಮ್ಮರಿಗಾಗಿ ಮರುಗಿತು. ಅದರೊಡನೆ ಮುರಿದೇವರ ಮೇಲಿನ ಅಭಿಮಾನವೂ ಜಾಗ್ರತವಾಯಿತು. ಬಳಿಕ ನಾಯಕರೇ, ನಿಮಗಿಷ್ಟು ನಮ್ಮ ಮಠದ ಮೇಲೆ ಮುರಿದೇವರ ಮೇಲೆ ಪ್ರೀತಿ, ವಿಶ್ವಾಸ, ಶ್ರದ್ಧಾಭಕ್ತಿಗಳಿರುವದಾದರೆ ಮಠದಿಂದ ನಮ್ಮ ಕರುಣ ಪ್ರಸಾದ ಪಡೆದುಕೊಂಡು ಒಯ್ದು ರಾಣಿ ರುದ್ರಮ್ಮನವರಿಗೆ, ಚನ್ನಮ್ಮರಿಗೆ ಮುಟ್ಟಿಸುವ ವ್ಯವಸ್ಥೆ ಮಾಡಿಕೊಳ್ಳಬಹುದು, ಆದರೆ ನಾವು ಇನ್ನು ಅರಮನೆಯ ಬಾಗಿಲಿಗೆ ಬರುವದು ಅಸಾಧ್ಯವೆಂದು ಖಂಡಿತವಾಗಿ ನುಡಿದರು.

ಬಳಿಕ ದೊರೆ ಮಲ್ಲಸರ್ಜನು ಪರಿವಾರದ ಪ್ರಮುಖರು ಬೇರೊಂದು ಉಪಾಯದಂತೆ ಅರಮನೆಯಿಂದ ಕಲ್ಮಠದ ಸ್ವಾಮಿಗಳ ಸನ್ನಿಧಿಯವರೆಗೆ ಭೂಮಾರ್ಗವನ್ನು ನಿರ್ಮಿಸಿ ನಿತ್ಯ ನೇಮದಂತೆ ರುದ್ರಮ್ಮ ಚನ್ನಮ್ಮರಿಗೆ ಸ್ವಾಮಿಗಳ ಕರುಣ ಪ್ರಸಾದ ದೊರೆಯುವ ವ್ಯವಸ್ಥೆಯಾಯಿತು. ಅಲ್ಲದೆ ಬಾಪೂನನ್ನು ಕರೆದು–ಬಾಪೂ ಮರಿದೇವರ ಬಗ್ಗೆ ನಿನ್ನಿಂದ ಇನ್ನು ಮೇಲೆ ಯಾವದೆ ತರದ ಅವಿವೇಕತನದ ವರ್ತನೆ ಕಂಡು ಬಂದರೆ ಅಂದೇ ತಂದೆ ಮಗನ ಋಣ ತೀರಿತೆಂದು ತಿಳಿ ಎಂದು ಬಿರುಸಿನಿಂದ ಉತ್ತರಿಸಿ ಮಠದ ಮನ್ನಣೆ ಗೌರವಗಳಿಗಾಗಿ ಮಲ್ಲಸರ್ಜದೊರೆಯು ಏನನ್ನೂ ಮಾಡಲು ಸಿದ್ಧನಾಗಿ ಭಕ್ತಿಯಿಂದ ವರ್ತಿಸಹತ್ತಿದನು. ಹೀಗಾಗಿ ಅರಮನೆಯ ಹದಗೆಟ್ಟ ವಾತಾವರಣ ತಕ್ಕ ಮಟ್ಟಿಗೆ ಸುಧಾರಿಸಿತು.

ದೊರೆಗಳ ವ್ಯವಸ್ಥೆಯಂತೆ ಭೂಮಾರ್ಗದಿಂದ ರಾಣಿಯು ಕಲ್ಮಠಕ್ಕೆ ಬಂದು ಸ್ವಾಮಿಗಳಿಗೆ ಪ್ರಸಾದವನ್ನರ್ಪಿಸಿ ಕರುಣ ಪ್ರಸಾದ ಪಡೆದು ಮರಿದೇವರ ಆಶೀರ್ವಾದದಿಂದ ಹರ್ಷನ್ಮುಖಳಾಗಿ ಅರಮನೆಗೆ ತೆರಳುವ ಪರಿಪಾಠ ರೂಪಗೊಂಡಿತು. ಬರಬರುತ್ತ ಮರಿದೇವರು ಪ್ರಾಪ್ತ ವಯಸ್ಸಿಗೆ ಬಂದಂತೆ ತಮ್ಮ ತುಂಟ ಸ್ವಭಾವದಿಂದ ಬಿಡುಗಡೆ ಹೊಂದಿ ಅಧ್ಯಾತ್ಮದತ್ತ ದೃಷ್ಟಿ ತಿರುಗಿಸಿ ಶಿವಧ್ಯಾನ ಲಿಂಗಪೂಜೆ ಯೋಗಬಲ ಸಾಧನೆಯಲ್ಲಿ ಕಾಲಕಳೆಯಹತ್ತಿದರು. ಪ್ರಭುಸ್ವಾಮಿಗಳು ಒಂದೊಂದು ಸಮಯ ಕಿತ್ತೂರ ನಾಡ ಜನತೆಗೆ ಮುಂಬರುವ ಸಂಕಷ್ಟಗಳನ್ನು ನೆನೆಯಿಸಿಕೊಂಡು ಚಿಂತಿಸುತ್ತಿದ್ದರು. ನಾಡಿಗಾಗಿ ನಾಡಿನ ರಕ್ಷಣೆಗಾಗಿ ಪ್ರಭುವಾದವನು ಚಿಂತಿಸಬೇಕೆ ಹೊರತು ತನ್ನ ಅಹಂಕಾರದಿಂದ ಮದೋನ್ಮತ್ತತನದಿಂದ ಪರಪೀಡಕನಾಗಬಾರದೆಂದು ತಿಳಿದುಕೊಳ್ಳುವ ಸಹಕಾರ ಗುಣಸಾಮರ್ಥ್ಯ, ದೊರೆ ಮಗನಲ್ಲಿ ಇಲ್ಲದಾಯಿತಲ್ಲಾ ಎಂದು ವ್ಯಸನದ–ಉಸ್ಸುರೆಳೆಯುವರು ಬಳಿಕ ತಮ್ಮಲ್ಲಿ ತಾವೇ ವಿಚಾರ ಮಾಡಿಕೊಳ್ಳುತ್ತ ಬಾರದು ಬಪ್ಪದು, ಬಪ್ಪದು ತಪ್ಪದುಎಂಬ ಬಸವಣ್ಣನ ನುಡಿಯಂತೆ ಶಿವನಿಚ್ಛೆಯಂತೆ ನಡೆಯಬೇಕಾಗುವದೆಲ್ಲವೂ ನಡೆಯಲೇಬೇಕು. ಬಾಪೂವಿನ ಪುಣ್ಯವೆ ಅಷ್ಟಿದೆ ಅಂದಾಗ ಯಾರೇನು ಮಾಡಲು ಸಾಧ್ಯವೆಂದು ಅಲಿಪ್ತಭಾವನೆಯಿಂದ ಕಾಲ ಕಳೆಯುವವರಾದರು.

೧೭ ನೆಯ ಪ್ರಕರಣ

ಮಡಿವಾಳೇಶನ ಉಳವಿ ಯಾತ್ರೆ

ಒಂದು ದಿನ ಪ್ರಭುಸ್ವಾಮಿಗಳೊಡನೆ ಮಾತಿಗೆ ಕುಳಿತ ಮಡಿವಾಳೇಶನು—ಬಾಬಾ ನಾವು ಉಳಿವೆಯ ಚನ್ನಬಸವೇಶನ ದರ್ಶನ ಪಡೆದು ಬರುವ ಹಂಬಲದಲ್ಲಿದ್ದೇವೆ ಅನುಗ್ರಹ ಮಾಡಿ ಅಪ್ಪಣೆ ನೀಡಬೇಕೆಂದನು.

ಮಡಿವಾಳೇಶನ ಹಂಬಲವನ್ನು ಕೇಳಿ ಪ್ರಭುಸ್ವಾಮಿಗಳು ಬೆರಗಾದರು. ಹನ್ನೆರಡು ವರುಷದ ಬಾಲಕನ ಈ ದೃಢಸಂಕಲ್ಪವನ್ನು ಕೇಳಿ ಆಶ್ಚರ್ಯದಿಂದ ಕಂದಾ ಮಡಿವಾಳೇಶಾ ಉಳಿವೆಯ ಕ್ಷೇತ್ರದ ಯಾತ್ರೆಯೆಂದರೆ ಬಲು ಕಷ್ಟಕರವಾದದ್ದು ನಿನ್ನೀ ಕುತೂಹಲದಿಂದ ಕಾರ್ಯ ಸಾಧನೆಯಾಗುವ ಬದಲು ಕಷ್ಟ ನಷ್ಟಗಳನ್ನು ಅನುಭವಿಸುವ ಪ್ರಸಂಗ ಬಾರದಿರದು. ಘನಘೋರ ಅರಣ್ಯ ಮಾರ್ಗ ಆ ಅರಣ್ಯವನ್ನು ದಾಟುವದು ಅಸಾಧ್ಯವಾದೀತು. ಹಿಂಸ್ರ ಜೀವಿಗಳ ವಾಸಸ್ಥಾನ ಆ ಕಾಡು ಮೇಲಾಗಿ ಇದು ಜಾತ್ರೆಯ ಸಮಯವೂ ಅಲ್ಲ. ಜನವಸತಿಯಾಗಲಿ, ಮಾನವರ ಸಂಚಾರವಾಗಲಿ ಕಂಡುಬರಲಾರದು. ಆದಕಾರಣ ನಿನ್ನ ಉಳಿವೆಯ ಕ್ಷೇತ್ರ ದರ್ಶನದಾಸೆಯನ್ನು ಸಧ್ಯಕ್ಕೆ ಸ್ಥಗಿತಗೊಳಿಸುವದು ಉತ್ತಮವೆಂದು ತಿಳಿಸಿ ಹೇಳಿದರು.

ಆಗ ಮಡಿವಾಳೇಶನು-ಬಾಬಾ ಚನ್ನಬಸವೇಶ್ವರನ ದರ್ಶನದ ಆಸೆಯಲ್ಲಿರುವ ನನ್ನ ಮನದಾಸೆಯನ್ನು ಅಲ್ಲಗಳೆಯಬೇಡಿರಿ ನನಗಾವ ನೋವೂ ಉಂಟಾಗಲಾರದು. ಯಾವ ಸಂಕಷ್ಟಗಳೂ ಮುತ್ತಲಾರವು ಮತ್ತಿತರ ಬಾಧೆಗಳು ಸುಳಿಯಲಾರವು. ಶಿವನ ಪ್ರೇರಣೆಯಂತೆ ಮನಸ್ಸಿನಲ್ಲಿ ಆಸೆ ಉದ್ಭವಿಸಿರುವಾಗ, ರಕ್ಷಕ ಶಿವನು ಸದಾ ಬೆಂಗಾವಲಾಗಿರುವಾಗ ಭಯವೇನು. ಗುರುದೇವ ಅಪ್ಪಣೆಕೊಡಿ ಎಂದು ಹಂಬಲಿಸಹತ್ತಿದನು. ಪ್ರಭುಸ್ವಾಮಿಗಳಿಗೆ ಈಗ ಧರ್ಮಸಂಕಟಕಿಟ್ಟುಕೊಂಡಿತು. ಅಯ್ಯಾ ಮಡಿವಾಳೇಶಾ ಉಳಿವೆಯ ಪ್ರಯಾಣಕ್ಕೆ ಶೂರ ಧೀರ ಗಂಭೀರ ಪುರುಷರೆ ಅಂಜಿ ಹಿಂಜರೆಯುತ್ತಿರುವಾಗ ಏನಿದು ನಿನ್ನ ಹಟ. ಕಷ್ಟ ನಷ್ಟಗಳನ್ನು ಅನುಭವಿಸಿ ಸಾವು ನೋವಿನ ತೊಂದರೆಗೀಡಾದವರೆಷ್ಟೋ, ಮರಳಿಬಾರದೆ ಹುಲಿ ಸಿಂಹ ಚಿರತೆಗಳ ಬಾಯಿಗೆ ಆಹಾರವಾದವರೆಷ್ಟೋ, ಕಾಡು ದಾರಿಯಲ್ಲಿ ಕಲ್ಲು

ಮುಳ್ಳು ತುಳಿದು ಅನ್ನ ನೀರು ದೊರೆಯದ ಪ್ರಯುಕ್ತ ದಾರಿಯಲ್ಲಿಯೇ ಪ್ರಾಣಾರ್ಪಣಗೈದರೆಷ್ಟೋ. ಚನ್ನಬಸವ ದರ್ಶನ ಪಡೆಯುವ ಮಾತಿರಲಿ ಮಧ್ಯ ಮಾರ್ಗದಲ್ಲಿ ಉಳಿವು ದಾಟುವದೇ ಕಷ್ಟಕರವೆಂದು ಅನುಭವಿಸಿದ ವರು ಸಾರಿ ಸಾರಿ ಹೇಳುತ್ತಿರುವಾಗ ನೀನು ಒಂಟಿಯಾಗಿ ಉಳಿವೆಯನ್ನು ಕಾಣಬಯಸುವದು ಹಟವೆಂದೇ ತಿಳಿದುಕೊಳ್ಳಬೇಕಾಗುವದು ಎಂದು ನಿರಾಕರಿಸುವ ಮಾತನ್ನೇ ಆಡಿದರು. ಬಳಿಕ ಮಡಿವಾಳೇಶನು ಹಟ ತೊಟ್ಟು ಒಬ್ಬಂಟಿಗನಾಗಿ ಉಳಿವೆಯ ಚನ್ನ ಬಸವೇಶ್ವರನನ್ನು ಕಾಣುವ ತನ್ನ ನಿರ್ಧಾರವನ್ನು ಪ್ರಭು ಸ್ವಾಮಿಗಳಿಗೆ ತಿಳಿಸಿದನು. ಆಗ ಪ್ರಭು ಸ್ವಾಮಿ ಗಳು ಅನಿವಾರ್ಯವಾಗಿ ಉಳಿವೆಯ ಕ್ಷೇತ್ರಯಾತ್ರೆಗೆ ಸಕಲ ಸಿದ್ಧತೆಯನ್ನು ಮಾಡಿಕೊಟ್ಟು ಆನಂದದಿಂದ ಆಶೀರ್ವದಿಸಿದರು. ಗುರುಗಳಿಂದ ಆಶೀರ್ವಾದ ಪಡೆದು ಗುರುಗಳಿಗೆ ನಮಸ್ಕರಿಸಿ ನಡೆದಿರಲು, ಪ್ರಭುಸ್ವಾಮಿಗಳು ಆನಂದಾ ಶ್ರುಗಳಿಂದ ಮರಿದೇವರನ್ನು ಬೀಳ್ಕೊಡುತ್ತ ಪವಿತ್ರವಾದ, ಮಹತ್ವ ಪೂರ್ಣವಾದ ನಿನ್ನೀಯಾತ್ರೆಯು ಯಶಸ್ವಿಯಾಗಲಿ ಎಂದು ಹರಸಿ ಮನಸ್ಸು ತಡೆಯಲಾರದೆ ಸಂಗಡ ಯಾರನ್ನಾದರೂ ಕಳುಹಿಸಬೇಕೆಂದು ಪ್ರಯತ್ನಿಸು ವಾಗ ಮರಿದೇವರು ತನ್ನ ನಿಶ್ಚಿಂತ ಬುದ್ಧಿಯಿಂದ ದೃಢ ಸಂಕಲ್ಪದಂತೆ ಯಾರನ್ನೂ ಕಳುಹಿಸುವದು ಬೇಡವೆಂದು ನುಡಿಯಲು, ಪ್ರಭು ಸ್ವಾಮಿಗಳು ಮರಿದೇವರ ಮನಸ್ಸಿನ ವಿರುದ್ಧ ವರ್ತಿಸುವದು ಶೋಭಿಯಲ್ಲವೆಂದು ತಟಸ್ಥ ರಾದರು.

ಕಿತ್ತೂರಿನ ಕಲ್ಮಠದಿಂದ ಹೊರಟ ಮಡಿವಾಳೇಶನು ಉಳವಿಯ ಮಾರ್ಗವನ್ನು ಹಿಡಿದು ಊರು ಕೇರಿಗಳೆಲ್ಲವನ್ನು ಹಿಂದಾಗಿಸಿ ನಿಬಿಡವಾದ ಕಾಂತಾರವನ್ನು ಬಂದು ಸೇರಿದನು. ಅಮವಾಸ್ಯೆಯ ಕಗ್ಗತ್ತಲು ಆವರಿಸಿ ಮಾರ್ಗಕಾಣುವ ಮಾತಿರಲಿ ಹೆಜ್ಜೆ ಕಿತ್ತಿಡುವದಕ್ಕೆ ಸಹ ಹೆದರಿಕೆ ಬರು ವಂತಹ ಇಕ್ಕಟ್ಟಿನ ದಾರಿಯಲ್ಲಿ ನಿಶ್ಚಿಂತನಾಗಿ ಸಾಗಿದ್ದಾನೆ. ಹನ್ನೆರಡರ ವಯ ದಲ್ಲಿ ಬಾಲಕನ ಈ ನಿರ್ಧಾರ ನೀಲಕಂಠನಿಗೂ ಆಚ್ಚರಿಯನ್ನುಂಟುಮಾಡಿತು. ದುರ್ಗಮವಾದ ದಾರಿಯಲ್ಲಿ ಸಾಗಿದ ಮಡಿವಾಳೇಶನು ಕಾಂತಾರವಾಸದ ಭಯವೆಂದರೆ ಏನು ಎನ್ನುವ ರೀತಿಯಲ್ಲಿ ಮುಂದಾಗುತ್ತಿದ್ದನು. ಮುಂದೆ ಸ್ವಲ್ಪ ದಾರಿ ಕ್ರಮಿಸಿ ಕಾಡಿನ ಮಧ್ಯ ಬರುತ್ತಿರಲು, ಸೃಷ್ಟಿಯ ಸೌಂದ

ಯರ್ಗಕ್ಕೂ ಅರಣ್ಯದ ಮೌನ ಗಂಭೀರ ಸ್ವರೂಪಕ್ಕೂ ಮಾರು ಹೋದ ಮಡಿ
ವಾಳೇಶನ ಆನಂದಕ್ಕೆ ಮಿತಿಯಿಲ್ಲದಾಯಿತು. ಮಡಿವಾಳೇಶನ ಆಗಮನ
ದಿಂದ ಇಡೀ ಅರಣ್ಯದ ಗಿಡ–ಮರ–ಬಳ್ಳಿಗಳಾದಿಯಾಗಿ ಸ್ವಾಗತ ಕೋರುವ
ತೆರದಿ ತಲೆಬಾಗಿ ಮಣಿದು ನಯವಿನಯದಿಂದ ಚವರಿ ಬೀಸುವ ಸೇವೆ
ಯೇನೋ ಎನ್ನುವ ರೀತಿಯಲ್ಲಿ ತಲೆ ಹಾಕಿ ಹೂ ಎಲೆಗಳ ಗೊಂಚಲದಿಂದ
ಚಾಮರವ ಬೀಸುತ್ತಿದ್ದವು. ಶರಣಾಗತ ರಕ್ಷಣನಂತೆ, ಮಡಿವಾಳೇಶನು
ಅವುಗಳನ್ನು ಮಮತೆಯಿಂದ ಮುಟ್ಟಿ ಸಂತೈಸಿ ಮುಂದಾಗುತ್ತಿರುವನು.
ಕಾನನದಲ್ಲಿ ನಿಶ್ಚಿಂತೆಯಿಂದ ವಾಸವಾಗಿದ್ದ ಹುಲಿ, ಕರಡಿ, ಸಿಂಹ, ಆನೆ
ಯಂತಹ ಅನೇಕ ವನ್ಯ ಪಶುಗಳು, ಗಿಳಿ ಗೊರವಂಕ ಮಯೂರ ಮುತ್ತಿತರ
ಪಕ್ಷಿ ಸಮೂಹವು ಸ್ನೇಹ ಭಾವದಿಂದ ವರ್ತಿಸುತ್ತ ಮಡಿದೇವರನ್ನು ಸ್ವಾಗ
ತಿಸಿ, ಬೀಳ್ಕೊಡುತ್ತ ತಮ್ಮ ಭಕ್ತಿಯ ಪ್ರದರ್ಶನಗೈಯುತ್ತಿದ್ದವು.

ಆಗ ಮಡಿವಾಳೇಶನು ವನ್ಯ ಮೃಗಗಳನ್ನು ಪಕ್ಷಿ ಸಮೂಹವನ್ನು
ಉದ್ದೇಶಿಸಿ ತನ್ನ ಅಮೃತಮಯ ಅಮರವಾಣಿಯಿಂದ ಉಪದೇಶ ಮಾಡುವ
ರೀತಿಯಲ್ಲಿ ಅಯ್ಯಾ ವನ್ಯ ಮೃಗಾದಿಗಳೇ, ಪಕ್ಷಿ ಪ್ರಾಣಿ ಸಮೂಹವೇ,
ಚನ್ನಬಸವೇಶ್ವರನಂತಹ ಪುಣ್ಯ ಪುರುಷೋತ್ತಮರ ಈ ಸ್ಥಾನದಲ್ಲಿ ನಿಮ್ಮ
ಗಳ ವಾಸವಾಗಿರುವದೆಂದ ಮೇಲೆ ನಿಮ್ಮ ನಿಮ್ಮಲ್ಲಿರುವ ಹುಟ್ಟು ಸ್ವಭಾವ,
ವೈರಗುಣವನ್ನು ಮರೆತು ಸ್ನೇಹ ಭಾವದಿಂದ ಹಿತ ಬಂಧು ಬಾಂಧವರಂತೆ
ವರ್ತಿಸಿ ಸಂತೋಷದಿಂದ ಕಾಲಕಳೆಯುವದಾಗಬೇಕು. ಈಗ ಈ ನಿಮ್ಮ
ಪ್ರೇಮ ಪೂರ್ಣ ಸ್ವಾಗತದಿಂದ ನಮಗೆ ಸಂತೋಷವಾಗಿರುವಂತೆ ಕಾಲ
ಕಾಲಕ್ಕೂ ಉಳಿವೆಯ ಕ್ಷೇತ್ರಯಾತ್ರೆಯನ್ನು ಪೂರೈಸುತ್ತ ನಿಮ್ಮ ಸೇವಾ
ಭಾಗ್ಯವನ್ನು ಪಡೆದುಕೊಳ್ಳುವ ಮಾನವ ಜೀವಿಯ ಜನ್ಮ ಸಾಫಲ್ಯವಾಗುವ
ದರಲ್ಲಿ ಸಂದೇಹವಿಲ್ಲ. ನಿಮ್ಮ ಸ್ನೇಹಸಂಪೂರ್ಣ ಬಾಂಧವ್ಯ ಸದಾ ಜಾಗ್ರತಾ
ಗಿರಲಿ ಎಂದು ಆನಂದದಿಂದ ಆಶೀರ್ವದಿಸಿ ಮುಂದೇ ಸಾಗಿದರು. ಮಡಿವಾಳೇ
ಶನ ಅಪ್ಪಣೆಯಂತೆ ಪ್ರೇಮಪೂರ್ಣ ಸಹಕಾರದಿಂದ ಬಾಳುವ ನಿರ್ಧಾರದಲ್ಲಿ
ಮೃಗಾದಿಗಳು, ಪಕ್ಷಿ ಪ್ರಾಣಿಗಳು ವಚನವಿತ್ತು ನಮಸ್ಕರಿಸಿ ಮಡಿದೇವರ
ಅಪ್ಪಣೆಯಂತೆ ತಮ್ಮ ತಮ್ಮ ಕರ್ತವ್ಯದತ್ತ ಸಾಗಿದವು.

ಇತ್ತ ಮಡಿವಾಳೇಶನು ಆದಿಶೇಷನೊಡಗೂಡಿ ಚನ್ನಬಸವೇಶ್ವರನ ಸ್ಥಾನವನ್ನು ಮುಟ್ಟಿ ದರ್ಶನ ಪಡೆದು ಅಂತಹ ಪುಣ್ಯಮಯ ಪ್ರಶಾಂತ ಸುಮನೋಹರ ಸ್ಥಾನದಲ್ಲಿ ಕೆಲವು ದಿನ ಕಾಲ ಕಳೆದು ಆದಿಶೇಷನಿಗೆ ಅಪ್ಪಣೆ ಕೊಟ್ಟು ತನಗೆ ಬಾಬಾ ಅವರ ದಿನವಾದ್ದರಿಂದ ಕಿತ್ತೂರಿಗೆ ಮರಳಿ ಬಂದನು. ಮುಂದೆ ಇಂತಹ ಬಾಲ ವಯಸ್ಸಿನಲ್ಲಿಯೇ ಎಷ್ಟೋ ಸಾರೆ ಭಕ್ತರ ಅಭಿಲಾಷೆ ಯಂತೆ ಉಳಿವೆಯ ಯಾತ್ರೆಯನ್ನು ಕೈಕೊಂಡು ಭಕ್ತರ ಮನ ತಣಿಸಿ ತಾನು ಆನಂದಗೊಂಡು ಪ್ರಭುಸ್ವಾಮಿಗಳನ್ನು ಮಲ್ಲಸರ್ಜ ದೊರೆಯನ್ನು ಆನಂದ ಗೊಳಿಸಿ ಸಂತೋಷದ ಕಡಲಲ್ಲಿ ಲೋಲಾಡುವಂತೆ ಮಾಡಿದನು.

———

೧೪ ನೆಯ ಪ್ರಕರಣ

ಸಂಸ್ಕೃತ ಪಾಂಡಿತ್ಯಕ್ಕೋಸ್ಕರ ಕಾಶಿಗೆ ಹೋಗಿ ಬಂದದ್ದು

ಮಡಿವಾಳೇಶ ಮರಿದೇವರಿಗೆ ಈಗ ಯೌವನಾವಸ್ಥೆ ಪ್ರಾಪ್ತವಾಗಿ ಎಲ್ಲರ ಅಚ್ಚು ಮೆಚ್ಚಿನ ಮರಿದೇವರಾಗಿ ಕಂಗೊಳಿಸಹತ್ತಿದನು. ಇಂದ್ರಿಯ ನಿಗ್ರಹಗೊಳಿಸಿ ತಮ್ಮ ಅಮೋಘವಾದ ಅಗಮ್ಯವಾದ ಬಲವನ್ನು ಜಗತ್ತಿನಲ್ಲಿ ಪ್ರಕಟಗೊಳಿಸುವ ಸಾಧನೆಯಲ್ಲಿ ಯಶಸ್ವಿಯಾದರು. ಗುರುಗಳೆನಿಸಿದ ಪ್ರಭುಸ್ವಾಮಿಗಳಂತೂ ಮಡಿವಾಳೇಶ್ವರ ಕಾರ್ಯವನ್ನು ಕಂಡು ಹಿರಿ ಹಿರಿ ಹಿಗ್ಗಿದರು. ರಾಜ ಪರಿವಾರದವರು, ಪುರಜನ ಪ್ರಮುಖರು ಅತ್ಯಾನಂದ ಭರಿತರಾಗಿ ಮಡಿವಾಳೇಶ ಮರಿದೇವರನ್ನು ಸಾಕ್ಷಾತ ಶಿವನ ತೇಜಸ್ಸಿನ ವರ ಪುತ್ರ ವೀರಭದ್ರನೆಂದು ಹೆಮ್ಮೆಯಿಂದ ಕೊಂಡಾಡಹತ್ತಿದರು. ಪ್ರಭುಸ್ವಾಮಿಗಳು ಮನಸ್ವಿ ಆಶೀರ್ವದಿಸಿ ಅನುಗ್ರಹ ಕೊಡಬೇಕೆಂದು ಪುರ ಪ್ರಮುಖ ಜನರನ್ನು ಕರೆಯಿಸಿದರು. ಗುರುಗಳ ಅಪ್ಪಣೆಯಂತೆ ಸರ್ದಾರ ಶಿವಪ್ಪ ನಾಯಕನು, ಸುಭೇದಾರ ಲಿಂಗಪ್ಪನು, ಗುರುಶಿದ್ದಪ್ಪ ಮಹಾಮಂತ್ರಿಗಳು, ದಂಡನಾಯಕ ರುದ್ರಪ್ಪನಾಯಕನು, ಶಿವಬಸವ ಶೆಟ್ಟಿಯು, ಸಾಹುಕಾರ ಸಂಗಪ್ಪನವರು, ತಲ್ಲೂರ ದೇಸಾಯರು, ಬೆಳವಡಿಯ ಅನೇಕ ಪ್ರಮುಖ ಭಕ್ತರು ಆಗಮಿಸಿ ಗುರುಗಳ ಅನುಗ್ರಹ ದೀಕ್ಷಾ ವಿಧಿಯನ್ನು ಸಾಂಗಗೊಳಿಸಿ,

ಮಲ್ಲಸರ್ಜ ದೊರೆಯು ರಾಜಗುರು ಪರಂಪರೆಯನ್ನು ಮುಂದುವರೆಯು
ವಂತೆ ಪ್ರಭುಸ್ವಾಮಿಗಳ ತರುವಾಯ ಕಿತ್ತೂರ ರಾಜ ಮನೆತನಕ್ಕೆ ಮಹಾ
ಗುರು ಪಟ್ಟಾಧಿಕಾರವನ್ನು ಈಗಲೇ ಮುಗಿಸಿಬಿಡಬೇಕೆಂದು ಹವಣಿಸಿದರು.
ಆದರೆ ಹಲವಾರು ಭಕ್ತ ಮಹಾಶಯರು ಪ್ರಭುಸ್ವಾಮಿಗಳು ಮನಸ್ಸಿಗೆ
ಏನಾದರೂ ತಿಳಿದುಕೊಂಡಾರು ಎನ್ನುವ ಸೂಚನೆಯನ್ನು ಮುಂದೆ ಮಾಡಿ
ಗುರುಗಳ ಅನುಗ್ರಹ ಕಾರ್ಯವನ್ನು ಮಾತ್ರ ಪೂರ್ತಿಗೊಳಿಸಿ ತಮ್ಮ
ಸಂತೋಷವನ್ನು ವ್ಯಕ್ತಪಡಿಸಿದರು. ಪ್ರಭುಸ್ವಾಮಿಗಳಿಗಂತೂ ಎಲ್ಲಿಲ್ಲದ
ಆನಂದ ಉದ್ಭವಿಸಿ ಇಲ್ಲಿಯವರೆಗೆ ಪಾಠ ಹೇಳಿದ ಗುರುಗಳಾದ ವೆಂಗಿ ಚನ್ನ
ಬಸವ ಶಾಸ್ತ್ರಿಗಳಿಗೂ ರಂಗಾಚಾರ್ಯರಿಗೂ ಸಕಲ ಸನ್ಮಾನಗಳನ್ನಿತ್ತು ಸತ್ಕ
ರಿಸಿ ಉಡುಗರೆಗಳನ್ನಿತ್ತು ಗೌರವಿಸಿ ಉಂಬಳಿಯಾಗಿ ಪಂಚಗ್ರಾಮಗಳನ್ನಿತ್ತ
ಮಲ್ಲಸರ್ಜ ದೊರೆಯು ಕಲ್ಮಠದ ರಾಜಗುರು ಪ್ರಭುಸ್ವಾಮಿಗಳ ಪ್ರೀತಿಗೆ
ಪಾತ್ರನಾದನು.

ಈಗ ಹದಿನಾರರ ಹರೆಯನ್ನು ದಾಟಿ ಹದಿನೆಂಟರ ನೆರಳಿನಲ್ಲಿ ಸಾಗು
ತ್ತಿರುವ ಮಡಿವಾಳೇಶನು ವೈರಾಗ್ಯದ ತೇಜಸ್ಸು, ಬ್ರಹ್ಮಚರ್ಯ ಸಂಪತ್ತು
ಗಳಿಂದ ರಾಗದ್ವೇಷಗಳನೊದ್ದು ನೂರೊಂದು ಇರ್ಷೆಗಳನ್ನು ಗೆದೆಯಬಲ್ಲ
ಅಸಮ್ಯಾನ ಪವಾಡ ಪುರುಷನೆಂದು ಜನರು ಹಾಡಿ ಹೊಗಳಿ ಆನಂದಿಸ
ಹತ್ತಿದರು. ಭಯ ಭಕ್ತಿ ಭಾವಗಳು ತಮ್ಮಿಂದ ತಾವೇ ಮೂಡಿ ಭಕ್ತರ
ಮನೋಮಂದಿರದಲ್ಲಿ ಸಿಚ್ಚಳವಾಗಿ ತಲೆ ನಿಂತವು. ರಂಗಾಚಾರ್ಯರು ವೆಂಗಿ
ಶಾಸ್ತ್ರಿಗಳು ಮುಂದಾಗಿ ಮರಿದೇವರಂಥಹ ಮಹಾ ಮೇಧಾವಿ ತರ್ಕಜ್ಞಾನಿ
ಯನ್ನು ಉನ್ನತಮಟ್ಟದ ಯೋಗಾಭ್ಯಾಸಕ್ಕೆ ಕಳಿಹಿಸುವದು ಇದೇ ಸಮಯ
ಯೋಗ್ಯವೆಂದು ತಮ್ಮ ವಿಚಾರದಂತೆ ಕಾಶಿಯ ಪಂಡಿತರಲ್ಲಿ ವಿದ್ಯಾರ್ಜನೆಗೆ
ಕಳುಹಿಸುವದಾಗಬೇಕೆಂದು ಪ್ರಭುಸ್ವಾಮಿಗಳಲ್ಲಿ ಬಿನ್ನವಿಸಿಕೊಂಡರು
ಮತ್ತು ಸಂಸ್ಕೃತಜ್ಞಾನ ಭಾಂಡಾರವನ್ನೆ ಹೊತ್ತುತರಬಲ್ಲ ಶಕ್ತಿ ಮರಿದೇವ
ರಲ್ಲಿ ಉಂಟು ಎನ್ನುವದನ್ನು ತಾವು ಮನಗಂಡಿರುವದಾಗಿಯೂ ತಿಳು
ಹಿಸಿದರು.

ಆಗ ಮರಿದೇವರು ರಂಗಾಚಾರ್ಯ ಹಾಗು ಶಾಸ್ತ್ರಿಗಳ ಮಾತನ್ನು
ಸಮರ್ಥಿಸುತ್ತ ನಿಜ ಬಾಬಾ ಈರ್ವರೂ ಗುರುವರ್ಯರ ಮುಖದಿಂದ ಸಾಕಷ್ಟು

ಅಭ್ಯಾಸವನ್ನು ಅರಗಿಸಿಕೊಂಡಿದ್ದರೂ ನನಗೇಕೋ ಹೆಚ್ಚಿನ ಜ್ಞಾನಾಮೃತ ಸವಿಯುವ ಆಶೆಯಾಗಿದೆ. ಅಪ್ಪಣೆ ಕೊಡಿ ಬಾಬಾ ಎಂದು ಬೇಡಿಕೊಳ್ಳ ಹತ್ತಿದನು. ಆದರೆ ಮಡಿವಾಳೇಶನ ವಿಯೋಗವನ್ನು ಸಹಿಸದೇ ಗುರುಗಳು ಇದಕ್ಕೆ ಅನುಮತಿಯನ್ನೀಯಲಿಲ್ಲ. ಆದರೂ ಮರಿದೇವರು ಹಟ ಹಿಡಿದು ವಿದ್ಯಾಭಿರುಚಿಯನ್ನು ವ್ಯಕ್ತಪಡಿಸಿ ಪಾಂಡಿತ್ಯ ಪ್ರಭೆಯ ಉಜ್ವಲ ಬೆಳಕು ಪಡೆಯುವ ತನ್ನ ಅಭಿಲಾಷೆಯನ್ನು ಸಾರ್ಥಕಪಡಿಸಿ ಕೊಡಿ ಬಾಬಾ ಎಂದು ಪರಿಪರಿಯಿಂದ ಪ್ರಭು ಸ್ವಾಮಿಗಳ ಮನವಲಿಸುವ ಪ್ರಯತ್ನ ಮಾಡಿದನು. ಕೊನೆಗೊಮ್ಮೆ ಉಪಾಯಗಾಣದೇ ಸ್ವಾಮಿಗಳು ಮನಸ್ಸಿಲ್ಲದ ಮನಸ್ಸಿನಿಂದ ಮಡಿವಾಳೇಶನಿಗೆ ಕಾಶಿಗೆ ಹೊರಡುವದಕ್ಕೆ ಅಪ್ಪಣೆಯನ್ನು ದಯಪಾಲಿಸಿದರು.

ಕಾಶೀ ಪ್ರಯಾಣ ಕೈಕೊಂಡ ಮಡಿವಾಳೇಶನು ಒಂಟಿಗನಾಗಿ ಮಾರ್ಗಕ್ರಮಣಗೈಯುತ್ತ ಕಷ್ಟಗಳನ್ನು ಲೆಕ್ಕಿಸದೇ ಹಸಿವು ತೃಷೆಗಳ ಪರಿವೆ ಇಲ್ಲದೆ, ಮಾರ್ಗದ ಆಯಾಸವನ್ನು ಗಣನೆಗೆ ತಾರದೆ, ನಿರ್ಧಾರದಿಂದ ಅನಂತ ಸಂಕಷ್ಟಗಳನ್ನು ಸಹಿಸುತ್ತ ಕಾಶಿಯ ನಗರವನ್ನು ತಲುಪಿದನು. ಕಾಶಿಯನ್ನು ತಲುಪಿದ ಮರುಕ್ಷಣದಲ್ಲಿ ಗಂಗಾ ತೀರದಲ್ಲಿ ಸ್ನಾನಗೈದು ವಿಶ್ವೇಶ್ವರನ ದರ್ಶನ ಪಡೆದು ಒಂದೆಡೆಯಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿ ಗುರುಶೋಧನೆಯ ಕಾರ್ಯದಲ್ಲಿ ತೊಡಗಿ ಕಾಶೀ ಪುರವನ್ನೆಲ್ಲ ಸುತ್ತಿದನು. ಆದರೂ ಗುರುದರ್ಶನವಾಗಲಿಲ್ಲ. ಬಳಿಕ ಬಸವಳಿದ ದೇಹವನ್ನು ವಿಶ್ವನಾಥನ ಮಂದಿರದ ಮುಂದಿನ ಕಲ್ಲು ಹಾಸಿಗೆಯ ಮೇಲೆ ಒರಗಿಸಿ ಆಲೋಚಿಸುತ್ತಿರಲು ದೈವೀ ಪ್ರೇರಣೆಯಂತೆ ಗುರುಮೂರ್ತಿಗಳ ಆಗಮನ ಆಯಿತು. ಹುಡುಕುತ್ತಿರುವ ಬಳ್ಳಿ ಕೈಗೆ ನಿಲುಕದಂತೆ ಯೋಗ್ಯತಾ ಸಂಪನ್ನರು, ಸದ್ವಿನಶಾಲಿಗಳು ಸಕಲ ವಿದ್ಯೆಗಳಲ್ಲಿ ಪಾರಂಗತರು ಎನ್ನುವಂತೆ ತೋರುತಿರ್ಪ ಗುರುಗಳು ಮೈಮರಗಿಸಿ ಮಲಗಿದ ಮಡಿವಾಳೇಶನನ್ನು ಮಾತನಾಡಿಸುತ್ತ ಅವನ ಮುಖದಲ್ಲಿ ರಾರಾಜಿಸುವ ಬ್ರಹ್ಮತೇಜಸ್ಸಿಗೆ ಯೋಗಬಲ ಸಾಮರ್ಥ್ಯದ ಕಳೆಗೆ ಮಾರು ಹೋಗಿ ಮೂಕರಾಗಿ ನಿಂತುಕೊಂಡರು. ಬಳಿಕ ಕೆಲವು ಸಮಯ ಕಳೆದು ಸುಕುಮಾರಾ ಯಾರಯ್ಯ ನೀನು ಕಾಶಿಪುರ ಪ್ರವೇಶದ ಕಾರಣವನರುಹು ಎಂದು ಕೇಳಿದರು.

ಆಗ ಮಡಿವಾಳೇಶನು ವಿನಯದಿಂದ, ಆತ್ಮೀಯತೆಯಿಂದ ಮಾತನಾಡಿಸುವ ಗುರುಗಳಿಗೆ ಅಯಸ್ಯಾ ಕಾಶಿಯಂತಹ ಪುಣ್ಯ ಪಟ್ಟಣದ ವಾಸಗೈದ ಪುರುಷೋತ್ತಮನೇ ನಾಂ ಕಿತ್ತೂರ ಕನ್ನಡ ನೆಲದ ಮಗನು ಕಲ್ಮಠದ ಗುರುಮೂರ್ತಿಗಳೆನ್ನ ಪಿತೃ ಸಮಾನ ಪ್ರಭುಗಳು ಯೋಗಬಲ ವಿದ್ಯಾಧ್ಯಯನಕ್ಕಾಗಿ ವಿಶ್ವನಾಥನ ಸನ್ನಿಧಿಗೆ ಬಂದಿಹೆನು. ಗುರುಶೋಧನೆಯ ಕಾರ್ಯದಲ್ಲಿ ಸೋತು ಈ ಕಲ್ಲ ಬಂಡೆಯಂ ಆಶ್ರಯಿಸಿ ಉಳಿದಿಹೆನು ಎಂದು ಹೇಳಿ ಸುಮ್ಮನಾದನು. ಬಳಿಕ ಕಾಶಿಯ ಪಂಡಿತ ಶಿಖಾಮಣಿಯು ಮಡಿವಾಳೇಶನನ್ನು ಮಮತಾಪೂರ್ಣ ಮಾತುಗಳಿಂದ ಪರಾಂಭರಿಸಿ ವಿದ್ಯಾದಾನಗೈವ ವಚನವಿತ್ತು ತನ್ನ ಪಾಠಶಾಲೆಯತ್ತ ಕರೆದುಕೊಂಡು ಹೋದರು. ಮಡಿವಾಳೇಶನ ತುಸು ದಿನಗಳಲ್ಲಿ ಗುರುಗಳಿಗೆ ಸಜ್ಜನ ಶಿಷ್ಯನಾದನು.

ಮಡಿವಾಳೇಶನು ಗುರುಗಳ ಅನುಗ್ರಹಕ್ಕೆ ಪಾತ್ರನಾಗುವಂತೆ ಗುರುಗಳ ಸೇವೆಯನ್ನು ಮನಮುಟ್ಟಿ ಮಾಡುತ್ತಿದ್ದನಲ್ಲದೆ, ಏಕ ನಿಷ್ಠೆಯಿಂದಲೂ ಸದಾ ಕಾರ್ಯತತ್ಪರತೆಯಿಂದಲೂ ಬಹುಬೇಗ ಯೋಗದಂತಹ ಕಠಿಣತರವಾದ ವಿದ್ಯೆಯನ್ನರಿತು ಅರಗಿಸಿಕೊಂಡನು. ಎದುರಾಗುವ ಕಷ್ಟಗಳನ್ನು ಲೆಕ್ಕಿಸದೇ ವಿದ್ಯಾರ್ಜನೆಯೇ ತನ್ನ ಮೂಲ ಗುರಿ ಎಂದು ತಿಳಿದ ದುಡಿಯುತ್ತಿರುವ ಅವನ ದುಡಿಮೆ ನಿರರ್ಥಕವಾಗಲಿಲ್ಲ. ವರುಷಾರು ತಿಂಗಳಲ್ಲಿ ಘನ ವಿದ್ವಾಂಸರನ್ನು ಮೀರುವಂತೆ ಪಂಡಿತನಾದನು. ಯೋಗಬಲವಂತೂ ಸಂಪೂರ್ಣ ಮಡಿವಾಳೇಶ ಮುನಿದೇವರ ಸೊತ್ತಾಯಿತು.

ಕಾಶೀ ಪಟ್ಟಣದ ಹೆಸರು ಕೇಳಿದರೆ ವೇದಾಂತಗಳಲ್ಲಿ ಪಂಡಿತರೆನಿಸಿದ ಘನ ವಿದ್ವಾಂಸರ ಹುಟ್ಟೂರು ಎಂದು ಮೊದಲೇ ಹೆಸರುವಾಸಿಯಾಗಿತ್ತು. ಇಂತಹ ಕಾಶಿಯ ಪಟ್ಟಣದಲ್ಲಿ ಉದ್ದಾಮ ಪಂಡಿತರಿಗೂ ಕೊರತೆಯಿರಲಿಲ್ಲ. ಅನ್ಯ ಮತದ ಪಂಡಿತೋತ್ತಮರನ್ನು ವಾದದಲ್ಲಿ ಸೋಲಿಸಿ ತಮ್ಮ ಮತ ತಮ್ಮ ತತ್ವ ತಮ್ಮ ಹೆಚ್ಚಳವನ್ನೇ ಹೆಚ್ಚು ಹೆಚ್ಚು ವೃದ್ಧಿಗೊಳಿಸಿಕೊಳ್ಳುವ ಹಂಬಲದಲ್ಲಿ ಅನ್ಯ ಮತಿಯುವರನ್ನು ಅವಮಾನಗೊಳಿಸಿ ಪಾಪ ಕೋಪದಲ್ಲಿ ತೊಳಲಾಡಿ ಕೊನೆಗೊಮ್ಮೆ ಪಿಶಾಚಿ ಜನ್ಮ ಪಡೆದವರ ಉದಾಹರಣೆಗಳು ಮುನಿದೇವರ ಕಿವಿಗೆ ಬೀಳದಿರಲಿಲ್ಲ. ಆಗಲೂ

ಮುರಿಘೇವರು ಅಂಜಲಿಲ್ಲ. ನಿಶ್ಚಲ ಮನದಿಂದ ಗುರು ಸೇವೆಯನ್ನು ಮಾಡಿಕೊಂಡು ಕಲಿಯುತ್ತಿದರು.

ಒಂದು ದಿನ ಪಿಶಾಚಿಯೊಂದು ಗುರುಗಳಂತೆ ಮಾರುವೇಷದಲ್ಲಿ ಮುರಿ ದೇವರ ಸನ್ನಿಧಾನಕ್ಕೆ ಬಂದು ತನಗೆಲ್ಲ ವಿದ್ಯೆಗಳು ಬರುವವಲ್ಲದೆ, ಸಂಸ್ಕೃತ ವಂತೂ ನನ್ನ ಹಸ್ತಗತ ವಿದ್ಯೆಯೆಂದು ಭಲು ಹೆಮ್ಮೆಯಿಂದ ಹೇಳಿತು. ಮುರಿದೇವರಿಗಾದರೂ ಮೊದಲಿನಿಂದ ಸಂಸ್ಕೃತ ಪಾಂಡಿತ್ಯವನ್ನು ಪಡೆಯುವ ಆಶೆ ಇದ್ದುದರಿಂದ ಪಿಶಾಚಿಯೆನಿಸಿದ ಗುರುವಿನಲ್ಲಿ ಗಿರ್ವಾಣ ಭಾಷೆಯುನ್ನು ಅಭ್ಯಾಸ ಮಾಡಹತ್ತಿದ್ದರು ಆದರೂ ಗುರುವಿನ ಗುರು ಪರನು ಗುರು ಎನಿಸಿದ ಮಡಿವಾಳೇಶನು ಧೇವಾಂಶರೆಂದ ಮೇಲೆ ನಿಮಿತ್ಯ ಗುರುಗಳನ್ನು ಅರಿಸಿ ಕೊಳ್ಳುವ ಪ್ರಯತ್ನ ಮಾಡಿದರೆಂದು ಪಿಶಾಚಿಗೆಂತು ಗೊತ್ತಾಗಬೇಕು. ಅಂತೇ ಒಂದುದಿನ ವಿದ್ಯಾಭ್ಯಯನ ಮಾಡಿಸಿದಕ್ಕೆ ಗುರುದಕ್ಷಿಣೆಯನ್ನು ಸಲ್ಲಿಸುವದಾಗ ಬೇಕೆಂದು ಹಟಯಿಡಿಯಿತು. ಆಗ ಮುರಿದೇವರಿಗೆ ಗುರುದಕ್ಷಿಣೆ ಕೊಡಲಿಕ್ಕೆ ಯಾವ ವಸ್ತು ಧನ ಏನು ಇಲ್ಲಿಲ್ಲವಾದ್ದರಿಂದ ಮುಂದೆ ಕೊಡುವದಾಗಿ ಮಾತು ಕೊಟ್ಟರು. ಮೊದಲೇ ಅವಮಾನಪಡಿಸುವ ಹಂಚಿಕೆಯಲ್ಲಿದ್ದ ಪಿಶಾಚಿ ಗುರುವು ಒಪ್ಪಲಿಲ್ಲ. ಕೊನೆಗೊಮ್ಮೆ ನಿರ್ವಾಹವಿಲ್ಲದೇ ಪಿಶಾಚಿಗುರು ತಿಳಿಸಿದ ಗಿರ್ವಾಣ ಭಾಷೆಯನ್ನೇ ತಿರುಗಿ ನೀಡಿ ಉಪಾಯಗಾಣದೇ ಹೊರಟು ಬಂದರು. ತಿರುಗಿ ಅರ್ಪಿಸಿದ ಗಿರ್ವಾಣ ಭಾಷೆಯುನ್ನು ಮುಂದೆ ತಮ್ಮ ಮುಖದಿಂದ ಉಚ್ಚರಿಸುವ ದನ್ನೇ ಮರೆತುಬಿಟ್ಟರು.

ಅಷ್ಟಾಂಗ ಸಹಿತ ಯೋಗಾಭ್ಯಾಸವನ್ನು ಪೂರ್ಣಗೊಳಿಸಿ ವೇದ ಉಪನಿಷತ್ತು, ತರ್ಕ ಶಾಸ್ತ್ರ, ನ್ಯಾಯ ಶಾಸ್ತ್ರಗಳಲ್ಲಿ ಪ್ರವೀಣರಾಗಿ ಕಿತ್ತೂ ರಿಗೆ ಹೊರಡುವ ತಮ್ಮ ಅಭಿಲಾಷೆಯನ್ನು ಕಾಶಿಯ ಗುರುಗಳಿಗೆ ತಿಳಿಸಿ ಅವರ ಅಪ್ಪಣೆಯನ್ನು ಪಡೆದು; ಅಂದು ಎಂದಿಗಿಂತಲೂ ಆನಂದದಿಂದ ವಿಶ್ವೇಶ್ವ ರನ ಸೇವಾ ಭಾಗ್ಯವನ್ನು ಪಡೆದು ಪ್ರಭು ಸ್ವಾಮಿಗಳ ದರ್ಶನಕ್ಕಾಗಿ ಹಾತೊ ರೆದು ಕಿತ್ತೂರಿಗೆ ಪಯಣ ಬೆಳೆಯಿಸಿದರು.

ಮಡಿವಾಳೇಶನು ಕಾಶಿಯಿದ ಹಿಂದಿರುಗಿ ಸಕಲ ವಿದ್ಯಾಪಿಶಾರದನಾಗಿ ಯೋಗಾಭ್ಯಾಸದಲ್ಲಿ ನಿಷ್ಣಾತನೆನಿಸಿ ಹೊರಟು ಬರುತ್ತಿರುವ ಸುದ್ದಿಯ

ಕಿತ್ತೂರ ನಾಡ ಜನತೆಗೆ ಸಂತಸದ ಸುಗ್ಗಿಯಾಯಿತು. ಂದಿನ ಶುಭ ದಿನವನ್ನು ಹಬ್ಬದಂದದಿ ಸಡಗರದಿಂದ ಆಚರಿಸಬೇಕೆಂದು ಕಿತ್ತೂರ ಪುರ ವನ್ನು ಹಾಗು ಕಲ್ಮಠವನ್ನು ತಳಿರು ತೋರಣಗಳಿಂದ ಅಲಂಕರಿಸಿ ತಮ್ಮ ಇಚ್ಛಾನುಸಾರ ಭಜನೆ ಪಲಿಗೆ ತಾಳ ಸನಾದಿ ಶಹನಾಯಿಗಳಿಂದ ಊದಿಸುತ್ತ ಬಾರಿಸುತ್ತ ಸ್ವಾಗತಿಸಿ ಕರೆತರಲು ಸನ್ನದ್ಧರಾದರು. ಇತ್ತ ಪ್ರಭುಸ್ವಾಮಿ ಗಳು ಎಲ್ಲಿಲ್ಲದ ಸಂತಸದಿಂದ ಮರಿದೇವರ ಸ್ವಾಗತಕ್ಕೆ ಸಜ್ಜಾದರು. ಅತ್ತ ಮಲ್ಲಸರ್ಜ ದೊರೆಯು ನನ್ನ ನಾಡಿನ ಮರಿದೇವರೊಬ್ಬರು ಸಂಸ್ಕೃತ ಪಾಂಡಿತ್ಯ ಪ್ರಭೆಯಿಂದೊಡಗೂಡಿ ಬರುವರೆಂದು ಉಬ್ಬಿ ಉತ್ಸಾಹದಿಂದ ಉತ್ಸವವನ್ನು ಏರ್ಪಡಿಸಿ ಊರ ಹೊರ ಆಗಸೆಯ ಬಾಗಿಲ ಬಳಿಯಲ್ಲಿ ಸಿಡಿ ಮದ್ದು ತುಬಾಕಿಯ ಗೌರವದೊಂದಿಗೆ ಕಹಳೆ ನಗಾರಿಗಳ ಶಬ್ದ ಗೌರವ ಸಲ್ಲಿಸುತ್ತಿರಲು ಮರಿದೇವರು ಕಿತ್ತೂರ ನೆಲವನ್ನು ತುಳಿಯುತ್ತ ಬ್ರಹ್ಮತೇಜೋ ರಾಶಿಯಂತೆ ಪರಶಿವನ ಪ್ರತಿ ಅವತಾರವೇನೋ ಎನ್ನುವತೆರದಿ ಬರುತ್ತಿರುವರು.

ಆಗ ಪ್ರಭುಸ್ವಾಮಿಗಳು ಮರಿದೇವರ ಮುಖವನ್ನು ಕಂಡೊಡನೆ ಅತಿ ಯಾದ ಆನಂದದಲ್ಲಿ ಮುಂದಾಗಿ ಹೋಗಿ ಮಡಿವಾಳೇಶನನ್ನು ಅಪ್ಪಿ ಕೊಂಡು ಮನ ತಣಿಯುವ ವರೆಗೆ ಮುದ್ದಾಡಿ ಆನಂದಗೊಳ್ಳಹತ್ತಿದರು. ಪ್ರಭುಸ್ವಾಮಿಗಳ ಬಳಲಿಕೆಯು ಕ್ಷಣಾರ್ಧದಲ್ಲಿ ಮಾಯವಾಗಿ ಎಲ್ಲಿಲ್ಲದ ಉತ್ಸಾಹಭರಿತ ಸಂತಸದಿಂದ ಮಡಿವಾಳೇಶ್ವರನನ್ನು ಕಲ್ಮಠದ ವರೆಗೆ ಕರೆದು ಕೊಂಡು ಬಂದರು. ಮರಿದೇವರ ಆಗಮನದಿಂದ ಕಿತ್ತೂರಿನ ವಾತಾವರಣವೇ ಬದಲಾಯಿಸಿ ಸಂತೋಷ ಸಾಗರದಲ್ಲಿ ತೇಲಾಡುವಂತಾಯಿತು. ಹಿರಿಯ ರಾಣಿ ರುದ್ರಮ್ಮ ಕಿರಿಯರಸಿ ಚನ್ನಮ್ಮನವರು ಕಲ್ಮಠದ ವರೆಗೂ ಮುತ್ತಿ ನಾರತಿಯನ್ನು ಪಿಡಿದು ಬಂದವರು ಮರಿದೇವರನ್ನು ಆರತಿಯಿಂದಲೂ ಭಸ್ಮಗಂಧಾಕ್ಷತೆಗಳಿಂದಲೂ ಪೂಜಿಸಿ ಪುಣ್ಯ ಜೀವಿಗಳಾದರು.

ಮಡಿವಾಳೇಶ ಮರಿದೇವರು ಕಾಶಿಯಿಂದ ಬಂದ ಬಳಿಕ ಗುರು ಶಿಷ್ಯ ರೀರ್ವರ ಆನಂದಕ್ಕೆ ಸೀಮೆ ಇಲ್ಲದಂತೆ ಸಂತಸದಿಂದ ಬಾಳಿಕೊಂಡಿದ್ದರು. ಆದರೆ ಮಡಿವಾಳೇಶರು ಕಾಶಿಗೆ ಹೋದಂದಿನಿಂದ ಪ್ರಭುಸ್ವಾಮಿಗಳಿಗೆ ಅಂಟಿ ಕೊಂಡ ಮನೋರೋಗದಂತಹ ದಾರುಣವಾದ ರೋಗವು ಮತ್ತೆ ಕಾಣಿಸಿ

ಕೊಂಡು ಅವರನ್ನು ಅತಿಯಾಗಿ ಕಾಡಹತ್ತಿತು. ಪ್ರಭುಸ್ವಾಮಿಗಳಿಗೆ ಈಗ ಗುರುಗಳಾದ ಹಿರಿಯ ಮಡಿವಾಳೇಶ್ವರ ಸ್ವಾಮಿಗಳ ನುಡಿ ಮೆಲುಕು ಹಾಕುವದಾಯಿತು ಅಂತೆ ನಮ್ಮ ಮನೋ ಮಂದಿರದಲ್ಲಿ ಗುಪ್ತವಾಗಿದ್ದ ಇಚ್ಛೆಯನ್ನು ಕಿತ್ತೂರ ದೈವದವರ ಮುಂದಿಟ್ಟು ಅವರ ಅನುಮತಿಯಂತೆ ಮಡಿವಾಳೇಶ ಮರಿದೇವರಿಗೆ ಕಲ್ಮಠದ ಅಧಿಕಾರವನ್ನು ವಹಿಸಿಕೊಟ್ಟು ತಾವು ಶಿವನಲ್ಲಿ ಸೇರಿಕೊಳ್ಳುವ ಬಯಕೆಯನ್ನು ತಿಳಿಸಿದರು.

ಆಗ ಕೂಡಿದ ದೈವದವರು ಸ್ವಾಮಿಗಳ ಇಚ್ಛೆ ಸರಿಯಾದದ್ದಲ್ಲದೆ ಮರಿದೇವರು ಪಟ್ಟಾಧಿಕಾರಿಯಾಗಲು ಸರ್ವ ವಿದದಿಂದಲೂ ಯೋಗ್ಯರೆಂದು ತೀರ್ಮಾನಿಸಿ ಒಪ್ಪಿಗೆಯ ಉತ್ತರ ಕೊಟ್ಟರು. ಆಗ ಮಲ್ಲಸರ್ಜ ದೊರೆಯು ಮರಿದೇವರ ಹಟ ಸ್ವಭಾವವನ್ನು ಅರಿತವನಾದ ಕಾರಣದಿಂದ ಅವರ ಒಪ್ಪಿಗೆಯನ್ನು ಪಡೆಯುವ ಮೊದಲು ಯಾವದನ್ನು ನಿರ್ಧರಿಸಬಾರದೆಂದು ತನ್ನ ವಿಚಾರವನ್ನು ಅರುಹಿ ಗುರುಮೂರ್ತಿಗಳಾದ ಸ್ವಾಮಿಗಳೇ ಮರಿದೇವರನ್ನು ಪಟ್ಟಾಧಿಕಾರಕ್ಕೆ ಒಪ್ಪಿಸುವ ಹೊಣೆ ಹೊರಬೇಕೆಂದು ಬಿನ್ನವಿಸಿಕೊಂಡನು. ದೈವದವರಿಗೆ ಮಲ್ಲಸರ್ಜ ದೊರೆಗಳ ವಿಚಾರವು ಸೂಕ್ತವೆನಿಸಿ ಸ್ವಾಮಿಗಳು ಮರಿದೇವರನ್ನು ಒಪ್ಪಿಸಿ ನಮಗೆ ಅಪ್ಪಣೆಯನ್ನು ಅನುಗ್ರಹಿಸುವದಾಗಬೇಕೆಂದು ಮುಂದಿನ ಕಾರ್ಯವನ್ನು ನಾವುಗಳೆಲ್ಲರೂ ಒಮ್ಮತದಿಂದ ಸಾಂಗಗೊಳಿಸುವದಾಗಿಯೂ ವಚನ ಕೊಟ್ಟ ಸ್ವಾಮಿಗಳ ಪಾದಗಳಿಗೆ ಭಕ್ತಿ ವಿಶ್ವಾಸಗಳಿಂದ ನಮಸ್ಕರಿಸಿ ತಮ್ಮ ತಮ್ಮ ಮನೆಗಳಿಗೆ ತೆರಳಿದರು.

ಈಗ ಸ್ವಾಮಿಗಳು ವಿಚಾರದ ಗೊಂದಲದಲ್ಲಿ ಸಿಲುಕಿದರು. ಅಲ್ಲದೆ ಅವರ ರೋಗ ಉಲ್ಬಣಗೊಂಡ ಕಾರಣದಿಂದ ಎನಿತೆಲ್ಲ ಸಾಹಸದಿಂದ ಗುರುತ್ವದ ಪಾಶದಲ್ಲಿ ಬಂಧಿಸಿಯಾದರೂ ಮಡಿವಾಳೇಶನನ್ನು ತಮ್ಮ ತರುವಾಯ ಕಲ್ಮಠದ ಉತ್ತರಾಧಿಕಾರಿಯಾಗಲು ಒಪ್ಪಿಸಬೇಕೆಂದು ನಿರ್ಧರಿಸಿದರು.

೧೯ ನೆಯ ಪ್ರಕರಣ

ಪ್ರಭುಸ್ವಾಮಿಗಳು ಲಿಂಗೈಕ್ಯರಾದದ್ದು

ಒಂದು ದಿವಸ ಪ್ರಭುಸ್ವಾಮಿಗಳು ಶಿಷ್ಯನೊಡನೆ ಆಪ್ತಾಲೋಚನೆಯಲ್ಲಿ ಕುಳಿತವರು ಮಡಿವಾಳೇಶನನ್ನು ಉದ್ದೇಶಿಸಿ ಮಗು ಮಡಿವಾಳೇಶಾ ನಾವಿನ್ನೂ ಬದುಕಿರುವದರೊಳಗಾಗಿ ಕಲ್ಮಠದ ಗುರು ಪರಂಪರೆಯನ್ನು ಕಾಪಾಡಲು ಕಾಶಿಯಿಂದ ಬಂದು ನಮ್ಮ ಇಚ್ಛೆಯನ್ನು ಪೂರ್ಣಗೊಳಿದೆ. ಈಗ ನಮಗಾದ ಆನಂದಕ್ಕೆ ಅಳತೆ ಇಲ್ಲದಾಗಿದೆ ಎಂದರು. ಹೀಗೆ ಗುರು ಶಿಷ್ಯ ರೀರ್ವರು ಕೆಲವು ಕಾಲ ಮಾತನಾಡಿ ಆ ಮೇಲೆ ಪ್ರಭುಸ್ವಾಮಿಗಳು ಮಗು ಮಡಿವಾಳೇಶಾ ಬಾರಯ್ಯ ಬಾಲಕ ಎಂದು ಇನ್ನಷ್ಟು ಹತ್ತಿರ ಕರೆದು ಕೂಡ್ರಿಸಿಕೊಂಡು ಮಮತೆ ವಾತ್ಸಲ್ಯ ಪ್ರೀತಿಗಳಿಂದ ತಾಯಿ ಮಗುವನ್ನು ರಂಭಿಸಿ ಕಾರ್ಯರಂಗಕ್ಕೆ ಪ್ರೋತ್ಸಾಹಿಸುವಂತೆ ಗದ್ದ ತುಟಿ ಹಿಡಿದು ಮಗು ಈಗ ನಮ್ಮ ಇಹಲೋಕದ ಯಾತ್ರೆಯು ಮುಗಿಯುತ್ತ ಬಂದಿಹುದು ಆದ ಕಾರಣ ನಾವು ಬಹಳ ದಿವಸ ಬಾಳಲಾರೆವು ನೀನೇನು ಅವಿದ್ಯಾವಂತ ಅವಿವೇಕಿಯಲ್ಲ ಧರ್ಮ, ನ್ಯಾಯ, ನೀತಿ, ತತ್ವಗಳನ್ನು ಅರಿತು ಅರಗಿಸಿ ಕೊಂಡ ವರಪುರುಷನಿರುವಿ. ಮಹಾತ್ಮರ ಮಹೋನ್ನತ ಸಾಧನೆ ಸಫಲವಾಗಿ ಸಾಧುಗುಣ ಸಜ್ಜನ ವೃತ್ತಿಯನ್ನು ಅರಿತವನಾಗಿರುವಿ. ನಿನ್ನಂತಹ ಸದ್ಗುಣಶಾಲಿ ಮರಿದೇವರು ಈ ಕಲ್ಮಠದ ಅಧಿಕಾರಿಯಾಗಬೇಕೆಂದು ನಮ್ಮ ಅಭಿಲಾಷೆ ಹಾಗೂ ನಮ್ಮ ಗುರುಗಳ ಅಪ್ಪಣೆಯಾದರೂ ಹಾಗೆ ಆಗಿರುವದು. ನಿನ್ನಿಂದ ಲೋಕಕಲ್ಯಾಣ ಕಾರ್ಯವು ಯಾವ ಅಡೆತಡೆಗಳಿಲ್ಲದೆ ಸಾಗುವ ದೆಂಬ ಭರವಸೆ ನಮಗಿದೆ ಎಂದು ನಿರ್ಮಲ ಮನಸ್ಸಿನಿಂದ ನಿರ್ವಿಕಾರ ಬುದ್ಧಿಯಿಂದ ಚರ- ಪಟ್ಟಾಧಿಕಾರದ ಹೊಣೆಯನ್ನು ಹೊರಿಸುವ ಮನಸ್ಸು ಮಾಡಿದರು ಹಾಗು ತಮ್ಮ ಉಪದೇಶವಾಣಿಯಿಂದ—ಮಗು ಮಡಿ ವಾಳೇಶಾ ಧರ್ಮ ಹಾಗು ಗುರುತ್ವವು ಬಲು ಕಠಿಣವಾದವುಗಳು. ಅಂತೆ ಭಕ್ತ ಶಿಖಾಮಣಿಗಳಾದ ಪುರಂದರದಾಸರ ಕಳಕಳಿಯಿಂದ ಶಿವನಲ್ಲಿಯು ಹರಿಯಲ್ಲಿಯು ಬೇಡಿಕೊಳ್ಳುತ್ತ ಹರ ಹರಿ ನಿಮ್ಮನೊಲಿಸಿ ಗೆಲಬಹುದು ನರರನೊಲಿಸಿ ಗೆಲಿಯುವದು ಬಲು ಕಷ್ಟವೆಂದು ಹಾಡಿಕೊಂಡಿದ್ದಾರೆ.

ಮನುಜ ಪಾತ್ರರೆಲ್ಲರ ಬುದ್ಧಿ ಮಂಗ ಚೇಷ್ಟೆ ಈರ್ಷೆ ಮತ್ಸರಗಳಿಂದ ತುಂಬಿರು ವಾಗ ಗುರುವಾದವನು ಭಕ್ತರ ಮನವಲಿಸಿ ತನ್ನ ಕರ್ತವ್ಯದಂತೆ ಧರ್ಮ ಪರಂಪರೆಯನ್ನು ಉಳಿಸಿಕೊಂಡು ಪರಶಿವನ ಪ್ರೀತಿಗೆ ಪಾತ್ರನೆನಿಸುವದೆ ಮುಖ್ಯ ಸಾಧನೆಯಾಗಿರಲಿ ಎಂದು ಗುರುತ್ವದ ಹೊಣೆಯನ್ನು ತಿಳಿಹಿಸಿದರಲ್ಲದೆ ಭಕ್ತರ ಮನನ್ನು ಅರಿತು ಅವರ ದುರ್ಗುಣಗಳನ್ನು ಅಳಿದು ಸನ್ಮಾರ್ಗದ ಸೀಮೆಯಲ್ಲಿ ತಂದ ನಿಜ ಮಾನವರನ್ನಾಗಿ ಮಾಡುವ ಹೊಣೆಗಾರಿಕೆಯು ಧರ್ಮ ಗುರುಗಳೆನಿ ಸಿದವರ ಕರ್ತವ್ಯ ಎಂದು ಬೇರೆ ಹೇಳಬೇಕಾಗಿಲ್ಲ. ಅದನ್ನು ನೀನು ನಿರ್ವಂಚನೆ ಯಿಂದ ನಿರ್ಮಲ ಚಿತ್ತದಿಂದ ನಿರ್ವಹಿಸಿಕೊಂಡು ಮಠದ ಕೀರ್ತಿ ಗೌರವಗಳನ್ನು ವೃದ್ಧಿಗೊಳಿಸಿ ಬಾಳಬಲ್ಲೆ ಎಂಬ ಭರವಸೆನಮಗಿದ್ದರೂ ಗುರುವಿನ ಕರ್ತವ್ಯದಂತೆ ನಿನಗರುಹಬೇಕಾಯಿತು ಎಂದು ತಿಳಿಸಿ ಹೇಳಿ ಇದು ನಮ್ಮ ಪರಮ ಸಂದೇಶ ಇದನ್ನು ಮರೆಯದಲೆ ಪಾಲಿಸುವವನಾಗು ಎಂದು ಬೋಧಿಸಿ ಮರಿದೇವರ ಮಸ್ತಕದ ಮೇಲೆ ತಮ್ಮ ವರದ ಹಸ್ತವನ್ನಿಟ್ಟು ಆಶೀರ್ವದಿಸಿದರು.

ಮೊದಲೆ ಬಹು ದಿನಗಳಿಂದ ಮರಿದೇವರ ಹಂಬಲದಲ್ಲಿ ಮನೋರೋಗದ ಬಳಲಿಕೆಗೆ ತುತ್ತಾದ ಪ್ರಭುಸ್ವಾಮಿಗಳು ಸಂಪೂರ್ಣ ಇಳಿದು ಹೋಗಿದ್ದರು ಈಗ ಮರಿದೇವರನ್ನು ಕಂಡವರು ವಯಸ್ಸಿನ ಒತ್ತಡ ಹಾಗು ಇಚ್ಛೆಪಟ್ಟು ಶಿವನಲ್ಲಿ ಐಕ್ಯವಾಗುವ ಆಸೆಗಳಿಂದ ಈ ಜಗದ ಜಂಜಡವ ಬಿಸುಟೆ ಶಿವಶಂಕರನೆ ಬೇಗ ನನ್ನನ್ನು ನಿನ್ನಲ್ಲಿ ಲೀನಗೊಳಿಸೆಂದು ಪ್ರಾರ್ಥಿಸುತ್ತ ಶಿವ ಶಿವ ಶಿವ ಶಿವ ಶಿವ ಎಂಬ ನುಡಿಯನ್ನು ನುಡಿಯುತ್ತ ತಮ್ಮ ಜಡ ದೇಹವನ್ನು ಪರಿತ್ಯಜಿಸಿ ನಿಜಾ ನಂದ ಹೊಂದಿದವರಾಗಿ ಲಿಂಗದಲ್ಲಿ ಐಕ್ಯರಾದರು.

ಆದರೆ ಸ್ವಾಮಿಗಳು ಲಿಂಗೈಕ್ಯರಾದ್ದರಿಂದ ಮರಿದೇವರಿಗೆ ಮಂಕು ಕವಿ ದಂತಾಗಿ ಕುಳಿತಲ್ಲಿ ನಿಂತಲ್ಲಿ ಬಾಬಾ ಬಾಬಾ ಎಂದು ಹಲುಬುತ್ತಿದರು. ವಾರಪರಿಯಂತ ಅನ್ನ ನೀರು ಮುಟ್ಟದೆ ಸ್ವಾಮಿಗಳ ವ್ಯಸನದಲ್ಲಿ ಮೌನ ಮೂಕ ವೇದನೆಯನ್ನು ಅನುಭವಿಸಹತ್ತಿದರು. ಆಗ ಒಂದು ದಿವಸ ಪ್ರಭು ಸ್ವಾಮಿಗಳು ಮಡಿವಾಳೇಶನ ಕನಸಿನಲ್ಲಿ ಕಾಣಿಸಿಕೊಂಡು ನಿನ್ನ ಕರ್ತವ್ಯ ದತ್ತ ಹೊರಳಿ ಕಾರ್ಯೋನ್ಮುಖನಾಗಿ ಧರ್ಮ ರಕ್ಷಣೆಯ ಕಾರ್ಯದಲ್ಲಿ

ಸಾಗಬೇಕೆಂದು ತಿಳುಹಿಸಿದಂತಾಯಿತು. ಅಂದಿನಿಂದ ಮರಿದೇವರು ಶಾಂತ ಚಿತ್ತದಿಂದ ಮೂಲ ಸ್ವರೂಪಕ್ಕೆ ಬಂದು ತಮ್ಮ ನಿತ್ಯ ಕರ್ತವ್ಯದಲ್ಲಿ ತೊಡಗಿದರು. ಆದರೂ ಒಂದೊಂದು ಸಮಯ ಗುರುಗಳ ನೆನಪಿನ ಛಾಯೆ ಮನದಲ್ಲಿ ಮೂಡಿ ಪ್ರಭುಸ್ವಾಮಿಗಳು ಗದ್ದುಗೆಯ ಬಳಿಯಲ್ಲಿ ಪ್ರಪಂಚದ ಜ್ಞಾನವನ್ನೇ ಮರೆತು ಆರೆಂಟು ತಾಳುಗಳ ವರೆಗೆ ಬಾಬಾ, ಬಾಬಾ ಎಂಬ ನುಡಿಯನ್ನು ಸ್ಥಿರಗೊಳಿಸಿಕೊಂಡು ಹಲಬುವದು ತಪ್ಪಲಿಲ್ಲ. ಮರಿದೇವರ ಸ್ಥಿತಿಯನ್ನು ಕಂಡು ಕಿತ್ತೂರ ದೈವದವರು ಹಾಗು ಮಲ್ಲಸರ್ಜದೊರೆಯು ರುದ್ರಮ್ಮ ಚನ್ನಮ್ಮ ರಾಣಿಯರು ಮರುಗಹತ್ತಿದರು ಮುಂದೆ ಮರಿದೇವರು ಸುಧಾರಿಸುವ ಬಗೆಯನ್ನು ತಿಳಿಯದಾದರು. ಕೊನೆಗೊಮ್ಮೆ ದೈವದವರು ಒಂದು ತೀರ್ಮಾನಕ್ಕೆ ಬಂದವರಾಗಿ ಪ್ರಭು ಸ್ವಾಮಿಗಳ ಇಚ್ಛೆಯನ್ನು ಕಲ್ಮಠದ ಪಟ್ಟಾಧಿಕಾರವನ್ನು ಜರುಗಿಸಿ ಗುರುಗಳ ಕರ್ತವ್ಯದತ್ತ ಹೊರಳಿಸಿದರೆ ಸರಿಹೋಗಬಹುದೆಂದು ತಮ್ಮ ತಮ್ಮಲ್ಲಿ ಮಾತನಾಡಿಕೊಂಡು ನಿಶ್ಚಿತ ಶುಭದಿನವನ್ನು ಶೋಧಿಸಿ ಪಟ್ಟಾಧಿಕಾರ ಮಹೋತ್ಸವವನ್ನು ಜರುಗಿಸಲು ಸಿದ್ಧರಾದರು. ಭಕ್ತ ಬಳಗದವರ ವಿಚಾರವು ದೊರೆಯಾದ ಮಲ್ಲಸರ್ಜರಿಗೆ ಮೆಚ್ಚುಗೆಯಾಯಿತು. ಆದರೆ ಶಿವ ಮಹಾದೇವನ ಇಚ್ಛೆ ಬೇರೆಯಾಗಿ ಮರಿದೇವರ ಪಟ್ಟಾಧಿಕಾರ ಪ್ರಸಂಗವು ಮುಂದೊಡುವ ದುರ್ಧರ ಪ್ರಸಂಗವೊಂದು ಕಿತ್ತೂರ ದೊರೆ ಮಲ್ಲ ಸರ್ಜರ ಪಾಲಿಗೆ ಬರುವದಾಯಿತು. ಆಗ ಅನಿವಾರ್ಯವಾಗಿ ದೈವದವರ ಪ್ರಭು ಗುರುಸಿದ್ಧೇಶನ ಇಚ್ಛೆಯಂತಾಗಲೆಂದು ತಟಸ್ಥರಾಗಿ ಮರಿದೇವರನ್ನು ಸದಾಕಾಲ ಜಾಗ್ರತೆಯಿಂದ ಕಾಯುತ್ತ ಅವರ ಬುದ್ಧಿಗೆ ಕವಿದ ಬಾಬಾರ ಸ್ಮರಣೆಯ ಮಂಕನ್ನು ತೊಡೆದು ಹಾಕುವ ಪ್ರಯತ್ನ ಮಾಡುತ್ತಿದ್ದರು ನಾಗಲಾಂಬೆಯಂತೂ ಮಡಿವಾಳೇಶ್ವರರನ್ನು ಮರೆತು ಒಂದು ಕ್ಷಣವೂ ದೂರಾಗುತ್ತಿದ್ದಿಲ್ಲ ಸದಾ ಅವರನ್ನು ಹಿಂಬಾಲಿಸಿ ನೆರಳಿನಂತೆ ರಕ್ಷಿಸುವ ಹೊಣೆಗಾರಳಾದಳು.

————

೨೦ ನೆಯ ಪ್ರಕರಣ

ಮಲ್ಲಸರ್ಜ ದೊರೆಯ ಅಂತ್ಯ ಹಾಗೂ ಬಾಪೂ ಸಾಹೇಬನಿಗೆ ಪಟ್ಟಗಟ್ಟಿದ್ದು

ಭಕ್ತರ ಆಸೆಯಂತೆಯೂ ಪ್ರಭುಸ್ವಾಮಿಗಳ ಇಚ್ಛೆಯಂತೆಯೂ ಮುದಿ ಮಡಿವಾಳೇಶ್ವರ ಸ್ವಾಮಿಗಳ ಅಪ್ಪಣೆಯಂತೆಯೂ ಮರಿದೇವರು ಚರಪಟ್ಟ ಮೂರ್ತಿಗಳಾಗಲು ಒಪ್ಪಿದರು. ಆದರೆ ಮಲ್ಲಸರ್ಜ ದೊರೆಯು ಪೇಶ್ವೆಯವರ ವತ್ತಾಯದ ಉತ್ತರಕ್ಕಾಗಿ ಪುಣೆಗೆ ಹೋಗಲೇಬೇಕಾದ ಪ್ರಸಂಗವು ತ್ವರಿತದಲ್ಲಿ ಪ್ರಾಪ್ತವಾದ ಕಾರಣದಿಂದ ಸಧ್ಯದ ಪಟ್ಟಾಧಿಕಾರ ಮಹೋತ್ಸವ ತಟಸ್ಥವಾಯಿತು.

ಮಲ್ಲಸರ್ಜ ದೊರೆಯನ್ನು ಪುಣೆಗೆ ಕರೆಯಿಸಿಕೊಂಡು ಪೇಶ್ವೆಯರ ಇಂಗ್ಲೀಷರ ಉಪಟಳವನ್ನು ಅವರ ಕಾಪಟ್ಯದಿಂದ ಅನೇಕ ಸಂಸ್ಥಾನಿಕರು ಅರಮನೆಗಳು ನಾಮಶೇಷವಾಗುತ್ತಿರುವ ಸಮಾಚಾರವನ್ನು ತಿಳುಹಿಸುತ್ತ ಆಪ್ತಾಲೋಚನೆ ಮಾಡುತ್ತ ನಾವೆಲ್ಲರೂ ಒಂದಾಗಿ ನಾಡ ತಾಯಿಯ ಮೇಲೆ ಪರದೇಶದಿಂದ ಬಂದ ಕೀಳು ವ್ಯಾಪಾರಿಗಳು ತಮ್ಮ ಕುಟಿಲ ಕಾರಸ್ಥಾನಲ್ಲಿ ಕಣ್ಣು ಹಾಕಿ ಸಂಚು, ಮೋಸ, ಮತ್ಸರದಲ್ಲಿ ನಮ್ಮ ನಮ್ಮಲ್ಲಿ ದ್ವೇಷದ ಬೀಜ ಬಿತ್ತಿ ನಮ್ಮ ನಾಶವನ್ನು ನಮ್ಮವರಿಂದಲೇ ಮಾಡಿಸುತ್ತ ಸಾಗಿ ಸ್ವಾರ್ಥ ಲಾಲಸೆಯಿಂದ ನಮ್ಮವರ ಮೂರ್ಖತನದ ಸದುಪಯೋಗ ಪಡೆಯುತ್ತಿರುವ ಆಂಗ್ಲರನ್ನು ಹಣಿದು ಹಣ್ಣಿಗೆ ತರುವದಕ್ಕೆ ಸನ್ನದ್ಧರಾಗಬೇಕೆಂದು ಬೋಧಿಸಹತ್ತಿದರು. ಪೇಶ್ವೆಯರೊಡನೆ ಆಲೋಚನೆಯಲ್ಲಿ ಉಳಿದಿರುವ ಮಲ್ಲಸರ್ಜ ದೊರೆಗೇಗೆ ಬಂದಡರಿದ ರೋಗವು ದಿನವಿಡೀ ಬಳಲಿಸಹತ್ತಿತು ದಿನಗಳಂತೆ ಯಾವ ಔಷಧೋಪಚಾರಗಳಿಗೂ ಮಣಿಯದೇ ತನ್ನ ಹೆಚ್ಚಳವನ್ನು ಪ್ರದರ್ಶಿಸುವದಾಯಿತೇ ಹೊರತು ಗುಣವಾಗುವ ಲಕ್ಷಣಗಳೇ ಕಾಣಲಿಲ್ಲ. ಆಗ ಪೇಶ್ವೆಯವರು ಹೌಹಾರಿದರು, ಅಂತೇ ದೊರೆಗಳ ಸಂಗಡ ಬಂದ ಸರದಾರ ಲಿಂಗಪ್ಪ ಹಾಗೂ ಶಿವಲಿಂಗರುದ್ರಸರ್ಜ ದೊರೆ ಮಗನೊಡನೆ ತ್ವರಿತದಲ್ಲಿ ಕಿತ್ತೂರ ತಾಯ್ನಾಡಿಗೆ ಮರಳಿ ಕಳುಹಿಸುವ ವ್ಯವಸ್ಥೆ ಮಾಡಿದರು.

ತಾಯ್ನಾಡ ನೆಲದಲ್ಲಿ ಬಂದು ಕಿತ್ತೂರನ್ನು ತಲುಪುವ ಮೊದಲೇ ಮಲ್ಲಸರ್ಜ ದೊರೆಯು ಮುಂದಾಗಿ ಕಿತ್ತೂರಿನ ತನ್ನ ಆಪ್ತ ಸಚಿವ ಬಳಗ ವನ್ನು ಕರೆಯಿಸಿ ತಮ್ಮ ಅಂತ್ಯ ಕಾಲ ಸಮೀಪಿಸದೆ, ತಮ್ಮ ತರುವಾಯ ಮಗನಾದ ಶಿವಲಿಂಗರುದ್ರಸರ್ಜನಿಗೆ ಕಿತ್ತೂರ ರಾಜ್ಯಪಟ್ಟವನ್ನು ಮಡಿ ವಾಳೇಶ ಮರಿದೇವರಿಗೆ ರಾಜಗುರು ಪಟ್ಟವನ್ನು ಕಲ್ಮಠದ ನಿರಂಜನ ಪಟ್ಟಾಧಿಕಾರವನ್ನು ಕೊಟ್ಟು ಪ್ರಭುಸ್ವಾಮಿಗಳ ಇಚ್ಛೆಯನ್ನು ಪೂರ್ಣ ಗೊಳಿಸುವದಾಗಲಿ ಎಂದು ತಿಳುಹಿಸಿ ಕಿತ್ತೂರ ನೆಲದಲ್ಲಿ ಕಾಲಿಡುತ್ತಲೇ ತಮ್ಮ ಕೊನೆಯುಸಿರನ್ನೆಳೆದರು. ಯಥಾ ವಿಧಿಯಂತೆ ಕಿತ್ತೂರ ಅರಮನೆಗೆ ದೊರೆಗಳ ನಿರ್ಜೀವ ದೇಹವನ್ನು ತಂದು ವಿಧಿ ನೇಮದಂತೆ ದಫನ ಕ್ರಿಯೆ ಗಳನ್ನು ಕಲ್ಮಠದಲ್ಲಿ ಪೂರ್ಣಗೊಳಿಸಿ ರಾಜಕೀಯ ಗೊಂದಲದಲ್ಲಿ ಹಾಹಾ ಕಾರವಾಗಬಾರದೆಂಬ ಸದಿಚ್ಛೆಯಿಂದ, ಮಂತ್ರಿ ಮುಖಂಡರೆಲ್ಲರೂ ಸೇರಿ ಗುರುಹಿರಿಯರೊಡಗೂಡಿ ದೊರೆಗಳ ಆಕಸ್ಮಿಕ ಮರಣದಿಂದ ಹೌಹಾರಿ ಕಂಗೆಟ್ಟ ಕಂಗಾಲರಾಗಿ ಅನ್ನ ನೀರುಗಳ ಪರಿವೆ ಇಲ್ಲದೆ ಕುಳಿತ ರುದ್ರಮ್ಮ ಚನ್ನಮ್ಮ ಅರಸಿಯರನ್ನು ಸಮಾಧಾನಪಡಿಸುವ ಉದ್ದೇಶದಿಂದ ಅರಮನೆ ಯಲ್ಲಿ ಸೇರಿ ಸಕಲ ರೀತಿಯಿಂದ ತಿಳುವಳಿಕೆಯನ್ನು ನೀಡಿ ರಾಜಕೀಯ ಗೊಂದಲ ಬಲು ಗಂಭೀರ ಸ್ವರೂಪದಲ್ಲಿ ಸಾಗಿದೆ ಅತ್ತ ಇಂಗ್ಲೀಷರ ಉಪಟಳ ಬೇರೆ ಹೆಚ್ಚಾಗಿದೆಯಾದ ಕಾರಣ ಆದಷ್ಟು ತೀವ್ರ ಚಿಕ್ಕ ದೊರೆ ಶಿವಲಿಂಗ ರುದ್ರಸರ್ಜನರನ್ನು ಪಟ್ಟಕ್ಕೆ ಕುಳ್ಳಿರಿಸಿ ಯಥಾ ಪ್ರಕಾರ ಕಿತ್ತೂರ ರಾಜಮನೆ ತನದ ಗೌರವ ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಕಾದದ್ದು ತಮ್ಮ ಕರ್ತವ್ಯವಾಗಿದೆ ತಾಯಂದಿರೆ ಎಂದು ಸಮಾಧಾನಪಡಿಸಿ ಪಟ್ಟಾಧಿಕಾರ ಮಹೋತ್ಸವ ಜರುಗಿಸಲು ಸನ್ನದ್ಧರಾದರು. ಆದರೂ ಉದಾರಿಯು ದಯಾ ಹೃದಯಿಯು ಆದರೆ ದೊರೆ ಮಲ್ಲಸರ್ಜರ ಅವಸಾನದಿಂದ ಕಿತ್ತೂರ ನಾಡ ಜನತೆ ಶೋಕ ಸಾಗರದಲ್ಲಿ ಮುಳುಗಿ ಹೋಗಿದ್ದರು. ಬಳಿಕ ಅನಿ ವಾರ್ಯವೆಂದು ಶಿವಲಿಂಗರುದ್ರಸರ್ಜ ಚಿಕ್ಕ ದೊರೆಯ ಕೈಯಲ್ಲಿ ರಾಜಸೂತ್ರದ ಕಾರ್ಯಭಾರವನ್ನು ಕೊಟ್ಟು ಕಿತ್ತೂರ ರಾಜ್ಯದ ದೊರೆ ಯನ್ನಾಗಿ ಮಾಡಿದರು.

ಇತ್ತ ದೊರೆಗಳ ಕೊನೆಯಾಸೆಯಂತೆ ಮಡಿವಾಳೇಶರನ್ನು ಕಲ್ಮಠದ ನಿರಂಜನ ಪಟ್ಟಾಧಿಕಾರವನ್ನಾಗಿ ಮಾಡಬೇಕೆಂದು ದೈವದವರೆಲ್ಲ ಹಂಬಲಿಸ ಹತ್ತಿದರು. ಮರಿದೇವರಾದರೂ ಗುರು ಹಿರಿಯರನ್ನು ಸನ್ಮಾನಿಸುತ್ತ, ಭಕ್ತ ಬಳಗವನ್ನು ಸಂತೈಸುತ್ತ ಭಕ್ತಿಯ ಬೀಜ ಭಕ್ತರ ಹೃದ್ಭೂಮಿಯಲ್ಲಿ ನಾಟುವಂತೆ ಬೋಧೆಗೈಯುತ್ತ ಕಾಲ ಕಳೆಯುತ್ತಿದ್ದರು. ಮರಿದೇವರ ನಿಷ್ಠೆ ಕರ್ತವ್ಯ ಕಾರ್ಯ ದಕ್ಷತೆಗೆ ಬೆರಗಾದ ದೈವದವರ ಹಂಬಲ ದಿನದಿನಕ್ಕೆ ಹೆಚ್ಚಾಗಿ ತೀವ್ರದಲ್ಲಿ ನಿರಂಜನ ಪಟ್ಟಾಧಿಕಾರ ಕಾರ್ಯವನ್ನು ಜರುಗಿಸುವ ಆಸೆಯನ್ನು ವ್ಯಕ್ತಪಡಿಸ ಲೋಸುಗ ಕಿತ್ತೂರ ದೊರೆ ಎನಿಸಿಕೊಂಡಿರುವ ಬಾಪೂ ಸಾಹೇಬರಲ್ಲಿ ಬಂದು ಮರಿದೇವರ ಗುಣಗಾನ ಮಾಡುತ್ತ ಪ್ರಭುಸ್ವಾಮಿಗಳ ಇಚ್ಛೆಯಂತೆ ದೊರೆಗಳ ಕೊನೆ ಉಸುರಿನ ಆಸೆಯಂತೆ ಪಟ್ಟಾಧಿಕಾರವನ್ನು ಸಾಂಗಗೊಳಿಸಲು ಕೇಳಿಕೊಳ್ಳ ಹತ್ತಿದರು. ಆದರೆ ದೊರೆ ಮಗ ಎನಿಸಿ ರಾಜಾಧಿಕಾರಿಯಾದ ಬಾಪೂ ದೈವದವರು ಮರಿದೇವರನ್ನು ಹೊಗಳುವದು ಅವರ ಪ್ರತಿಭೆಯನ್ನು ವ್ಯಕ್ತಪಡಿಸುವದು ಕೇಳಿ ಮನದಲ್ಲಿ ಹಿಡಿಮಿಡಿಗೊಂಡನಲ್ಲದೆ ತನ್ನ ಬಾಲ್ಯದ ಈರ್ಷೆ ಮತ್ಸರಗಳಿಂದಾಗಿ ವಳ ವಳಗೇ ಕುದಿಯಹತ್ತಿದನು ಆದರೂ ತನ್ನ ಮನದ ದುರಭಿಮಾನವನ್ನು ತೋರ್ಪಡಿಸದೆ ಸಜ್ಜನನ ಸೋಗಿನಲ್ಲಿ ಕಿತ್ತೂರಿನ ಭಕ್ತರನ್ನು ಸಂತೈಸುವ ಸೋಗು ಹಾಕಿದನು. ಮನಸ್ಸು ಮಾತ್ರ ಬಾಪ್ಯಾ ಎಂದು ಏಕವಚನದಲ್ಲಿ ಸಂಬೋಧಿಸಿದ ಮಡಿವಾಳೇಶನನ್ನು ಕಲ್ಮಠದಿಂದ ಹೊರ ಹಾಕಬೇಕೆಂಬ ದುರಾಲೋಚನೆ ಮಾಡಹತ್ತಿತು ಆದರೂ ಆಗಬಹುದೆಂದು ಬಂದ ದೈವದವರಿಗೆ ಸಮಾಧಾನದ ಉತ್ತರ ನೀಡಿ ಕಳುಹಿಸಿಕೊಟ್ಟನು.

ಬಳಿಕ ಹೇಗಾದರೂ ಮಾಡಿ ಮಡಿವಾಳೇಶನನ್ನು ದೈವದವರ ಸಮಕ್ಷಮದಲ್ಲಿ ಅಪಮಾನಗೊಳಿಸಿ ಕಿತ್ತೂರಿನಿಂದ ಹೊರಹಾಕುವ ಹಂಚಿಕೆಯನ್ನು ಹುಡುಕುವ ಕಿಡಿಗೇಡಿಯಾದನು, ಮದಾಂಧನಾದನು ಮೂರ್ಖನಾದನು, ತನ್ನ ವಿನಾಶವನ್ನು ತಾನೇ ಬಯಸಿದನು. ಧರ್ಮವನ್ನು ಪಡೆಯುವ ಉಡಾಳನಾದನು. ನೀತಿಯನ್ನು ಕೆಣಕುವ ಕಲುಷಿತ ಹೃದಯಿಯಾದನು. ನಿರ್ಮಲ ನಿರಂಜನ ಮೂರ್ತಿಯನ್ನು ಅವಮಾನಪಡಿಸುವ ಅವಿವೇಕಿಯಾದನು. ಆತ್ಮದ ಸಂಕುಚಿತ ಭಾವನೆಯನ್ನು ಬಡಿದೆಬ್ಬಿಸಿ

ಕೊಂಡು ಅವನು ಬ್ರಹ್ಮತೇಜಸ್ವಿ ಪ್ರಭಾಕರನ ಕಿಡಿಗಣ್ಣಿಗಾಹುತಿಯಾಗುವದಕ್ಕೆ ಇಚ್ಛೆಪಟ್ಟನು. ಸಿಂಹ ಶಾರ್ದೂಲಗಳ ಪರಾಕ್ರಮವನ್ನು ಅಲ್ಲಗಳೆಯುವ ಅತಿ ಮತ್ಸರ ಅವತರಿಸಿ ರೋಷದ ಕಿಚ್ಚಿನಲ್ಲಿ ಈರ್ಷೆಯ ಹುಚ್ಚಿನಲ್ಲಿ ಇಚ್ಛೆಪಟ್ಟು ಅವಸಾನವನ್ನು ಆಮಂತ್ರಿಸಿಕೊಂಡನು.

ಪರಶಿವನ ಪ್ರೇರಣೆಯಂತೆ ಕಿತ್ತೂರು ಪತನವಾಗುವ ಕಾಲವನ್ನು ತನ್ನಿಂದ ತಾನೆ ನಿರ್ಣಯಿಸಿಕೊಂಡನು. ಅಂತೆ ಮಡಿವಾಳೇಶ್ವರ ಮರಿದೇವರ ವಿಜಿತೇಂದ್ರಿಯತ್ವವನ್ನು ನಾಶಪಡಿಸುವ ಹಂಚಿಕೆಯನ್ನು ಹೂಡಿದನು. ಮರಿದೇವರ ವಿಜಿತೇಂದ್ರಿಯತ್ವವನ್ನು ಭ್ರಷ್ಟಗೊಳಿಸಿದರೆ ಸ್ವಾಮಿತ್ವದ ಸ್ಥಾನಮಾನಗಳಿಗೆ ಅಯೋಗ್ಯರೆನಿಸಿ ಕಲ್ಮಠದ ಅಧಿಪತ್ಯವನ್ನು ಕಸಿದುಕೊಳ್ಳಲು ಅನುಕೂಲವಾಗುವದೆಂದು ತೀರ್ಮಾನಿಸಿಕೊಂಡು ಕೇಡಾಳಿ ಕಪಟಿ ಎನಿಸಿದ ಕಾರಭಾರಿ ಕಲ್ಲಪ್ಪ ಶೆಟ್ಟಿಯ ಸಲಹೆ ಸೂಚನೆಗಳನ್ನು ಬಯಸಿದನು.

---

೨೧ ನೆಯ ಪ್ರಕರಣ

ಬಾಪೂ ಸಾಹೇಬನು ಮಡಿವಾಳೇಶ್ವರರ ವ್ರತಗೆಡಿಸುವದು

ಕಲ್ಲಪ್ಪ ಶೆಟ್ಟಿಯ ಕಾಪಟ್ಯದ ಕುಲುಮೆಯಲ್ಲಿ ಸಿದ್ಧವಾದ ಹಂಚಿಕೆಯ ಹೂಬಾಣದಿಂದ ಮರಿದೇವರನ್ನು ಗಾಸಿಗೊಳಿಸುವ ಸಂಚಿನಲ್ಲಿ ಬಾಪೂ ಸಾಹೇಬನು ತನ್ನೂರಿನ ಮಠಾಧೀಶರಿಗೂ ಗುರುವಿರಕ್ತರಿಗೂ ಸನ್ಮಾನದ ಆಶ್ವಾಸನೆಯನ್ನಿತ್ತು ಭೋಜನ ಕೂಟದಲ್ಲಿ ತೃಪ್ತಿಪಡಿಸಿ ದಾನದಕ್ಷಿಣೆಗಳನ್ನಿತ್ತು ಸತ್ಕರಿಸುವೆವು. ನಮಗೆ ದೊರೆತ ಈ ಕಿತ್ತೂರ ದೊರೆ ಪಟ್ಟ ಸ್ಥಿರವಾಗುವಂತೆ ತಾವುಗಳೆಲ್ಲ ಆಶೀರ್ವದಿಸುವದಾಗಬೇಕು ಎಂದು ನಟನೆಯ ವಿನಯದಿಂದ ಪ್ರಸಾದಕ್ಕೆಂದು ಅರಮನೆಗೆ ಆಮಂತ್ರಿಸಿದನು. ಏನನ್ನೂ ಅರಿಯದ ಹಲವಾರು ಪ್ರಮುಖ ಮಠಸ್ಥರೂ ಗುರುವಿರಕ್ತರೂ ಹಾಗೂ ವಟುವೃತ್ತಿಯಲ್ಲಿದ್ದ ಮಡಿವಾಳೇಶ್ವರ ಸ್ವಾಮಿಗಳ ವಟುಗಳು ಅರಮನೆಗೆ ಆಗಮಿಸಿದರು.

ಆಗ ಬಾಪೂ ಸ ಹೇಬನು ಸತ್ಕರಿಸುವ ನಟನೆಯಿಂದ ಮೇಲೆ ಕರೆದು ಅತಿ ವಿನಯಶಾಲಿಯಂತೆ ನಯವಿನಯ ವಚನಗಳಿಂದ ನಾನೊಂದು ವಿಧಾನೋಕ್ತವಾದ ಕಾರ್ಯಸನ್ನಿಧನಾಗಿದ್ದೇನೆ ಅದಕ್ಕಾಗಿ ತಾವುಗಳೆಲ್ಲ ಬತ್ತಲೆಯಾಗಿ ಈ ಬಾಳೆಯ ಎಲೆಗಳ ಮೇಲೆ ಕುಳಿತುಕೊಂಡು ಪ್ರಸಾದವನ್ನು ಸ್ವೀಕರಿಸಬೇಕು.ಇದರಿಂದ ನನ್ನ ಇಚ್ಛೆಯಂತೆ ನನ್ನ ಕಾರ್ಯವು ಯಶಸ್ವಿಯಾಗುವದು ಎಂದು ನುಡಿದನು. ದೊರೆಯ ನುಡಿಯನ್ನು ಕೇಳಿ ಯಾವತ್ತು ಜಂಗಮರು ಕಕ್ಕಾವಿಕ್ಕಿಯಾದರು. ಬತ್ತಲೆಯಾಗುವ ನಾಚಿಗೆಗೇಡಿ ಕಾರ್ಯಕ್ಕೆ ಹಿಂಜರೆದರು ತಮ್ಮ ಅವಮಾನದ ಪ್ರಸಂಗವನ್ನು ಅಲ್ಲಗಳೆದರು. ಆದರೆ ದೊರೆಯಾದವನು ದರ್ಪದಿಂದ ಅಧಿಕಾರ ಮದದಿಂದ ಅಹಂಕಾರದಲ್ಲಿ ಮದೋನ್ಮತ್ತನಾಗಿ ಇದು ದೊರೆಯಾಜ್ಞೆ ಎಂದು ಲಕ್ಷದಲ್ಲಿಟ್ಟುಕೊಂಡು ನನ್ನ ಆಜ್ಞೆಯಂತೆ ಬತ್ತಲೆಯಾಗಿ ಬಾಳೆಯ ಎಲೆಯ ಮೇಲೆ ಮಂಡಿಸಿ ಪ್ರಸಾದ ಕೊಳ್ಳಬೇಕು ನಿರಾಕರಿಸುವವರ ಮುಂಡಗಳು ದೇಹದಂಡದಿಂದ ಬೇರ್ಪಡೆಯಾಗುವವು ಎಂದು ಬಿರುಸಿನಿಂದ ನುಡಿದು ಸರಸರನೆ ಸರಿದು ಪೂರ್ವ ಸಿದ್ಧತೆಯಲ್ಲಿ ಚಲ್ವ ಕನ್ಯಾಮಣಿಯರನ್ನು ಜರದಂಚಿನ ಅರಬತ್ತಲೆಯ ಉಡುಗರೆಯಿಂದ ಶೃಂಗರಿಸಿ ದಂಡೆಯಿಂದ ಮುಡಿಯನ್ನು ಸುವಾಸನೆಯ ದ್ರವ್ಯಗಳಿಂದ ಸುಗಂಧ ತೈಲಗಳಿಂದ ಅಂಗಾಂಗಗಳಲ್ಲಿ ಲೇಪನವಾಗಿ ರಂಭೆ ಊರ್ವಸಿ ಮೇನಕೆ ತಿಲೋತ್ತಮೆಯರನ್ನು ಮೀರುವ ಚಲುವೆಯರನ್ನಾಗಿಸಿ ಊಟಕ್ಕೆ ಬಡಿಸಲು ಸಿದ್ಧಗೊಳಿಸಿ ಕುಡಿನೋಟದಿಂದಲೂ ಕಿರುನಗೆಯಿಂದಲೂ ಕಾಮುಕತೆಯ ಉತ್ಸುಕತೆ ಉದ್ಭವಿಸುವಂತೆ ಗುಪ್ತಾಂಗಗಳ ಪ್ರದರ್ಶನಗೈವ ಹಾವಭಾವಗೈದರು. ಬಾಪೂ ಸಾಹೇಬನು ಮಡಿವಾಳೇಶ್ವರ ಮರಿದೇವರನ್ನು ವ್ರತಗೆಡಿಸುವ ಸಾಹಸ ಮಾಡಿದ್ದು ಕಲ್ಲಪ್ಪ ಶೆಟ್ಟಿಯ ಕಾಪಟ್ಯದ ಕುಲುಮೆಯಲ್ಲಿ ಸಿದ್ಧವಾದ ಹಂಚಿಕೆಯ ಹೂ ಬಾಣದಿಂದ ಮರಿದೇವರನ್ನು ಗಾಸಿಗೊಳಿಸುವ ಸಂಚಿನಲ್ಲಿ ಬಾಪೂ ಸಾಹೇಬನು ತನ್ನ ನಾಡಿನ ಅನೇಕ ಮಠಾಧೀಶರನ್ನೂ ಗುರುವಿರಕ್ತ ಬಳಗದವರಿಗೂ ಸನ್ಮಾನದ ಆಶ್ವಾಪನೆಯನ್ನಿತ್ತು ಭೋಜನ ಸಮಾರಂಭದಿಂದ ತೃಪ್ತಿಪಡಿಸಿ ದಾನದಕ್ಷಿಣೆಗಳನ್ನಿತ್ತು ಸತ್ಕರಿಸಿ ತಮಗೆ ದೊರೆತ ಕಿತ್ತೂರ ದೊರೆ ಪಟ್ಟ ಸ್ಥಿರವಾಗುವಂತೆ ತಮ್ಮಗಳ ಆಶಿರ್ವಾದ ಪಡೆದುಕೊಳ್ಳಬೇಕೆಂದಿರುವೆನೆಂದು

ನಟನೆಯ ವಿನಯವುಳ್ಳ ನುಡಿಗಳನ್ನಾಡಿ ಪ್ರಸಾದಕ್ಕೆ ಆಮಂತ್ರಿಸಿ ಅರಮನೆಯ ಮೆಲ್ ಮಂದಿರದತ್ತ ಕರೆದುಕೊಂಡು ಮುನ್ನಡೆದನು.

ಆಗ ಏನನ್ನೂ ಅರಿಯದ ಹಲವಾರು ಮಠಸ್ಥರು ಗುರು ವಿರಕ್ತ ಚರ ಪುಂಗವರು ಹಾಗು ವಟು ವೃತ್ತಿಯಲ್ಲಿದ್ದ ಮಡಿವಾಳೇಶ್ವರರ ಕಲ್ಮಠದ ಅನೇಕ ವಟುಗಳು ಮಡಿವಾಳೇಶ್ವರರೊಡನೆ ಅರಮನೆಯ ಮೆಲ್ ಮಂದಿರಕ್ಕೆ ಆಗಮಿಸಿದರು. ಬಳಿಕ ಬಾಪೂ ಸಾಹೇಬನು ಸತ್ಕರಿಸುವ ನಟನೆಯಿಂದ ಮುಂದಾಗಿ ಪೂಜ್ಯರೆ ನಾನೊಂದು ವಿಧಾನೋಕ್ತ ಕಾರ್ಯ ಕೈಕೊಂಡಿದ್ದೇನೆ ಅದಕ್ಕಾಗಿ ತಾವುಗಳೆಲ್ಲರು. ಬತ್ತಲೆಯಾಗಿ ಈ ಬಾಳೆಯ ಎಲೆಗಳ ಮೇಲೆ ಕುಳಿತು ಪ್ರಸಾದ ಕೊಳ್ಳಬೇಕೆಂದನು. ಆಗ ದೊರೆಯ ನುಡಿಯನ್ನು ಕೇಳಿದ ಹಲವು ಪ್ರಮುಖ ಮಠಾಧೀಶರು ದಿಗಂಬರರಾಗಿ ಹೆಂಗಳೆಯರ ಸಮ್ಮುಖದಲ್ಲಿ ಅದು ಹೇಗೆ ನಾಚಿಕೆಯನ್ನು ತೊರೆದುಕೊಳ್ಳುವದೆಂದು ಆಲೋಚಿಸಹತ್ತಿದರು. ಅಷ್ಟರಲ್ಲಿ ದೊರೆಯಾದ ಬಾಪೂಸಾಹೇಬನು ದರ್ಪದಿಂದ ಅಧಿಕಾರ ಮದದಿಂದ ಅಹಂಕಾರದಲ್ಲಿ ಮದೋನ್ಮತ್ತನಾಗಿ ಇದು ದೊರೆಯಾದ ನಮ್ಮ ಆಜ್ಞೆ ನೀವುಗಳೆಲ್ಲರು ಬತ್ತಲೆಯಾಗಿ ಎಲೆಯ ಮೇಲೆ ಕುಳಿತು ಪ್ರಸಾದ ಸ್ವೀಕರಿಸಿದರೆ ಒಳಿತು ಇಲ್ಲವಾದರೆ ನಿರಾಕರಿಸಿದವರ ರುಂಡಗಳು ದೇಹದಂಡದಿಂದ ಬೇರ್ಪಡಿಸಲ್ಪಡುವವೆಂದು ಬಿರುಸಿನಿಂದ ಆಜ್ಞೆ ಮಾಡಿ ಪೂರ್ವ ಸಿದ್ಧತೆಯಲ್ಲಿ ಸಜ್ಜಾದ ಚಲ್ವ ಕನ್ಯಾಮಣಿಯನ್ನು ಜರದಂಚಿನ ಅರಬತ್ತಲೆಯ ಉಡುಗರೆಗಳಿಂದ ಶೃಂಗರಿಸಿ ಹೂ ದಂಡೆಯಲ್ಲಿ ಮುಡಿ ಕಟ್ಟಿಸಿ ಸುವಾಸನೆಯ ದ್ರವ್ಯಗಳಿಂದ ಸುವಾಸನೆಯ ತೈಲ ಲೇಪನದಿಂದ ಗಂಡಸಿನ ಗಂಡುಸುತನವನ್ನು ಬಡಿದೆಬ್ಬಿಸುವ ಹೆಂಗಳೆಯರ ಗುಪ್ತಾಂಗಗಳ ಪ್ರದರ್ಶನದಿಂದ ಆ ಚಲುವ ರಮಣಿಯರು ರಂಭೆ ಊರ್ವಸಿ ಮೇನಿಕೆಯರನ್ನು ಮೀರುವಂತೆ ನಟನಾತ್ಮಕ ಹಾವಭಾವಗಳಿಂದ ಊಟಕ್ಕೆ ಬಡಿಸಲು ಬಂದು ಕುಡಿನೋಟ ಚಿಮ್ಮಿ ಕಿರುನಗೆಯ ಬೀರಿ ಕಾಮುಕತನವನ್ನು ಹೆಚ್ಚಿಸುವ ಹುಬ್ಬುಗಳ ಕುಣಿಸಿ ಕುಚದ್ವಯಗಳನ್ನು ಕುಪ್ಪಸದಿಂದ ಹೊರಗೆ ಸರಿಸಿಕೊಂಡು ನಿತಂಬಗಳು ಪುಟಿದೇಳುವಂತಹ ನಡಿಗೆಯಿಂದಲೇ ಹಾವಭಾವನಳಿಂದಲೇ ಕಂಡ ಗಂಡಸರು ತಮ್ಮ ಗಂಡಸುತನವನ್ನು ಸೂರೆಗೊಂಡಿರಬೇಕು ಆ ತೆರದಿ ಭೋಜನ ಗೃಹ ಪ್ರವೇಶಗೊಂಡರು.

ಆಗ ಬತ್ತಲೆಯಾಗಿ ಬಾಳೆಎಲೆಯ ಮೇಲೆ ಮಂಡಿಸಿದ ಪೂಜ್ಯರು ಕಾಮನ ಕರುಣೆಗೆ ವಳಗಾಗಿ ತಮ್ಮ ಸಹಸ್ರ ಜನ್ಮದ ಪುಣ್ಯ ಫಲವೆನಿಪ ಬ್ರಹ್ಮಚರ್ಯ ವೃತವನ್ನು ವಿನಾಕಾರಣ ಹಾಳು ಮಾಡಿಕೊಳ್ಳುವ ದುಃಸ್ಥಿತಿಗೆ ಬಂದರು. ಆದರೆ ಮಡಿವಾಳೇಶ್ವರ ಸ್ವಾಮಿಗಳು ಮಾತ್ರ ಜ್ಞಾನ ದೃಷ್ಟಿಯಿಂದ ನರದೊರೆ ಬಾಪೂ ಸಾಹೇಬನ ಮಂಗ ಬುದ್ಧಿಯ ಆಳವನ್ನು ಅರಿತು ಮಗುವಿನೋಪಾದಿಯಲ್ಲಿ ಇಂದ್ರಿಯ ಚಾಪಲ್ಯವನ್ನು ತಡೆಹಿಡಿದು ಹಸು ಮಗು ತಾಯಿಯ ಬಳಿಯಲ್ಲಿ ಕುಳಿತು ಸಂತಸದಿಂದ ಊಟ ಮಾಡುವಂತೆ ಯಾವ ವಿಕಾರಗಳಿಗೂ ವಳಗಾಗದೆ ಊಟಮಾಡಿ ಮೇಲೆದ್ದರು. ಆದರೆ ಉಳಿದವರು ಸುರ ಸುಂದರಿಯರ ಯವ್ವನ ಭರಿತ ದೇಹದ ಸೌಂದರ್ಯವನ್ನು ಕಂಡು ಶೃಂಗಾರ ಚೇಷ್ಟೆಗಳಿಗೆ ವಳಗಾಗಿ ಕಾಮ್ಯ ವಿಕಾರದ ಕಪ್ಪು ಅಂಟಿಸಿಕೊಳ್ಳುವ ಕಡಿಮೆ ದರ್ಜೆಯ ಗಂಡಸರಾಗಿ ಮೇಲೇಳುವಾಗ ತಮ್ಮ ನಾಚಿಗೆಗೇಡುತನದ ಕಾರ್ಯಕ್ಕೆ ಲಜ್ಜಿತರಾಗಿ ತಮ್ಮ ತಮ್ಮ ಬಟ್ಟೆ ಬರೆಗಳನ್ನು ತೆಗೆದುಕೊಂಡು ತಗ್ಗಿಸಿದ ಮುಖ ಮೇಲೆತ್ತದವರಾಗಿ ಉಟ್ಟುಕೊಂಡು ಅನಿವಾರ್ಯವೆಂದು ಶಿವಲಿಂಗ ರುದ್ರ ಸರ್ಜ ದೊರೆ ಇತ್ತ ದಾನದಕ್ಷಿಣೆ ಪಡೆದುಕೊಂಡು ತಿರುಗಿ ನೋಡುವ ಸಾಹಸವನ್ನು ಸಹ ಮಾಡದೆ ಹೊರಟು ಹೋದರು. ಮಡಿವಾಳೇಶರು ಮಾತ್ರ ಯಾವ ಮೋಹ ಮಾಯಾ ಪಾಶಕ್ಕೆ ಸಿಲುಕದೆ ಕಲ್ಮಠಕ್ಕೆ ಸಂತಸದಿಂದ ಹೊರಟು ಬಂದರು.

ಬಳಿಕ ಶಿವಲಿಂಗರುದ್ರಸರ್ಜ ದೊರೆಯು ಯಾವತ್ತರ ಎಲೆಗಳನ್ನು ಪರೀಕ್ಷಿಸಿ ನೋಡಲಾಗಿ ಮಡಿವಾಳೇಶ್ವರ ಸ್ವಾಮಿಗಳು ಕುಳಿತ ಎಲೆ ಮಾತ್ರ ಪೂರ್ವ ಸ್ಥಿತಿಯಂತೆ ಶುಭ್ರ ಸುಕೋಮಲವಾಗಿ ಉಳಿದುಕೊಂಡಿತ್ತು. ಉಳಿದವರ ಎಲೆಗಳೆಲ್ಲವೂ ಇಂದ್ರಿಯ ಪತನದಿಂದ ಕಲುಷಿತವಾಗಿದ್ದವು, ಆಗ ಬಾಪು ಸಾಹೇಬನು ಮಡಿವಾಳೇಶ್ವರ ಸ್ವಾಮಿಗಳ ಬ್ರಹ್ಮಚರ್ಯ ಅಸಮಾನ್ಯವಾದದ್ದು ಅಗಮ್ಯವಾದದ್ದು ಎಂದು ತನ್ನಲ್ಲಿ ತಾನೆ ಹೆಮ್ಮೆಯ ಉದ್ಗಾರ ತೆಗೆದು ಇನ್ನೇನಾದರೂ ಉಪಾಯ ಹೂಡಲೇಬೇಕು ಕಲ್ಮಠದ ಅಧಿಕಾರ ಮಡಿವಾಳೇಶನಿಗೆ ದಕ್ಕದಂತೆ ಕಾರ್ಯವೆಸಗಲೇಬೇಕು ಎಂದು ಮತ್ತೆ ಕಲ್ಲಪ್ಪ ಶೆಟ್ಟಿಯಂತಹ ಕರ್ಮಚಾಂಡಾಲ ಕಾರುಭಾರಿಯ ಸಲಹೆಗಾಗಿ ಹೊರಟು ಹೋದನು.

———

೨೨ ನೆಯ ಪ್ರಕರಣ

ಗಂಗಾಜಲವನ್ನು ತರಲು ಕಾಶಿಗೆ ಕಳುಹಿಸಿದ್ದು

ಬಾಪೂ ಸಾಹೇಬ ದೊರೆಯು ಕಲ್ಲಪ್ಪ ಶೆಟ್ಟಿಯಂತಹ ಕಪಟಿಯೊಡನೆ ಯೋಚಿಸುತ್ತ ತಾನು ಹೂಡಿದ ಹಂಚಿಕೆಯಲ್ಲಿ ಸಿಲುಕದೆ ತನ್ನ ಇಂದ್ರಿಯವನ್ನು ನಿಗ್ರಹಗೊಳಿಸಿ ದೈವದವರ ದೃಷ್ಟಿಯಲ್ಲಿ ಮಹಾಯೋಗಿಯಂತೆ ಮೆರೆಯುವ ಮಡಿವಾಳೇಶನ ಪ್ರಗಾಢ ವಿಜಿತೇಂದ್ರಿಯ ಬಲವನ್ನು ತಿಳಿದುಕೊಂಡನಾದರೂ ಮತ್ತೇನಾದರೂ ಹಂಚಿಕೆಯಿಂದ ಮಡಿವಾಳೇಶರ ಮಾನಭಂಗವಾಗಬೇಕೆಂದು ಅದಕ್ಕಾಗಿ ಸೂಕ್ತ ಉಪಾಯ ತಿಳಿಹಿಸಬೇಕೆಂದು ಕೇಳಿದನು. ಆಗ ಕಲ್ಲಪ್ಪ ಶೆಟ್ಟಿಯು ಸ್ವಾರ್ಥ ಲಾಲಸೆಯಲ್ಲಿ ಮಂತ್ರಿ ಮತ್ತಿತರ ಅಧಿಕಾರಿಗಳ ದೃಷ್ಟಿಯಲ್ಲಿ ಬೇಸರದವನಾಗಿ ಕಾರಸ್ಥಾನದಲ್ಲಿ ತನ್ನ ಲಾಭಕ್ಕೋಸ್ಕರ ತನ್ನವರ ಗೋಣು ಮುರಿಯಲು ಸಿದ್ಧನಾಗುವ ಸ್ವಭಾವದ ಶೆಟ್ಟಿಯು ತನ್ನ ನೀಚಗುಣದ ಜಾಣ್ಮೆ ಯಿಂದ ಬಾಪೂ ಸಾಹೇಬರಿಗೆ ಸೂಕ್ತ ಸಲಹೆ ಕೊಡುವವನಂತೆ ಕಿತ್ತೂರಿ ನಿಂದ ದೂರ ಬಹು ದೂರ ಕಳುಹಿಸುವ ಕಾರ್ಯವನ್ನು ಮರಿದೇವರಾದ ಮಡಿವಾಳೇಶನಿಗೆ ಒಪ್ಪಿಸಿ ಅವರು ಕಲ್ಮಠದಲ್ಲಿ ಇಲ್ಲದ ಸಮಯ ಸಾಧಿಸಿ ಬೇರೊಬ್ಬ ಜಂಗಮನಿಗೆ ನಿರಂಜನ ಪಟ್ಟ ಗಟ್ಟಿ ಕಲ್ಮಠವನ್ನು ಅವನ ವಶಕ್ಕೆ ಒಪ್ಪಿಸಿ ಬಿಟ್ಟರೆ ಮುಂದೆ ಮರಳಿ ಬಂದ ಬಳಿಕ ಮಡಿವಾಳೇಶ್ವರರಿಗೆ ಏನು ಮಾಡಲೂ ಬಾರದಂತಾಗಿ ಭಿಕ್ಷಾಟನೆಯಲ್ಲಿ ದೇಶಾಟನೆಗೆ ಹೋಗುವರು. ಆಗ ತಮ್ಮ ಜಿದ್ದು ಗೆದ್ದು ಮನಸ್ಸಿನ ತಳಮಳ ತಣ್ಣಗಾಗುವದು ಎಂದು ಬೋಧಿಸಿದನು.

ಆಗ ಶಿವಲಿಂಗರುದ್ರಸರ್ಜ ದೊರೆಯು ಕಲ್ಲಪ್ಪ ಶೆಟ್ಟಿಯ ಸೂಚನೆ ಸರಿ ಯಾದದ್ದೆಂದು ಹೇಗಾದರೂ ಮಾಡಿ ಮರಿದೇವರನ್ನು ಮಠದಿಂದ ಮತ್ತೂ ಕಿತ್ತೂರ ನಾಡಿನಿಂದ ದೂರ ಬಹು ದೂರ ಅಟ್ಟುವ ಆಲೋಚನೆ ಮಾಡಹತ್ತಿದನು. ಇತ್ತ ಸಮಸ್ತ ಕಿತ್ತೂರ ದೈವದವರು ನಾಡಿನ ಗುರುಹಿರಿ ಯರು ಪದೆ ಪದೆ ಬಂದು ಮರಿದೇವರಾದ ಮಡಿವಾಳೇಶ್ವರ ಯೋಗಿಗಳಿಗೆ ನಿರಂಜನ ಪಟ್ಟಾಧಿಕಾರವನ್ನು ಒಪ್ಪಿಸಬೇಕೆಂದು ಕಾಡಹತ್ತಿದರು. ಆಗಲೂ ದೊರೆಯು ಹಲವಾರು ನೆವಗಳನ್ನು ಮುಂದೆ ಮಾಡುತ್ತ ಪಟ್ಟಾಧಿಕಾ

ಜರಗಿಸುವ ಕಾರ್ಯವನ್ನು ಮುಂದೂಡಹತ್ತಿದನು. ಕೊನೆಗೊಮ್ಮೆ ದೈವದ ವರು ಸುತ್ತಲಿನ ಭಕ್ತವೃಂದವು ಒತ್ತಾಯದಿಂದ ಒಂದು ತೀರ್ಮಾನಕ್ಕೆ ಬಂದು ಆದಷ್ಟು ಶೀರ್ಘ ಪಟ್ಟಾಧಿಕಾರ ಸಾಂಗವಾಗಲೇಬೇಕೆಂದು ಬಿರುಸಿ ನಿಂದ ಬಿತ್ತರಿಸಿ ಹೊರಟು ಹೋದರು.

ಬಳಿಕ ಶಿವಲಿಂಗರುದ್ರಸರ್ಜ ದೊರೆಯು ಕಲ್ಲಪ್ಪ ಶೆಟ್ಟಿಯ ಸೂಚನೆ ಯಂತೆ ಕಲ್ಮಠಕ್ಕೆ ಗುರು ಮಡಿವಾಳೇಶ್ವರ ಮುಂದೇವರ ಸನ್ನಿಧಿಗೆ ಬಂದು ಕಪಟ ಹೃದಯದ ನಟನೆಯ ನಯ ವಿನಯಗಳಿಂದ ಸ್ವಾಮಿಗಳ ಪಾದ ಗಳನ್ನು ಹಿಡಿದು ಭಕ್ತಿ ಪ್ರದರ್ಶನಗೈಯುತ್ತ ಹಲವಾರು ನೀಚರೊಡಗೂಡಿ ಬುದ್ಧಿ, ಅತಿ ಶೀಘ್ರದಲ್ಲಿ ತಮ್ಮ ಚರಪಟ್ಟಾಭಿಷೇಕವನ್ನು ಜರುಗಿಸುವ ಆಸೆ ಯುಳ್ಳವರಾಗಿದ್ದೇವೆ. ಅದಕ್ಕಾಗಿ ಶುದ್ಧವಾದ ಗಂಗಾಜಲಬೇಕೆನ್ನುವದು ತಮಗಿಂತೂ ತಿಳಿದ ವಿಷಯವಾಗಿದೆ ಗಂಗಾಜಲ ತರುವ ಮಹನೀಯರು ನೀತಿವಂತರು ಸದಾಚಾರಿಗಳು ಆಗಿರಬೇಕೆಂದು ಶಾಸ್ತ್ರ ಹೇಳುತ್ತಿದೆ. ಕಾರಣ ತಾವೇ ಕಾಶಿಯವರೆಗೆ ದಯಮಾಡಿಸುವ ಮನಸ್ಸು ಮಾಡಬೇಕು. ನಮ್ಮ ವರಲ್ಲಿ ಅಂತಹ ಶುದ್ಧ ನಿರ್ಮಲ ಕಾಯರು ಸದಾಚಾರಿಗಳು ಯಾರಿದ್ದಾರೆ, ಆದಕ್ಕಾಗಿ ತಾವು ಗಂಗಾಜಲವನ್ನು ತರುವದಕ್ಕಾಗಿ ಕಾಶಿಗೆ ಹೊರಡುವ ಕೃಪೆಯಾಗಬೇಕೆಂದು ತನ್ನ ಕಪಟತನವು ಎಳ್ಳಷ್ಟು ಪ್ರಕಟವಾಗದಂತೆ ನಟನೆ ಗೈದನು. ಒಂದು ಸಮಯ ನಾನು ಅಜ್ಞೆ ಮಾಡಿದ್ದೇನೆಂದು ತಾವು ಭಾವಿಸುವ ದಾದರೆ ತಾವು ತಿಳುಹಿಸಿದವರನ್ನು ಕಳುಹಿಸಬಲ್ಲೆನು ಎಂದು ತನ್ನ ಉದಾತ್ತ ಭಾವನೆಯನ್ನು ತೋರಿಕೆಗಾಗಿ ತೋರಿಸಿದನು.

ಆಗ ಮಡಿವಾಳೇಶ್ವರರು ತಮ್ಮ ಜ್ಞಾನ ದೃಷ್ಟಿಯಿಂದ ಎಲ್ಲವನ್ನೂ ಅರಿತವರಾದರು. ಅವರು ಅದನ್ನು ತೋರಿಸದೆ ತಮ್ಮ ಮನದಲ್ಲಿ ತಾವೇ ಚಿಂತಿಸುತ್ತ ಪಾಪ ಪೂರ್ವ ಕರ್ಮ ಬಲದಿಂದ ಬಾಪೂ ಸಾಹೇಬನ ಬುದ್ಧಿ ಕೆಡುತ್ತಿದೆ ಇದರಿಂದ ಮುಂದೆ ತನಗೆ ವಿಪತ್ತು ಸಂಭವಿಸಬಹುದೆಂಬ ಕಲ್ಪನೆಯಿಲ್ಲದೆ ಈ ದುರ್ಬುದ್ಧಿಗೊಳಗಾಗಿದ್ದಾನೆ ಎಂದು ಗಂಗಾಜಲ ವನ್ನು ತರಲು ಒಪ್ಪಿಕೊಂಡರು. ಬಳಿಕ ಬಾಪೂ ಸಾಹೇಬನು ಪ್ರವಾಸದ ವೆಚ್ಚಕ್ಕಾಗಿ ಅತುಲ ದ್ರವ್ಯವನ್ನು ಕೊಟ್ಟು ಬೆಳವಡಿ ಗ್ರಾಮದವನಾದ ಮುಂದೇವರ ಸಿಷ್ಯಾಭಕ್ತ ಶಿವಪೂಜಿ ಮಲ್ಲಪ್ಪ ಎಂಬವನನ್ನು ಮಡಿವಾಳೇಶ್ವರ

ಶಿವಯೋಗಿಗಳ ಸಂಗಡ ಕಳುಹಿಸುವ ವ್ಯವಸ್ಥೆ ಮಾಡಿದನು. ಅದರಲ್ಲಿ ಹಲ ಕೆಲವು ಭಕ್ತ ಮಹಾಶಯರು ದೊರೆ ಮಗನ ದುರ್ಬುದ್ಧಿಗೆ ಮರಮರನೆ ಮರುಗಿದರು. ಮಡಿವಾಳೇಶರು ಪ್ರತಿ ದುರ್ವಾಸಮುನಿಯಂತೆ ಸಿಟ್ಟಿನ ಕಿಡುವಿನಲ್ಲಿ ಅವರನ್ನು ಸರಿಗಟ್ಟುವ ಯೋಗಿಗಳನ್ನೇ ಕಾಣೆವು ಎಂದು ಚಿಂತಿಸಹತ್ತಿದರು. ಮರಿದೇವರಿಗೆ ಅನ್ಯಾಯವೆಸಗುತ್ತಿರುವ ದೊರೆ ಮಗ ಏನಾಗುವನೋ ಎಂದು ಯೋಚಿಸಹತ್ತಿದರು. ಅಧರ್ಮ ಅನೀತಿ ಅನ್ಯಾಯಗಳ ಸಂಗಮದಲ್ಲಿ ಮರಿದೇವರ ಮಾನಹಾನಿಯಾಗಬೇಕೆಂದು ಹಂಬಲಿಸುವ ಈ ಮತ್ಸರದ ರಾಜಕುಮಾರನ ಅವಸಾನವಾಗುವದೇ ಖಂಡಿತವೆಂದು ಮಾತನಾಡತೊಡಗಿದರು.

ಅತ್ತ ಬಾಪೂ ಸಾಹೇಬನು ತನ್ನ ಕಾರ್ಯ ಕೈಗೂಡಿತೆಂದು ಹಿಗ್ಗಿನಿಂದ ಉಬ್ಬಿ ಹೋದನು. ಈ ಸುದ್ದಿಯು ಅರಮನೆಯವರೆಗೂ ತಲುಪಿ ರಾಣಿಯರಿಬ್ಬರೂ ಮಗನನ್ನು ಕರೆಯಿಸಿ ಸಾಕಷ್ಟು ಛೀ ಹಾಕುತ್ತ ಮತ್ಸರದ ಮೊಟ್ಟೆಯಾದ ಬಾಪ್ರಾ, ನಿನ್ನ ಅವಿವೇಕತನಕ್ಕೆ ಅಳತೆ ಇಲ್ಲದಾಯಿತಲ್ಲೋ ಮರಿದೇವರಂತಹ ಮಹಾ ತಾಪಸಿಗಳನ್ನು ಕೆಣಕಿ ಅವರ ಅಪಮಾನಗೈದು ನೀನು ಉಳಿದು ಬಾಳುವೆ ಏನೋ, ನಿರಂಜನ ನಿರ್ಮಲ ಮೂರ್ತಿಯ ಅಪಮಾನವೆಂದರೆ ಪರಶಿವನ ಅಪಮಾನವೆನ್ನುವದು ನಿನಗೆ ತಿಳಿಯಬಾರದೇನೋ, ಸಿಂಹದ ಮರಿಯನ್ನು ಹಿಡಿದೆಂಬ ಹಿಗ್ಗಿನಲ್ಲಿ ಕರಿ ಏನಾದರೂ ಕೆಣಕಿದರೆ ಅದಕ್ಕೆ ಉಳಿಗಾಲ ಉಂಟೇನೋ, ವಿಚಾರ ಮಾಡೋ ಅವಿವೇಕಿ ಎಂದು ಎಚ್ಚರಿಕೆಯ ನುಡಿಗಳನ್ನಾಡಿದರು.

ಆಗ ಶಿವಲಿಂಗರುದ್ರಸರ್ಜನು ಹೆತ್ತವರ ಹಿತ ನುಡಿಗಳನ್ನು ಕಿವಿಯಲ್ಲಿ ಹಾಕಿಕೊಳ್ಳದೆ, ಅವ್ವಾ ಇದು ರಾಜಕೀಯ ನಿಮಗೆ ತಿಳಿಯದು ಎಂದವನೇ ಅಲ್ಲಿಂದ ಹೋಗಿಬಿಟ್ಟನು. ಆಗ ಅಕ್ಕ-ತಂದೆಯರೀರ್ವರೂ ಮರುಗುತ್ತ ನಮ್ಮ ವಿನಾಶವೇ ಸಮೀಪಿಸಿರುವಾಗ ಯಾರೇನು ಮಾಡುವದು ನಾವು ಶಿವಲಿಂಗನಿಗೆ ಬುದ್ಧಿ ಹೇಳುವದು, ಹೊಳೆಯಲ್ಲಿ ಹೋಮ ಸುಟ್ಟಂತೆ ಎಂದು ನುಡಿದು ಕೊಸೆಗೊಮ್ಮೆ ಶ್ರೀ ಗುರುಸಿದ್ಧೇಶ್ವರನ ಕೃಪೆ ಇರುವಂತಾಗಲಿ ಎಂದು ಸದಾ ಗುರುಸಿದ್ಧೇಶನ ನಾಮಸ್ಮರಣೆಯಲ್ಲಿ ಕಾಲಕಳೆಯಹತ್ತಿದರು.

————

೨೩ ನೆಯ ಪ್ರಕರಣ

ಕಾಶಿಯಿಂದ ಮಲ್ಲಪ್ಪನೊಡನೆ ಗಂಗಾಜಲ ಕಳುಹಿಸಿದ್ದು

ಅತ್ತ ಕಾಶಿಯ ಶ್ರೀ ಕ್ಷೇತ್ರಕ್ಕೆ ಹೊರಟ ಮಡಿವಾಳೇಶ್ವರ ಸ್ವಾಮಿಗಳು ಶಿವಪೂಜಿ ಮಲ್ಲಪ್ಪನೊಡಗೂಡಿ ಅನೇಕ ಕ್ಷೇತ್ರ ತೀರ್ಥ ಸಂದರ್ಶನದೊಂದಿಗೆ ಮುನ್ನಡೆದು ಪ್ರಯಾಗ ಕ್ಷೇತ್ರವನ್ನು ತಲುಪಿದರು. ಗುರುಗಳು ಬೆಂಬತ್ತಿ ಬಂದ ಮಲ್ಲಪ್ಪನು ಶ್ರೀಗಳ ನಿರ್ವಿಕಾರ ನಡವಳಿಕೆಯನ್ನು ಕಂಡು ಅಚ್ಚರಿ ಪಡಹತ್ತಿದನು. ಬದುಕಿನ ಸಾಧನೆಯಲ್ಲಿ ಬೇಕು ಎನ್ನುವ ಶಬ್ದವನ್ನೇ ಅರಿಯದ ಸ್ವಾಮಿಗಳ ನಿಶ್ಚಲ ಮನೋಧರ್ಮವನ್ನರಿತು ತಬ್ಬಿಬ್ಬಾದನು. ಪ್ರಯಾಗದ ರಮಣೀಯ ಸ್ಥಳಗಳನ್ನು ವೀಕ್ಷಿಸಿ ವಿಧಿನೇಮವನ್ನು ಪೂರ್ಣ ಗೊಳಿಸಿ ಮುಂದೆ ನಡೆದು ಮಥುರಾ ಪಟ್ಟಣ, ಹರಿದ್ವಾರ, ಹೃಷಿಕೇಶ, ಯಮುನೋತ್ರಿ, ಕೇದಾರನಾಥ ಒಂದೇ ಎರಡೇ ಎಲ್ಲ ತೀರ್ಥ ಕ್ಷೇತ್ರಗಳ ಸಂದರ್ಶನದಿಂದ ಆನಂದಗೊಂಡು ಮಡಿವಾಳೇಶ್ವರ ಸ್ವಾಮಿಗಳು ಮಲ್ಲಪ್ಪ ನನ್ನು ಕುರಿತು–ಇನ್ನು ಕಾಶೀ ವಿಶ್ವನಾಥನ ಸನ್ನಿಧಾನಕ್ಕೆ ಹೊರಡೋಣವೇ ಎಂದು ಕೇಳಿದರು.

ಆಗ ಶ್ರೀಗಳ ಮಾತಿಗೆ ಮಲ್ಲಪ್ಪನು ತಲೆ ಹಾಕುತ್ತ ಬುದ್ಧಿ ನಾನೆಷ್ಟು ಜನ್ಮಗಳಲ್ಲಿ ಮಾಡಿದ ಪುಣ್ಯವಿದೆಯೋ ಅಂತೆ ತಮ್ಮ ಸನ್ನಿಧಾನದ ಲಾಭ ದೊರೆಯಿತು. ತಮ್ಮ ಇಚ್ಛೆಯಂತೆ ನಡೆಯುವದೊಂದೇ ನನ್ನ ಗುರಿ ಎಂದನು. ಆಗ ಸ್ವಾಮಿಗಳು ಮಲ್ಲಪ್ಪನ ಭಕ್ತಿ ವಿಶ್ವಾಸದ ನುಡಿಗಳಿಗೆ ನಸುನಕ್ಕು ಅವನನ್ನು ಕರೆದುಕೊಂಡು ಇನ್ನೂ ಹಲವಾರು ತೀರ್ಥ ಕ್ಷೇತ್ರ ಗಳನ್ನು ಸುತ್ತಿ ಕಾಶಿಯ ಪಟ್ಟಣಕ್ಕೆ ಬಂದು ತಲುಪಿದರು. ಬಳಿಕ ಕಾಶಿಯ ರಮ್ಯ ರಮಣೀಯ ಸ್ಥಳಗಳನ್ನು ಮಲ್ಲಪ್ಪನಿಗೆ ತೋರಿಸಿ ಮನಾನಂದಗೊಳಿಸ ಬೇಕೆಂದು ಸ್ವಾಮಿಗಳು ಮೊದಲು ಗಂಗಾ ಸ್ನಾನಗೈದು ವಿಶ್ವಾಸದಿಂದ ವಿಶ್ವನಾಥನ ದರ್ಶನಕ್ಕೆ ಕರೆದುಕೊಂಡು ಹೋಗಿ ತಮ್ಮ ಭಕ್ತಿಯ ಹಿರಿ ಗುರುತನ್ನು ವಿಶ್ವೇಶನಲ್ಲಿ ಅರ್ಪಿಸಿ ಅನಂತರ ತಾವು ಮೊದಲೊಂದು ಸಾರೆ ವಿದ್ಯಾರ್ಜನೆಗೆ ಬಂದಾಗ ಗುರುಗಳನ್ನಾಗಿ ಪಡೆದುಕೊಂಡ ಪಂಡಿತೋತ್ತಮು

ರನ್ನು ಶೋಧಿಸಿ ಅವರ ಆದರ ಆತಿಥ್ಯಗಳನ್ನು ಪಡೆದು ಶುಭ ಮುಹೂರ್ತ ದಲ್ಲಿ ವಿಶ್ವವಲ್ಲಭ ವಿಶ್ವೇಶನನ್ನು ಪೂಜಿಸಿ ಗಂಗಾ ಮಾತೆಯಿಂದ ಪಡೆದು ತಂದ ಜಲವನ್ನು ಒಂದು ಕಲಶದಲ್ಲಿ ತಕ್ಕೊಂಡು ಕಲಶದ ಬಾಯಿ ಭದ್ರ ವಾಗುವಂತೆ ಮುಚ್ಚಿ ಮೇಲೆ ಅರಗಿನ ಮುದ್ರೆಯನ್ನು ಹಾಕಿ ಅಪವಿತ್ರ ವಾಗದಂತೆ ವ್ಯವಸ್ಥೆ ಮಾಡಿ ಮಲ್ಲಪ್ಪನ ಕೈಯಲ್ಲಿ ಕೊಡುತ್ತ ಮಲ್ಲಪ್ಪಾ ಈ ಪಾತ್ರೆಯನ್ನು ತೆಗೆದುಕೊಂಡು ನೀನು ಕಿತ್ತೂರಿಗೆ ಹೊರಡು ನಾವು ಬರುವವರೆಗೆ ಮಾತ್ರ ಯಾವ ಕಾರಣದಿಂದಲೂ ಈ ಕಲಶದ ಬಾಯಿ ತೆರೆಯ ಬಾರದು ಎಚ್ಚರಿಕೆ ಎಂದು ತಿಳುಹಿಸಿದ್ದಲ್ಲದೇ ನೀನು ಇಂದೇ ಊರಿಗೆ ಹೊರಟು ಬಿಡು, ನಾವು ಹಿಂದಿನಿಂದ ಬರುತ್ತೇವೆ. ಎಂದು ಆತನಿಗೆ ಪದೇ ಪದೇ ಪಾತ್ರೆಯ ಬಾಯಿ ಭದ್ರವಾಗಿರಲಿ ಎಂದು ಕಟ್ಟಪ್ಪಣೆ ಮಾಡಿ ಕಳುಹಿ ಸಿದರು. ಬಳಿಕ ಮಲ್ಲಪ್ಪನು ಗುರುಗಳ ಅಪ್ಪಣೆಯಂತೆ ಹಲವಾರು ದಿವಸಗಳ ಪರಿಯಂತರ ದಾರಿಯನ್ನು ತುಳಿದು ಕೆಲವು ಕಡೆಗಳಲ್ಲಿ ಉಳಿದು ಬಳಿಕ ಕಿತ್ತೂರಿಗೆ ಹೋಗುವ ಬದಲು ತನ್ನ ಹುಟ್ಟೂರು ಬೆಳವಡಿಗೆ ಹೋಗಿ ಮನೆಯಲ್ಲಿ ದೇವರ ಜಗುಲಿಯ ಮೇಲೆ ಗಂಗಾ ಜಲ ತುಂಬಿದ ಕಲಶ ವನ್ನಿಟ್ಟು ಮನೆಯವರಿಗೆ ಮುಟ್ಟದಂತೆ ತಿಳಿಸಿ ಗುರುಗಳ ಅಪ್ಪಣೆಯ ಪ್ರಕಾರ ನಡೆಯುವದು ನಮ್ಮ ಧರ್ಮವೆಂದು ತಿಳಿ ಹೇಳಿ ಭಕ್ತಿ ವಿಶ್ವಾಸ ಗಳಿಂದ ಮಡಿವಾಳೇಶ್ವರ ಸ್ವಾಮಿಗಳು ಬರುವ ದಾರಿಯನ್ನು ಎದುರು ನೋಡುತ್ತ ಕಾಯ್ದುಕೊಳ್ಳುವವನಾದನು.

ಆದರೆ ಮಲ್ಲಪ್ಪ ಕಾಶಿಯಿಂದ ಮರಳಿ ಬಂದಿರುವ ಸುದ್ದಿ ದೊರೆ ಶಿವಲಿಂಗ ರುದ್ರುಸರ್ಜನನ ಕಿವಿಗೆ ಮುಟ್ಟದಿರಲಿಲ್ಲ. ಅಂತೇ ಒಂದು ದಿವಸ ಬೆಳವಡಿಗೆ ರಾಹುತನನ್ನು ಕಳುಹಿಸಿ ಮಲ್ಲಪ್ಪನನ್ನು ಕರೆಯಿಸಿದನು ಮತ್ತು ಮಡಿವಾಳೇಶ್ವರ ಸ್ವಾಮಿಗಳು ಕೆಲವು ಕಾಲ ತಡೆದು ಬರುವರೆಂಬ ವಿಷಯ ವನ್ನು ತಿಳಿದು ಒತ್ತಾಯದಿಂದ ಶಿಕ್ಷೆಯ ಭಯ ಮುಂದೆ ಮಾಡಿ ಮಲ್ಲಪ್ಪ ನಿಂದ ಗಂಗಾಜಲ ಪಾತ್ರೆಯನ್ನು ತರಿಸಿ ಮುದ್ರೆಯನ್ನು ಒಡೆಯುವ ಸಾಹಸ ಮಾಡಹತ್ತಿದನು. ಆಗ ಮಲ್ಲಪ್ಪನು ಪರಿಪರಿಯಿಂದ ದೊರೆಗೆ ಬೇಡಿಕೊಳ್ಳುತ್ತ ಸ್ವಾಮಿಗಳ ಅಪ್ಪಣೆಯನ್ನು ಮೀರಬಾರದು. ಮೀರು ವದರಿಂದ ನಮ್ಮ ವಂಶ ನಾಶ ಖಂಡಿತ ಎಂದು ಅದೆಷ್ಟುತರದಿಂದ ಹೇಳಿ

ದರೂ ಕೇಳದೆ, ಶಿವಲಿಂಗರುದ್ರಸರ್ಜ ದೊರೆಯು ದೊರೆ ನಾನೆಂಬ ಅಹಂಕಾರದಲ್ಲಿ ಜಾತ್ರೆಯ ಮುದ್ರೆಯನ್ನು ಛಿದ್ರಗೊಳಿಸಿದನು. ವಿನಾಶದ ಕಾಲ ಸಮೀಪಿಸುತ್ತಿರುವಾಗ ಪುಣ್ಯೋದಕದ ಪಾವನತೆ ತಿಳಿಯದೇ ಉಪಯೋಗಿಸಿ ಹಾಳು ಮಾಡಿದನು.

———

೨೪ ನೆಯ ಪ್ರಕರಣ

ಸ್ವಾಮಿಗಳ ಆಗಮನ ಹಾಗೂ ಬಾಪೂ ದೊರೆಗೆ ಶಾಪಕೊಟ್ಟಿದ್ದು

ಮಲ್ಲಪ್ಪನು ಈಗ ನಿರುಪಾಯನಾಗಿ ಗುರುಸಿದ್ದೇಶನೇ ಕಾಪಾಡಬೇಕೆಂದು ದೊರೆಯ ಉದ್ದಾಮ ವೃತ್ತಿಗೆ ಮರಗುತ್ತ ತನ್ನ ಊರಿಗೆ ಹೋದನು. ಬಳಿಕ ಬಾಪೂ ಸಾಹೇಬನು ಇದೇ ಸಮಯವೆಂದು ಮಡಿವಾಳೇಶ್ವರ ಸ್ವಾಮಿಗಳು ಬರುವಷ್ಟರಲ್ಲಿ ಕಲ್ಮಠದ ಅಧಿಕಾರವನ್ನು ಬೇರೊಬ್ಬರಿಗೆ ಒಪ್ಪಿಸಿಬಿಟ್ಟರಾಯಿತೆಂದು ಸಮಯ ಸಾಧಿಸಿ ದೈವದವರ ಕೆಲವು ಮುಖಂಡರು ಊರಲ್ಲಿ ಇಲ್ಲದ ಸಮಯದಲ್ಲಿ ಗುರುಶಿದ್ದೇಶ ದೇವರೆಂಬುವವರಿಗೆ ಕಿತ್ತೂರಿನ ಕಲ್ಮಠದ ನಿರಂಜನ ಪೀಠಾಧಿಕಾರವನ್ನೊಪ್ಪಿಸಿ ನಿಶ್ಚಿಂತನಾದನು. ಆದರೆ ಗ್ರಾಮ ಪ್ರಮುಖರು ಶಿವಲಿಂಗರುದ್ರಸರ್ಜನನ್ನು ಎದುರು ಹಾಕಿಕೊಳ್ಳಲು ಹಿಂಜರಿದರು. ಆದರೆ ಮನದಲ್ಲಿ ಮಾತ್ರ ಗುರುಸಿದ್ದೇಶಾ ನೀನೇ ಕಾಪಾಡಬೇಕೆಂದು ಹಲುಬುತ್ತಿದ್ದರು. ಅತ್ತ ಮಡಿವಾಳೇಶ ಸ್ವಾಮಿಗಳು ಕಾಶಿಯಲ್ಲಿ ಕೆಲವು ಕಾಲ ಯೋಗ ನಿದ್ರೆಯಲ್ಲಿ ಆನಂದ ಹೊಂದಿ ಪರಶಿವನ ಆಜ್ಞೆಯಂತೆ ಮನದಿಚ್ಛೆಯ ಪ್ರಕಾರ ಹಲವಾರು ಕ್ಷೇತ್ರಗಳನ್ನು ಸಂದರ್ಶಿಸುತ್ತ ಬೆಳವಡಿಯ ಗ್ರಾಮಕ್ಕೆ ಬಂದು ಶಿವಪೂಜೆ ಮಲ್ಲಪ್ಪನ ಮನೆಯತ್ತ ಸಾಗಿದರು ಅಲ್ಲಿ ಮಲ್ಲಪ್ಪನು ಗುರುದ್ರೋಹಕ್ಕೈದ ಅಪರಾಧಕ್ಕಾಗಿ ಪಳಹಳಿಸುತ್ತ ನನಗೇನು ಕೇಡು ಕಾಯ್ದುಕೊಂಡಿದೆಯೋ ಎಂದು ಕಾಲ ಕಳೆಯುತ್ತಿದ್ದನು. ಆಗ ಸ್ವಾಮಿಗಳ ಆಗಮನದ ಸುದ್ದಿ ತಿಳಿದು ಮುಂದಾಗಿ ಹೋಗಿ ಸ್ವಾಮಿಗಳ ಪಾದಕ್ಕೆ ಬಿದ್ದು ಆದ ಸಂಗತಿಯನ್ನರುಹಿ ಕ್ಷಮಿಸುವ ಕೃಪೆಯಾಗಬೇಕೆಂದು ಬೇಡಿಕೊಳ್ಳಹತ್ತಿದನು.

ಆಗ ಮಡಿವಾಳೇಶ್ವರ ಸ್ವಾಮಿಗಳು ಥೂ ಗುರುದ್ರೋಹಿ ಎಂದು ಹೀಯ್ಯಾಳಿಸಿ ಗಂಗಾಜಲವನ್ನು ಕಾಪಾಡುವ ಭಾರವನ್ನು ವಹಿಸಿ ಕಟ್ಟಪ್ಪಣೆ ಮಾಡಿ ಕಳುಹಿಸಿದರೂ ಗುರು ವಾಕ್ಯವನ್ನು ಉಲ್ಲಂಘಿಸಿದ ನಿನ್ನಂಥವನಿಗೆ ಕ್ಷಮೆಯೇ, ಗುರುದ್ರೋಹದ ಪರಿಹಾರವು ದೊರೆಯುವದಂತೂ ಸಾಧ್ಯವೇ ಇಲ್ಲ. ನಿನ್ನ ಸಂಸಾರವು ಹಾಳಾಗಿ ಹೋಗಲಿ ವಂಶ ನಷ್ಟವಾಗಲಿ ಎಂದು ದುರ್ವಾಸರ ಪ್ರತಿರೂಪವನ್ನೇ ತೋರಿದರು.

ಆದರೂ ಮಲ್ಲಪ್ಪನು ಸ್ವಾಮಿಗಳ ಪಾದಗಳನ್ನು ಹಿಡಿದು ಪರಿಪರಿ ಯಿಂದ ಬೇಡಿಕೊಳ್ಳುತ್ತ ಗುರುದೇವಾ, ಮಡಿವಾಳೇಶಾ, ಮಮಪಿತಾ ಈ ಶಾಪವಿಮೋಚನೆಯ ಮಾರ್ಗವನ್ನಾದರೂ ತೋರಿಸುವ ಕೃಪೆಯಾಗಲಿ ತಂದೆ ಎಂದನು.

ಆಗ ಮಡಿವಾಳೇಶ್ವರ ಸ್ವಾಮಿಗಳು ಸ್ವಲ್ಪ ಶಾಂತಿಯ ಮಟ್ಟಕ್ಕೆ ಬಂದು— ಅಯ್ಯಾ ಮಲ್ಲಪ್ಪಾ ಅದು ಈ ಜನ್ಮದಲ್ಲಿಯಂತೂ ಸಾಧ್ಯವಿಲ್ಲದ ಮಾತು. ಆಡಿದ ನುಡಿ ಹುಸಿಯಾಗದು. ಆದರೆ ಮುಂದಿನ ಜನ್ಮದಲ್ಲಿ ನಿರ್ವಿಕಾರ ಮನೋವೃತ್ತಿಯುಳ್ಳವನಾಗಿ ನಿಜತ್ವದ ನೆಲೆಯನ್ನರಿತು ಸಜ್ಜನ ಸತ್ಸಂಗದ ಬಯಕೆಯುಳ್ಳವನಾಗಿ ನಿರಂಜನ ಪ್ರಭುವಿನ ಸೇವೆಯಲ್ಲಿ ನಿನಗಿತ್ತ ಶಾಪವಿಮೋಚನೆಯಾಗುವದೆಂದು ತಿಳುಹಿಸಿ ಬಳಿಕ ಗಂಗೋದಕವನ್ನು ಅನ್ಯಾಯವಾಗಿ ನಾಶಗೊಳಿಸಿದ ಅಪರಾಧದ ಮುಕ್ತತೆಗಾಗಿ ನೂರೊಂದು ಗಣಾರಾಧನೆಯನ್ನು ಜರುಗಿಸಲು ಅಪ್ಪಣೆ ಮಾಡಿದರು.

ಸ್ವಾಮಿಗಳ ಅಪ್ಪಣೆಯಂತೆ ಗಣಾರಾಧನೆಯ ಸಿದ್ಧತೆ ಮಾಡಿದ ಮಲ್ಲಪ್ಪನು ಸ್ವಾಮಿಗಳ ಇಚ್ಛೆಯಂತೆ ನೂರು ಜನ ಗಣಂಗಳಿಗೆ ಪ್ರಸಾದ ವನ್ನು ಮಾಡಿಸಿ ದಾನ ದಕ್ಷಿಣೆಗಳಿಂದ ಅವರನ್ನು ತೃಪ್ತಿಪಡಿಸಿ ಅವರ ಆಶೀ ರ್ವಾದ ಪಡೆದು ಬಾಳಹತ್ತಿದನು.

ಮಲ್ಲಪ್ಪನಿಂದ ಸಕಲ ವಿಷಯವನ್ನು ಅರಿತ ಮಡಿವಾಳೇಶ್ವರ ಸ್ವಾಮಿ ಗಳು ಕಿತ್ತೂರ ಕಲ್ಮಠದತ್ತ ಸಿಟ್ಟಿನ ಆವೇಶದಲ್ಲಿ ಹೊರಟರು. ಅವರ ಆಗಿನ ಆ ಉಗ್ರ ರೂಪವನ್ನು ಬ್ರಹ್ಮತೇಜೋ ರಾಶಿಯನ್ನು ಕಂಡು ಮಲ್ಲಪ್ಪನುನಡುಗಿ ಅಯ್ಯೋಶಿವನೆ ಗುರುಸಿದ್ದೇಶಾ ನಮ್ಮ ನಾಡಿನ ಅಳಿಗಾಲಕ್ಕೆ ಪ್ರಳಯರುದ್ರ

ನನ್ನೇ ಅವತಾರಗೊಳಿಸಿದಿಯಾ, ಎಂದು ಚಿಂತಿಸಹತ್ತಿದನು. ಬೆಳವಡಿಯಿಂದ ಕಿಡಿಗಣ್ಣಿ ದೃಷ್ಟಿಯನ್ನೇ ಹೊತ್ತು ಸಕಲ ವಿಷಯುವನ್ನು ತಿಳಿದವರಾದ ಮಡಿವಾಳೇಶ್ವರರು ಅಗ್ನಿಯೋಪಾದಿಯಲ್ಲಿ ಧಾವಿಸಿ ಉರಿ ನಾಲಿಗೆಯನ್ನೇ ಚಾಚುತ್ತಿರುವರೇನೊ ಎನ್ನುವಂತೆ ಭಾಸವಾಗುತ್ತಿತ್ತು. ಆವೇಶದಿಂದ ಅದುರುವ ತುಟಿಗಳಿಂದ ಶಬ್ದಗಳು ಕರ್ಣಕಠೋರವಾಗಿ ಬರುತ್ತಿದ್ದವು. ಪುರಜನರಂತೂ ಸ್ವಾಮಿಗಳನ್ನು ಕಂಡು ಹೌಹಾರಿದರು ಬೇರೊಬ್ಬರಿಗೆ ಮಠದ ಅಧಿಕಾರವನ್ನು ಒಪ್ಪಿಸುವ ವಿಷಯುವನ್ನು ಉಸುರುವದಕ್ಕೂ ಭಯಪಟ್ಟು ಮುಖ ಮುರಿಯಿಸುವವರಾದರು. ಆವೇಶದಲ್ಲಿ ಸಾಗಿದ ಮಡಿವಾಳೇಶ್ವರ ಸ್ವಾಮಿಗಳು ಕಲ್ಮಠಕ್ಕೆ ಬಂದು ಗುರುಪಟ್ಟದಲ್ಲಿ ವಿರಾಜಮಾನರಾದ ಗುರುಸಿದ್ದೇಶ ದೇವರನ್ನು ಕಂಡು ಯಾರೋ ನೀನು ಎದ್ದೇಳು ನಿನಗೀ ಸ್ಥಾನವನ್ನು ಕರುಣಿಸಿದ ಮಗನಾವನೋ ಎಂದು ಕೆಂಗಣ್ಣಿನಲ್ಲಿ ಕಿಡಿಗಳನ್ನು ಚಿಮ್ಮುತ್ತ ಕೇಳಿದರು. ಆಗ ಗುರುಸಿದ್ಧ ದೇವರು ಕಂಗೆಟ್ಟು ಕಂಗಾಲರಾಗಿ ನಡುಗುತ್ತ ಸ್ವಾಮಿಗಳ ಶ್ರೀಪಾದಗಳಿಗೆ ಸಾಷ್ಟಾಂಗವೆರಗಿ ಇದರಲ್ಲಿ ನನ್ನದೇನು ತಪ್ಪಿಲ್ಲ ಸ್ವಾಮಿ, ದೇಸಾಯಿ ದೊರೆಗಳು ಒತ್ತಾಯದಿಂದ ನನಗೆ ಚರಮೂರ್ತಿ ಪಟ್ಟಗಟ್ಟಿದರು ಕ್ಷಮಿಸಬೇಕು ಎಂದು ಕಕ್ಕಾಬಿಕ್ಕಿಯಾಗಿ ತಳಮಳಿಸಿದನು. ಚಾಂಡಾಲ ಮಗನೆ ನಿನ್ನಲ್ಲಿ ನಮ್ಮದೇನು ಕೆಲಸ ಬಿಡು ಎಂದು ಆಗಲೇ ಹಟಯೋಗಿಯಾದರು. ದಿಟ್ಟಯೋಗಿಯಾದರು ವೀರಯೋಧರಾದರು. ವೈರಾಗ್ಯದೊಡನೆ ವೀರ ಗಂಭೀರ ಸ್ವರೂಪಿಗಳಾದರು ಶೂನಕನನ್ನೂ ಕೆಣಕುವ ಸಿಂಹವಾದರು, ಶಾರ್ದೂಲ ಕ್ರೂರತೆ ಆವರಿಸಿತು. ಅತ್ತ ಮಡಿವಾಳೇಶ್ವರ ಸ್ವಾಮಿಗಳ ರೌದ್ರ ವೃತ್ತಿಯನ್ನು ವೀರಾವೇಶದ ನುಡಿಗಳನ್ನು ಕೇಳಿದ ಪುರಜನರು ಸಂಪೂರ್ಣ ಹೌಹಾರಿದರು. ಕಿತ್ತೂರ ಜನತೆಗೆ ಆಪತ್ತು ಬರುವದೆ ನಿಜ ಮಡಿವಾಳೇಶ್ವರ ಸ್ವಾಮಿಗಳಿಂದ ಅನಾಹುತವಾಗುವದೆ ಖಂಡಿತವೆಂದು ಜನತೆಯಲ್ಲಿ ಭಯಹುಟ್ಟಿ ತಮ್ಮ ತಮ್ಮ ಮನೆ ಬಾಗಿಲವನ್ನು ಭದ್ರಪಡಿಸಿ ಒಳಗೆ ಕುಳಿತವರು ತಪ್ಪಿ ಹಣುಕಿ ಹಾಕುವ ಸಾಹಸವನ್ನು ಸಹ ಮಾಡದಾದರು. ಬಾಪೂ ಸಾಹೇಬನಿಗೂ ಮಡಿವಾಳೇಶ್ವರ ಸ್ವಾಮಿಗಳ ವೀರಾವೇಶದ ಸಂಗತಿ ತಿಳಿದು ರಾಜವಾಡೆಯ ಬಾಗಿಲನ್ನು ಭದ್ರಪಡಿಸಲು ಹೇಳಿ ಹೆಚ್ಚಿನ ಕಾವಲುಗಾರರನ್ನು ನೇಮಿಸಿ

ಬೀಗ ಮುದ್ರೆಗಳಿಂದ ಅರಮನೆಯ ಹೊರ ಬಾಗಿಲನ್ನು ಭದ್ರಗೊಳಿಸಿ ಒಳಗಡೆಯಲ್ಲಿ ಹೌಹಾರಿ ಕುಳಿತುಕೊಂಡರು.

ಇತ್ತ ಕಲ್ಮಠದಿಂದ ಹೊರಟು ಸ್ವಾಮಿಗಳು ವೀರಾವೇಶದಿಂದ ಅರಮನೆಯ ಬಾಗಿಲಕ್ಕೆ ಬಂದು ಎಲವೋ ಮದಾಂಧನಾದ ಬಾಪೂ ಸಾಬ್ಯ ನೀಚ ನಿರ್ಲಜ್ಜನಾದ ಬಾಪ್ಯಾ ಮೋಸದಿಂದ ನಯ ವಿನಯಗಳಿಂದ ನಮ್ಮನ್ನು ವಂಚಿಸಿ ಗಂಗಾಜಲ ತಂದುಕೊಡುವದಾಗಬೇಕೆಂದು ಭಿನ್ನೈಸಿಕೊಂಡು ಸಾತ್ವಿಕತೆಯ ಸೋಗಿನಲ್ಲಿ ಸಂಪನ್ನ ಸಜ್ಜನತನದಿಂದ ಮೋಸ ಮಾಡಿ ಕಾಶಿಗೆ ಕಳುಹಿಸಿ ಸಾವಿಲ್ಲದ ಸಮಯ ಸಾಧಿಸಿ ಕಲ್ಮಠದ ನಿರಂಜನ ಪಟ್ಟವನ್ನು ಪರರ ಪಾಲಿಗಿತ್ತಿರುವಿಯಾ ಬಾರಲೇ ಬಾ ಹೊರಗೆ ಧೀರನಾದರೆ ಬಾಗಿಲ ತೆರೆದು ಎದುರಾಗು ಜೀವಗಳ್ಳ ನಾಚಿಕೆ ಇಲ್ಲದವನೇ ನಿರ್ಲಜ್ಜ/ ಷಂಡಶ್ವಾನ ನಿನ್ನ ವಂಶದ ಪುಣ್ಯವಿಲ್ಲಿಗೆ ಮುಗಿಯಿತು ಎಂದು ಆರ್ಭಟಿಸುತ್ತ ಒಂದು ಕೈಯಲ್ಲಿ ಹತಾರವನ್ನು ಮತ್ತೊಂದು ಕೈಯಲ್ಲಿ ಬಂದೂಕವನ್ನು ಪಿಡಿದವರು ಕತ್ತಿಯನ್ನು ಝಳಪಿಸುವವರಾದರು ಉನ್ಮತ್ತ ಯೋಗಿಯಾಗಿ ಉರಿಯ ಹತ್ತಿದರು. ಹಟಯೋಗಿಯಾಗಿ ಹಳಿಯಹತ್ತಿದರು. ದಿಟ್ಟಯೋಗಿಯಾಗಿ ಕಾದಾಟದ ಕಂಕಣ ತೊಟ್ಟರು. ಅದೆಷ್ಟೋ ಹೊತ್ತು ಯೋಗಿಗಳ ವೀರಾವೇಶ ಮುಂದೊವರೆದರೂ ಒಳಗಿದ್ದ ಶಿವಲಿಂಗರುದ್ರಸರ್ಜನು ಎಷ್ಟೊಂದು. ಬಾಯಿ ಬಿಡಲಿಲ್ಲ. ಕದ ತೆರೆಯುವ ಮಾತಂತೂಬಲೂ ದೂರ ಉಳಿಯಿತು. ಬಳಿಕ ಸ್ವಾಮಿಗಳು ರಭಸದ ಹುಚ್ಚಿನಲ್ಲಿ ಮತ್ತಷ್ಟು ಉನ್ಮತ್ತಗೊಂಡು ಉಟ್ಟ ಬಟ್ಟೆಗಳೆಲ್ಲವನ್ನು ಕಳಚಿ ದಿಗಂಬರ ರೂಪದಲ್ಲಿ ಬಟ್ಟೆಗಳನ್ನು ಸುಟ್ಟು ಭಸ್ಮವನ್ನು ಸಿದ್ಧಗೊಳಿಸಿ ಆ ಭಸ್ಮವನ್ನು ಮೈಗೆಲ್ಲ ಧರಿಸಿ ಶಿವ ಮಹಾದೇವನನ್ನು ಧ್ಯಾನಿಸುತ್ತ ಬಾಪ್ಯಾ ನನಗೆ ಮೋಸ ಮಾಡಿದಂತೆ ನಿನ್ನ ರಾಜ್ಯಕ್ಕೂ ನಿನಗೂ ಮೋಸ ಮಾಡುವ ಕಾಲ ದೂರಿಲ್ಲ. ನನ್ನ ನಿರಂಜನ ಪಟ್ಟವನ್ನು ಮೋಸದಿಂದ ಕಬಳಿಸಿದಂತೆ ನಿನ್ನ ರಾಜ್ಯ ಪಟ್ಟ ಅಕ್ಷಯವನ್ನು ಮೋಸದಿಂದ ಕಬಳಿಸಿ ಒಯ್ಯುವ ಕಾಲ ಸಮೀಪವಾಗಿದೆ ಎಂದು ತಿಳಿ. ನಿನ್ನ ಅರಮನೆ ನಿನ್ನ ಐಶ್ವರ್ಯ ನಿನ್ನ ಅಧಿಕಾರ ಅಂತಸ್ತು ಹಾಳಾಗಿ ಹೋಗಲಿ. ಪರರ ಪಾಲಾಗಲಿ, ಎಲ್ಲಿ ನೋಡಿದರಲ್ಲಿ ಕತ್ತೆ ನರಿ ನಾಯಿಗಳು ಹೊರಳಾಡುವವಂತಾಗಲಿ, ಈ ಅರಮನೆಯೆಂದರೆ ಕತ್ತೆಗಳ ಬಿಡಾರವಾಗಲಿ, ನಿನ್ನ

ಅವಸಾನದಲ್ಲಿ ಪರಿ ಸಮಾಪ್ತಿಯಾಗಿ ಶತಮರುಷ ಗತಿಸಿದಂದು ಕಿತ್ತೂರ ರಾಜ್ಯ ವೈಭವ ಮೊದಲಿನಂತೆ ರಾಜಮಾತೆಯರ ಪರಿಶ್ರಮದ ಫಲವಾಗಿ ರೂಪಗೊಳ್ಳಲಿ ಎಂದು ಮೂರು ಬೊಗಸೆ ಮಣ್ಣು ತೂರಿ ವೀರವೀರಾಧಿ ಮಡಿವಾಳೇಶ್ವರರು ಕಿತ್ತೂರನ್ನು ಮರೆತು ಹೊರಟು ಹೋದರು.

———

೨೫ ನೆಯ ಪ್ರಕರಣ

ಅರಣ್ಯವಾಸಿಗಳಾದ ಸ್ವಾಮಿಗಳನ್ನು ಬಂಧಿಸಲು ದೊರೆಯ ಆಜ್ಞೆ

ಕಿತ್ತೂರ ರಾಜವಾಡೆಯಿಂದ ಹೊರಟ ಹಟಯೋಗಿ ಮಡಿವಾಳೇಶ್ವರರು ಉನ್ಮತ್ತಗೊಂಡವರಾಗಿ ಹಾಡಹತ್ತಿದರು.

ಚಾಂಡಾಲರೊ ಇವರು ಚಾಂಡಾಲರೊ
ಚಂಡು ಕೊಯ್ಯುವ ನೀಚರೊ ಇವರು ನೀಚರೊ
ಅಹಂಕಾರ ಅಧಿಕಾರ ಮದೋನ್ಮತ್ತರೊ ಇವರು ಮದೋನ್ಮತ್ತರೊ
ಮೋಹ ಮದಮಾಯಗಳಲ್ಲಿ ಸಿಲುಕಿದವರೊ ಇವರು ಸಿಲುಕಿದವರೊ
ಹೇಯವಾದ ಕಾಯವನಂಬಿ ಮತ್ಸರಕೆ ಇಂಬಗೊಟ್ಟರೊ
ಇವರು ಇಂಬುಗೊಟ್ಟರೊ
ಗಾಯಗೊಂಡ ನಮ್ಮಿಂದ ದೊರೆಯ ವಂಶ ನಾಶ ಕಾಣಿರೊ
ವಂಶ ನಾಶ ಕಾಣಿರೊ
ಮೋಸಮಯ ವಂಚಕರ ಸಂಚಿಗೆ ಸಾಟಿಯಾಗವರು
ಬರುವರು ಕಾಣಿರೊ ಬರುವರು ಕಾಣಿರೊ
ವಿಶ್ವಾಸದಲ್ಲಿ ನಿರಂಜನ ಪ್ರಭುತ್ವ ಹಾಳಾದ ಪರಿಯ ನೋಡಿರೊ
ಪರಿಯ ನೋಡಿರೊ
ಪರಶಿವನು ಪರಿಪರಿಯ ಮಾಯವನೊಡ್ಡಿ ಕಿತ್ತೂರ ಪತನಗೊಳಿಸುವ
ಪರಿಯಕಾಣಿರೊ ಪರಿಯಕಾಣಿರೊ

ಹರನ ಉರಿಗಣ್ಣು ಕಿಡಿ ತಾಕಿ ಕಿತ್ತೂರ ನಾಡ ದೇವಿ ಕಣ್ಣು ಮುಚ್ಚುವ
ಪರಿಯು ಕಾಣಿರೊ ಕಣ್ಣು ಮುಚ್ಚುವ ಪರಿಯು ಕಾಣಿರೊ
ಕೊಂಬು ಮುರಿವ ಕಾಲ ದೂರಿಲ್ಲ ನೋಡಿರೊ ಕಾಲ ದೂರಿಲ್ಲ
ನೋಡಿರೊ
ನಂಬಿ ಭಜಿಪ ರಾಜಮಾತೆಯುರಿಂದಾಗಿ ಗುರು ಪ್ರಭು ಮಡಿವಾಳ
ಮುಂದೆ ಶತ ವರುಷ ಗತಿಷಿದ್ದರಿಂದ ಕಾಯ್ವು ನೋಡಿರೊ ಕಾಯ್ವು
ನೋಡಿರೊ

ಈ ರೀತಿಯಾಗಿ ಉನ್ಮತ್ತದಿಂದ ಹಾಡಿಕೊಂಡು ಕುಣಿಯುತ್ತ ಕಿತ್ತೂರ ಪುರವನ್ನು ಕಲ್ಮಠದ ನಿರಂಜನ ಪ್ರಭುತ್ವ ಪಟ್ಟವನ್ನು ಧಿಕ್ಕರಿಸಿ ಹಟಯೋಗಿಯಾಗಿ ಹೊರಟ ಶಿವಯೋಗಿ ಮಡಿವಾಳೇಶ್ವರರು ಮುಕ್ಕಣ್ಣನ ಮೂರನೇ ಕಣ್ಣಿನೋಪಾದಿಯಲ್ಲಿ ಕೆಂಡದಂತೆ ಕೆಂಪಾದ ಕಣ್ಣುಗಳಿಂದ ಕಿಡಿಗಳನ್ನೇ ಚಿಮ್ಮುತ್ತಿರುವರೇನೋ ಎನ್ನುವ ತೆರದಿ ಕಾಣುತ್ತಿದ್ದರು. ಉರಿದೇಳುವ ಅವರ ಉಗ್ರಾವತಾರದ ನಡಿಗೆಯಲ್ಲಿ ಭೂಮಿ ತಾಯಿ ತತ್ತರಿಸಿ ಹೋದಳು. ಪುರಜನರು ಇಕ್ಕೆಲದ ಬಾಗಿಲ ಕದಗಳನ್ನು ತೆರೆದು ಸಂದುಗಳಲ್ಲಿ ಹಣಕಿ ನೋಡಿ ಹೆದರಿ ಕಣ್ಣು ಮುಚ್ಚಿ ತಂದೆ ಗುರುಸಿದ್ಧೇಶಾ ಮಡಿವಾಳೇಶ್ವರರ ಉಗ್ರ ತೇಜಸ್ಸನ್ನು ಶಾಂತಪಡಿಸಲಾರೆಯಾ ಎಂದು ಬೇಡಿಕೊಳ್ಳಹತ್ತಿದರು. ಹುಚ್ಚರಂತೆ ದಿಗಂಬರ ರೂಪದಲ್ಲಿ ಹೊರಟ ಮಡಿವಾಳೇಶ್ವರ ಸ್ವಾಮಿಗಳು ಮರಡಿಯ ಗುಡಿಯೊಂದರಲ್ಲಿ ಉಳಿದುಕೊಂಡ ಸುದ್ದಿಯು ಬಲು ಬೇಗ ಕಿತ್ತೂರ ಪುರಕ್ಕೆ ತಲುಪಿತು. ಕಲ್ಲಪ್ಪ ಶೆಟ್ಟಿಯಂತಹ ಹಲವಾರು ಕೇಡಾಳಿ ಸ್ವಾರ್ಥಿಗಳು ಶಿವಲಿಂಗರುದ್ರಸರ್ಜ ದೊರೆಗಳಿಗೆ ತಿಳಿಸಲು ಅರಮನೆಯ ವರೆಗೆ ಬಂದರು.

ಆಗ ಕಿತ್ತೂರ ಪುರದಲ್ಲಿ ಅಶುಭ ಸೂಚನೆಗಳೆಂದು ಗೂಗೆಗಳ ಚೀತ್ಕಾರ ನಾಯಿಗಳ ಬೊಗಳುವಿಕೆ ಹಾದಿಗಳು ಹಾಡಿಬೀದಿಗಳಲ್ಲಿ ಹೊರಳಾಡುವದು ರಾಜವಾಡೆಯ ಮೇಲೆ ಹಾರಾಡುವ ನಂದಿ ಧ್ವಜವು ತನ್ನಿಂದ ತಾನೇ ಸರ್ರನೇ ಇಳಿದುಕೊಂಡದ್ದು ಇಷ್ಟಾದರೂ ಶಿವಲಿಂಗರುದ್ರಸರ್ಜನ ಮನವನ್ನು ಆವರಿಸಿದ ಮತ್ಸರದ ಮಾಯೆ ಸರಿಯಲಿಲ್ಲ ಪುರಜನರು ಮಾತ್ರ ಮತ್ತಿಷ್ಟು ಅಳುಕಿದರು ಅಂಜಿದರು ಮುಂಬರುವ ಆಪತ್ತಿಗಾಗಿ ಹೆದರಿ ಹೌಹಾರಿದರು.

ಆಗ ಬಾಪೂ ಸಾಹೇಬನು ಯೋಚಿಸುತ್ತ ದಿಗಂಬರನಾಗಿ ಹುಚ್ಚನಾಗಿ ಹಟ ಯೋಗಿಯಾಗಿ ಅಡವಿ ಸೇರಿದ ಮಡಿವಾಳೇಶ್ವರನನ್ನು ಹಿಡಿದು ತರಿಸಿ ಆನೆ ಕಾಲಿನಿಂದ ತುಳಿಸುವ ಹಂಚಿಕೆ ಹೂಡಿ ಸೈನಿಕರನ್ನು ಹುರುದುಂಬಿಸಿ ಕುದುರೆಗಳನ್ನೇರಿ ಹೋಗಿ ಎಳೆದು ತರುವಂತೆ ಆಜ್ಞಾಪಿಸಿದನು. ಅತ್ತ ಮಡಿವಾಳೇಶ್ವರ ಸ್ವಾಮಿಗಳು ಅಡವಿ ಅಡವಿ ತಿರುಗುತ್ತ ಗುಡಿ ಗುಂಡಾರ ಗಳಲ್ಲಿ ವಾಸಗೈಯುತ್ತಿದ್ದರು. ಹೊಲಕ್ಕೆ ಹೋದವರು ಪರ ಗ್ರಾಮಗಳಿಗೆ ಹೋಗಿ ಬರುವ ಅನೇಕ ಭಕ್ತರು ನಯ ವಿನಯಗಳಿಂದ ನಮಸ್ಕರಿಸಿದರು. ಅದರ ಪರಿವೆ ಇಲ್ಲದೆ ತಾನೇ ತಾನಾಗಿ ಉನ್ಮತ್ತ ಯೋಗಿಯಾಗಿ ಹೀನ ಶಬ್ದಗಳಿಂದ ಹೀಯಾಳಿಸುತ್ತ ಸಿಟ್ಟಿನಿಂದ ನೋಡಿ ದಾಟಿ ಹೋಗುತ್ತಿದ್ದನು. ಅನ್ನ ನೀರಿನ ಪರಿವೆಯ ತಿರುವು ಹಾರಿ ಬಿದಿರು ಮಳೆಗಳ ಆಶ್ರಯದಲ್ಲಿ ಕಲ್ಲು ಗುಂಡುಗಳ ಮೇಲೆ ಒರಗಿ ಹೊತ್ತುಗಳೆಯುತ್ತಿದ್ದನು. ಗಿರಿ ಕಂದರ ಗಳಲ್ಲಿ ಬಿದ್ದು ಕಾಲ ಕಳೆಯುವನು, ಕಲ್ಲು ಮುಳ್ಳುಗಳ ತುಳಿತದಿಂದಾಗಿ ಅಂಗಾಲು ಪಡೆದು ರಕ್ತ ಚಿಮ್ಮಿ ಗಾಯಗಳಲ್ಲಿ ಉಸುಕು ಸೇರಿ ವೇದನೆ ಯಾಗುತ್ತಿರುವದು ಸಹ ಅರುವು ಇಲ್ಲದೇ ತಿರುಗುತ್ತಿದ್ದನು. ಅತ್ತ ರಾವು ತರು ದೊರೆಯ ಆಜ್ಞೆಯಂತೆ ಕುದುರೆಗಳ ಮೇಲೆ ಹತ್ತಿ ಶಿವಯೋಗಿಗಳನ್ನು ಎಳೆದೊಯ್ಯುವದಕ್ಕಾಗಿ ಹುಡುಕುತ್ತಿದ್ದರು. ಕೊನೆಗೊಮ್ಮೆ ನಂದಿ ಹಳ್ಳಿಯ ಗುಡ್ಡದ ಓರೆಯಲ್ಲಿ ಕಲ್ಲಿಗೆ ಕಲ್ಲು ಒಗೆದು ಹುಚ್ಚು ನಗೆಯಲ್ಲಿ ಉನ್ಮತ್ತ ನಗೆಯಲ್ಲಿ ಸಾಗಿದ ಮಡಿವಾಳೇಶರು ರಾಹುತರ ಕಣ್ಣಿಗೆ ಬಿದ್ದರು.

ಆಗ ರಾವುತರು ಮುಂದಾಗಿ ಹಿಡಿಯಲು ಬರುವದನ್ನು ಗುರುತಿಸಿದ ಮಡಿವಾಳೇಶರು ಬನ್ರಲೇ ಭಂಡ ಸೂಳೆಯ ಮಕ್ಕಳೇ ಎಂದು ಬಿರುಗಲ್ಲಿ ನಿಂದ ಬೀಸಿ ಒಗೆಯಹತ್ತಿದರು. ಸಾವಿಗೆ ಸಿದ್ಧರಾಗಿ ಬಂದಿರುವಿರಾ ಎಂದು ಕೇಳಹತ್ತಿದರು. ಅಷ್ಟಾದರೂ ಭಟರು ಮುಂದಾಗಿ ಹೋಗಲು ಹಿಂದೆ ಸರಿಯಿರಿ ಸೂಳೆಯ ಮಕ್ಕಳೆ ವಿನಾಕಾರಣ ಸಾವು ಬಯಸಬೇಡಿರಿ ಎಂದು ಕಲ್ಲುಗಳ ಸುರಿಮಳೆಗರೆಯುವವರಾದರು. ಕಲ್ಲು ಒಗೆಯುತ್ತ ಸಾಗಿದ ಸ್ವಾಮಿಗಳನ್ನು ಬೆಂಬತ್ತಿ ಸೈನಿಕರು ಮುಂದಾಗಹತ್ತಿದರು. ಸ್ವಾಮಿಗಳು ತೂರಿ ಒಗೆದ ಕಲ್ಲುಗಳ ಏಟಿನಿಂದ ಎಷ್ಟೋ ಕುದುರೆಗಳ ಕಾಲು ಮುರಿದವು, ರಾವುತರ ತಲೆ ಒಡೆದವು. ಮೊಣಕಾಲು ಕೆತ್ತಿ ರಕ್ತ ಚಿಮ್ಮಿದವು. ಅದರಲ್ಲಿ

ಕೆಲವು ರಾವುತರ ಅಂಜಿ ಹಿಂಜರಿದು ಓಡಿ ಹೋದರು. ಮತ್ತೆ ಸೇಕರು ಸಾವಿನ ಬಾಯಿಗೆ ತುತ್ತಾದರರು. ಬರುಬರುತ್ತಾ ಯೋಗಿ ಮಡಿವಾಳೇಶರರು ಕಲ್ಲು ಬೀಸುತ್ತ ಶಿಶಂಬರ ಗ್ರಾಮವನ್ನು ಸಮೀಪಿಸಿದರು. ಅಲ್ಲಿಯೂ ಸೈನಿಕರು ಬಿಡದೇ ಬೆನ್ನಟ್ಟಲು ಬೆಳವಡಿಯತ್ತ ಸಾಗಿದರು. ಅವರು ಕಲ್ಲು ಗುಂಡುಗಳನ್ನು ತೂರುವದನ್ನು ಮಾತ್ರ ನಿಲ್ಲಿಸದೆ ಮುಂದಾದರು ಕೊನೆಗೊಮ್ಮೆ ಬೆಳವಡಿಯ ಸಮೀಪದಲ್ಲಿ ಶಿವಯೋಗಿಗಳನ್ನು ಹಿಡಿದರು. ಹಿಡಿದರು ಎನ್ನುವದಕ್ಕಿಂತಲೂ ಸ್ವಾಮಿಗಳು ಇಚ್ಛೆಪಟ್ಟು ಬೇಕಂತಲೆ ಸೈನಿಕರ ಕೈಸೆರೆಯಾದರು ಹಾಗೂ ಸೈನಿಕರನ್ನು ಉದ್ದೇಶಿಸಿ ಎಲವೋ ಭಂಡ ಸೂಳೆಯ ಮಕ್ಕಳಿರಾ ನಮ್ಮನ್ನು ಹಿಡಿದು ಒಯ್ಯುವ ತ್ರಾಣ ನಿಮ್ಮದಲ್ಲ ನಿಮ್ಮಪ್ಪನ ಆ ದೊರೆ ಎನಿಸಿಕೊಂಡವನಿಗೂ ಸಾಧ್ಯವಿಲ್ಲ. ನನ್ನನ್ನು ಒಯ್ಯುವ ಸಾಹಸ ಮಾಡಿ ಕೆಡಬೇಡಿರಿ ಎಂದು ತಿಳಿ ಹೇಳಿದರು.

—೦—೦—

೨೬ ನೆಯ ಪ್ರಕರಣ

ಮಡಿವಾಳೇಶ್ವರನನ್ನು ಬಂಧಿಸಿದ್ದು ಹಾಗೂ ಅವರು ಪುನಃ ಪಾರಾದದ್ದು

ನಂತರ ರಾವುತರ ಮುಖಂಡನು ಮುಂದಾಗಿ ಕರಜೋಡಿಸಿ ಭಕ್ತಿಯಿಂದ ಸದ್ಗುರುವೆ ಒಡೆಯನ ಊಗಳಿದ ಆಳುಗಳು ನಾವು ಒಡೆಯನ ಅಪ್ಪಣೆಯಂತೆ ವರ್ತಿಸುವದು ನನ್ನಧರ್ಮವಲ್ಲವೇ ಎಂದನು. ಶಿವಲಿಂಗ ರುದ್ರುಸರ್ಜ ದೊರೆಗಳು ತಮ್ಮನ್ನು ಹಿಡಿದು ತರದಿದ್ದರೆ ದೇಹಾಂತ ಶಿಕ್ಷೆಗೊಳಗಾಗುವಿರೆಂದು ಕಟ್ಟಪ್ಪಣೆ ಮಾಡಿ ಅಟ್ಟಿರುವನು. ತಂದೆ ಅದಕ್ಕಾಗಿ ತಮ್ಮನ್ನು ಕಿತ್ತೂರಿಗೆ ಒಯ್ಯಬೇಕಾಗಿದೆ ರಕ್ಷಿಸು ಕರುಣಾನಿಧಿಯೆ. ದೊರೆಯ ಆಜ್ಞೆಯನ್ನು ಪಾಲಿಸುವದು ನಮ್ಮ ಕರ್ತವ್ಯವೆಂದನು. ಆಗ ಶಿವಯೋಗಿಗಳು ಮನದಲ್ಲಿಯೇ ನಗುತ್ತ ಇವರು ದೊರೆಯ ಆಜ್ಞೆಯನ್ನು ಪಾಲಿಸುವರಂತೆ ಪಾಲಿಸಲಿ ಎಂದು ಎಲ್ಲವನ್ನು ಅರಿತು ಅರಿಯದವರಂತೆ ಅವರೊಡನೆ ಸಾಧುವಾಗಿ ಹೋಗಹತ್ತಿದರು. ಆದರೆ ಆಗ ಹೊತ್ತು ಮುಳುಗಿ

ಕತ್ತಲಾವರಿಸಿ ದಾರಿ ಕಾಣದಷ್ಟು ಗಂಭೀರ ಸ್ವರೂಪದ ಅಡವಿಯ ಹಾದಿಯನ್ನು ದಾಟುವದು ಕಠಿಣವಾಯಿತು. ಬಳಿಕ ರಾವುತರು ತಮ್ಮತಮ್ಮಲ್ಲಿ ಆಲೋಚನೆ ಮಾಡಿಕೊಂಡು ಬೆಳಗಿನವರೆಗೆ ಸಮೀಪದಲ್ಲಿರುವ ಮಲ್ಲಿಕಾರ್ಜನ ಸ್ವಾಮಿಯ ಮಂದಿರದಲ್ಲಿ ಸ್ವಾಮಿಗಳನ್ನಿಟ್ಟು ಭದ್ರವಾದ ಕಾವಲು ಮಾಡಿ ಮುಂಜಾನೆ ದೊರೆಗಳಿಗೆ ತಿಳುಹಿಸಿದರಾಯಿತೆಂದು ತೀರ್ಮಾನಿಸಿಕೊಂಡು ಗುರುಗಳೊಂದಿಗೆ ಮಲ್ಲಿಕಾರ್ಜುನ ದೇವರ ಗುಡಿಗೆ ಬಂದು ಅವರನ್ನು ಒಳಗೆ ಕಳುಹಿಸಿ ಬಾಗಿಲವನ್ನು ಭದ್ರಪಡಿಸಿ ಕೀಲಿ ಹಾಕಿ ಆರೆಂಟು ಜನ ಭಟರು ಕಾವಲು ಮಾಡಹತ್ತಿದರು. ಅದರಲ್ಲಿ ಇಬ್ಬರು ಮುಂದಾಗಿ ಕಿತ್ತೂರಿಗೆ ಹೋಗಿ ಈ ಸುದ್ದಿಯನ್ನು ಬಾಪೂ ಸಾಹೇಬನಿಗೆ ತಿಳಿಸಿದರು.

ಆಗ ದೊರೆಯು ಈಗ ರಾತ್ರಿಯಲ್ಲಿ ಹೋಗಿ ಮಾಡುವದೇನು ಬೆಳಿಗ್ಗೆ ಅಲ್ಲಿಯವರಿಗೆ ನಾವೇ ಬರುತ್ತೇವೆ, ಆ ಹಟಯೋಗಿ ಮಡಿವಾಳೇಶನ ಸಮಾಚಾರವನ್ನು ತೆಗೆದುಕೊಳ್ಳುತ್ತೇವೆ ಹೋಗಿರಿ ಎಂದು ಅವರವರ ಕರ್ತವ್ಯಕ್ಕೆ ಕಳುಹಿಸಿದನು. ಇತ್ತ ಸ್ವಾಮಿಗಳ ಕಾವಲು ಬಲು ಎಚ್ಚರಿಕೆಯಿಂದ ಸಾಗಿರುವದಾಗಿತ್ತು. ಆಗ ಸ್ವಾಮಿಗಳು ಒಳಗೆ ಗುಡಿಯಲ್ಲಿ ಯಾವ ಪ್ರತೀಕಾರಕ್ಕೂ ಒಳಗಾಗದೇ ಸುಮ್ಮನಿದ್ದವರು ಮತ್ತೇನು ತಿಳಿಯಿತೋ ಏನೋ ಗುಡಿಯ ಗೋಪುರದ ಮೇಲಿನ ಕಲ್ಲೊಂದನ್ನು ಸರಿಸಿ ಮಾಳಿಗೆ ಹತ್ತಿ ಗುಡಿಯ ಹಿಂದಿನ ಮಗ್ಗಲು ಹುಲುಸಾಗಿ ಬೆಳೆದ ಪೊದೆಯಲ್ಲಿ ಹಾರಿ ಪಾರಾಗಿ ದಟ್ಟವಾದ ಅರಣ್ಯದಲ್ಲಿ ಮಾಯವಾಗಿ ಬಿಟ್ಟರು.

ಇತ್ತ ಬೆಳವಡಿಯ ಗ್ರಾಮ ವಾಸಿಗಳು ಅನೇಕ ಭಕ್ತ ಬಾಂಧವರು ಸ್ವಾಮಿಗಳಿಗೆ ಬಂದ ದುಃಸ್ಥಿತಿಗಾಗಿ ಮರುಗುತ್ತ ದೊರೆ ಶಿವಲಿಂಗರುದ್ರ ಸರ್ಜನನ್ನು ಶಪಿಸುತ್ತ ಚಿಂತಿಸಹತ್ತಿದರು. ಅತ್ತ ಬೆಳಗಿನ ಜಾವ ಮುಂದಾಗಲು ದೊರೆ ಎನಿಸಿದ ಶಿವಲಿಂಗರುದ್ರ ಸರ್ಜನು ಭಟರನ್ನು ಕರೆದು ಗುಡಿಯಲ್ಲಿ ಬಂಧಿಸಿಟ್ಟ ಮಡಿವಾಳೇಶನನ್ನು ಕರೆದು ತನ್ನಿರೆಂದು ಆಜ್ಞಾಪಿಸಿ ಬೆಳವಡಿಗೆ ಕಳುಹಿಸಿದನು. ದೊರೆಯ ಆಜ್ಞೆಯಂತ ರಾವುತರು ಬೆಳವಡಿಯ ಮಲ್ಲಿಕಾರ್ಜುನ ದೇವರ ಗುಡಿಗೆ ಬಂದು ಕಾವಲುಗಾರರಿಗೆ ದೊರೆಯ

ಅಪ್ಪಣೆಯನ್ನರುಹಿ ಬಾಗಿಲವನ್ನು ತೆಗೆಯಿಸಿ ಮಡಿವಾಳೇಶ್ವರ ಸ್ವಾಮಿಗಳನ್ನು ಕಿತ್ತೂರಿಗೆ ಒಯ್ಯಲು ಒಳಗೆ ನೋಡುತ್ತಾರೆ. ಸ್ವಾಮಿಗಳ ಸುಳುವು ಹತ್ತಲಿಲ್ಲದಾಗಲು ಹೌಹಾರಿದರು. ಕಂಗೆಟ್ಟು ಕಂಗಾಲರಾದರು. ಅವರೆಲ್ಲರ ಅರ್ಧ ಶಕ್ತಿಯೇ ಉಡುಗಿ ಹೋಯಿತು. ಬಳಿಕ ಅಯ್ಯೋ ನಮಗಿದೆಂಥಾ ಹೊತ್ತು ಬಂದಿತಲ್ಲಾ ಕೈಗೆ ದೊರೆತದ್ದು ಬಾಯಿಗೆ ಬಾರದೇ ಹೋಯಿತಲ್ಲಾ ಈಗೇನು ಮಾಡುವದು ಸ್ವಾಮಿಗಳು ಪಾರಾಗಿ ತಪ್ಪಿಸಿಕೊಂಡು ಹೋಗಿದ್ದಾರೆ ಎಂದು ಹೇಳಿದರೆ ದೊರೆಗಳು ನಮ್ಮನ್ನು ಸುಮ್ಮನೆ ಬಿಡುತ್ತಾರೇನು ಇಲ್ಲಾ ಶಿಕ್ಷೆಗೊಳಪಡಿಸಿ ಹೆಂಡರು ಮಕ್ಕಳು ಸಹಿತ ಊರು ಬಿಡಿಸುತ್ತಾರೆ. ಏನು ಮಾಡೋಣ ಎಂದು ಮಿಡುಕುತ್ತ ಕೊನೆಯ ಪ್ರಯತ್ನವೆಂದು ಅಲ್ಲಿ ಇಲ್ಲಿ ಸುತ್ತಲೂ ಹುಡುಕಿದರು ಆದರೆ ಏನೂ ಉಪಯೋಗವಾಗಲಿಲ್ಲ. ಮುಂದೇನು ಮಾಡಬೇಕೆನ್ನುವದೇ ತಿಳಿಯದಂತೆ ಕಲ್ಲಿನ ಪ್ರತಿಮೆಗಳಂತೆ ನಿಂತುಕೊಂಡರು. ಆಗ ರಾವುತರ ಮುಖಂಡನು—ಅಯ್ಯಾ ಬಂಧುಗಳೇ ಸ್ವಾಮಿಗಳೇನು ಸಾಮಾನ್ಯ ಮಾನವರೇ. ದೊರೆಯ ಮೂರ್ಖತನಕ್ಕೆ ಅವರ ಬಹುಮಾನಕ್ಕೆ ಆಶೆ ಪಟ್ಟು ನಾವು ಕೆಟ್ಟೆವಯ್ಯಾ ಶಿವಯೋಗಿ ಸಾಮ್ರಾಟರನ್ನು ಕೆಣಕಿ ಕೇಡಿಗೆ ಆಮಂತ್ರಣ ಕೊಟ್ಟ ದೊರೆ ಬಾಪೂ ಸಾಹೇಬರಂತೆ ನಮ್ಮದು ಜಗದ ಋಣ ತೀರಿದೆ ಎಂದು ತಿಳಿಯಬೇಕು. ನಡೆಯಿರಿ ಇದ್ದ ಸಂಗತಿಯನ್ನರುಹಿ ಈ ದೊರೆಯ ಕೆಲಸದಿಂದಲೇ ನಿವೃತ್ತರಾಗಿ ಎಲ್ಲಿಯಾದರು ಕೂಲಿ ಮಾಡಿ ಉಪಜೀವನ ಮಾಡಿಕೊಳ್ಳೋಣ ಗುರುಸಿದ್ಧೇಶನ ಕೃಪೆಯಿದ್ದರೆ ಸ್ವಾಮಿಗಳು ಎಂದಾದರೊಂದು ದಿನ ದರ್ಶನವಿತ್ತು ನಮ್ಮನ್ನು ಕ್ಷಮಿಸಿದರೂ ಕ್ಷಮಿಸಬಹುದೆಂದು ಎಲ್ಲರಿಗೂ ತಿಳುವಳಿಕೆಯನ್ನು ನೀಡಿ ಕರೆದುಕೊಂಡು ಕಿತ್ತೂರ ದೊರೆಯ ಸನ್ನಿಧಾನಕ್ಕೆ ಬಂದು ತಾನೇ ಮುಂದಾಗಿ ಕರಜೋಡಿಸಿ—ಪ್ರಭೋ ಸ್ವಾಮಿಗಳು ಅಂತಹ ಭದ್ರವಾದ ಕಾವಲು ಇದ್ದರೂ ಬಾಗಿಲಿಗೆ ಹಾಕಿದ ಬೀಗಮುದ್ರೆ ಹಾಗೆ ಇದ್ದು ಅವರು ಪಾರಾಗಿ ಹೋಗಿದ್ದಾರೆ. ಅವರು ಪಾರಾದ ಪರಿಯನ್ನು ನಾವರಿಯೆವು ಕ್ಷಮಿಸಬೇಕೆಂದು ಅರಿಕೆ ಮಾಡಿಕೊಂಡನು.

ಆಗ ಶಿವಲಿಂಗರುದ್ರಸರ್ಜನು ಸಿಂಹ ಗರ್ಜನೆಯಿಂದ—ಏನೆಂದೇ ಮಡಿವಾಳೇಶಾ ತಪ್ಪಿಸಿಕೊಂಡು ಹೋದನೇ ಎಂದು ಕರಕರನೇ ಹಲ್ಲು

ಕಡಿದು ಸಂತಾಪದ ಭರದಲ್ಲಿ ಥೂ ಕರ್ತವ್ಯ ಭ್ರಷ್ಟರೇ ಎಂದು ಚೀ ‹
ಕೊಂಡನು.

ಆಗಲೂ ರಾವುತರ ಮುಖಂಡನೇ ಮುಂದಾಗಿ—ಪ್ರಭೋ ನಾವು ಕರ್ತವ್ಯ ಭ್ರಷ್ಟರಾಗಿಲ್ಲವೆಂದು ಗುರುಸಿದ್ಧೇಶನ ಸಾಕ್ಷಿಯಲ್ಲಿ ನಿಜವನ್ನೇ ನುಡಿಯುತ್ತಿರುವೆವು ಕರ್ತವ್ಯಶಾಲಿಗಳಾಗಿ ಮೈಯೆಲ್ಲ ಕಣ್ಣಾಗಿಸಿಕೊಂಡು ಕಾವಲು ಮಾಡುತ್ತಿದ್ದರೂ ಅದು ಹೇಗೆ ಪಾರಾದರೋ ಏನೋ ತಿಳಿಯದು. ಬಳಿಕ ಸಮಾಧಾನಪಡಿಸು ರೀತಿಯಲ್ಲಿ ದೊರೆಗಳೇ ಮಡಿವಾಳೇಶ್ವರ ಸ್ವಾಮಿಗಳೆಂದರೆ ಸಾಮಾನ್ಯರಲ್ಲ. ಅವರನ್ನು ಬಂಧಿಸುವ ಸಾಹಸದಲ್ಲಿ ನಾವು ಮೂರ್ಖರಾಗಿದ್ದೇವೆ. ದೇವತಾ ಪುರುಷರಾದ ಅವರನ್ನು ಹಿಡಿದು ಶಿಕ್ಷಿಸುವ ಮಾತಿರಲಿ ನಾವೆಲ್ಲಿ ಅವರ ಶಾಪ ಶಿಕ್ಷೆಯನ್ನು ಅನುಭವಿಸಬೇಕಾಗುವದೋ ಎಂದು ತಮ್ಮ ತಮ್ಮ ಅನುಭವಗಳನ್ನು ತೋಡಿಕೊಂಡು ದೊರೆಯ ಸಂತಾಪವನ್ನು ಹೆಚ್ಚಿಸಿದರು. ಏನು ಹೇಳಿದರೂ ದೊರೆ ಮಗನಿಗೆ ವಿವೇಕ ಮೂಡಲಿಲ್ಲ. ಆತನ ಮಂಕು ಬುದ್ಧಿಗೆ ಮಡಿವಾಳೇಶ್ವರ ಸ್ವಾಮಿಗಳ ಮಹಿಮೆ ಹೊಳೆಯಲಿಲ್ಲ. ಅಂತೆ ! ಭಟರನ್ನು ಮನಬಂದಂತೆ ಹೀಯಾಳಿಸಿ ಕರ್ತವ್ಯಭ್ರಷ್ಟ ಮಕ್ಕಳೆಂದು ಬೈದು ಛೀಮಾರಿ ಮಾಡಿ ಕಳುಹಿಸಿದನು. ಬಳಿಕ ತನ್ನ ಸೇಡಿನ ಹಂಬಲಕ್ಕೆ ಇನ್ನಷ್ಟು ಇಂಬುಗೊಟ್ಟು ಆಪ್ತಾಲೋಚನೆಯಲ್ಲಿ ಕಲ್ಲಪ್ಪ ಶೆಟ್ಟಿಯಂತಹ ಸ್ವಾರ್ಥಿಗಳೊಡನೆ ಚರ್ಚೆಯಾಗಿ ಹೇಗಾದರೂ ಮಾಡಿ ಸಮಯ ಸಾಧಿಸಿ ಮಡಿವಾಳೇಶನನ್ನು ಹಿಡಿದ ರಿಸಲೇಬೇಕು ಸರಿಯಾದ ಶಿಕ್ಷೆಗೆ ಗುರಿಪಡಿಸಲೇಬೇಕೆಂದು ತೀರ್ಮಾನವಾಯಿತು. ಆಗ ದೊರೆಯ ಕುದಿಯುತ್ತಿರುವ ಹೃದಯವು ತನ್ನಲ್ಲಿ ತಾನೇ ಮಡಿವಾಳೇಶಾ ಈ ದೊರೆರಾಯನ ಕೈಯೊಳಗಿಂದ ಪಾರಾದವನು ಅದೆಷ್ಟು ದಿನ ಬಾಳುವೆಯೋ ನೋಡೋಣ ಸಮಯ ಬರಲಿ ಎಂದು ಬಡಬಡಿಸುತ್ತ ಮತ್ಸರದಲ್ಲಿ ಕೋಪದ ಕಿಚ್ಚನ್ನು ಮತ್ತಷ್ಟು ಹೊತ್ತಿಸಿಕೊಂಡು ಉರಿಯ ಹತ್ತಿದನು. ಆಗ ಮಡಿವಾಳ ಸ್ವಾಮಿಗಳು ತಪ್ಪಿಸಿಕೊಂಡುದು ಮತ್ಸರದ ಉರಿವ ಕಸದಲ್ಲಿ ಈರ್ಷೆಗೊಳ್ಳುವಂತಹ ಎಣ್ಣೆ ಸುರುವಿದಂತಾಯಿತು.

ಬಳಿಕ ಬಾಪೂ ದೊರೆಯ ಮಂತ್ರಿ ಮುಖಂಡರು ಸಂಪನ್ನರಾದ ಗ್ರಾಮ ಪ್ರಮುಖ ದೈವದವರು ದೊರೆಯ ಉದ್ದಾಮತನದ ಜಿದ್ದು ದ್ವೇಷಗಳಿಂದ ಕಿತ್ತೂರ ನಾಡಿಗೆ ಅದಾವ ಆಪತ್ತು ಬರುವದೋ ಏನೋ ಎಂದು ಚಿಂತಿಸ ಹತ್ತಿದರಲ್ಲದೇ ಮಹಾ ಶಿವಯೋಗಿಗಳನ್ನು ಕೆಣಕುವ ಛಲವೇಕೆ ಹುಟ್ಟಿಕೊಂಡಿತೋ, ಸಿಂಹದ ಮುಂದೆ ನರಿಯ ಆಕ್ರೋಶಗೊಂಡಂತೆ ಏನಿದು ದೊರೆಯ ಸಾಹಸವೋ ವಿನಾಶ ಕಾಲಕ್ಕೆ ಹುಟ್ಟಿಕೊಂಡ ದುರ್ಬುದ್ಧಿಯೋ ಎಂದು ಬುದ್ಧಿ ಹೇಳುವ ಸಾಹಸ ಮಾಡಿ ನೋಡಿದರು. ಉಪಯೋಗವಾಗಲಿಲ್ಲ. ಸ್ವಾಮಿಗಳನ್ನು ಇನ್ನಾದರೂ ಹುಡುಕಿ ಕರೆತಂದು ಕ್ಷಮೆ ಕೇಳಿ ಕಾಪಾಡಬೇಕೆಂದು ಬಿನ್ನವಿಸಿಕೊಳ್ಳುವದಾದರೆ ಮುಂಬರುವ ಆಪತ್ತಿನಿಂದ ಪಾರಾಗಬಹುದೆಂದು ಪರಿಪರಿಯಿಂದ ತಿಳುಹಿಸಿ ಹೇಳಿದರು! ಏನೆಂದರೂ ದೊರೆಯು ತನ್ನ ಹಟ ಸಾಧನೆಯ ಮಾತುಗಳನ್ನಾಡಿದನೇ ಹೊರತು ಶಿವಯೋಗಿಗಳ ಹೆಸರೆತ್ತಿದರೆ ಉರಿದು ಬೀಳಹತ್ತಿದರು.

ಆಗ ಮಂತ್ರಿ ಮುಖಂಡರು, ದೈವದವರು ಉಪಾಯಗಾಣದೇ ತಂದೆ ಗುರುಸಿದ್ಧೇಶಾ ಕಿತ್ತೂರ ನಾಡದೇವಿಯ ಮಾನ ರಕ್ಷಣೆಯ ಭಾರವೆಲ್ಲವೂ ನಿನ್ನನ್ನೇ ಕೂಡಿದೆ ಎಂದು ಉಸುರುಗರೆಯುವರಾದರು.

— — — —

೨೭ ನೆಯ ಪ್ರಕರಣ

ಸೊಗಲದಿಂದ ಬೆಳವಡಿಗೆ ಬಂದು ಜಕಾತಿಯವರ ಮನೆಯಲ್ಲಿ ಉಳಿದುಕೊಂಡಿದ್ದು

ಮಲ್ಲಿಕಾರ್ಜುನ ಗುಡಿಯಿಂದ ಪಜರಾದ ಸ್ವಾಮಿಗಳು ಹಲವಾರು ದಿವಸ ಗುಡ್ಡ ಗುಹೆಯಲ್ಲಿ ನೀರಾಹಾರಗಳನ್ನು ತ್ಯಜಿಸಿ ಮುಂದಿನ ಪಯಣವನ್ನು ಯೋಚಿಸುತ್ತ ತಿರುಗಿದರು. ಕಲ್ಲು ಮುಳ್ಳುಗಳ ಪರವೆಯಿಲ್ಲ, ಗಿಡ ಗಂಟಿಗಳು ತಾಕುವದೆಂಬ ಅರುವಿಲ್ಲ. ವಿಷಜಂತು ಕ್ರೂರ ಪ್ರಾಣಿಗಳ ಭಯವಿಲ್ಲ, ಮಳೆ ಚಳಿಗಾಳಿಗಳ ಹೆದರಿಕೆಯು ಬಿಸಿಲು ಬೇಗೆಯ ಭಯವಂತೂ ಮೊದಲಿಲ್ಲ. ಹೀಗಾಗಿ ತಮ್ಮ ಬಾಳ ಚಿತ್ರವನ್ನು ಅದಾವ ರೀತಿ ಚಿತ್ರಿಸಿಕೊಳ್ಳಬೇಕೆಂದು

ಯೋಚಿಸುತ್ತಿದ್ದರೋ ಏನೋ ಕೊನೆಗೊಮ್ಮೆ ಮಾಯೆಯ ಮುಸುಕು ಕಿತ್ತೊಗೆದು ಹೊರಟರವರು ಸೊಗಲದ ಪುಣ್ಯಕ್ಷೇತ್ರಕ್ಕೆ ದಯಮಾಡಿಸಿದರು.

ಅಷ್ಟರೊಳಗಾಗಿ ಬೆಳವಡಿಯ ಗ್ರಾಮದವರು ಮಡಿವಾಳ ಸ್ವಾಮಿಗಳನ್ನು ಕಾಣಬೇಕೆಂದು ಮಲ್ಲಿಕಾರ್ಜುನ ಗುಡಿಯತ್ತ ನಡೆದಿರಲು ಕಿತ್ತೂರಿನ ರಾವುತನೊಬ್ಬ ಭೆಟ್ಟಿಯಾಗಿ ಮಡಿವಾಳ ಸ್ವಾಮಿಗಳು ಅಂದೇ ಭಟರಿಂದ ತಪ್ಪಿಸಿಕೊಂಡು ಹೋಗಿದ್ದಾರೆ ಹತ್ತೆಂಟು ಜನ ಕಾವಲುಗಾರರು ಕಣ್ಣೆವೆ ಬಡಿಯದೆ ಕಾಯುತ್ತಿರುವಾಗ ಬೀಗ ಮುದ್ರೆಯಿಂದ ಬಾಗಿಲನ್ನು ಬಂಧಿಸಿರುವಾಗ ಅದು ಹೇಗೆ ಪಾರಾದರೆಂದು ಚಕಿತರಾಗಿ ಗುಡಿಗೆ ಬಂದು ಪರೀಕ್ಷಿಸಲು ಮೇಲೆ ಗೋಪುರದ ಕಲ್ಲೊಂದು ಕಿತ್ತು ಬಿದ್ದಿರುವದು ಕಂಡು ಗುರುಗಳು ಗೋಪುರದ ಕಲ್ಲು ಕಿತ್ತುತೆಗೆದು ಈ ಕಿಂಡಿಯಿಂದ ಪಾರಾಗಿ ಹೋಗಿದ್ದಾರೆಯಲ್ಲಾಯೆಂದು ಆಶ್ಚರ್ಯಗೊಂಡರು ಏನೇ ಆಗಲಿ ದುಷ್ಟನಾದ ದೊರೆಯ ಉದ್ಧಾನಮತನಕ್ಕೆ ಒಳಗಾಗದೆ ಪಾರಾಗಿರುವರಲ್ಲಾ ಅದೇ ಸಂತೋಷವೆಂದು ಕುಣಿದಾಡಿದರು. ಅತ್ತ ಸೊಗಲದ ಕೊಳ್ಳದಲ್ಲಿದ್ದ ಸ್ವಾಗಳು ಅನ್ನ ನೀರು ಇನ್ನಿತರ ಆಹಾರಗಳನ್ನು ಮುಟ್ಟದೆ ಹನ್ನೊಂದು ದಿನಗಳವರಿಗೆ ಉಗ್ರವಾದ ತಪಸ್ಸನ್ನು ಆಚರಿಸಿ ದೇವನೊಲುಮೆ ಧ್ಯಾನ ತಲ್ಲೀನತೆಯಲ್ಲಿ ಕಾಲಕಳೆದು ಬಳಿಕ ಹನ್ನೆರಡನೆ ದಿವಸ ಬೆಳವಡಿ ಗ್ರಾಮಕ್ಕೆ ಆಗಮಿಸಿ ಭಕ್ತಜನರಿಗೆ ದರ್ಶನವಿತ್ತು ಬೆಳವಡಿಯ ಗ್ರಾಮವು ಆನಂದ ಸಾಗರದಲ್ಲಿ ಲೋಲಾಡುವಂತೆ ಮಾಡಿದರು.

ಬೆಳವಡಿಯ ಭಕ್ತರು ಸ್ವಾಮಿಗಳು ಆಗಮನದ ಸುದ್ದಿಯನ್ನು ಕೇಳಿ ತಂಡೋಪತಂಡವಾಗಿ ಗುರುಗಳ ದರ್ಶನಕ್ಕೆ ಸಾಷ್ಟಾಂಗ ನಮಸ್ಕಾರ ಹಾಕಿ ಆಶೀರ್ವಾದ ಪಡೆಯಹತ್ತಿದರು. ಆಗ ಮಡಿವಾಳೇಶ್ವರ ಸ್ವಾಮಿಗಳು ಜಕಾತಿ ಬಸವಲಿಂಗಪ್ಪ ಎಂಬ ಭಕ್ತನನ್ನು ಕರೆದು ಆತನ ಮನೆಯಲ್ಲಿ ಉಳಿಯುವ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಲು ಬಸವಲಿಂಗಪ್ಪ ಭಕ್ತನ ಆನಂದಕ್ಕೆ ಅಳತೆ ಇಲ್ಲದಾಯಿತು. ಬಸವಲಿಂಗಪ್ಪ ಭಕ್ತ ಮಹಾಶಯನು ತಂದೆ ಗುರುವೆ ಪ್ರಭುವೆ ನಾನೆಷ್ಟು ಜನ್ಮಗಳಲ್ಲಿ ಮಾಡಿದ ಪುಣ್ಯ ಫಲವೋ ಅಂತೇ ತಮ್ಮ ಪಾದ ಧೂಳದಿಂದ ನನ್ನಗೃಹವನ್ನು ಪಾವನಗೊಳಿಸುವ ಪುಣ್ಯಶ್ರೀ ನಿಧಿಯಾಗಿ ದೊರೆತಿರುವರೆಂದು ಸ್ವಾಮಿಗಳ ಇಚ್ಛೆಯಂತೆ

ಸಕಲ ವ್ಯವಸ್ಥೆಗಳೊಡನೆ ಸ್ವಾಮಿಗಳ ಲಿಂಗಪೂಜಾಧಿಕಾರ್ಯಗಳು ಯಥಾಪ್ರಕಾರ ಜರಗುವಂತೆ ವ್ಯವಸ್ಥೆ ಮಾಡಿ ಮನೆಗೆ ಕರೆತಂದರು.

ಬಸವಲಿಂಗಪ್ಪ ಮನೆಯಲ್ಲಿದ್ದ ಸ್ವಾಮಿಗಳು ಒಂದುದಿನ ಬಸವ ಲಿಂಗಾ ಎಂದು ಕೂಗಿ ಹತ್ತಿರಕರೆದು ಕೂಡ್ರಿಸಿಕೊಂಡು ಅಯ್ಯಾ ಭಕ್ತನೆ ನಮ್ಮಿಂದಾ ಒಂದು ಅಪರಾಧವನ್ನು ಸರಿಪಡಿಸುವಿಯಾ ಎಂದು ಕೇಳಿದರು. ಆಗ ಬಸವಲಿಂಗಪ್ಪನು ಬುದ್ಧಿ ತನುಗಾಗಿ ಈ ಶಿರ ತರಿದಿಡಲು ಸಿದ್ಧನಿರುವೆ ಅಪ್ಪಣೆಯಾಗಬೇಕೆಂದು ಬಿನ್ನೈಸಿಕೊಂಡನು.

ಆಗಸ್ವಾಮಿಗಳು—ಅಯ್ಯಾ ಭಕ್ತ ಶ್ರೇಷ್ಠನೇ ನಮ್ಮನ್ನು ಮಲ್ಲಿಕಾ ರ್ಜುನ ಸ್ವಾಮಿಯು ಮಂದಿರದಲ್ಲಿ ಬಂಧಿಸಿಟ್ಟಾಗ ಉಪಾಯಗಾಣದೆ ಗೋಪು ರದ ಕಲ್ಲೊಂದನ್ನು ಕಿತ್ತೊಗೆದು ಸ್ವಾಮಿಯ ನೆರಳನ್ನೇ ಸರಿಸಿದಂತಾಗಿದೆ ಈ ಅಪರಾಧದಿಂದ ಮಲ್ಲಿಕಾರ್ಜುನ ದೇವರ ಕುಪಿತನಾಗಬಹುದು. ಅದಕ್ಕಾಗಿ ಗುಡಿಯ ಮೇಲಿನ ಗೋಪುರದ ಕಲ್ಲು ಹಾಕಿಸಿ ಸರಿಪಡಿಸುವದು ನಿನ್ನ ಪಾಲಿಗಿತ್ತ ಕರ್ತವ್ಯವೆಂದು ನುಡಿದರು. ಬಳಿಕ ಸ್ವಾಮಿಗಳ ನುಡಿಯನ್ನು ಕೇಳಿದ ಬಸವಲಿಂಗಪ್ಪನು ತ್ವರಿತದಲ್ಲಿ ಒಡ್ಡರನ್ನು ಕರೆಯಿಸಿ ಗುಡಿಯ ಮೇಲಿನ ಗೋಪುರದ ಕಲ್ಲು ಹಾಕಿಸಿ ಮೊದಲಿನಂತೆ ಭದ್ರಗೊಳಿಸಿ ಮನೆಗೆ ಬಂದು ಸ್ವಾಮಿಗಳಿಗೆ ನಮಸ್ಕರಿಸಿ ತಮ್ಮ ಮನದಾಸೆಯಂತೆ ಕಲ್ಲು ಹಾಕಿಸಿ ಬಂದಿರುವದಾಗಿ ಬಿನ್ನಮಿಸಿಕೊಂಡನು. ಭಕ್ತನ ನಿಷ್ಠಾಗುಣ ಕರ್ತವ್ಯದಕ್ಷತೆ ಯನ್ನು ಕೇಳಿದ ಸ್ವಾಮಿಗಳು, ಮಾಡಿದ ಅಪರಾಧದಿಂದ ಪಾರಾದೆವೆಂದು ಸಂತೋಷಗೊಂಡರು. ಬಳಿಕ— ಬಸವಲಿಂಗಪ್ಪಾ ಈಗ ನಮ್ಮ ಮನಸ್ಸಿಗೆ ಸಮಾಧಾನವಾಯಿತು. ಸ್ವಾಮಿಕಾರ್ಯದಲ್ಲಿ ನಿಷ್ಠೆ ವಹಿಸ ಕಾರ್ಯಗೈದ ನಿನ್ನ ವಂಶ ಸುಖ ಸಂಪದಗಳಿಂದ ಬೆಳಗಲೆಂದು ಆಶೀರ್ವದಿಸಿದರು ಸ್ವಾಮಿಗಳ ಆಶೀರ್ವಾದದಂತೆ ಬೆಳವಡಿ ಜಕಾತಿಯವರ ಮನೆತನ ಈಗಲೂ ಸುಖ ಸಂಪತಭರಿತವಾಗಿದೆ. ಸ್ವಾಮಿ ಕಾರ್ಯದಲ್ಲಿ ಹೆಸರು ವಾಸಿಯಾಗಿದೆ.

— — — —

೨೮ ನೆಯ ಪ್ರಕರಣ

ಗುಡಿಯಿಂದ ಗುಪ್ತಗಾಮಿಯಾಗಿ ಕಾಶಿಗೆ ಹೋಗಿದ್ದು

ಜಕಾತಿ ಬಸವಲಿಂಗಪ್ಪನ ಮನೆಯಲ್ಲಿದ್ದ ಸ್ವಾಮಿಗಳು ತಮ್ಮ ನಿಷ್ಠೆ ನೇಮಗಳನ್ನು ಪೂರೈಸುತ್ತ ಕಾಲ ಕಳೆಯುತ್ತಿದ್ದರು. ಆದರೆ ಒಂದು ದಿನ ಮತ್ತೇನು ತಿಳಿಯಿತೋ ಏನೋ ಕಂಬಾರ ಕಾಳಪ್ಪನೆಂಬವನನ್ನು ಬಸವಲಿಂಗಪ್ಪನ ಮನೆಯುವರೆಗೆ ಕರೆಯಿಸಿ ಅಯ್ಯಾ ಪಂಚಾಳ ಶ್ರೇಷ್ಠನೆ ನಮ್ಮ ಮಾತನ್ನು ನಡೆಸುವಿಯಾ ಎಂದು ಕೇಳಿದರು. ಆಗ ಅವನು ಬುದ್ಧಿ ತಮ್ಮ ಮಾತನ್ನು ಅಕ್ಷರಶಃ ಪಾಲಿಸುವೆನೆಂದು ಬಿನ್ನವಿಸಿಕೊಂಡನು. ಆಗ ಸ್ವಾಮಿಗಳ ನಸುಕನ್ನು ಕಾಳಪ್ಪಾ ನಮಗೆ ಒಂದು ಜತೆ ಒಳ್ಳೇ ಬೇಡಿಗಳನ್ನು ಸಿದ್ಧಪಡಿಸಿ ತಂದುಕೊಡಯ್ಯಾ ಎಂದು ಅಪ್ಪಣೆ ಮಾಡಿದರು. ಆಗ ಕಾಳಪ್ಪನು ಸ್ವಾಮಿಗಳ ವಾಣಿಯಲ್ಲಿ ಅದೇನೋ ಅನಿಷ್ಟ ಸೂಚನೆ ತುಂಬಿದೆ ಎಂದು ಅರಿತವನಾದರೂ ನಿರ್ವಾಹವಿಲ್ಲದೆ ಒಪ್ಪಿಕೊಂಡು ಬೇಡಿಗಳನ್ನು ಸಿದ್ಧಪಡಿಸಿಕೊಂಡು ಬರಲು ತನ್ನ ಕುಲುಮೆಗೆ ಹೋದನು.

ಆಗ ಸ್ವಾಮಿಗಳಿಗೆ ಮತ್ತೇನು ಹೊಳೆಯಿತೋ ಏನೋ ಕೆಲವು ಕಾಲ ತಡೆದು ಬಸವಲಿಂಗಪ್ಪನನ್ನು ಕರೆದು ಬೇಗ ಹೋಗಿ ಆ ಹೂಗಾರ ಹೂವಪ್ಪನನ್ನು ಕರೆದುಕೊಂಡು ಬಾ ಎಂದು ಅಪ್ಪಣೆ ಮಾಡಿದರು. ಬಸವಲಿಂಗಪ್ಪನು ಕೂಡಲೇ ಹೂವಪ್ಪನ ಹತ್ತಿರ ಹೋಗಿ ಕರೆದುಕೊಂಡು ಬಂದನು. ಆಗ ಬಸವಲಿಂಗಪ್ಪನ ಬೆಂಬತ್ತಿ ಬಂದ ಹೂವಪ್ಪ ಸ್ವಾಮಿಗಳ ಪಾದಗಳಿಗೆ ನಮಸ್ಕರಿಸಿ ಅಪ್ಪಣೆಯ ದಾರಿಯನ್ನು ಅನುಗ್ರಹಿಸಿ ಬುದ್ಧಿ ಎಂದನು. ಆಗ ಯೋಗ ನಿದ್ರೆಯಲ್ಲಿ ಮುಳುಗಿದ ಸ್ವಾಮಿಗಳು ಚಟ್ಟನೇ ಎಚ್ಚತ್ತು ಓಹೋ ಹೂವಪ್ಪಾ ಬಂಧಿರುವೆಯಾ ಭಕ್ತಾ ನಿನ್ನಿಂದ ನಮಗೊಂದು ಉಪಕಾರವಾಗಬೇಕಾಗಿದೆಯೋ ಎಂದು ನುಡಿದರು. ಏನು ಬುದ್ಧಿ ತಮ್ಮಂತಹ ಸಮರ್ಥ ಶಿವಯೋಗಿವರೇಣ್ಯರಿಗೆ ನನ್ನಂಥ ಪಾಮರನ ಉಪಕಾರವೇ ಅಪ್ಪಣೆ ಮಾಡಿ ತಂದೆ ಎಂದು ಬೇಡಿಕೊಂಡನು. ಆಗ ಸ್ವಾಮಿಗಳು ಹೂವಪ್ಪಾ ನಮಗೆ ನಾಲ್ಕು ಅಂದವಾದ ಹೊವಿನ ಹಾರಗಳು ಬೇಕಾಗಿವೆ, ಬೇಗ ಸಿದ್ಧಪಡಿಸಿ ತಂದುಕೊಡು ಎಂದು ಅಪ್ಪಣೆ ಮಾಡಿದರು.

ಆಗ ಹೂವಪ್ಪನು ಸ್ವಾಮಿಗಳ ನುಡಿಗೆ ಕಕ್ಕಾವಿಕ್ಕಿಯಾದನು. ಆದರೂ ಸ್ವಾಮಿಗಳ ಬೇಡಿಕೆಯಲ್ಲಿ ಅದೇನೋ ವಿಚಿತ್ರ ಘಟನೆಯ ಸಾಧನೆ ತುಂಬಿದೆ ಎಂದು ತರ್ಕಿಸಿ ಹೂಮಾಲೆಗಳನ್ನು ಸಿದ್ಧಪಡಿಸಿಕೊಂಡು ಬರಲು ತೆರಳಿದನು. ಬಳಿಕ ಸ್ವಾಮಿಗಳು ಬಸವಲಿಂಗಪ್ಪನನ್ನು ಉದ್ದೇಶಿಸಿ ಭಕ್ತ ಶಿಖಾಮಣಿಯೇ ಇಂದು ನಾವು ಜರುಗಿಸುವ ಉತ್ಸವಕ್ಕೆ ಅತುಲ ಖರ್ಚು ವೆಚ್ಚಗಳು ಬರುವುದುಂಟು ನಿನ್ನಿಂದ ಸಾಧ್ಯವೇ ಎಂದು ಕೇಳಿದರು ಅದಕ್ಕೆ ಬಸವಲಿಂಗ ಭಕ್ತನು ಬುದ್ಧಿ ತಮ್ಮ ಅಪ್ಪಣೆಯಾದರೆ ಸರ್ವ ಆಸ್ತಿ ಸಂಪತ್ತು ಸೂರೆಯಾದರೂ ಚಿಂತೆಯಿಲ್ಲ ತಾವು ಸಂತಸಗೊಂಡರೆ ಸಾಕು ಎಂದನು.

ಹಾಗಿದ್ದರೆ ಬಸವಲಿಂಗಪ್ಪ ಒಂದು ಬರಿಗೊಡವನ್ನು, ಒಂದು ತಪೇಲಿ ಎಮ್ಮೆಯ ಹಾಲನ್ನು ಐದು ಸೇರು ಕಲ್ಲುಸಕ್ಕರೆಯ ತುಂಡು· ಐದು ಟೆಂಗಿನ ಕಾಯಿ ಹಾಗೂ ಪೂಜೋತ್ಸವಕ್ಕೆ ಬೇಕಾಗುವ ಸಕಲ ಸಾಮಗ್ರಿಗಳಿಂದ ಸಜ್ಜಾಗಿರು ಬೇಡಿ; ಹೂವಿನ ಮಾಲೆಗಳು ಬರಲಿ ಎಂದರು. ಅಷ್ಟರಲ್ಲಿ ಕಾಳಪ್ಪನು ಬೇಡಿಗಳನ್ನು. ಹೂವಪ್ಪನು ಹೂ ಮಾಲೆಗಳನ್ನು ಸಿದ್ಧಪಡಿಸಿ ಕೊಂಡು ಬಂದರು. ಬಳಿಕ ಗ್ರಾಮಸ್ಥರನ್ನು ಅನೇಕ ಪ್ರಮುಖ ಹಿರಿಯ ರನ್ನು ಕರೆಕಳುಹಿಸಿ ಶಹನಾಯಿ, ಭಜನೆ ಮೇಳದವರನ್ನು ಡೊಳ್ಳು ಹಲಿಗೆ ಯವರನ್ನು ಕರೆಯಿಸಿ ವೀರಭದ್ರ ದೇವಸ್ಥಾನದತ್ತ ಹೊರಟು ಉತ್ಸವವನ್ನು ವೈಭವಪೂರ್ಣವಾಗಿ ಸಾಗಿಸಿಕೊಂಡು ಸ್ವಾಮಿಗಳು ಮುನ್ನಡೆದರು. ಬಳಿಕ ವೀರಭದ್ರ ದೇವರ ಗುಡಿಯನ್ನು ತಲುಪಿದ ಮೇಲೆ ತಮ್ಮ ಪೂಜಾ ಸಾಹಿತ್ಯ ಗಳನ್ನು ಪಡೆದುಕೊಂಡು ಕೊಡ ಹಾಗೂ ಹಾಲಿನ ತಪೇಲಿ, ಕಲ್ಲುಸಕ್ಕರೆ ಯನ್ನು ಮುಂದಿಟ್ಟುಕೊಂಡು ಸ್ವತಃ ತಾವೇ ವೀರಭದ್ರದೇವರ ಪೂಜೆ ಯನ್ನು ಕೈಕೊಂಡ ಮನಸ್ಸು ತೃಪ್ತಿಯಾಗುವ ವರೆಗೆ ಪೂಜಿಸಿ ಬಳಿಕ ಹಾಲಿನಲ್ಲಿ ಕಲ್ಲುಸಕ್ಕರೆಯನ್ನು ಸುರುವಿ ಕಾಯಿ ವಡೆದು ಕರ್ಪೂರ ಬೆಳಗಿ ಹಾಲು ತುಂಬಿದ ತಪೇಲಿಯನ್ನು ಎತ್ತಿ ಗಟಗಟನೆ ಕುಡಿದು ಬಿಟ್ಟರು ತಪೇಲಿ ಹಾಲು ಐದು ಸೇರು ಕಲ್ಲುಸಕ್ಕರೆಯನ್ನು ಜೀರ್ಣಿಸಿದ ಸ್ವಾಮಿಗಳನ್ನು ಕಂಡು ಭಕ್ತ ಜನರು ಗಾಬರಿಯಾದರು. ಆಶ್ಚರ್ಯದಿಂದ ಸ್ವಾಮಿಗಳ ಮುಖಾ ವಲೋಕನ ಮಾಡಿದರು. ಆಗ ಸ್ವಾಮಿಗಳು ವೀರಭದ್ರ ದೇವರ ಪ್ರತಿರೂಪ ವೇನೋ ಎನ್ನುವಂತೆ ತೋರುತ್ತಿದ್ದರು.

ಬಳಿಕ ಸ್ವಾಮಿಗಳು ಬರಿದಾದ ಕೊಡವನ್ನು ತೆಗೆದುಕೊಂಡು ವೀರ ಭದ್ರ ದೇವರ ಗುಡಿಯ ಶಿಖರವನ್ನೇರಿ ನಿಂತುಕೊಂಡು ಬಸವಲಿಂಗಪ್ಪನನ್ನು ಉದ್ದೇಶಿಸಿ ಬಸವಲಿಂಗಾ ಕೊಡದಿಂದ ಏನೇ ಸುರಿದರು ಅವುಗಳನ್ನು ಅಂತ್ಯಜ ರೆನಿಸಿದರು ಮಾತ್ರ ತೆಗೆದುಕೊಳ್ಳಲಿ ಊರವರಾದ ನೀವಾರೂ ಮುಟ್ಟ ಕೂಡದು ಎಂದು ಎಚ್ಚರಿಕೆಯ ನುಡಿಯಿಂದ ಅಪ್ಪಣೆ ಮಾಡಿ ಭಕ್ತ ಜನರು ನೋಡುತ್ತಿರುವಂತೆಯೇ ಕೊಡದ ಬಾಯಿ ಕೆಳಗೆ ಮಾಡಿ ಹಿಡಿದುಕೊಂಡರು. ಆಗ ಕೊಡದಿಂದ ಹೊನ್ನಿನ ರಾಶಿಯೇ ಸುರಿಯಹತ್ತಿತು. ಜನರು ವಿಸ್ಮಯ ಗೊಂಡು ನೊಡುತ್ತ ನಿಂತುಕೊಂಡರು. ಬಳಿಕ ಸ್ವಾಮಿಗಳ ಅಪ್ಪಣೆಯಂತೆ ಅಂತ್ಯಜರೆನಿಸಿದವರು ಅವುಗಳನ್ನು ಆಯ್ದುಕೊಂಡು ತಮ್ಮ ಸಂಸಾರದ ಬರ ಹಿಂಗಿತೆಂದು ಆನಂದದಿಂದ ಹೊರಟು ಹೋದರು. ಆ ಬಳಿಕ ಸ್ವಾಮಿ ಗಳು ಶಿಖರದಿಂದ ಕೆಳಗೆ ಇಳಿದು ಬಂದು ವೀರಭದ್ರ ದೇವರ ಸ್ಥಾನಕ್ಕೆ ಸಾಗಿ ಹೂವಪ್ಪನಿಂದ ತರಿಸಿದ ನಾಲ್ಕು ಮಾಲೆಗಳನ್ನು ಕೊರಳಲ್ಲಿ ಧರಿಸಿ ಬೇಡಿ ಗಳನ್ನು ಕಾಲಿಗೆ ಹಾಕಿಕೊಂಡು ಬಳಿಕ ಬಸವಲಿಂಗಪ್ಪನನ್ನು ಕರೆದು ಅಯ್ಯಾ ಬಸವಾ ಹನ್ನೊಂದು ದಿವಸಗಳ ಪರಿಯಂತ ಬೀಗ ಮುದ್ರೆಯಿಂದ ಗಡಿಯ ಬಾಗಿಲನ್ನು ಭದ್ರಮಾಡಿ ನೀನು ಕಾಯುಕೊಂಡಿರಬೇಕು. ಯಾರು ಏನೇ ಹೇಳಿದರೂ ಬಾಗಿಲನ್ನು ತೆರೆಯಕೊಡದು ತಿಳಿಯಿತೆ ? ಎಂದು ಆಜ್ಞೆಮಾಡಿ ಬೇಡಿ ಹಾಗೂ ಹೂಮಾಲೆಯ ಅಲಂಕಾರದಲ್ಲಿ ಗರ್ಭ ಗುಡಿಯಲ್ಲಿ ಉಳಿದುಕೊಂಡರು. ಬಸಲಿಂಗಪ್ಪನು ಸ್ವಾಮಿಗಳ ಅಪ್ಪಣೆಯಂತೆ ಬಾಗಿಲಿಗೆ ಬೀಗ ಹಾಕಿ ಕಾಯ್ದುಕೊಂಡು ಕುಳಿತನು. ಕೂಡಿದ ಭಕ್ತ ಜನರು ನಿಬ್ಬೆರಗಾಗಿ ಸ್ವಾಮಿಗಳ ಮಹಿಮೆ ಅಗಾಧವಾದದ್ದು ಅಗಮ್ಯ ಅಗೋಚರ ವಾದದ್ದು ಎಂದು ಕೊಂಡಾಡುತ್ತ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಬರುಬರುತ್ತ ಸ್ವಾಮಿಗಳು ತಿಳುಹಿಸಿದ ಪ್ರಕಾರ ಹನ್ನೊಂದು ದಿವಸಗಳು ಸರಿದು ಇಂದು ಬಾಗಿಲುತೆರೆದು ಸ್ವಾಮಿಗಳ ದರ್ಶನ ಪಡೆಯಬೇಕೆಂದು ಅತೀ ಆಸೆಯಿಂದ ಹೊರಟ ಬಸವಲಿಂಗಪ್ಪನಿಗೆ ಸ್ವಾಮಿಗಳಿಂದ ಪತ್ರ ಬಂದು ಮತ್ತಷ್ಟು ಆಶ್ಚರ್ಯವೆನಿಸಿ ಪತ್ರವನ್ನು ಓದಿ ನೋಡಲು ಕಾಶಿಪುರದಿಂದ ಶ್ರೀ ಸ್ವಾಮಿಗಳ ಕ್ಷೇಮ ಸಮಾಚಾರ ಆಶೀವಾದಗಳಿಂದೊಡಗೂಡಿಸಿ ಬರೆದ ಪತ್ರವಿದು ಎಂದು ತಿಳಿಯಿತು.

ಆಗ ಬಸವಲಿಂಗಪ್ಪನ ಆನಂದಕ್ಕೆ ಅಳತೆ ಇಲ್ಲದಾಯಿತು ಓಡುತ್ತ ಹೋಗಿ ಗ್ರಾಮದ ಪ್ರಮುಖ ಭಕ್ತರೆಲ್ಲರನ್ನು ಕೂಡಿಸಿ ಪತ್ರವನ್ನು ತೋರಿಸಿ ಸ್ವಾಮಿಗಳು ಕಾಶಿಯಲ್ಲಿದ್ದಾರೆ ಎಂದು ಆನಂದದಿಂದ ಕುಣಿದಾಡಹತ್ತಿದನು. ಆ ಬಸವಲಿಂಗಪ್ಪನ ಮಾತಿನಿಂದಲೂ ಪತ್ರದ ಸಾರಾಂಶದಿಂದಲೂ ಭಕ್ತ ಜನರಿಗೆ ಆಶ್ಚರ್ಯ ಅಭಿಮಾನ ಆನಂದಗಳು ಏಕಕಾಲಕ್ಕೆ ಉದ್ಭವಿಸಿ ವೀರಭದ್ರ ದೇವರ ಗುಡಿಗೆ ಬಂದು ಕದ ತೆರೆದು ನೋಡಲು ಸ್ವಾಮಿಗಳು ವಳಗೆ ಇಲ್ಲದಾಗಲು ಆ ಪತ್ರವನ್ನು ನಂಬಿ ಅನೇಕ ಭಕ್ತರು ಊರಲ್ಲಿ ಅತೀ ಉತ್ಸಾಹದಿಂದ ಅನ್ನ ಪ್ರಸ್ತವನ್ನು ಮಾಡಿ ಶಿವಯೋಗಿಗಳ ಕೃಪೆಗೆ ಪಾತ್ರರಾದರು.

ಬಳಿಕ ಅದರಲ್ಲಿ ಕೆಲವು ಹಿರಿಯ ಭಕ್ತರು ಶಿವಯೋಗಿಗಳನ್ನು ಕರೆದುಕೊಂಡು ಬಂದು ತಮ್ಮ ಗ್ರಾಮದಲ್ಲಿ ಉಳಿಸಿಕೊಳ್ಳಬೇಕೆಂಬ ಸದಿಚ್ಛೆಯಿಂದ ಕಾಶಿಕ್ಷೇತ್ರಕ್ಕೆ ಹೊರಟರು. ಭಕ್ತರ ಆಗಮನದಿಂದ ಸ್ವಾಮಿಗಳಿಗೆ ಅತ್ಯಾನಂದವಾಯಿತು. ಬಳಿಕ ಬಸವಲಿಂಗಪ್ಪ ಆದಿಯಾಗಿ ಹಲವು ಭಕ್ತರು ಬೆಳವಡಿ ಗ್ರಾಮಕ್ಕೆ ಬರುವ ಕೃಪೆಯಾಗಬೇಕೆಂದು ಬೇಡಿಕೊಳ್ಳಹತ್ತಿದರು. ಆಗ ಸ್ವಾಮಿಗಳು ಭಕ್ತರ ಆಶೆಯನ್ನು ಸಧ್ಯಕ್ಕೆ ನಿರಾಕರಿಸಿದರಾದರೂ ಮುಂದೆ ಕೆಲವು ಕಾಲ ಕಾಶಿ ಕ್ಷೇತ್ರದಲ್ಲಿ ಉಳಿದುಕೊಳ್ಳುವ ಇಚ್ಛೆ ಇದೆ ಎಂದು ಹೇಳಿ ಸ್ವಲ್ಪ ದಿವಸ ತಡೆದು ತಾವೇ ಅಲ್ಲಿಗೆ ದಯಮಾಡಿಸುವದಾಗಿಯೂ ಅಪ್ಪಣೆ ಮಾಡಿ ಬೆಳವಡಿಯ ಭಕ್ತಜನತೆಯನ್ನು ಸಂತಸದಿಂದ ಬೀಳ್ಕೊಟ್ಟರು. ಬೆಳವಡಿಯ ಭಕ್ತರು ಶಿವಯೋಗಿಗಳ ಮಹಿಮೆಯನ್ನು ಕೊಂಡಾಡುತ್ತ ಬೆಳವಡಿಗೆ ಬಂದು ತಲುಪಿದರು.

---

೨೯ ನೆಯ ಪ್ರಕರಣ

ಕಾಶಿಯಲ್ಲಿ ಸ್ವಾಮಿಗಳ ಪಾಂಡಿತ್ಯ ಪ್ರಕಾಶಗೊಂಡದ್ದು

ಕಾಶೀಕ್ಷೇತ್ರ ವಾಸವು ಸ್ವಾಮಿಗಳ ಮನವನ್ನು ಆನಂದಗೊಳಿಸಹತ್ತಿತು ನರಸಿಂಹಾಚಾರ್ಯ ಎಂಬ ಬ್ರಾಹ್ಮಣ ಯುವಕನು ಸ್ವಾಮಿಗಳ ಪಾಂಡಿತ್ಯ

ಪ್ರಭಾವ ಪ್ರಕಾಶವನ್ನು ಗುರುತಿಸಿದವನಾಗಿ ಅವರ ಶಿಷ್ಯತ್ವವನ್ನು ವಹಿಸಿ ಅವರ ಸೇವೆಯನ್ನು ಭಕ್ತಿ ವಿಶ್ವಾಸಗಳಿಂದಲೂ ಒಳ್ಳೇ ಶ್ರದ್ಧೆಯಿಂದಲೂ ಮಾಡುತ್ತಿದ್ದನು. ಸ್ವಾಮಿಗಳಲ್ಲಿ ನರಸಿಂಹಾಚಾರ್ಯನ ವಿದ್ಯಾಭ್ಯಾಸವು ಸಾಗಿರಲು ಕೆಲವು ಅವನ ಮತದ ಪಂಡಿತರು ಅಲ್ಲಗಳೆದರಲ್ಲದೆ ಸ್ವಾಮಿಗಳ ಘನ ಪಾಂಡಿತ್ಯವನ್ನು ಕಂಡು ಅಸೂಹೆ ಪಡಹತ್ತಿದರು.

ಆದರೆ ಈಗ ಸ್ವಾಮಿಗಳು ಕುಹಕಿಗಳ ಮಾತನ್ನು ಅವರ ಹೀಯಾಳಿಕೆಯನ್ನು ಕೇಳಿಯೂ ಕೇಳದಂತೆ ಶಾಂತ ಮನಸ್ಸಿನಿಂದ ಅವರ ನಿಂದನೆಯ ವಾಕ್ಯಗಳನ್ನು ಖಂಡಿಸುತ್ತ ಕಾಲ ಕಳೆಯುವವರಾರು ಆದರೂ ಅವಿವೇಕಿಗಳಾದ ಕೆಲವು ಪುಂಡ ಪಂಡಿತರು ಕಾಶಿಯಲ್ಲಿ ತಮ್ಮ ಪ್ರತಿಭೆಯು ಮುಂದೆ ಈತನ ಪ್ರಭಾವ ಬೆಳಗಹತ್ತಿತಲ್ಲಾ ಎಂದು ಮತ್ಸರಗೊಂಡರಲ್ಲದೆ ದ್ವೇಷದಿಂದ ಕಿಡಿಕಾರಲಾರಂಭಿಸಿದರು. ಇದೆಲ್ಲವನ್ನು ಅರಿತು ಮಡಿವಾಳೇಶ್ವರ ಶಿವಯೋಗಿಗಳು ತಮ್ಮ ಚಿತ್ತವನ್ನು ಮೊದಲಿನಂತೆ ಅಸ್ತವ್ಯಸ್ತಗೊಳಿಸಿಕೊಳ್ಳದೆ ಸ್ತುತಿ ನಿಂದೆಗಳು ಸಮಾನ ರೂಪದವುಗಳೆಂದು ಮಾನಾಪಮಾನಗಳು ಈಶ್ವರನ ಸೊತ್ತು ಎಂದು ನಿರ್ವಿಕಾರ ಮನೋಧರ್ಮದಲ್ಲಿ ಮುನ್ನಡೆದರು ನರಸಿಂಹಾಚಾರ್ಯನ ಅಭ್ಯಾಸವು ಯಥಾಪ್ರಕಾರ ಗುರುಗಳ ಕೃಪೆಯಲ್ಲಿ ಸಾಗುವದಾಯಿತು. ಅವನಾದರೂ ತಮ್ಮ ಮತದವರಿಂದ ಬರುವ ನಿಂದೆಯ ನುಡಿಗಳನ್ನು ಕೇಳಿಯು ಕೇಳದವನಂತೆ ಸ್ವಾಮಿಗಳ ಸೇವೆಯನ್ನು ಮನಮುಟ್ಟಿ ಮಾಡುತ್ತಾ ಇದ್ದನು.

ಆಗ ಕೆಲವು ಕಿಡಿಗೇಡಿ ಪಂಡಿತ ಬ್ರಾಹ್ಮಣರು ಅವಧೂತ ಮಾರ್ಗಾವಲಂಬಿಯಾದ ಈ ಸ್ವಾಮಿ ಶಿವಯೋಗಿ. ಈತನೇನು ಈತನ ಪಾಂಡಿತ್ಯವೇನು ಮಾಡಿತು ನಾವು ಶ್ರೇಷ್ಠ ಬ್ರಾಹ್ಮಣ ವಂಶಜ ಪಂಡಿತರು ಎಂದು ಗರ್ವದಲ್ಲಿ ಮಹಾ ಮಹಾ ಪಂಡಿತರೆನಿಸಿದವರೆಲ್ಲರು ಸಭೆಯನ್ನು ಸೇರಿಸಿ ಮಡಿವಾಳೇಶ್ವರ ಶಿವಯೋಗಿಗಳಿಗೆ ಬೇಕಂತಲೆ ಆಮಂತ್ರಣ ಕಳುಹಿಸಿ ಬರಮಾಡಿಕೊಂಡು ಉಪಚಾರವೆಂದು ಕುಶಲ ಪ್ರಶ್ನೆಗಳಿಂದ ಸ್ವಾಮಿಗಳನ್ನು ತಣಿಸಿ ನ್ಯಾಯ ವ್ಯಾಕರಣ ಹಾಗೂ ಇನ್ನುಳಿದ ಹಲವಾರು ಶಾಸ್ತ್ರಗಳ ಪೂರ್ವ ಪಕ್ಷವನ್ನು ಮುಂದೆ ಮಾಡಿ ಶಿವಯೋಗಿಗಳ ಸಮ್ಮುಖದಲ್ಲಿ ಪ್ರಶ್ನೆಗಳ ಮಳೆಗರೆಯ ಹತ್ತಿದರು. ಸ್ವಾಮಿಗಳು ಅವರಿಂದ ಎಲ್ಲ

ವನ್ನು ಸಮಾಧಾನ ಚಿತ್ತದಿಂದ ತಿಳಿದುಕೊಂಡು ಸಮರ್ಪಕ ಉತ್ತರ ಗಳನ್ನು ನೀಡಿ ಪಂಡಿತರೆನಿಸಿ ಪ್ರಶ್ನೆಗೈದ ಅರಣ್ಯ ಪಂಡಿತ ಶಿಖಾಮಣಿಗಳ ಬಾಯಿ ಕಟ್ಟಿಬಿಟ್ಟರು. ಸ್ವಾಮಿಗಳ ಸಮರ್ಪಕವಾದ ಉತ್ತರಗಳನ್ನು ಕೇಳಿ ಮೂಕರಾಗಿ ಬೆರಗುಗೊಂಡು ನೋಡಹತ್ತಿದರು.

ಅಷ್ಟಾದರೂ ಅವರ ಗರ್ವ ಹರಣವಾಗಲಿಲ್ಲ ಎನ್ನುವಂತೆ ಲಂಗೋಟಿ ಹಾಕಿಕೊಂಡು ತಿರುಗುವ ಬತ್ತಲೆಯ ಗಂಡಸು ಇವನೆಂತಹ ಪಂಡಿತ ಷಂಡನಿರಬೇಕು ಎಂದು ಹಾಸ್ಯ ಮಾಡಹತ್ತಿದರು. ಆಗ ಸ್ವಾಮಿಗಳಿಗೆ ಗಂಡಸುತನದ ಅಭಿಮಾನ ಜಾಗೃತವಾಯಿತು. ಅಯ್ಯಾ ಪಂಡಿತರೇ ನನ್ನ ಗಂಡಸುತನದಲಿ ನಿಮಗೆ ಶಂಕೆಯಲ್ಲವೇ ಸ್ವಲ್ಪ ತಾಳಿರಿ ಎಂದು ಶಿಷ್ಯನಾದ ನರಸಿಂಹಾಚಾರ್ಯನಿಂದ ಒಂದು ಪಾತ್ರೆಯನ್ನು ತರಿಸಿದರು. ಅದನ್ನು ಎಲ್ಲರೂ ನೋಡುವಂತೆ ಒಂದು ಕೈಯಲ್ಲಿ ಹಿಡಿದು ಮತ್ತೊಂದು ಕೈಯಿಂದ ತೊಡೆಯನ್ನು ಚಪ್ಪರಿಸಿಕೊಳ್ಳಲು ಜನನೇಂದ್ರಿಯ ಚೇತನ ಗೊಂಡು ವೀರ್ಯವು ಮತ್ತೊಂದು ಕೈಯಲ್ಲಿ ಹಿಡಿದುಕೊಂಡಿರುವ ಪಾತ್ರೆ ಯಲ್ಲಿ ಸರಿಯಹತ್ತಿತು. ಬಳಿಕ ಸುರಿಯುತ್ತಿರುವ ವೀರ್ಯದಿಂದ ಪಾತ್ರೆ ಯಂತೂ ತುಂಬಿ ಹೆಚ್ಚಾಗಿ ಹೊರಸೂಸಿ ಕೆಳಗೆ ಹಾಸಿದ ರತ್ನ ಕಂಬಳಿಯ ಮೇಲೆ ಬೀಳಲು ರತ್ನ ಕಂಬಳಿಯು ಸುಡಹತ್ತಿತು ಆಗ ಕೂಡಿದ ಮೂರ್ಖ ಪಂಡಿತರಿಗೆ ಜ್ಞಾನೋದಯ ಉಂಟಾಗಿ ಮುಂದಿನ ಆಪತ್ತು ತಪ್ಪಲೆಂದು ಪಶ್ಚಾತ್ತಾಪದಿಂದ ಶಿವಯೋಗಿ ಗುರುವೇ ತಾವು ಷಂಡರೆಂದು ಹಾಸ್ಯ ಮಾಡಿದ್ದು ಮಹಾ ಅಪರಾಧವಾಯಿತು. ಕ್ಷಮಿಸಿ ಕಾಪಾಡು ಎಂದು ಮತ್ತೆ ಬೇಡಿಕೊಳ್ಳಹತ್ತಿದರು ಹಾಗೂ ಹಾಸ್ಯ ಮಾಡಿದವರಿಗೆ ಷಂಡತ್ವ ಪ್ರಾಪ್ತ ವಾಯಿತು. ಆಗ ಪಂಡಿತ ಶಿರೋಮಣಿಗಳೆಲ್ಲರೂ ಕೂಡಿ ತಮಗಾದ ಸ್ಥಿತಿ ಯನ್ನರುಹಿ ಗುರುವೇ ಮೂರ್ಖರಾಗಿ ತಮ್ಮೊಡನೆ ವಾದ ಮಾಡಿ ಸೋತ ದ್ದಲ್ಲದೇ ತಮಗೆ ಷಂಡರೆಂದು ಪರಿಹಾಸ್ಯ ಮಾಡಿದ ಅಪರಾಧಕ್ಕೆ ತಕ್ಕ ಪ್ರಾಯಶ್ಚಿತ್ತವೆಂದು ನಾವೆಲ್ಲರೂ ಷಂಡರಾಗಿದ್ದೇವೆ. ಕೃಪೆದೋರು ಕರಣಾ ಕರಮೂರ್ತಿ ಪುರುಷತ್ವವಿಲ್ಲದೇ ಬಾಳುವದೆಂದು ಎಂದು ಸ್ವಾಮಿಗಳ ಪಾದ ಗಳನ್ನು ಹಿಡಿದು ಹೊರಳಾಡಹತ್ತಿದರು.

ಬಳಿಕ ಸ್ವಾಮಿಗಳಲ್ಲಿ ಕನಿಕರವೆಂಬುದು ಕಾಣಿಸಿಕೊಂಡು ತಮ್ಮ ಉಗ್ರತೆಯನ್ನಳಿದು ಶಾಂತ ಮುಖ ಮುದ್ರೆಯಿಂದ ಅವರೆಲ್ಲರ ಪುರುಷತ್ವ ವನ್ನು ಪುನಃ ಅನುಗ್ರಹಿಸಿ ತಾವು ಹಟದಿಂದ ಪಾತ್ರೆಯಲ್ಲಿ ಸುರಿಸಿದ ವೀರ್ಯ ವನ್ನು ಮತ್ತೆ ತಮ್ಮ ಜನನೇಂದ್ರಿಯ ಮಾರ್ಗವಾಗಿ ಸೆಳೆದುಕೊಂಡರು.

ಆಗ ಸ್ವಾಮಿಗಳ ಘನ ಮಹಿಮೆಯನ್ನು ಕಂಡು ಪಾಮರರೆನಿಸಿದ ಯಾವತ್ತೂ ಪಂಡಿತರು ತಬ್ಬಿಬ್ಬಾಗಿ ಸ್ವಾಮಿಗಳ ಮುಖಾವಲೋಕನ ಗೈದರು. ಸ್ವಾಮಿಗಳು ಮಾತ್ರ ನಿಶ್ಚಿಂತ, ನಿರ್ವಿಕಾರ ಭಾವದಿಂದ ಕಾಣು ತ್ತಿದ್ದರು. ಪಂಡಿತರಾದರೂ ತಮ್ಮ ವೈರಭಾವ ಮರೆತು ಸ್ನೇಹವನ್ನು ಕುರಿತು ಸೌಜನ್ಯಶೀಲ ಸ್ವಭಾವದಲ್ಲಿ ಬೆರೆತು ಸ್ವಾಮಿಗಳನ್ನು ಮಹಿಮಾ ಶಾಲಿಗಳೆಂದು ಪವಾಡ ಪುರುಷರೆಂದು ಕೊಂಡಾಡುತ್ತ ಸ್ವಾಮಿಗಳನ್ನು ಗೌರವಿಸುತ್ತ ಬಾಳಹತ್ತಿದರು. ಅವರೆಲ್ಲರ ದುಷ್ಟ ಸ್ವಭಾವ ಮಾಯವಾಗಿ ಸ್ನೇಹದಿಂದ ಕುಲ ಜಾತಿಗಳ ಭೇದವೆಣಿಸದೆ, ಗುಣ ಗೌರವಾದರಗಳನ್ನು ತಿಳಿದು ವರ್ತಿಸುವದನ್ನು ತಿಳಿದು ಸ್ವಾಮಿಗಳಿಗೆ ಎಲ್ಲಿಲ್ಲದ ಆನಂದವಾಯಿತು. ಬಳಿಕ ಕೆಲವು ದಿವಸ ಎಲ್ಲರೊಡನೆ ಸ್ನೇಹದಿಂದ ಶಾಸ್ತ್ರದಲ್ಲಿ ವಾದ ಮಾಡಿ ಗೆದೆಯುತ್ತ ಪಂಡಿತರಿಗೆ ಪಂಡಿತರೆನಿಸಿ ಸಮದೃಷ್ಟಿಯ ಸುಗಂಧ, ಸುವಾಸನೆ ಕಾಶಿ ನಗರವನ್ನೇ ತುಂಬುವಂತೆ ಮಾಡಿದರು. ಆದರೆ ಕೆಲವು ಕಾಲದ ನಂತರ ಸ್ವಾಮಿಗಳಿಗೆ ಮತ್ತೆ ತೀರ್ಥ ಕ್ಷೇತ್ರಗಳ ಸಂದರ್ಶನದ ಆಶೆ ಹುಟ್ಟಿ ಕೊಂಡಿತು. ಅಂತೇ ಶಿಷ್ಯನಾಗಿದ್ದ ಬ್ರಾಹ್ಮಣ ವಟು ನರಸಿಂಹಾಚಾರ್ಯನನ್ನು ಕರೆದುಕೊಂಡು ಹಲವು ತೀರ್ಥ ಕ್ಷೇತ್ರಗಳ ಪುಣ್ಯದರ್ಶನ ಪಡೆಯುತ್ತ ಕರ್ನಾಟಕದತ್ತ ಪಯಮಾಡಿಸಿದರು.

———

೩೦ ನೆಯ ಪ್ರಕರಣ

ಕಿತ್ತೂರ ಪತನದಿಂದ ಸ್ವಾಮಿಗಳ ಕಳವಳ

ನರಸಿಂಹಾಚಾರ್ಯನೊಡನೆ ಕ್ಷೇತ್ರ ದರ್ಶನಕ್ಕೆ ಸಾಗಿ ಸ್ವಾಮಿಗಳು ಕರ್ನಾಟಕದ ಮಧ್ಯವರ್ತಿ ಸ್ಥಳದಲ್ಲಿ ಬರುತ್ತಿರುವಂತೆ ಅವರ ಮನಸ್ಸು

ಅದೇಕೋ ತಳಮಳಿಸಹತ್ತಿತು. ಕಿತ್ತೂರ ರಾಜಲಕ್ಷ್ಮಿಯು ಪರರ ಪಾಲಾದಂತೆ ಬಾಸವಾಗಹತ್ತಿತು. ಆಗ ಶಿಷ್ಯನಾದ ನರಸಿಂಹನಿಗೆ ಶಿಷ್ಯೋತ್ತಮಾ ಇಂದೇಕೋ ನಮ್ಮಮನಸ್ಸು ತಳಮಳಗೊಂಡು ಕಿತ್ತೂರ ವೈಭವದ ಗತ ಇತಿಹಾಸ ನೆನಪಾಗಿ ಮರಗುತ್ತದೆ. ಮೂಕ ವೇದನೆಯನ್ನು ಅನುಭವಿಸುತ್ತಿದೆಯಲ್ಲ ಅದೇನು ಕಾರಣವೋ ? ಅಯ್ಯೋ ಶಿವನೇ ಅಂದೊಮ್ಮೆ ದೊರೆಯ ಉದ್ಧಟತನಕ್ಕೆ ಬೇಸತ್ತು ಕಿತ್ತೂರು ಪತನಗೊಳ್ಳುವಂತೆ ಶಾಪ ವಾಣಿಯನ್ನು ನಮ್ಮಿಂದ ಚಿಮ್ಮಿಸಿ ಈಗ ಅದನ್ನು ಸತ್ಯಗೊಳಿಸಿರುವಿಯಾ ? ಪರಕೀಯರ ಆಕ್ರಮಣದಿಂದ ಕಿತ್ತೂರ ನಾಶ ಹೊಂದುವ ಸ್ಥಿತಿ ತಂದಿರುವೆಯಾ ? ರಾಜ ವೈಭವದಲ್ಲಿ ಹೆತ್ತವರ ತೆರದಿ ಸಲುಹಿದ ರಾಜಮಾತೆಯರಾದ ರುದ್ರಮ್ಮ ಚನ್ನಮ್ಮರನ್ನು ಅದಾವ ಸ್ಥಿತಿಗೆ ತಂದು ನಿಲ್ಲಿಸಿರುವೆಯಪ್ಪಾ. ಅಳಿಗಾಲದ ಸೂಚನೆಯನ್ನು ನಿನ್ನೆ ಕನಸಿನಲ್ಲಿ ಕಥಿಸಿದ ಶಿವ ಸ್ವರೂಪಿಗಳಾದ ಗುರುಗಳ ವಾಣಿಯಂತೆ ಕಿತ್ತೂರ ನಾಡತಾಯಿ ಪರರ ಸೊತ್ತಾಗಿರಲೇಬೇಕು. ಮುತ್ತು ರತ್ನ ವಜ್ರ ವೈಢೂರ್ಯಗಳ ರಾಶಿಯನ್ನು ಆ ಆಂಗ್ಲೇಯರು ಕೊಂಡೊಯ್ದಿರಲೇಬೇಕು. ಅವ್ವ ಚನ್ನಮ್ಮನಿಗೆ ಸೆರೆಮನೆಯ ವಾಸವಾಗಿರಬೇಕು. ಶಿವಲಿಂಗ ರುದ್ರಸರ್ಜನ ಕೊನೆಗಾಲವಾಗಿರಬೇಕು. ಇನಿತೆಲ್ಲ ತಾಪತ್ರಯುಗಳು, ವಿಪತ್ತಿನಂತೆ ಮುತ್ತಿ ಕಿತ್ತೂರ ಜನತೆ ಕಂಗೆಟ್ಟು ಕಂಗಾಲ ಸ್ಥಿತಿಯಲ್ಲಿ ದೇಶಭ್ರಷ್ಟರಾಗಿರಲೇಬೇಕು. ಏನಿದು ನರಸಿಂಹಾ, ನಮ್ಮ ಮನೋದೇವತೆಯು ಈ ರೀತಿ ನುಡಿಸಬೇಕಾದರೆ ಕಿತ್ತೂರ ರಾಜ್ಯದ ಪರಿಸಮಾಪ್ತಿ ಯಾಗಿರಲೇಬೇಕಲ್ಲವೇ ? ಎಂದು ವ್ಯಸನದಿಂದ ಉಸುರುಗರೆಯಹತ್ತಿದರು.

ಆಗ ನರಸಿಂಹಾಚಾರ್ಯನು— ಗುರುದೇವಾ ತಮ್ಮ ಭವಿಷ್ಯವಾಣಿ ಸುಳ್ಳಾಗಲು ಸಾಧ್ಯವೇ ? ತಾವು ಸತ್ಯಚಿತ್ರವ ಕಂಡಂತೆ ಕಥಿಸುತ್ತಿರುವದನ್ನು ಕೇಳಿದರೆ ಕಿತ್ತೂರಿಗೆ ಕೇಡು ಬಂದಿರುವದೇ ನಿಜವೆಂದು ನನ್ನ ಮನಸ್ಸಾದರೂ ಹಳಹಳಿಸುತ್ತದೆ ಎಂದನು. ಬಳಿಕ ಸ್ವಾಮಿಗಳು ಏನಿದೆಯೋ ಶಿವನಿಚ್ಛೆ ಎಂದು ಹಲವಾರು ಕ್ಷೇತ್ರಗಳ ಸಂದರ್ಶನಗೈದು ಹಂಪೆಯ ಪಂಪಾ ಕ್ಷೇತ್ರದತ್ತ ಸಾಗಿರಲು ರಾವುತರ ಗುಂಪೊಂದು ಕಾಣಿಸಲು ಸ್ವಾಮಿಗಳು ನಿಂತುಕೊಂಡರು. ಮತ್ತು ಅವರನ್ನು ತರುಬಿ ನಿಲ್ಲಿಸಿ ಮುಖ್ಯಸ್ಥನಿಗೆ ತುರುಗದ

ಮೇಲಿಂದ ಇಳಿದು ಬರುವಂತೆ ಅಪ್ಪಣೆ ಮಾಡಿದರು. ಸ್ವಾಮಿಗಳ ಆಜ್ಞೆಯನ್ನು ಶಿರಸಾವಹಿಸಿದ ಮುಖಂಡನು ಕೆಳಗಿಳಿದು ಸ್ವಾಮಿಗಳ ಪಾದಕ್ಕೆ ನಮಸ್ಕರಿಸಿ ಮೇಲೇಳುವಷ್ಟರಲ್ಲಿ ಮಡಿವಾಳೇಶ್ವರ ಶಿವಯೋಗಿಗಳು ಕಲ್ಮಠದ ಸ್ವಾಮಿಗಳೆಂದು, ಕಿತ್ತೂರ ರಾಜ್ಯದ ಗುರುಗಳೆಂದು ತಿಳಿದುಕೊಂಡನು. ಗುರುಗಳನ್ನು ಗುರುತಿಸಿದ ರಾವುತನು ರೋಧಿಸುತ್ತ ಸ್ವಾಮಿಗಳ ಪಾದಗಳ ಮೇಲೆ ಬಿದ್ದು ಹೊರಳಾಡುತ್ತ ತಮ್ಮ ಕರ್ಮ ಕಥೆಯನ್ನು ಹೇಳಬಯಸಿದನು.

ಆಗ ಸ್ವಾಮಿಗಳು ರಾವುತನ ಸ್ಥಿತಿಯನ್ನು ಕಂಡು ಮರಗುತ್ತ ಏಕಯ್ಯಾ ಈ ರೀತಿ ರೋಧಿಸುವದೇಕೆ ಎಂದು ಮಮತೆಯಿಂದ ಕೇಳಿದರು ಆಗ ರಾಹುತ ಮಹಾಶಯನು, ಸ್ವಾಮಿಗಳು ಕಿತ್ತೂರನ್ನು ತೊರೆದು ಹೊರಟು ಬಂದಂದಿನಿಂದ ಇಲ್ಲಿಯ ವರೆಗಾದ ಕಿತ್ತೂರಿನ ಪರಿಸ್ಥಿತಿಯನ್ನು ವಿವರಿಸುತ್ತ ಕಿತ್ತೂರು ಪತನಗೊಂಡು ಪರಿಯನ್ನು ವರ್ಣಿಸಹತ್ತಿದನು. ಕಿತ್ತೂರು ಹಾಳಾದ ಸ್ಥಿತಿಯನ್ನು ಕೇಳಿ ಸ್ವಾಮಿಗಳು ಮರಮರನೆ ಮರುಗುತ್ತ ತಮ್ಮ ಕನಸಿನಲ್ಲಿ ಗುರುಮೂರ್ತಿಗಳು ನುಡಿಸಿದ ನುಡಿ ಸತ್ಯವಾದದ್ದೆಂದು ಅರಿತು ಅಯ್ಯಾ ರಾಜಮಾತೆಯರಾದ ರುದ್ರಮ್ಮ ಚನ್ನಮ್ಮನವರ ಗತಿ ಏನಾಗಿದೆ ಎಂದು ಕೇಳಿದರು.

ಆಗ ರಾಹುತನು ಗೋಳಾಡುತ್ತ, ಬಾಪೂ ಸಾಹೇಬನು ಮರಣ ಹೊಂದಿ ರಾಜಮಾತೆಯರು ವ್ಯಸನದ ಸುಳಿಯಲ್ಲಿ ಸಿಲುಕಿರುವಾಗಲೆ ಆಂಗ್ಲೇಯರು ದತ್ತು ತೆಗೆದುಕೊಳ್ಳುವದಕ್ಕೆ ಒಪ್ಪಿಗೆಯನ್ನು ಕೊಡದಾದರು ಆಗ ಚನ್ನಮ್ಮ ತಾಯಿಯರು ಆಂಗ್ಲೇಯರ ವರ್ತನೆಯನ್ನು ಪ್ರತಿಭಟಿಸಿ ನಮ್ಮ ರಾಜ್ಯ, ನಮ್ಮ ದೇಶ, ನಮ್ಮ ಸಂಪತ್ತು, ನಮ್ಮ ವ್ಯವಹಾರಗಳಲ್ಲಿ ಕೈ ಹಾಕಿ ನಮ್ಮನಮ್ಮಲ್ಲಿ ದ್ವೇಷದ ಕಿಚ್ಚು ಹೊತ್ತಿಸಿ ತಮ್ಮ ಸ್ವಾರ್ಥ ಸಾಧಿಸುತ್ತಿರುವ ಅವರ ಮಾತನ್ನು ನಾವೇಕೆ ಪಾಲಿಸಬೇಕೆಂದು ಆಂಗ್ಲರಿಗೆ ಅರಿಯದಂತೆ ಮಾಸ್ತಮರಡಿ ಗೌಡರ ಮಗನನ್ನು ದತ್ತು ತೆಗೆದುಕೊಂಡು ರಾಜಗುರು ಗುರುಶಿದ್ಧೇಶ್ವರ ಸ್ವಾಮಿಗಳ ಮುಖಾಂತರ ಗುರುಶಿದ್ದಪ್ಪ ದಂಡನಾಯಕರ ಹಿರಿತನದಲ್ಲಿ ರುದ್ರಪ್ಪನಾಯಕ ಶಿವಲಿಂಗಪ್ಪ ಸುಭೇದಾರ

ಇನ್ನಿತರ ಸ್ವಾಮಿನಿಷ್ಠ ಸೇವಕರ ಸೇವೆ, ಸಹಕಾರಗಳನ್ನು ಪಡೆದುಕೊಂಡು ದತ್ತಕ ವಿಧಾನವನ್ನು ಪೂರ್ಣಗೊಳಿಸಿದರು. ಆದರೆ ಕನ್ನೂರ ಕಲ್ಲಪ್ಪ ಶೆಟ್ಟಿಯು ತನ್ನ ಮೊಮ್ಮಗನನ್ನು ಕಿತ್ತೂರ ರಾಜ್ಯಾಧಿಕಾರಿಯನ್ನಾಗಿ ಮಾಡ ಲಿಲ್ಲವೆಂಬ ಕಾರಣದಿಂದ ವೆಂಕಟರಾವ ಕಾರುಭಾರಿಯೊಡಗೂಡಿ ಧಾರ ವಾಡದ ಥ್ಯಾಕರೆ ಸಾಹೇಬನಿಗೆ ಕಿತ್ತೂರ ರಾಜಮನೆತನದಲ್ಲಿ ನಡೆಯುವ ವ್ಯವಹಾರಗಳನ್ನು ತಿಳಿಸುತ್ತ ಸ್ವಾರ್ಥದಾಸೆಯಲ್ಲಿ ಶಿವಲಿಂಗ ರುದ್ರಸರ್ಜ ದೊರೆ ಮರಣಿಸಿದ ನಂತರ ದತ್ತಕ ಕಾರ್ಯವನ್ನು ಮುಗಿಸಿದ್ದಾರೆ ಎಂದು ಆಂಗ್ಲ ಸಾಹೇಬನನ್ನು ಹುರುದುಂಬಿಸಿ ಕಿತ್ತೂರಿನ ಮೇಲೆ ದಾಳಿಯನ್ನೆಸಗು ವಂತೆ ಮಾಡಿದರು. ಆದರೆ ಆ ಧಾಳಿಯಲ್ಲಿ ಥ್ಯಾಕರೆ ಸಾಹೇಬನ ರುಂಡವು ಮುಂಡದಿಂದ ಬೇರ್ಪಟ್ಟು ಕಿತ್ತೂರ ಕೋಟೆಯ ಬಾಗಿಲಿಗೆ ನೇತಾಡುವಂತೆ ಜಯವು ಕಿತ್ತೂರ ಸಂಸ್ಥಾನಕ್ಕೆ ಲಭಿಸಿತು. ಆದರೆ ಥ್ಯಾಕರೆ ಸಾಹೇಬನ ಹತ್ಯೆಯಿಂದ ಇಂಗ್ಲೀಷ ಮೇಲಾಧಿಕಾರಿಗಳ ಮನಉರಿಯಿತು. ರೋಷ ಹೆಚ್ಚಿತು. ಅಂತೆ ಬೆಳಗಾವಿಯ ಚಾಪ್ಲಿಯನ್ ಸಾಹೇಬನ ಹೆಚ್ಚಿನ ಸೈನ್ಯ ಸಿದ್ಧತೆಯಲ್ಲಿ ಬಂದು ಕಿತ್ತೂರನ್ನು ಮುತ್ತಿ ಸ್ವಾರ್ಥ ಸಾಧಕರ ಕೈ ಬೆಚ್ಚಗೆ ಮಾಡಿ ಮದ್ದು ಗುಂಡಿನ ಸಂಗ್ರಹವನ್ನು ನಾಶಗೊಳಿಸುವಂತೆ ಭೋಧಿಸಿ ಮೋಸದಿಂದ ಕಿತ್ತೂರ ಕೋಟೆಯ ಪಶ್ಚಿಮ ಬದಿಯ ಗೋಡೆಯನ್ನು ತುಬಾಕಿಯಿಂದ ಕೆಡವಿಸಿ ಒಳನುಗ್ಗಿ ತಮ್ಮ ವಂಚನೆಯ ಸಂಚಿನಲ್ಲಿ ಚನ್ನಮ್ಮ ರಾಣಿಯರನ್ನು ವೀರಮ್ಮನವರನ್ನು ಸೆರೆಹಿಡಿದು ಬೈಲುಹೊಂಗ ಲದ ಸೆರೆಮನೆಗೆ ಸಾಗಿದರು. ಆಗ ಕಿತ್ತೂರಿನ ಪ್ರಜೆಗಳನೇಕರು ಹೆಂಡರು ಮಕ್ಕಳ ಪರವೆ ಇಲ್ಲದೆ ತಮ್ಮ ತಾಯಿ ನಾಡನ್ನು ಪರಕೀಯರಾದ ಆಂಗ್ಲರ ವಶಕ್ಕೊಪ್ಪಿಸಿ ದಿಕ್ಕು ತಿಳಿದತ್ತ ಓಡಿ ಹೋದರು. ಮಲಪರಿಹಾರಿಯ ಮಡುವಿ ನಲ್ಲಿ ಮುಳುಗಿದವರೆಷ್ಟೋ, ಹೌಹಾರಿ ನಿಂತಲ್ಲಿ ಜೀವ ಬಿಟ್ಟವರೆಷ್ಟೋ ಅನ್ನ ನೀರುಗಳ ಪರವೆ ಇಲ್ಲದೆ ಕಾಡು ಮೇಡುಗಳಲ್ಲಿ ಅಲೆಯುತ್ತಿರುವ ರೆಷ್ಟೋ, ಅಂತೂ ಗುರುದೇವಾ ಕಿತ್ತೂರು ಪತನಹೊಂದಿ ಹೋಯಿತು, ಈಗ ನಾವು ಕಿತ್ತೂರು ಪತನವಾದ ಸುದ್ದಿಯನ್ನು ಮುಂಡರಗಿ ಭೀಮರಾಯ ರಿಗೆ ತಿಳಿಹಿಸಲು ಹೊರಟು ಬಂದಿರುತ್ತೇವೆ ಎಂದು ದುಃಖದಿಂದ ನುಡಿಯ ಹತ್ತಿದನು.

ಆಗ ಶಿವಯೋಗಿಗಳು ಅಯ್ಯೋ ಪರಮಾತ್ಮಾ ನಿನ್ನ ಲೀಲೆ ತಿಳಿಯುವದು ಅಸಾಧ್ಯವಪ್ಪಾ ಶಿವಾ ನಿನ್ನ ಮೇಲೆ ಆಪವಾದ ಬರುದೆಂದು ನಮ್ಮಂಥವರನ್ನು ಕಳುಹಿಸಿ ಧರ್ಮ ಸ್ಥಾಪನೆಗಾಗಿ ಪ್ರವೇಶಿಸಿ ಮೋಜು ನೋಡುವಿಯಲ್ಲವೆ ಎಂದು ನಿಟ್ಟುಸಿರುಬಿಟ್ಟು ರಾಹುತರನ್ನು ಸಂತೈಸುತ್ತ ಶಿವನಿಚ್ಛೆಯಂತೋ ಅಂತು ನಡೆಯಲೇಬೇಕಪ್ಪಾ ಹೋಗಿರಿ ನಿಮ್ಮ ಕರ್ತವ್ಯ ಮಾಡುತ್ತ ಸುಖಜೀವಿಗಳಾಗಿ ಬಾಳಿರಿ. ಬರುವ ಆಪತ್ತುಗಳನ್ನೆದುರಿಸಿ ಧರ್ಮ ನೀತಿ ನ್ಯಾಯಗಳನ್ನರಿತು ಬಾಳುವ ಮಾನವನಿಗೂ ಒಂದೊಂದು ಸಮಯ ಅನ್ಯಾಯವಾಗಿ ಅಧರ್ಮದ ಹೆಚ್ಚಳವಾಗಿ ಅನೀತಿಯು ಕೈ ಮೇಲಾಗಿ ಸಂಕಷ್ಟಗಳು ಬರುವವು. ಅಂತೂ ಅಂದು ಶಿವ ಮಹಾದೇವ ಮುಕ್ಕಣ್ಣ ಹರನು ನಮ್ಮ ಮನದಲ್ಲಿ ಹಟ ಈರ್ಷೆಗಳನ್ನು ಹುಟ್ಟಿಸಿ ಮುಂದಿನ ಸೂಚನೆ ಏನೋ ಅನ್ನುವಂತೆ ಕತ್ತಿ ಕೋವಿಗಳನ್ನು ಪಿಡಿಯ ಹಚ್ಚಿ ದಿಗಂಬರ ರೂಪವನ್ನು ಕರುಣಿಸಿ ಈ ಕಿತ್ತೂರ ಸರ್ವನಾಶವಾಗಲಿ ಎಂಬ ಶಾಪವಾಣಿಯನ್ನು ಉಸುರುವಂತೆ ಪ್ರೇರೇಪಿಸಿದನು. ನಮ್ಮ ಹಟದ ದಿಟ್ಟವಾಣಿಯಂತೆ ಪಟ್ಟದರಸಿಯರ ಪಾಡು ಈ ಸ್ಥಿತಿಗೆ ಮುಟ್ಟಿತೇ ಎಂದು ರಾಜಮಾತೆಯರಿಗಾಗಿ ಮರುಗುತ್ತ ರೋಧಿಸಿದರು. ಬಳಿಕ ಎಲ್ಲಿಲ್ಲದ ಸಮಾಧಾನ ತಂದುಕೊಂಡು ರಾವುತರನ್ನು ಸಂತೈಸಿ ಕಳುಹಿಸಿ ತಾವು ಮುಂದೆ ಪಯಣ ಬೆಳೆಯಿಸಿದರು.

————

೩೧ ನೆಯ ಪ್ರಕರಣ

ತರ್ಕ ಸಿದ್ಧಾಂತಗಳ ವಾದದಲ್ಲಿ ಮೈಸೂರು ಪಂಡಿತರ ಪರಾಜಯ

ಕಿತ್ತೂರು ಪತನದ ಸುದ್ದಿಯಿಂದ ವಿಹ್ವಲಿತರಾದ ಸ್ವಾಮಿಗಳ ಮುಖಾರವಿಂದವನ್ನು ಕಂಡು ಶಿಷ್ಯನಾದ ನರಸಿಂಹಾಚಾರ್ಯನು ಗುರುವರಾ ಆಗಿಹೋದ ಪ್ರಸಂಗದ ಸಲುವಾಗಿ ಮಿಡುಕುವದರಿಂದ ಫಲ ದೊರೆಯದೆಂದು ತಾವೇ ಬೋಧಿಸುತ್ತಿದ್ದೀರಿ. ಈಗ ತಾವೇ ಈ ರೀತಿ ಮನೋವೇದ

ನೆಗೆ ಒಳಗಾಗುವದು ಒಳಿತೇ ಎಂದನು. ಆಗ ಸ್ವಾಮಿಗಳು ಅಯ್ಯಾ ನಿನ್ನ ನುಡಿ ಸತ್ಯವಾದರು ನಾವು ಅರಮನೆಯ ಅರಸಿಯರ ಪಾಲನೆಯಲ್ಲಿ ಬೆಳೆದವರು, ಅವರ ಅಮೃತಮಯ ಹಾಲಿನಿಂದ ಪೋಷಣೆಗೊಂಡವರು. ಅವರ ಧೀರ ಗಂಭೀರ ಗುಡಿಯಲ್ಲಿ ಪಳಗಿ ಕಲಿ ಹನುಮನೆಂದು ಹೆಸರು ಗಳಿಸಿದವರು ರುದ್ರಮ್ಮ ತಾಯಿಯವರು ನಮ್ಮ ಉತ್ಕೃಷ್ಟತೆಗಾಗಿ ಹೆಣಗಾಡಿದ ಮಹಾ ಗುರುಭಕ್ತಿಯಪ್ಪಾ ಅಂತವರು ಕಷ್ಟಕ್ಕೀಡಾಗಿ ಅರಮನೆಯನ್ನು ತೊರೆದು ಸೆರೆಮನೆಯ ವಾಸಕ್ಕೀಡಾಗಿರುವದನ್ನು ಕೇಳಿ ಸಹಿಸಲು ಸಾಧ್ಯವಾಗಬಹುದೇ ಎಂದು ದುಃಖಿಸಹತ್ತಿದರು.

ಆಗ ನರಸಿಂಹಾಚಾರ್ಯನು ಗುರುದೇವಾ ಬಾರದು ಬಪ್ಪದು ಬಪ್ಪದು ತಪ್ಪದು ಎಂದು ಪದೇ ಪದೇ ಬೋಧೆ ನೀಡುವ ತಾವು ಚಿಂತಿಸುವಂದರಿಂದ ಸೌಖ್ಯವಿಲ್ಲವೆಂದು ಸಮಾಧಾನಪಡಿಸುತ್ತ ಮುಂದೆ ಪಯಣವನ್ನು ಸರಳಗೊಳಿಸಿಕೊಂಡು ಅಸ್ತವ್ಯಸ್ತಗೊಂಡ ಸ್ವಾಮಿಗಳ ಮನವನ್ನು ಶಾಂತಪಡಿಸುತ್ತ ಸಾಗಿದನು. ಬರುಬರುತ್ತ ಗುರುಶಿಷ್ಯರೀರ್ವರು ಬದರಿಕಾಶ್ರಮಕ್ಕೆ ಬಂದರು.

ನಂತರ ಅಲ್ಲಿಂದ ಅಯೋಧ್ಯಾ ನಗರಿಯನ್ನು ತಲುಪಿದರು. ಅಲ್ಲಿ ಸಮೀಪದ ನದಿಯಲ್ಲಿ ಮಿಂದು ಲಿಂಗಾರ್ಚನೆ ನಿತ್ಯ ಕರ್ಮಗಳನ್ನು ತೀರಿಸಿಕೊಂಡು ಯಾತ್ರಾರ್ಥಿಯಾಗಿ ಬಂದ ಭಕ್ತ ಬಳಗವನ್ನು ಕಂಡು ಅವರ ಮನದಾಸೆಯಂತೆ ಧರ್ಮವೆಂದರೇನು, ಅರ್ಥವೆಂದರೇನು ಕಾಮವಂದರೇನು, ಮೋಕ್ಷವೆಂದರೇನು ಎನ್ನುವವಿಷಯಗಳನ್ನು ತಿಳುಹಿಸಿ ಅವುಗಳ ಅರ್ಥ ವಿವರಣೆಯನ್ನು ಮಾಡಿ ಭಕ್ತಿಯಿಂದಾಗಬೇಕಾದ ಇಚ್ಛಾ ತೃಪ್ತಿಯನ್ನು ತಿಳುಹಿಸಿದರು. ವೇದಾಂತ ಶಾಸ್ತ್ರ ವಿಷಯಗಳನ್ನು ತತ್ವಬದ್ಧವಾಗಿ, ಧರ್ಮದಂತೆ ಹೇಳಿಕೊಟ್ಟರು ಆಗ ಅನೇಕ ಪಂಡಿತ ಶಿರೋಮಣಿಗಳು ಸ್ವಾಮಿಗಳ ಬುದ್ಧಿ ಕೌಶಲ್ಯಕ್ಕೆ ಬೆರಗಾದರು. ಸ್ವಾಮಿಗಳ ಪ್ರಭಾವಕ್ಕೆ ಮಣಿದು ನಡೆದುಕೊಳ್ಳಹತ್ತಿದರು. ಪರಶಿವನ ಪೂರ್ಣ ಕಳೆಯಲ್ಲಿ ಶೋಭಿಸುವ ಶಿವಯೋಗಿಗಳೆಂದು ಎಲ್ಲರೂ ಪೂಜ್ಯತೆಯಿಂದ ಕಾಣಹತ್ತಿದರು. ಬಳಿಕ ಕೆಲವು ಕಾಲ ಗತಿಸಲು ಮತ್ತೆ ತಮ್ಮ ಪಯಣವನ್ನು ಮುಂದುವರೆಯಿಸಿ ಮಥುರೆ ವೃಂದಾವನ ತ್ರ್ಯಂಬಕೇಶ್ವರ, ಶಿವಕಂಬ ಸೇತು ರಾಮೇಶ್ವರ

ವೈಜನಾಥ ಹೀಗೆ ಅನೇಕ ಕ್ಷೇತ್ರಗಳ ದರ್ಶನ ಹೊಂದಿ ಮೈಸೂರಿಗೆ ಬಂದು ತಲುಪಿದರು.

ಸ್ವಾಮಿಗಳು ಮೈಸೂರಿಗೆ ದಯುಮಾಡಿಸಿರುವ ಸಂಗತಿಯನ್ನು ಕೇಳಿದ ಮೈಸೂರ ಸಂಸ್ಥಾನದ ಒಡೆಯರಾದ ಕೃಷ್ಣರಾಜ ದೊರೆಗಳು ಶಿವಯೋಗಿಗಳನ್ನು ಸಕಲ ಸನ್ಮಾನಗಳಿಂದೊಡಗೂಡಿ ಇದಿರ್ಗೊಂಡು ಭಯ ಭಕ್ತಿಗಳಿಂದ ಅರಮನೆಗೆ ಕರೆದುಕೊಂಡು ಒಂದು ಬಂಗಾರದ ಪಲ್ಲಕ್ಕಿಯಲ್ಲಿ ಮೆರೆಯಿಸಿದರು ಶಿವಯೋಗಿಗಳು ಕೃಷ್ಣರಾಜರ ಭಕ್ತಿಯ ಪಾಶದಲ್ಲಿ ಬಂಧಿತರಾಗಿ ಆತನ ಅರಮನೆಯಲ್ಲಿ ಕೆಲವು ದಿನಗಳಿದ್ದು ಹೀಗಿರಲು ಒಂದು ದಿವಸ ಹಲವು ಪಂಡಿತರು ಶಿವಯೋಗಿಗಳನ್ನು ಶಾಸ್ತ್ರಾರ್ಥಕ್ಕೆ ಆಹ್ವಾನಿಸಿ ಪೂರ್ವಪಕ್ಷವನ್ನು ಮಂಡಿಸಿ ಹಾಸ್ಯ ಮಾಡಿದರು. ಆಗ ಮಡಿವಾಳೇಶ್ವರ ಸ್ವಾಮಿಗಳು ನಸುನಕ್ಕು ಪೂರ್ವಪಕ್ಷಗಳ ಸಿದ್ಧಾಂತವನ್ನು ಮಾಡಿ ಪ್ರತಿಯಾಗಿ ಸ್ವಾಮಿಗಳು ಪೂರ್ವಪಕ್ಷವನ್ನೆಸಬೇಕೆಂದು ಅಯ್ಯಾ ಪಂಡಿತರೇ ನೀವು ನಿಮ್ಮ ತಂದೆಗೆ ಹುಟ್ಟಿದವರೆಂದು ನಾವು ಹೇಳುತ್ತೇವೆ ನೀವು ನಿಮ್ಮ ತಂದೆಗೆ ಹುಟ್ಟಿದವರಲ್ಲವೆಂದು ಹೇಳಬಲ್ಲಿರಾ ಎಂದರು. ಆಗ ಪಂಡಿತರೆಲ್ಲರು ಮುಖದ ಮೇಲೆ ಹೊಡಿಸಿಕೊಂಡವರಂತೆ ಮುಖ ತಗ್ಗಿಸಿ ನಾಚಿಕೆಪಟ್ಟರು. ಬಳಿಕ ತಿಳಿಗೇಡಿಗಳಾದ ಪಂಡಿತರಿಗೆ ಸತ್ಯ ಜ್ಞಾನ ರಹಸ್ಯವನ್ನರುಹಿ, ಆಸ್ಥಾನದ ಘನ ಪಂಡಿತರನ್ನು ವಾದದಲ್ಲಿ ಜಯಿಸಿದರು.

ಸ್ವಾಮಿಗಳ ಅಗಾಧ ಪಾಂಡಿತ್ಯ ವೈಖರಿಯು ಪರಕಾಳ ಮಠದ ವೈಷ್ಣವ ಗುರುಗಳಿಗೆ ಬಲು ಬೇಗನೆ ತಲುಪಿತು. ಆಗಿನ ಕಾಲದಲ್ಲಿ ಮೈಸೂರ ಸಂಸ್ಥಾನದಲ್ಲಿ ಅಷ್ಟೇ ಏಕೆ ಇಡೀ ಕನ್ನಡ ನಾಡಿನಲ್ಲಿ ವೇದಾಂತ ಶಾಸ್ತ್ರ ಸಿದ್ಧಾಂತಗಳಲ್ಲಿ ವೈಷ್ಣವ ಸ್ವಾಮಿಗಳು ಬಲ್ಲಿದರೆಂದು ಅವರ ಪಾಂಡಿತ್ಯ ಪ್ರಭೆಯು ಉಜ್ವಲವಾಗಿ ಬೆಳಗುತ್ತಿತ್ತು. ಅಂತಹ ಪಂಡಿತ ವೈಷ್ಣವ ಗುರುಗಳು ಶಿವಯೋಗಿಗಳು ಭೆಟ್ಟಿಗೆಂದು ಅರಮನೆಯವರೆಗೆ ದಯುಮಾಡಿಸಿದರು. ಕೃಷ್ಣರಾಜರು ಅವರಿಗೂ ಸಕಲ ಮಾನ್ಯ ಮರ್ಯಾದೆಗಳನ್ನು ಸಲ್ಲಿಸಿದರು. ವೈಷ್ಣವ ಗುರುಗಳು ಮತ್ತು ಸ್ವಾಮಿಗಳು, ಕೆಲವು ಸಮಯ ಶಾಸ್ತ್ರಾರ್ಥ ಮಾಡಿದರು ಬಳಿಕ ಶಿವಯೋಗಿಗಳು ಪಾಂಡಿತ್ಯ ಪ್ರತಿಭೆಗೆ ವೈಷ್ಣವ ಗುರುಗಳು ಆಚ್ಚರಿಪಟ್ಟರು. ಅವರ

ಕುಶಲ ಮತಿಯನ್ನು ಬಹುವಾಗಿ ಮೆಚ್ಚಿಕೊಂಡರು. ಅಲ್ಲದೇ ತಮ್ಮನ್ನು ಸರಿಗಟ್ಟುವ ಪಂಡಿತೋತ್ತಮರಿಲ್ಲನೆಂಬ ತಮ್ಮ ಸ್ವಾಭಿಮಾನವನ್ನು ಬಿಟ್ಟುಕೊಟ್ಟರು. ಹಾಗೂ ವೈಷ್ಣವ ವೀರಶೈವ ಮತದ ಸ್ವಾಮಿಗಳೀರ್ವರು ಸ್ನೇಹ ಬೆಳೆಯುವಂತಾಯಿತು ಎಂದು ಹೆಮ್ಮೆಯಿಂದ ನುಡಿದು ಮಠಕ್ಕೆ ತೆರಳಿದರು.

ಬಳಿಕ ಒಂದು ದಿನ ಸ್ವಾಮಿಗಳು ಅರಸರನ್ನು ಬರಮಾಡಿಕೊಂಡು ತಾವು ಚಾಮುಂಡೇಶ್ವರ ಬೆಟ್ಟಕ್ಕೆ ಹೊರಟ ವಿಷಯವನ್ನು ತಿಳುಹಿಸಿದರು. ಆಗ ಕೃಷ್ಣರಾಜರು ಸಕಲ ವ್ಯವಸ್ಥೆಯನ್ನು ಮಾಡಿಸಿ ಬೆಟ್ಟಕ್ಕೆ ಕರೆದುಕೊಂಡು ಹೋದರು. ಅಲ್ಲಿ ಸ್ವಾಮಿಗಳು ಚಾಮುಂಡೇಶ್ವರಿಯ ದರ್ಶನ ಪಡೆದು ಸಾವಿರಾರು ಗಣ್ಯರಿಗೆ ತೃಪ್ತಿಪಡಿಸುವಂತೆ ರಾಜನಿಗೆ ಅಪ್ಪಣೆ ಮಾಡಿದರು. ರಾಜನಾದರೂ ಸ್ವಾಮಿಗಳ ಅಪ್ಪಣೆಯಂತೆ ಯಾವತ್ತು ಖರ್ಚುವೆಚ್ಚಗಳನ್ನು ವಹಿಸಿಕೊಂಡು ಶಿವಯೋಗಿಗಳ ಮನಸ್ಸನ್ನು ತೃಪ್ತಿಪಡಿಸಿದನು. ಬಳಿಕ ಚಾಮುಂಡೇಶ್ವರ ಬೆಟ್ಟದಿಂದ ಮರಳಿ ಬಂದು ಸ್ವಾಮಿಗಳು ತಾವು ಚನ್ನಪಟ್ಟಣದತ್ತ ಪ್ರಯಣ ಬೆಳೆಯಿಸುವದಾಗಿ ತಿಳುಹಿಸಲು ಪರಕಾಳ ಮಠದ ವೈಷ್ಣವ ಗುರುಗಳು ಸ್ವಾಮಿಗಳನ್ನು ಸಕಲ ವ್ಯವಸ್ಥೆಗಳಿಂದ ಬೀಳ್ಕೊಟ್ಟರು. ಚನ್ನಪಟ್ಟಣದತ್ತ ಬಂದ ಶಿವಯೋಗಿಗಳು ಚನ್ನಪಟ್ಟಣದ ಭಕ್ತರ ಮನವನ್ನು ಬಲು ತೀವ್ರ ಸೆಳೆದುಕೊಂಡರು. ಅದರಲ್ಲಿ ಧರ್ಮಣ್ಣ ಎಂಬ ಧನಿಕನು ಸ್ವಾಮಿಗಳ ಸೇವಾನು ಸೇವಕನಾಗಿ ಪಟ್ಟಣದ ಪ್ರಮುಖ ಭಕ್ತರೊಡಗೂಡಿ ಸ್ವಾಮಿಗಳನ್ನು ಸಂಭ್ರಮದಿಂದ ಸ್ವಾಗತಿಸಿ ಕರೆದುಕೊಂಡು ಬಂದರು.

....

೩೨ ನೆಯ ಪ್ರಕರಣ

ಚನ್ನಪಟ್ಟಣದಲ್ಲಿ ಬ್ರಹ್ಮಪಿಶಾಚಿಯನ್ನು ತೊಲಗಿಸಿದ್ದು

ಚನ್ನಪಟ್ಟಣದ ಭಕ್ತರ ಸೇವೆಯನ್ನು ಮನದಣಿಯುವಂತೆ ಸ್ವೀಕರಿಸಿದ ಸ್ವಾಮಿಗಳು ಆತ್ಯಾನಂದಗೊಂಡವರಾಗಿ ಧರ್ಮಣ್ಣ ನಂಥಹ ನಿಷ್ಕಾಮವಂತ ಭಕ್ತನ ಭಕ್ತಿಪಾಶದಲ್ಲಿ ಬಂಧಿತರಾದವರು ಅವನ ಆಸೆಯನ್ನು ಈಡೇರಿಸಲು ಸನ್ನದ್ಧರಾದರು.

ಧರ್ಮಣ್ಣನಾದರೂ ಹೆಸರಿಗೆ ತಕ್ಕಂತೆ ಧರ್ಮ ಮೂರ್ತಿಯಾಗಿದ್ದನು. ನ್ಯಾಯವಾದಿಯಾಗಿ ವೀರಶೈವ ಧರ್ಮ ತತ್ವಗಳನ್ನು ಪಾಲಿಸುವ ನಿಷ್ಠಾಗುಣ ಉಳ್ಳವನಾಗಿದ್ದನು. ಗುರು ಚರ ಮೂರ್ತಿಗಳನ್ನು ಭಕ್ತಿಯಿಂದ ಪೂಜಿಸಿ ಪಾವನಚರಿತನಾಗಿದ್ದನು. ಶಿರಿತನದ ಗರ್ವವಾಗಲಿ ಈರ್ಷೆ, ಮತ್ಸರಗಳಾಗಲಿ ಒಂದು ದಿನವೂ ಆತನ ಬಾಳಿನಲ್ಲಿ ಕಾಣಿಸಿಕೊಳ್ಳಲಿಲ್ಲ.

ಇಂತಹ ಪುಣ್ಯಾತ್ಮ ಧರ್ಮಣ್ಣನಿಗೆ ಅದೇನು ಕರ್ಮ ಕಾಡುತ್ತಿತ್ತೋ ಏನೋ ಆತನು ವಾಸಿಸುವ ಗೃಹದ ಬಲ ಭಾಗದಲ್ಲಿ ಬ್ರಹ್ಮರಾಕ್ಷಸವು ವಾಸವಾಗಿದ್ದು ಮನೆಯವರನ್ನಲ್ಲದೇ ಪರ ಊರಿಂದ ಯಾರಾದರು ಬಂದು ಇಳಿದುಕೊಂಡರೆ ಅವರನ್ನು ಅತಿಯಾಗಿ ಕಾಡುತ್ತಿತ್ತು. ಜೀವ ಹಿಂಸೆಯು ಹಲವು ಸಾರೆ ನಡೆದು ಗ್ರಾಮವಾಸಿಗಳೆಲ್ಲರು ಧರ್ಮಣ್ಣನ ಮನೆಯತ್ತ ಸುಳಿಯಲು ಹೆದರಿ ಹಿಂಜರಿಯುತ್ತಿದ್ದರು. ಹೀಗಿರುವಾಗ ಧರ್ಮಣ್ಣನು ಕೊನೆಯ ಉಪಾಯವೆಂದು ಬ್ರಹ್ಮರಾಕ್ಷಸನನ್ನು ಕಂಡು ನಿನ್ನಾಸೆಯನ್ನು ತಪ್ಪದೆ ತೀರಿಸುತ್ತೇವೆ ನಮ್ಮನ್ನು ಕಾಡಬೇಡವೆಂದು ಕೇಳಿಕೊಂಡಿದ್ದನು. ಅದರಂತೆ ಬ್ರಹ್ಮರಾಕ್ಷಸನ ಹೇಳಿಕೆಯಂತೆ ಪ್ರತಿ ಅಮವಾಸ್ಯೆಯೆಂದು ಸಾವಿರಾರು ಹೊನ್ನು ಕೊಟ್ಟು ಯಾರೊಬ್ಬರನ್ನು ಒಪ್ಪಿಸಿ ನರಬಲಿ ಎಂದು ರಾಕ್ಷಸನಿಗೆ ಒಪ್ಪಿಸುತ್ತ ಬಂದಿದ್ದನು ಅಲ್ಲದೆ ವಾರದಲ್ಲಿ ಮೂರು ಸಾರೆ ಹದಿನೆಂಟು ಸೇರು ಅನ್ನ ಇಪ್ಪತ್ತೊಂದು ಸೇರು ಬೆಲ್ಲದಿಂದ ಸಿದ್ಧವಾದ ಹೋಳಿಗೆ ಐದು ಸೇರು ತುಪ್ಪವನ್ನು ಬ್ರಹ್ಮರಾಕ್ಷಸನ ಪಾಲಿಗೆ ಒಪ್ಪಿಸಿ ತೆಪ್ಪಗೆ ಬಾಳಿಕೊಂಡಿದ್ದನು. ಆದರೂ ಒಂದೊಂದು ಸಾರೆ ರಾಕ್ಷಸನು ತನ್ನ ಅತೀ ಹಸಿವೆಯನ್ನು ಹಿಂಗಿಸಿಕೊಳ್ಳಲು ಧರ್ಮಣ್ಣನನ್ನು ಬಿಡದೆ ಕಾಡುತ್ತಿದ್ದನು. ಹೀಗಾಗಿ ಧನಿಕನಿಗೆ ಜೀವನವೆ ಬೇಸರವಾಗಿ ತನ್ನ ಬದುಕಿಗಾಗಿ ಹಣದಾಸೆ ತೋರಿಸಿ ಹಲವು ಜನರ ಬಲಿಕೊಡುವದು ನ್ಯಾಯವು ಅಲ್ಲ ಪಾಪವನ್ನು ಹೆಚ್ಚಿಸಿಕೊಳ್ಳುವ ಸಾಹಸ ಮಾಡುತ್ತಿದ್ದೇನೆ ಎಂದು ಚಿಂತಿಸುತ್ತಿರುವಾಗ ಸ್ವಾಮಿಗಳ ದಯಮಾಡಿದರು ಸ್ವಾಮಿಗಳಂತಹ ಯೋಗ್ಯತಾ ಪುರುಷರ ಪಾದಸ್ಪರ್ಶದಿಂದ ಧರ್ಮಣ್ಣ ಶೆಟ್ಟಿಯ ಗೃಹವು ರಾಕ್ಷಸನಿಂದ ಬಿಡುಗಡೆ ಹೊಂದಬಲ್ಲದೆಂದು ಭಕ್ತರೆಲ್ಲ

ತರ್ಕಿಸಿದರು. ಅಂತೆ ಶಿವಯೋಗಿಗಳನ್ನು ರಾಕ್ಷಸನ ಬಿಡಾರದಲ್ಲಿ ಕರೆದು ಕೊಂಡು ಬಂದು ಬಿಟ್ಟು ಹೋದರು. ಆಗ ಎಲ್ಲವನ್ನು ಅರಿತವರಾದ ಸ್ವಾಮಿಗಳ ಮನದಲ್ಲಿಯೇ ನಕ್ಕು ಆ ರಾಕ್ಷಸನ ಸ್ಥಾನದಲ್ಲಿರಲು ಒಪ್ಪಿ ಅವ ರೆಲ್ಲರಿಗೂ ಅಪ್ಪಣೆಕೊಟ್ಟು ಕಳುಹಿಸಿದರು.

ಬಳಿಕ ಸ್ವಾಮಿ ಮಡಿವಾಳೇಶ್ವರರು ಸಂತೋಷದಿಂದ , ಲಿಂಗಾರ್ಚನೆ ವಿವಿಧ ಸೇವೆಗಳನ್ನು ಪ್ರತಿನಿತ್ಯವು ಸಾಂಗಗೊಳಿಸುತ್ತ ಸಾಗಿದರು. ಆದರೆ ಒಂದು ದಿನ ತಮ್ಮ ಲಿಂಗಾರ್ಚನೆ ಮುಗಿಸಿ ನಿಶ್ಚಿಂತೆಯಿಂದ ಮಲಗಿ ನಿದ್ರಿ ಸುವ ಸಮಯದಲ್ಲಿ ಆ ಮನೆಯಲ್ಲಿ ವಾಸವಾಗಿದ್ದ ಬ್ರಹ್ಮರಾಕ್ಷಸನು ವಿಕಾರ ರೂಪವನ್ನು ಧರಿಸಿ, ಮರದ ಹರಿಯಂತಹ ತೋಳುಗಳನ್ನು ಬೀಸುತ್ತ ಹೆಮ್ಮರದ ಬೊಡ್ಡೆಯಂತಿರುವ ಪಾದಗಳಿಂದ ನೆಲವನ್ನು ಅಪ್ಪಳಿಸುತ್ತ ಕರಿಯ ದಂತಗಳನ್ನು ಹೋಲುವ ಹಲ್ಲುಕಿರಿದು ವಿಕಟನಗೆ ನಗುತ್ತ ಮುಂದಾಗಿ ಶಿವಯೋಗಿಗಳನ್ನು ಸಮೀಪಿಸಿತು ಅಷ್ಟಾದರು ಸ್ವಾಮಿಗಳು ನಿಶ್ಚಿಂತೆಯಿಂದ ಪವಡಿಸಿರುವದನ್ನು ಕಂಡು ರಾಕ್ಷಸನು ಮತ್ತಷ್ಟು ಗಹಿ ಗಹಿಸಿ ನಗುತ್ತ ತನ್ನ ರಾಕ್ಷಸ ಗುಣವನ್ನು ತೋರ್ಪಡಿಸಹತ್ತಿತು.

ಬಳಿಕ ಶಿವಯೋಗಿಗಳು ರಾಕ್ಷಸನ ಉಪಟಳಕ್ಕೆ ಬೇಸತ್ತು ಎಚ್ಚರ ಗೊಂಡು ರಾಕ್ಷಸನನ್ನು ನೋಡಿ ನಸುನಗುತ್ತ ಹೋಗು ಹೋಗಲೇ ಮಾಯೇ ರಾಕ್ಷಸರೂಪದಿಂ ನೀ ಬಂದು ನಮ್ಮನ್ನೇನು ಮಾಡಬಲ್ಲೆ ಸುಮ್ಮನೆ ಸಾವಿಗೆ ಆಸೆ ಮಾಡಬೇಡ ಪರಶಿವನ ಪುಣ್ಯ ಮೂರ್ತಿ ಲಿಂಗಯ್ಯ ಬಳಿ ಇರಲು ಭಯವೇ ಯಮಗೆ ತಿಳುವಳಿಕೆಯಂ ತಂದುಕೊಂಡು ಹೀನ ವೃತ್ತಿಯಂ ಬಿಸುಟಿ ಸರಿಯುನಿಸ ಠಾವು ಪಡೆದು ಜೀವಿಸಲು ಹೊರಟು ಹೋಗು. ಪರಶಿವನಾಣತಿಯ ಕುಸುಮ ನಾವು. ನಿನ್ನ ಬಸಿರು ಬೇಗೆಯು ಬಗೆಹರಿಸಲು ಸಿದ್ಧರಾದರೆ ಉಳಿಗಾಲವಿಲ್ಲವಯ್ಯ ರಾಕ್ಷಸನೆ ನಿನಗೆ ನಾಡಾಡಿ ಮಕ್ಕಳ ನಯವಾದ ಬಾಳಿನಲ್ಲಿ ಕಾಡಾಡಿನೀ ಭಯವ ಹುಟ್ಟಿಸಿ ಅವರ ಪ್ರಾಣವಂ ಕೊಂಡು ಅಟ್ಟಹಾಸದಿಂದ ಮೆರೆಯುತಿರುವಿಯಲ್ಲಾ ಶತ ವರುಷ ಸರಿದರು ರಾಕ್ಷಸ ಜನ್ಮದಿಂ ಬಿಡುಗಡೆ ಹೊಂದಲಾರೆ ಹೋಗು ಸುಮ್ಮನೆ ಎಂದು ಎಚ್ಚರಿಕೆಯ ನುಡಿಗಳನ್ನಾಡಿ ಪದ ಹಾಡಲಾರಂಭಿಸಿದರು.

ಭೂತವೇ ಬೇತಾಳವೆ ಬ್ರಹ್ಮರಾಕ್ಷಸ ರೂಪಿಯೆ
ಬೇತು ಮಾಡಿ ಬಂದೆ ಯದಕೆ ಸಾಗು ಸುಮ್ಮನೆ ಮುಂದಕ್ಕೆ
ಖ್ಯಾತ ಪ್ರಖ್ಯಾತ ಯುಮ್ಮಯ ಪರಶಿವ ಲಿಂಗರೂಪದಿ ಬಳಿಯಲಿರಲು
ಸ್ತೋತು ಸಾಯಲು ಬೇಡ ಸಾಗಲೆ ನೀ ಮುಂದಕೆ
ಗತ್ತು ಮಾಡಿ ಧನಿಕ ಶಟ್ಟಿಯ ಗ್ರಹದಿ ವಾಸವ ಗೈದೆ
ಗೊತ್ತು ದಾಟಲೀ ಕಟಕ ಹೃದಯಿ ಬ್ರಹ್ಮರಾಕ್ಷಸನೆ
ಅತ್ತ ನಿನ್ನಯ ಅಣ್ಣ ಬಂಡಿ ಅನ್ನವನುಂಡು ಏನಾದ ಗೊತ್ತೇನಲೆ
ರುತ್ತಿತಾ ಪಂಡು ನಂದನು ಸೀಳಿ ವಗೆದರೂ ವಂಶವೃತ್ತಿ
ಎಂದು ಬಂದೆಯಾ
ಎತ್ತ ಹೋದರು ಸುತ್ತಿ ಬರುವ ಮರಣವಿಂದು ಬೇಡ ಎನಗೆ
ಸತ್ತ ಹೆಣವ ಹರಿದು ಹದ್ದು ಕಾಗೆಯಂತೆ ಬಾಳು ಹೋಗಲೇ
ಕಿತ್ತೂರ ಕಲ್ಮಠದೀಶ ಪ್ರಭು ಮಡಿವಾಳೇಶನ ನುಡಿಯನಾಲಿಸಿ

ಎಂದು ಹೃದಯ ಬಿರಿಯುವಂತೆ ಹಾಡನ್ನು ಹಾಡಿದರು. ಆಗ ಆ ರಾಕ್ಷಸೇಂದ್ರನು ಜ್ಞಾನವನ್ನು ಪಡೆದವನಂತೆ ಭಯದಿಂದ ಸ್ವಾಮಿಗಳ ಅಡಿದಾವರೆಗಳಿಗೆ ಎರಗಿ ಗುರುವೆ ಮಹಾಗುರುವೆ ಪರಮ ಪುರುಷೋತ್ತಮ ಗುರುವೆ ನನ್ನನ್ನು ಉದ್ಧರಿಸಿ ಕಾಪಾಡಬೇಕೆಂದು ಬೇಡಿಕೊಳ್ಳಹತ್ತಿತು. ಆಗ ಶಿವಯೋಗಿಗಳು ಇಂದಿಗೆ ನಿನ್ನ ಪೂರ್ವ ಜನ್ಮದ ಕರ್ಮ ಕಳೆಯಿತು. ಅಯ್ಯಾ ರಾಕ್ಷಸನೆ ಇನ್ನಾದರೂ ಈ ತಾಮಸ ಗುಣವನ್ನು ತ್ಯಜಿಸಿ ಸಾತ್ವಿ ಗುಣ ಸಂಪತ್ತಿನಿಂದ ಎಲ್ಲಿಯಾದರೂ ಹೋಗಿ ಬದುಕಿಕೊಳ್ಳುವವನಾಗಿ ಎಂದು ಬೋಧಿಸಿ ನೀನು ಈ ಸ್ಥಾನವನ್ನು ಬಿಟ್ಟು ಹೋದ ಗುರುತಾಗಿ ಮನೆಯ ಮುಂದೆ ಹೆಮ್ಮರವೆನಿಸಿ ಬೆಳೆದಿರುವ ಹುಣಸೇ ಮರದ ಒಂದು ಹರಿಯು ಮಾತ್ರ ಕತ್ತರಿಸಿ ಬೀಳುವದೆ ಸೂಚನೆ ಎಂದು ಆಜ್ಞೆ ಮಾಡಿದರು.

ಸ್ವಾಮಿಗಳ ವಾಣಿಯಂತೆ ಬ್ರಹ್ಮರಾಕ್ಷಸನು ಆ ಮನೆಯಿಂದ ದಿಕ್ಕು ತಿಳಿದತ್ತ ಓಟ ಕೊಡುವದಾಯಿತು ಬಳಿಕ ಹುಣಸೆ ಮರದ ಒಂದು ಶಾಖೆಯು ತನ್ನಿಂದ ತಾನೆ ಕಳಚಿ ಬೀಳುವದಾಯಿತು. ಇದನ್ನೆಲ್ಲವನ್ನು ಕೇಳುತ್ತ ನೋಡುತ್ತ ನಿಂತುಕೊಂಡಿದ್ದ ಭಕ್ತಬಾಂಧವರು ಸ್ವಾಮಿಗಳಿಗೆ

ವಂದನೆಗಳನ್ನರ್ಪಿಸುತ್ತ ಅವರ ಮಹಿಮೆಯನ್ನು ಕೊಂಡಾಡುತ್ತ ಮನೆ ಯೊಡೆಯ ಧರ್ಮಣ್ಣನಿಗೆ ಈ ವಾರ್ತೆಯನ್ನರುಹಲು ಆತನು ಸ್ವಾಮಿಗಳ ಸನ್ನಿಧಿಗೆ ಬಂದು ಅವರ ಶ್ರೀಪಾದಗಳನ್ನು ಹಿಡಿದು— ಬುದ್ಧಿ ತಮ್ಮ ಪಾದ ಧೂಳಿಯಿಂದ ಪಾವನವಾದ ನನ್ನ ಗೃಹದಿಂದ ಬ್ರಹ್ಮರಾಕ್ಷಸವಂತೂ ಹೊರಟು ಹೋಯಿತು ಆದರೆ ಮುಂದೆ ಎಂದೆಂದೂ ಅದರ ಉಪದ್ರವ ತಲೆದೋರದಂತೆ ಅನುಗ್ರಹ ಮಾಡಬೇಕೆಂದು ಬೇಡಿಕೊಳ್ಳ ಹತ್ತಿದನು.

ಬಳಿಕ ಸ್ವಾಮಿಗಳು ಆತನ ದೀನಾವಸ್ಥೆಯನ್ನು ಕೇಳಿ ಅಯ್ಯಾ ಧನಿ ಕನೆ ನೀನೀಗ ನಮ್ಮ ಅಪ್ಪಣೆಯಂತೆ ಸಾವಿರ ರೂಪಾಯಿ ಕೊಡಲು ಸಿದ್ಧ ನಿರುವೆಯಾ ಎಂದು ಕೇಳಿದರು. ಅದಕ್ಕೆ ಆ ಧನಿಕ ಧರ್ಮಣ್ಣನು ಸಂತೋಷ ದಿಂದಲೂ ಭಯ ಭಕ್ತಿಯಿಂದಲೂ ಸಾವಿರ ರೂಪಾಯಿ ತಂದು ಕೂಡಲೇ ಸ್ವಾಮಿಗಳ ಪಾದಕ್ಕೆ ಅರ್ಪಿಸಿ ಕರಜೋಡಿಸಿದನು. ಆಗ ಸ್ವಾಮಿಗಳು ಧರ್ಮಣ್ಣನಿಂದ ಪಡೆದುಕೊಂಡ ಸಾವಿರ ರೂಪಾಯಿಗಳ ಖರ್ಚಿನಿಂದ ಆತನ ಮನೆಯಲ್ಲಿ ಸ್ಕಂದ ಪುರಾಣವನ್ನು ಹೇಳಿಸಿ ಮಂಗಲ ಮಹೋತ್ಸವದ ದಿವಸ ಚನ್ನಪಟ್ಟಣದ ಬಡಬಗ್ಗರಿಗೆ ಅನಾಥ ಬಂಧುಗಳಿಗೆಲ್ಲ ಗಣತೃಪ್ತಿ ಯನ್ನು ಮಾಡಿಸಿದರು. ಬಳಿಕ ಸ್ವಾಮಿಗಳ ಕೃಪೆಗೆ ಪಾತ್ರನಾದ ಧರ್ಮಣ್ಣ ಧನಿಕನಿಗೆ ಸಕಲ ಸಮೃದ್ಧ ಐಶ್ವರ್ಯ ತಾಂಡವವಾಡುವಂತಾಯಿತು.

ಆ ಮೇಲೆ ಸ್ವಾಮಿಗಳು ಮುಂದಿನ ಪಯಣಕ್ಕೆ ಸಿದ್ಧರಾದರು. ಆಗ ಧನಿಕನು ಶಿವಯೋಗಿಗಳಲ್ಲಿ ಪರಿಪರಿಯಿಂದ ಬೇಡಿಕೊಳ್ಳುತ್ತ ತನ್ನ ಮನೆ ಯಲ್ಲಿಯೇ ಉಳಿದುಕೊಳ್ಳುವ ಕೃಪೆಯಾಗಬೇಕೆಂದು ಬಿನ್ನವಿಸಿಕೊಳ್ಳ ಹತ್ತಿದನು. ಆಗ ಸ್ವಾಮಿಗಳು, ಅಯ್ಯಾ ಧನಿಕನೆ ನಾವು ಒಂದೇ ಠಾವಿ ನಲ್ಲಿ ಇರತಕ್ಕವರಲ್ಲ ಸಂಚಾರವೇ ನಮ್ಮ ಕಾಯಕ ತತ್ವಬೋಧೆಯು ನಮ್ಮ ಕರ್ತವ್ಯ ನಾವು ಶಿವನ ಊಳಿಗದಾಳು ಅವನು ಕರೆದತ್ತ ಸಾಗತಕ್ಕವರೆ ಎಂದು ಸಮಾಧಾನಪಡಿಸಿ ಸಂಚಾರದ ಕರ್ತವ್ಯದತ್ತ ಹೊರಳಿದರು. ಶಿವ ಯೋಗಿಗಳನ್ನು ಮರೆತು ಇರಬೇಕಾದರೆ ಧರ್ಮಣ್ಣ ಆದಿಯಾದ ಚನ್ನಪಟ್ಟ ಣದ ಭಕ್ತರಿಗೆ ಕಳವಳ ಉಂಟಾಗಿ ಮನಸ್ಸಿಲ್ಲದ ಮನಸ್ಸಿನಿಂದ ಬೀಳ್ಕೊಟ್ಟರು.

೩೩ ನೆಯ ಪ್ರಕರಣ

ನೇಪಾಳ ರಾಜನು ಶಿವಯೋಗಿಗಳನ್ನು ಸೇವಿಸಿದ್ದು

ಮುಂದೆ ಪಯಣ ಬೆಳೆಯಿಸಿದ ಶಿವಯೋಗಿಗಳ ಶಿಷ್ಯ ನರಸಿಂಹಾಚಾರ್ಯನೊಡಗೂಡಿ ರಾಮೇಶ್ವರಕ್ಕೆ ಬಂದರು. ಅಲ್ಲಿ ರಾಮೇಶ್ವರ ಲಿಂಗವನ್ನು ಶಿವಯೋಗಿಗಳು ವಿಧಿವತ್ತಾಗಿ ಪೂಜಿಸಿ ಆನಂದಗೊಂಡು ಬಳಿಕ ಶಿಷ್ಯನೊಡಗೂಡಿ ಪಯಣವಂ ಬೆಳೆಯಿಸಿ ಗೋಕರ್ಣಕ್ಕೆ ಬಂದರು. ಅಲ್ಲಿ ಶಿವ ಮಹಾದೇವ ಮುಕ್ಕಣ್ಣನ ಪ್ರಾಣಲಿಂಗವೇ ಮಹಾಬಲೇಶ್ವರ ಲಿಂಗವೆಂದು ಸ್ಥಾಪಿತವಾಗಿದ್ದ ಈಶ್ವರ ಮಹೇಶ್ವರ ಲಿಂಗವನ್ನು ಸಂತಸದಿಂದ ಪೂಜಿಸಿ ಕೆಲವು ಕಾಲ ಅಲ್ಲಿ ಉಳಿದು ಮತ್ತೆ ಪಂಡರಪುರಕ್ಕೆ ಹೊರಟು ಬಂದು ವಿಠ್ಠಲನ ದರ್ಶನದಿಂದ ಆನಂದಗೊಂಡರು. ತಮ್ಮ ಮನದಿಚ್ಛೆಯಂತೆ ಮುಂದೆ ಹಲವಾರು ತೀರ್ಥ ಕ್ಷೇತ್ರಗಳ ಸಂದರ್ಶನದಿಂದ ಆನಂದ ಹೊಂದಿದರು. ನಂತರ ಕಾಶಿನಗರಿಯ ವಾಸದಲಿದ್ದ ಸ್ವಾಮಿಗಳ ಪಾಂಡಿತ್ಯ ಪ್ರಭೆಯೊಡನೆ ಅಗವ್ಯ ಅಗೋಚರ ಲೀಲೆಗಳ ಪರಿಚಯವು ಗಾಳಿಯಂದದಿ ದಿಕ್ಕು ದಿಕ್ಕುಗಳಲ್ಲಿ ಪಸರಿಸಿ ನೇಪಾಳದ ದೊರೆಯ ಕರ್ಣ ಪಟಲಗಳಿಗೂ ತಾಕಿತು. ಆಗ ನೇಪಾಳದ ದೊರೆಯು ಶಿವಯೋಗಿಗಳ ದರ್ಶನದಿಂದ ಪುನೀತನಾಗಬೇಕು. ನನ್ನ ನಾಡು, ಈ ರಾಜ್ಯ ಸುಸೂತ್ರವಾಗಿ ಸಾಗಬೇಕಾದರೆ ಸ್ವಾಮಿಗಳ ಪಾದ ನನ್ನ ನಾಡಿನ ನೆಲದಲ್ಲಿ ಬೀಳಲೇಬೇಕೆಂದು ಶಿವಯೋಗಿಗಳನ್ನು ತನ್ನ ನಾಡಿಗೆ ಹೃತ್ಪೂರ್ವಕವಾಗಿ ಆಮಂತ್ರಿಸಿದನು.

ದೊರೆಯ ಇಷ್ಟದಂತೆ ಶಿವಯೋಗಿಗಳನ್ನು ಅದ್ದೂರಿಯ ಮೆರವಣಿಗೆಯಿಂದ ಅರಮನೆಗೆ ಕರೆತರಲಾಯಿತು. ಶಿವಯೋಗಿಗಳ ವಿದ್ವತ್ತು. ತೇಜಸ್ಸು, ತಪಸ್ಸುಗಳಿಗೆ ನೇಪಾಳ ದೇಶದ ದೊರೆಯಾದಿಯಾಗಿ ಎಲ್ಲರೂ ತಲೆದೂಗಿ, ಶ್ರೀಗಳವರಲ್ಲಿ ಭಕ್ತಿಭಾವ ತುಂಬಿ ಅವರನ್ನು ಸೇವಿಸುವವರಾದರು ಅರಮನೆಯಲ್ಲಿ ಉಳಿದುಕೊಂಡು ಸ್ವಾಮಿಗಳ ದರ್ಶನಕ್ಕೆ ಭಕ್ತಜನರು ತಂಡೋಪತಂಡವಾಗಿ ಬರಹತ್ತಿದರು ರಾಜನಂತೂ ಸ್ವಾಮಿಗಳನ್ನು ಸುವರ್ಣ ಪೀಠದಲ್ಲಿ ಕುಳ್ಳಿರಿಸಿ ಅವರ ಪಾದ ಪೂಜೆಯನ್ನೆಸಗಿ ಸಂತಸ ಪಡುತ್ತಿದ್ದುದು. ಸ್ವಾಮಿಗಳಾದವರು ರಾಜನ ಭಕಿ ವಿಶ್ವಾಸಗಳಿಗೆ ಮಾರುಹೋಗಿ ಒಲಿದು ಒತ್ತಾಸೆಯಿಂದ ಎಲೈ ಅರಸನೆ ಕೇಳು —

ಹೇಯ ಕಾಯವ ನಂಬಿ ಕೆಡಿದಿರೊ ಮಾನವಾ
ಮಾಯ ಮೋಹದ ಮಡುವಿದು ಕಾಣೊ ಜಾಣಾ
ಭಯಭಕ್ತಿಯಿಂದ ಶಿವನೊಲಿಸುವದೆ ನಿಜಸುಖ ಕಾಣೊ
ಭಯ ಹರ ಶಿವನಿಂದ ಸಕಲವು ತಿಳಿ ನೀ ಬಲು ಶಾಣ್ಯಾ
ಕಾಯದೊಳಿರ್ದ ಮಂಗ ಮನದ ಬಲೆಗೆ ಸಿಲುಕದಿರು ಜಾಣಾ
ಕಾಯುವನು ಗುರುಪ್ರಭು ಮಡಿವಾಳೇಶ ನಿನ್ನ

ಎಂದು ಮಾರ್ಮಿಕವಾಗಿ ನುಡಿದರು. ಒಂದು ದಿನ ಶಿವಯೋಗಿಗಳು ಅರಸನನ್ನು ಸಂಧಿಸಿ ಅಯ್ಯಾ ಈ ಸುವರ್ಣ ಸಿಂಹಾಸನವನ್ನು ಯಾರಿಗಾಗಿ, ಏತಕ್ಕಾಗಿ ಮಾಡಿಸಿರುವಿ ಎಂದು ಕೇಳಿದರು ಅದಕ್ಕೆ ದೊರೆಯು ಬುದ್ಧಿ ತಮಗಾಗಿ ಮಾಡಿಸಿದ್ದು ಎಂದು ತಟ್ಟನೆ ನುಡಿದು ಬಿಟ್ಟನು. ಹೌದೇನು ಹಾಗಾದರೆ ನಾವು ಈ ಸಿಂಹಾಸನವನ್ನು ನಮಗೆ ಸರಿಕಂಡಂತೆ ಉಪಯೋಗಸಬಹುದಲ್ಲವೆ ಎಂದು ಸುವರ್ಣ ಸಿಂಹಾಸನವನ್ನು ಸರಿಯಾದ ರೀತಿಯಲ್ಲಿ ತುಂಡು ತುಂಡ ಮಾಡಿಸಿ ಆ ಸುವರ್ಣದ ಚೂರುಗಳನ್ನು ನೇಪಾಳದ ಬಡಬಗ್ಗರಿಗೆ ದೀನದಲಿತರಿಗೆ ಅನಾಥರಿಗೆ ಸರಿಯಾಗಿ ತಮ್ಮ ಕೈಯಾರೆ ಹಂಚಿಬಿಟ್ಟರು. ಬಳಿಕ ಸ್ವಾಮಿಗಳು ಶಿಲಾ ನದಿಗೆ ಹೋಗುವದಾಗಿ ತಿಳುಹಿಸಲು ಅರಸನು ಐವತ್ತು ಸಾವಿರ ರೂಪಾಯಿಗಳನ್ನು ಸ್ವಾಮಿಗಳ ಪಾದಕ್ಕೆ ಅರ್ಪಿಸಿದನು. ಆಗ ಸ್ವಾಮಿಗಳು ಈ ಹಣವು ಕೆಲವು ಕಾಲ ನಮ್ಮದಾಗಿ ನಿನ್ನ ಬಳಿಯಲ್ಲಿರಲಿ ಎಂದು ಅಪ್ಪಣೆ ಮಾಡಿ ಶಿಷ್ಯ ನರಸಿಂಹಾಚಾರ್ಯನೊಡನೆ ಶಿಲಾ ನದಿಗೆ ಹೊರಟರು. ಮಧ್ಯ ದಾರಿಯಲ್ಲಿ ರಾಮದಾಸ ಶಿವದಾಸ ಎಂಬ ಈರ್ವರು ಸಾಧುಗಳ ಭೆಟ್ಟಿಯಾಯಿತು. ಪಾಪ ಆ ಸಾಧುಗಳು ಮಳೆಯ ಕ್ರೌರ್ಯಕ್ಕೆ ಸಿಲುಕಿ ಚಳಿಯಿಂದ ನಡುಗುತ್ತಿದ್ದರು. ಆಗ ಸ್ವಾಮಿಗಳು ಸಮೀಪದ ಗುಡಿಗೆ ಸಾಧುಗಳೀರ್ವರನ್ನು ಕರೆದುಕೊಂಡು ಹೋಗಿ ಉರಿಹಚ್ಚಿ ಕಾಯಿಸಿಕೊಳ್ಳುತ್ತ ಕುಳಿತಿರಲು ಸಾಧುಗಳು ಹಸಿವೆಯಿಂದ ಕಂಗಾಲಾಗಿದ್ದಾರೆ. ಎಂದು ಗ್ರಹಿಸಿದ ಶಿವಯೋಗಿಗಳು ಸಣ್ಣ ಸಣ್ಣ ಹತ್ತೆಂಟು ಕಲ್ಲುಗಳನ್ನು ತರಿಸಿ ಭೂಮಿಯಲ್ಲಿ ಹೂಳಿ ಮೇಲೆ ಉರಿಹಚ್ಚಲು ಕಲ್ಲುಗಳ ಬೆಂದು ಗಡೆಗೆಣಸುಗಳಂತಾಗಿದ್ದವು. ಈರ್ವರೂ ಕಲ್ಲಿನ ಕಂದ ಮೂಲಗಳನ್ನು ಸೇವಿಸಿ ಸ್ವಾಮಿಗಳ ಮಹಿಮೆಯನ್ನು ಕೊಂಡಾಡುತ್ತ ತಮ್ಮ ಹಸಿವೆಯ ತಾಪವನ್ನು

ನಿವಾರಿಸಿಕೊಂಡರು. ಶಿಲಾ ನದಿಗೆ ಬಂದ ಶಿವಯೋಗಿಗಳು ಸಾಧುಗಳನ್ನು, ಶಿಷ್ಯನನ್ನು ಅಲ್ಲಿಯೇ ದಡದಲ್ಲಿಯೇ ನಿಲ್ಲುವಂತೆ ಅಪ್ಪಣೆ ಮಾಡಿ ತಾವು ಮುಂದಾಗಿ ತಮ್ಮ ಕಿರಿ ಬೆರಳ ನದಿಯ ನೀರಲ್ಲಿ ಎದ್ದಲು ನರಸಿಂಹಾ ಚಾರ್ಯನೂ ನಿಬ್ಬೆರನಾಗಿ ನೋಡುತ್ತ ಕಲ್ಲುಗೊಂಬೆಗಳಂತಾದರು.

———

೩೪ ನೆಯ ಪ್ರಕರಣ

ಹೈದರಾಬಾದ ಸುಲ್ತಾನನ ಗರ್ವಹರಣ

ಬರುಬರುತ್ತ ಸ್ವಾಮಿಗಳ ಒಂದು ಸ್ಥಳದಲ್ಲಿ ನಿಶ್ಚಿಂತೆಯಿಂದ ಉಳಿಯದೆ ಶಿಷ್ಯನೊಡಗೂಡಿ ಸಂಚಾರವನ್ನು ಸದಾ ಜರುಗಿಸುತ್ತ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಸ್ವಾಗತ, ಸಂಭ್ರಮ ಸತ್ಕಾರಗಳನ್ನು ಪಡೆಯುತ್ತ ಸಂತುಷ್ಟರಾಗುತ್ತ ಸಾಗಿದವರು ಹೈದರಾಬಾದ ಸಂಸ್ಥಾನಕ್ಕೆ ಬಂದರು. ಅಲ್ಲಿ ಜನ ಸಮೂಹದಿಂದ ಅತಿ ದೂರದಲ್ಲಿ ಕುಳಿತು ಶಿವಧ್ಯಾನದಲ್ಲಿ ತಮ್ಮಷ್ಟಕ್ಕೆ ತಾವು ಗುಡಿಗುಡಿಯನ್ನು ಸೇರುತ್ತ ಕಾಲ ಕಳೆಯುತ್ತಿರಲು ಅನೇಕ ಭಕ್ತ ಮಹಾಶಯರು ಯೋಗಿಗಳನ್ನು ಕಂಡು ತಾವಾಗಿಯೇ ಅವರ ಸಮೀಪ ಹೋಗಿ ಭಯದಿಂದಲೂ ಭಕ್ತಿ ವಿಶ್ವಾಸಗಳಿಂದಲೂ ನಮಸ್ಕರಿಸಿ ಕ್ಷೇಮ ಸಮಾಚಾರ ಕೇಳಲು ಮುಂದಾಗಹತ್ತಿದರು. ಆಗ ಸ್ವಾಮಿಗಳು ಸಕಲರಿಗೂ ಒಂದೇ ಉತ್ತರವಾಗಿ ಶಿವನಿರುವು ನಮ್ಮ ಠಾವು, ನಮ್ಮ ಬದುಕು ಬಾಳ್ವೆಯೆಂದು ಉಸುರಿ ಕೈಯಲ್ಲಿ ಹಿಡಿದ ಮುಸಿಯನ್ನು ಜಾಡಿಸಿ ಸಮೀಪದಲ್ಲಿ ಬಿದ್ದ ಎರಡು ಹರಳುಗಳನ್ನು ತಕ್ಕೊಂಡು ಮುಸಿಯ ಮೇಲೆ ಇಟ್ಟು ದಮ್ಮೊಂದು ಎಳೆದರು. ಆಗ ಮುಸಿಯು ಮೇಲಿಟ್ಟ ಹರಳುಗಳಿಗೆ ಬೆಂಕಿ ಹೊತ್ತಿ ಕೆಂಪವಾಗಿ ಉರಿಯಹತ್ತಿದವು. ಹರಳು ಬೆಂಕಿಯಾದದ್ದನ್ನು ಕಂಡ ಜನರು ಬೆರಗಾಗಿ ಇವರು ದೇವತಾ ಪುರುಷರೆಂದು ನಂಬಿ ಸ್ತುತಿಸಹತ್ತಿದರು. ಸ್ವಾಮಿಗಳ ಮಹಿಮೆಯನ್ನು ನಿಜಾಮದೊರೆಗೆ ತಿಳಿಸುವದಕ್ಕೆ ನಾ ಮುಂದೆ ನೀ ಮುಂದೆ ಎಂದು ಹೋಗಿ ಸ್ವಾಮಿಗಳ ಮಹಿಮೆಯನ್ನರುಹಿ ಸ್ವತಃ ದೊರೆಯನ್ನೇ ಕರೆದುಕೊಂಡು ಸ್ವಾಮಿಗಳ ಸನ್ನಿಧಿಗೆ ಬಂದರು. ಅರಸನಾದರೂ ಶಿವಯೋಗಿಗಳ ಬ್ರಹ್ಮಚರ್ಯ ತೇಜಸ್ಸು ಸಿದ್ಧಿಗಳಿಗೆ ಆಶ್ಚರ್ಯ ಪಟ್ಟು ಭಯ

ಭಕ್ತಿಯಿಂದ ಮಣಿದು ಸ್ವಾಗತವ ಕೋರಿ ಅರಮನೆಯ ಅಂಗಳದ ವರೆಗೆ ಕರೆತಂದು ಯೋಗ್ಯ ಮರ್ಯಾದೆ ಮಾಡಿ ಬಳಿಕ ಅವರನ್ನು ಪರೀಕ್ಷಿಸುವ ಆಶೆ ಹುಟ್ಟಿ ಒಂದು ಬಂಗಾರದ ತಟ್ಟೆಯು ಫಲ ಪುಷ್ಪಗಳನ್ನು ಇನ್ನೊಂದು ಸುವರ್ಣ ಪಾತ್ರೆಯಲ್ಲಿ ಗೋಮಾಂಸವನ್ನಿರಿಸಿ ತಂದು ಅರ್ಪಿಸಲು ಮುಂದಾದನು. ತಟ್ಟೆಗಳ ಮೇಲೆ ಕಸೂತಿ ವಸ್ತ್ರಗಳು ಮುಚ್ಚಲ್ಪಟ್ಟಿದ್ದವು. ಆಗ ಸ್ವಾಮಿಗಳು ತಮ್ಮ ಶ್ರೀಹಸ್ತ ತಾಕಿಸುತ್ತ ಏನಯ್ಯಾ ಇದು ಭೋಜನ ಸಿದ್ಧತೆಯೇ ಎಂದು ನಗೆಯಾಡಿ ವಸ್ತ್ರಗಳ ಹೊಂದಿಕೆಯನ್ನು ಸರಿಸಿದರು. ಆಗ ತಟ್ಟೆಯಲ್ಲಿ ತುಂಬಿತಂದ ಗೋಮಾಂಸವು ಕೆಂಪು ಹೂಗಳಾಗಿ ಕಂಗೊಳಿಸಹತ್ತಿತ್ತು. ಕೂಡಿದ ಪುರಜನರಾದಿಯಾಗಿ ನಿಜಾಮದೊರೆಯು ಆಶ್ಚರ್ಯದಿಂದ ಉಬ್ಬಿ ಹೋದರು, ಬಳಿಕ ಸ್ವಾಮಿಗಳ ಮಹಿಮೆಗೆ ನಿಜಾಮ ಅರಸನು ಹರುಷಗೊಂಡು ಶಿವಯೋಗಿಗಳ ಪಾಂಡಿತ್ಯವು ಇನ್ನಷ್ಟು ಪ್ರಕಾಶಗೊಳ್ಳಲೆಂಬ ಸದಿಚ್ಛೆಯಿಂದ ತನ್ನ ವಡ್ಡೋಲಗದಲ್ಲಿ ಮಹಾ ಮಹಾ ಪಂಡಿತ ಶಿರೋಮಣಿಗಳ ಸಭೆಯನ್ನು ಏರ್ಪಡಿಸಿದನು. ಪರೀಕ್ಷೆಯ ಪಣತೊಟ್ಟು ಬಂದ ವಿವಿಧ ಪಂಡಿತರು ಶಿವಯೋಗಿಗಳನ್ನು ಕೀಳು ದರ್ಜೆಯ ಪಂಡಿತ ಎಂದು ಹೀಯಾಳಿಸುತ್ತಿದ್ದರು. ವಾದಕ್ಕೆ ಮೊದಲಾಗಿ ಯಾವತ್ತು ಉತ್ತಮ ಘನ ವಿದ್ವಾಂಸರು ಸ್ವಾಮಿಗಳ ವಾದ ವೈಖರಿಗೆ ಮಣಿದು ಮೂಕರಾದರು. ಉತ್ತರ ಕೊಡಲು ಬಾಯಿ ಏಳದಂತೆ ತಡವರಿಸಹತ್ತಿದರು. ನಂತರ ಹೌಹಾರಿ ಬಾಯಿ ಒಣಗಿ ಕೈಕಾಲುಗಳ ನಾಡಿಗಳೆ ಸತ್ತು ಹೋದವೆನೋ ಎನ್ನುವ ತೆರದ ಸ್ಥಿತಿ ತಂದುಕೊಂಡರು. ಅವರ ನೂರೂ ಪ್ರಶ್ನೆಗಳಿಗೂ ಸ್ವಾಮಿಗಳು ಒಂದೇ ಉತ್ತರದಿಂದ ಬಗೆಹರಿಸಿದರೆ ಸ್ವಾಮಿಗಳ ಒಂದೆ ಪ್ರಶ್ನೆಗೆ ಅವರ ನೂರಾರೂ ಉತ್ತರಗಳು ಪೊಳ್ಳು ಎಂದು ಸಿದ್ಧವಾಗಿ ಸ್ವಾಮಿಗಳು ವಾದದಲ್ಲಿ ಜಯವನು ಸಂಪಾದಿಸಿದರು.

ಬಳಿಕ ಯಾವತ್ತರೂ ಸೋತು ಶರಣು ಬಂದು, ಶಿವಯೋಗಿಗಳೆ ಮಹಿಮಾಶಾಲಿ ಘನ ಪಂಡಿತರೆಂದು ಬಿರುದು ಸಲ್ಲಿಸಿದರು.

ಆಗ ನಿಜಾಮ ದೊರೆಯು ಸಂತುಷ್ಟನಾಗಿ ಪೂಜ್ಯ ಸ್ವಾಮಿಜಿಯವ ನನ್ನ ನಿಜಾಮ ನಾಡಿನ ಘನತೆ ಗೌರವಗಳನ್ನು ಹೆಚ್ಚಿಸಿಕೊಳ್ಳುವದಕ್ಕಾ

ತಮ್ಮನ್ನು ಇಲ್ಲಿಯೇ ಉಳಿಸಿಕೊಂಡು ತಮಗೊಂದು ಮಠವನ್ನು ತಮ್ಮ ಮಠದ ಪದ್ಧತಿಯಂತೆ ಕಟ್ಟಿಸಿಕೊಡುವೆನು ಉಳಿಸಿಕೊಳ್ಳುವ ಕೃಪೆಯಾಗಬೇಕೆಂದು ಬಿನ್ನವಿಸಿಕೊಂಡರು.

ಆಗ ನಿಜಾಮನ ಬಿನ್ನಹವನ್ನು ಕೇಳಿ ಅಯ್ಯಾ ಮುಸಲ್ಮಾನ ದೊರೆಯೇ ವೀರಶೈವ ಶಿವಭಕ್ತ ಶರಣ ಶಿವಯೋಗಿಗಳ ಮೇಲಿರುವ ನಿನ್ನ ಅಭಿಮಾನವನ್ನೇನೋ ವ್ಯಕ್ತಪಡಿಸಿದಿ. ಆದರೆ ನಾವು ಸಂಚಾರಿಗಳು. ನಮಗೆ ಮಠಮಾನ್ಯಗಳ ಅಭಿಲಾಷೆ ಎಳ್ಳಷ್ಟೂ ಉಳಿದಿರುವದಿಲ್ಲ ಅಂದಾಗ ನಮಗೇಕೆ ಬೇಕು ಮಠ ಎಂದು ದೊರೆಯ ನುಡಿಯನ್ನು ನಿರಾಕರಿಸಿ ಶಿಷ್ಯನೊಡಗೂಡಿ ಹೊರಟಾಗ ನವಾಬ ಸಾಹೇಬರೆ ನಿಮಗೆ ಅಷ್ಟೊಂದು ಅಭಿಮಾನವಿದ್ದರೆ ಒಂದು ಕ್ಯಾವಿ ಟೊಪ್ಪಿಗೆ ಒಂದು ಜೊತೆ ಆವುಗೆಗಳನ್ನು ಕೊಟ್ಟುಬಿಡು ಎಂದು ಅಪ್ಪಣೆಯನ್ನು ದಯಪಾಲಿಸಿದರು. ಬಳಿಕ ನಿಜಾಮ ದೊರೆಯು ಸ್ವಾಮಿಗಳ ಮನದಿಚ್ಛೆಯಂತೆ ಟೊಪ್ಪಿಗೆ ಆವುಗೆಗಳನ್ನಿತ್ತು ಅತ್ಯಂತ ಸಂಭ್ರಮದ ಶೋಭೆಯಲ್ಲಿ ಬೀಳ್ಕೊಟ್ಟನು.

———

೩೫ ನೆಯ ಪ್ರಕರಣ

ಮರುಳಸಿದ್ಧ ಯೋಗಿಗಳೊಡನೆ ಸಂದರ್ಶನ

ನಿಜಾಮ ದೊರೆಯಿಂದ ಸನ್ಮಾನ ಹೊಂದಿ ಹೊರಟ ಶಿವಯೋಗಿಗಳ ಸಂಚಾರ ಮಾಡುತ್ತ ಮಕ್ಕಾ ಪಟ್ಟಣದತ್ತ ಹೊರಟು ಬಂದರು. ಮಕ್ಕಾ ಗಿರಿವಾಸದಿಂದ ಸಂತುಷ್ಟರಾಗಬಯಸಿದ ಕೆಲವು ಕಾಲ ಅಲ್ಲಿ ಉಳಿದು ತಮ್ಮ ಇಷ್ಟದಂತೆ ಮಕ್ಕಾಗಿರಿಯ ಉನ್ನತ ಶಿಖರದ ಮೇಲೆ ಅನುಷ್ಠಾನಗೈದರು. ಅಲ್ಲಿಯ ಅನೇಕ ಸಜ್ಜನ ಸಾಧುಗಳು ಸ್ವಾಮಿಗಳದರ್ಶನದಿಂದ ಪುನೀತರಾದರು.

ಬಳಿಕ ಸ್ವಾಮಿಗಳು ಶಿಷ್ಯನೊಡಗೂಡಿ ಕಾಠೆವಾಡ ಕಾಬೂಲಗಳತ್ತ ಪ್ರಯಾಣ ಬೆಳೆಸಿದರು. ಮುಂದೆ ಬಾಣವರಕ್ಕೆ ಬಂದು ಅಲ್ಲಿ ಮರುಳಶಿದ್ದಯೋಗಿಗಳೆಂಬ ಪವಾಡ ಪುರುಷರನ್ನು ಕಾಣಲು ಇಚ್ಛಿಸಿದರು. ಮರುಳಶಿದ್ದಯೋಗಿಗಳ ದರ್ಶನಕ್ಕಾಗಿ ಹೊರಟ ಜನರ ಗದ್ದಲವನ್ನು ಕಂಡು

ತೆನುಗೆ ಅವರ ಸಂದರ್ಶನ ಲಾಭ ದೊರೆಯುವದೋ ಇಲ್ಲವೋ ಎಂದು ಯೋಚಿಸುತ್ತ ಸಾಗಿರಲು ಓರ್ವ ಮುದುಕಮ್ಮ ಭೆಟ್ಟಿಯಾಗಿ ಯಾಕರೆಪ್ಪಾ ಎಲ್ಲಿಗೆ ನಡೆದಿರುವಿರಿ ಎಂದು ಕೇಳಿದಳು.

ಆಗ ಸ್ವಾಮಿಗಳು ಮರುಳುಶಿದ್ಧಯೋಗಿಗಳೆಂಬವರ ದರ್ಶನಕ್ಕೆ ಹೊರಟ್ಟಿದ್ದೆವಮ್ಮಾ ಎಂದು ನುಡಿದು ಮುಂದೆ ಸಾಗಿರಲು ಮುದಕಮ್ಮ ಇಂತಹ ಸಾವಿರಾರು ಜನರ ಗದ್ದಲದಲ್ಲಿ ಸಿದ್ಧರ ಭೆಟ್ಟಿ ನಿಮಗೆ ಅದು ಹೇಗೆ ದೊರೆಯಬೇಕು ವೃತಾಸಾಹಸ ನಿಮ್ಮದು ಎಂದು ತನ್ನ ಅಭಿಪ್ರಾಯ ವನ್ನು ವ್ಯಕ್ತಪಡಿಸಿದಳು. ಇದರಿಂದ ಸ್ವಾಮಿಗಳು ಮೊದಲಿನಂತೆ ಮತ್ತೆ ಹಟಯೋಗಿಗಳಾದರು. ದಿಟ್ಟ ಧೀಮಂತ ಶಕ್ತಿಯುಳ್ಳ ಶಿವಯೋಗಿಯಾದರು ಆದಕ್ಕಾಗಿ ಕೈಯಲ್ಲಿದ್ದ ದಂಡವನ್ನು (ಬೆತ್ತವನ್ನು) ತಿರುಗಿಸಿ ಮುಷಿಯ ಲ್ಲಿದ್ದ ಬೂದಿಯನ್ನು ಪ್ರಸಾದವನ್ನು ಮೇಲ್ಭಾಗದಲ್ಲಿ ತೀಡಲು ಹತಾರ ದಂತೆ ಹರಿತ ಆಯುಧವಾಗಿ ಹೊಳೆಯ ಹತ್ತಿತು ಹತಾರ ಹೋಳಪಿಗೇನೆ ಕೂಡಿದ ಜನರ ಕಣ್ಣು ಕುಕ್ಕಿದವು ಝಳಪಿಸುವ ಚಮತ್ಕಾರಕ್ಕೆ ಕಿವಿ ಗಡಚಿ ಕ್ಕಿದವು ಬಳಿಕ ಎಲ್ಲಿರುವಿ ಮರುಳುಸಿದ್ಧ ಎಂದು ಅರ್ಭಟಿಸುತ್ತ ಮುಂದಾಗಲು ಮೊದಲೇ ಹೆದರಿ ಹಿಂಜರೆದ ಜನತೆ ಮತ್ತಷ್ಟು ಭಯಗೊಂಡು ದಾರಿಯನ್ನು ಬಿಟ್ಟು ದೂರ ದೂರ ಸರಿದು ಮಾರ್ಗವನ್ನುಂಟು ಮಾಡಿದರು.

ಮುಂದಾಗುತ್ತಿರುವ ಸ್ವಾಮಿಗಳ ತೇಜಸ್ಸನ್ನು ಕಂಡು ಮರುಳ ಸಿದ್ಧಯೋಗಿಗಳು ಸಹ ಬೇಗನೆ ಸ್ನೇಹಪೂರ್ಣ ಮಮತೆಯಲ್ಲಿ ಮಣಿದು ತಮ್ಮ ಮಗ್ಗುಲಲ್ಲಿ ಕುಳ್ಳರಿಸಿಕೊಂಡು ಕುಶಲ ಪ್ರಶ್ನೆಗಳಿಂದ ಮಡಿವಾಳೇಶ್ವರ ಶಿವಯೋಗಿಗಳನ್ನು ತೃಪ್ತಿಪಡಿಸಿದರು. ಆಗ ಮುದಕಮ್ಮ ಅತ್ಯಾನಂದ ಗೊಂಡವಳಾಗಿ ನನಗೆ ಮಾತುಕೊಟ್ಟಂತೆ ಮರುಳಸಿದ್ಧರೊಡನೆ ಕುಶಲ ಕ್ಷೇಮ ವಿಷಯವನ್ನು ಪ್ರಸ್ತಾಪಿಸಿ ವಚನ ಪೂರ್ತಿಯಾಯಿತು. ಎಂದು ಘನ ಮಹಿಮೆಯುಮ್ಮಯ್ಯ ಮಡಿವಾಳೇಶ ಶಿವಯೋಗಿ ಎಂದು ಹಾಡಿಹೊಗ ಳಿದಳು. ಬಾಣಾವರದ ಜನತೆಯಂತೂ ಭಕ್ತಿವಿಶ್ವಾಸಗಳಿಂದ ನಡೆದುಕೊಂಡು ಶಿವಯೋಗಿಗಳ ಕೃಪೆಗೆ ಪಾತ್ರರಾದರು.

ಬಳಿಕ ಸ್ವಾಮಿಗಳು ಮುಂದೆ ಸಂಚಾರದ ತಮ್ಮ ಕರ್ತವ್ಯವನ್ನು ಮರುಳಸಿದ್ಧಯೋಗಿಗಳಿಗೆ ತಿಳಿಹಿಸಿ ಹೊರಟು ನಿಂತರು. ಆದರೆ ಸಿದ್ಧಾ

ರ್ಯರು ಅರಿತುಕೊಂಡಂತೆ ಸ್ವಾಮಿಗಳಲ್ಲಿ ಪ್ರವಾಸ ವೆಚ್ಚಕ್ಕೆ ಹಣವಿಲ್ಲದಿರಲು ಅವರೆ ಮುಂದಾಗಿ ಸಾವಿರ ಹಣ ತಂದು ಶಿವಯೋಗಿಗಳಿಗೆ ಅರ್ಪಿಸಿದರು. ಆದರೂ ಸ್ವಾಮಿಗಳು ಆ ಸಾವಿರ ಹಣವನ್ನು ತಮ್ಮ ಖರ್ಚು ವೆಚ್ಚಕ್ಕೆಂದು ಉಳಿಸಿಕೊಳ್ಳದೆ ಅರ್ಧ ಹಣ ಖರ್ಚು ಮಾಡಿ ಗಣತೃಪ್ತಿಪಡಿಸಿ ಸಂತುಷ್ಟರಾದರು. ಅದೇ ಆನಂದದಲ್ಲಿ ಇನ್ನುಳಿದ ಅರ್ಧ ಹಣವನ್ನು ದೀನದಲಿತರಿಗೆ ದಾನ ಕೊಟ್ಟು ನಿಶ್ಚಿಂತರಾಗಿ ಮಥುರಾ ಪಟ್ಟಣದತ್ತ ಪಯಣ ಬೆಳೆಯಿಸಿದರು.

ಮಥುರಾ ಪಟ್ಟಣಕ್ಕೆ ದಯ ಮಾಡಿಸಿದ ಸ್ವಾಮಿಗಳು ಸಾಧುಗಳ ವಾಸ ಸ್ಥಾನದ ಒಂದು ಮಠದಲ್ಲಿ ಉಳಿದುಕೊಂಡರು. ಅಲ್ಲಿ ಸಾಧುಗಳ ಕರು ಸೇರಿಕೊಂಡು ಗಾಂಜಿ ಸೇದಿ ತಮ್ಮ ನಿತ್ಯ ಕರ್ತವ್ಯ ಶಿವಧ್ಯಾನದಲ್ಲಿ ನಿರತರಾಗಿದ್ದರು. ದುಷ್ಟ ಅಭ್ಯಾಸದಿಂದ ಶಿವಧ್ಯಾನದ ಸನ್ನಿವೇಶ ಅಸಹ್ಯವಾಗಿ ಅವಲಕ್ಷಣದಲ್ಲಿ ಅನಾಚಾರದ ಪ್ರತಿ ರೂಪವನ್ನೇ ಹೊತ್ತುಕೊಂಡಂತೆ ಭಾಸವಾಗುತ್ತಿತ್ತು. ಆಗ ಸ್ವಾಮಿಗಳು ಸಾಧುಗಳನ್ನು ಉದ್ದೇಶಿಸಿ-ಅಯ್ಯಾ ಶಿವನೊಲುಮೆಯ ಸಾಧನೆಯಲ್ಲಿ ನಿಮ್ಮ ದುರ್ಗುಣದೆಶೆಯಿಂದಾಗಿ ನಿಮ್ಮ ಉಜ್ವಲ ಕರ್ತವ್ಯ ಹಾಳಾಗುವದನ್ನು ಸ್ವಲ್ಪ ಗಮನಿಸಿರಿ ಎಂದು ಪರಿಪರಿಯಿಂದ ಬೋಧಿಸಿ ಗಾಂಜಿ ಸೇದುವದರಿಂದ ಆಗುವ ದುಷ್ಪರಿಣಾಮುವನ್ನು ತಿಳಿಸಿಕೊಟ್ಟ ಅವರನ್ನು ಸನ್ಮಾರ್ಗಿಗಳನ್ನಾಗಿ ಮಾಡಿದರು. ಬಳಿಕ ತಮ್ಮ ಆಶೆಯಂತೆ ಶ್ರೀಶೈಲದತ್ತ ತಿರುಗಿ ಜಾವಾಲಿ ಎಂಬಲ್ಲಿ ಬಂದರು. ಅಲ್ಲಿ ಆಂಧ್ರನಾಡಿನ ಶ್ರೇಷ್ಠ ಪಂಡಿತ ಶಿರೋಮಣಿ ಎಂದು ಬಿರುದು ಪಡೆದು ಗರ್ವದಲ್ಲಿ ಮೆರೆಯುತ್ತಿದ್ದ ರಂಗಾಚಾರ್ಯನ ಗರ್ವಭಂಗ ಮಾಡಿ, ಶ್ರೀಶೈಲದೆಡೆಗೆ ತೆರಳಿದರು. ಶ್ರೀಶೈಲಕ್ಕೆ ಬಂದ ಸ್ವಾಮಿಗಳು ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ಪೂಜೋತ್ಸವವನ್ನು ಅತೀ ಸಂಭ್ರಮದಿಂದ ಮಾಡುತ್ತ ಕೆಲವು ದಿವಸಗಳನ್ನು ಶ್ರೀಶೈಲ ಗಿರಿಮಲ್ಲಯ್ಯನ ಸನ್ನಿಧಾನದಲ್ಲಿ ಕಳೆದು ತಮ್ಮ ಇಷ್ಟದಂತೆ ತಾಯ್ನಾಡಿನತ್ತ ಹೊರಳಿ ಹಲವಾರು ತೀರ್ಥಕ್ಷೇತ್ರಗಳನ್ನು ಸುತ್ತುತ್ತ ಶಿಷ್ಯೋತ್ತಮ ನರಸಿಂಹಾಚಾರ್ಯನೊಡಗೂಡಿ ಸೊಗಲ ಶ್ರೀ ಕ್ಷೇತ್ರಕ್ಕೆ ದಯ ಮಾಡಿಸಿದರು.

....

೨೬ ನೆಯ ಪ್ರಕರಣ

ಸೊಗಲ ಕ್ಷೇತ್ರದ ಗವಿಯಲ್ಲಿ ಮಡಿವಾಳೇಶ್ವರರು ವಾಸವಾದದ್ದು

ಶ್ರೀಶೈಲದಿಂದ ದಯಮಾಡಿಸಿದ ಮಡಿವಾಳೇಶ್ವರ ಶಿವಯೋಗಿಗಳು ಸೊಗಲದ ಶ್ರೀ ಕ್ಷೇತ್ರದಲ್ಲಿ ಬಂದು ಸೋಮನಾಥ ದರ್ಶನ ಪೂಜಾದಿಗಳನ್ನು ತೀರಿಸುತ್ತ ಕೆಲವು ಕಾಲ ಅನುಷ್ಠಾನದಲ್ಲಿ ಕಾಲ ಕಳೆದರು. ಮುಂದೆ ಕೆಲವು ದಿವಸಗಳು ಗತಿಸಲಾಗಿ ಸ್ವಾಮಿಗಳು ಸೊಗಲದ ಗುಡ್ಡದಲ್ಲಿರುವ ಸುದ್ದಿಯು ದೊಡ್ಡವಾಡ ಕುಲಕರ್ಣಿಗೆ ತಿಳಿದು ಆತನು ತನ್ನ ಬಹು ದಿನಗಳ ಆಸೆಯಂತೆ ಸೊಗಲದ ಕೊಳ್ಳಕ್ಕೆ ಬಂದು ಸ್ವಾಮಿಗಳ ದರ್ಶನ ಪಡೆದು ತನ್ನಾಸೆಯಂತೆ ಶಿಷ್ಯನೆಂದು ಸ್ವೀಕರಿಸಿ ಸಂಸ್ಕೃತ ಅಭ್ಯಾಸಕ್ಕೆ ಅನುವಾಡಿ ಕೊಡಬೇಕೆಂದು ಭಿನ್ನವಿಸಿಕೊಂಡನು. ಸಂಗಪ್ಪ ಕುಲಕರ್ಣಿಯ ಮನದಾಸೆಯನ್ನು ಅಲ್ಲಗಳೆಯಬಾರದೆಂದು ಸ್ವಾಮಿಗಳು ಆತನಿಗೆ ಶಿಷ್ಯ ಪಟ್ಟವನ್ನು ಕೊಟ್ಟು ಸಂಸ್ಕೃತ ಅಭ್ಯಾಸಕ್ಕೆ ಅನುಕೂಲರಾದರಲ್ಲದೆ ಆತನ ಅತುಲ ವಿದ್ಯಾಪ್ರೇಮವನ್ನು ಪುಷ್ಟೀಕರಿಸಿದರು. ಬರು ಬರುತ್ತ ಸ್ವಾಮಿಗಳ ವಾಸವು ಸೊಗಲ ಕೊಳ್ಳದಲ್ಲಿ ಆಗಿರುವದನ್ನು ಅರಿತ ಸುತ್ತಲಿನ ಹಳ್ಳಿಯ ಜನರು ತಂಡೋಪತಂಡವಾಗಿ ಬರಹತ್ತಿದರು. ಸ್ವಾಮಿಗಳ ದರ್ಶನಾಶೀರ್ವಾದಗಳ ಬಯಕೆಯಿಂದ ಬರುವವರಲ್ಲಿ ದೆವ್ವ ಬಡಿದು ಸಣ್ಣಾದವರೆಷ್ಟೋ, ಮಕ್ಕಳಾಸೆಯಿಂದ ಕೊರಗಿದ ಹೆಣ್ಣು ಮಕ್ಕಳೆಷ್ಟೋ, ಕಣ್ಣು ಹೋಗಿ ಕಂಗಾಲ ಸ್ಥಿತಿ ಕಂಡವರೆಷ್ಟೋ, ಹಲವಾರು ತರಹದ ರೋಗದ ಬಳಲಿಕೆಯಲ್ಲಿ ಬೆಂದು ಬೆಂಡಾಗಿ ಬಸವಳಿದು ಬಂದವರೆಷ್ಟೋ ಅಂತೂ ಸ್ವಾಮಿಗಳ ದರ್ಶನಕ್ಕೆ ಬರುವ ಭಕ್ತ ಜನತೆ ದಿನದಿನಕ್ಕೆ ಹೆಚ್ಚಾಗಹತ್ತಿತು. ಸ್ವಾಮಿಗಳಾದರೂ ಭಕ್ತಾದಿಗಳ ಅಭೀಷ್ಟವನ್ನು ಕರುಣಿಸುವವರಾದರು.

ಜನಸಂದಣಿಯಿಂದ ದೂರಾಗಿ ಕಡಿವೇಳೆಯಾದರೂ ಶಿವಧ್ಯಾನದಲ್ಲಿ ಮೈ ಮರೆಯಲು, ಶಿವಯೋಗಿಗಳು ಗವಿಯೊಂದರಲ್ಲಿ ತಂಗಿದರು. ಬೆಳವಡಿ ಬಸಪ್ಪ ಎಂಬ ಭಕ್ತನೂ ಅಲ್ಲಿಗೂ ಆಗಮಿಸಿ ಶಿವಯೋಗಿಗಳ ದರ್ಶನ ಪಡೆದು ಅಲ್ಲಿಯೇ ಉಳಿದನು.

ಬಳಿಕ ಕೆಲವು ಸಮಯ ಕಳೆದ ಮೇಲೆ ಎರಡು ಹುಲಿಗಳು ಗರ್ಜಿಸುತ್ತ ಗವಿಯ ಬಾಗಿಲಿಗೆ ಬಂದವು. ಆಗ ಬಸಪ್ಪನು ಎಚ್ಚರವಾಗಿಯೇ ಇದ್ದು ಹುಲಿಗಳ ಗರ್ಜನೆಯನ್ನು ಕೇಳಿ ಭಯಗೊಂಡನು. ಆಗ ಸ್ವಾಮಿಗಳು ಎದ್ದು ಹೊರಗೆ ಬಂದು ಹುಲಿಗಳಂ ವೀಕ್ಷಿಸುತ್ತ ಮುಂದಾಗಿ ಹೋಗಿ ಅವುಗಳ ಮೈಮುಟ್ಟಿ ಬೆನ್ನ ಮೇಲೆ ಕೈಯಾಡಿಸಿ ಸಮಾಧಾನಪಡಿಸುವ ರೀತಿಯಲ್ಲಿ–ಏನಯ್ಯಾ ಹೊತ್ತುಗೊತ್ತುಗಳ ಪರಿವೆ ಇಲ್ಲದ ಸಂಚಾರವೇ ಸಮಯ ಸಂದರ್ಭಗಳನ್ನು ಅರಿಯಬಾರದೆ ಎಂದು ಬೆದರಿಸುತ್ತ ಹೋಗಿರಿ ನಿಮ್ಮ ಸ್ಥಾನವೇ ಬೇರೆಯಾಗಿರುವಾಗ ಇಲ್ಲೇಕೆ ನಿಮ ರಾವು ಎಂದರು. ಆಗ ಹುಲಿಗಳು ಶಿವಯೋಗಿಗಳ ಪಾದಕ್ಕೆ ನಮಿಸಿ ಕತ್ತಲೆಯಲ್ಲಿ ಕಾಣದಂತೆ ಮರೆಯಾದವು. ಅಗ ಇದೆಲ್ಲನ್ನು ನೋಡುತ್ತ ಸತ್ತವನಂತೆ ಬಿದ್ದು ಕೊಂಡಿರುವ ಬಸಪ್ಪನು ಮಾತನಾಡಲು ಬಾರದಷ್ಟು ಹೌಹಾರಿ ಭಯದಿಂದ ನಡುಗುತ್ತಿದ್ದನು. ಅವನ ಸ್ಥಿತಿಯನ್ನು ಕಂಡು ಸ್ವಾಮಿಗಳು ಮೈ ಮುಟ್ಟಿ ಎಬ್ಬಿಸುತ್ತ ಧೈರ್ಯ ಕೊಡುಕೊಟ್ಟ ಭಯವ ಬಿಟ್ಟು ನಿಶ್ಚಿಂತೆಯಿಂದ ಮಲಗಿ ನಿದ್ರಿಸಲು ಹೇಳಿದರು.

ಬೆಳಗಾದ ಮೇಲೆ ಊರಿಗೆ ಹೋದ ಬಸಪ್ಪನು ತಾನು ರಾತ್ರಿ ಗುಡ್ಡದಲ್ಲಿ ಸ್ವಾಮಿಗಳು ಸ್ಥಾನಗೈದ ಗವಿಯ ಬಳಿಯಲ್ಲಿ ಮಲಗಿರಲು ಹುಲಿಗಳು ಬಂದು ಸ್ವಾಮಿಗಳೊಡನೆ ಮೈತ್ರಿಯಿಂದ ವರ್ತಿಸಿ ಅವರ ಅಪ್ಪಣೆಯಂತೆ ಹೊರಟು ಹೋದ ವಿಷಯವನ್ನು ಬಲು ರಸವತ್ತಾಗಿ ಬಣ್ಣಿಸಹತ್ತಿದನು. ಈ ಪ್ರಕರಣವನ್ನು ಕೇಳಿದ ಜನತೆಯಲ್ಲಿ ಭಕ್ತಿ ಭಾವ ಉತ್ಪತಿಯಾಗಿ ಸಾಮಿಗಳ ದರ್ಶನಕ್ಕಾಗಿ ಪದೇ ಪದೇ ಬರಹತ್ತಿದರು.

ಒಂದು ದಿವಸ ಮುರುಗೋಡದ ಭಕ್ತಜನರು ಶಿವಯೋಗಿಗಳ ಮಹಿಮೆಯನ್ನರಿತು ಸೊಲಗ ಕ್ಷೇತ್ರಕ್ಕೆ ಬಂದು ಸ್ವಾಮಿಗಳಲ್ಲಿ ವಿಜ್ಞಾಪನೆ ಮಾಡಿಕೊಂಡು ತಮ್ಮ ಗ್ರಾಮಕ್ಕೆ ಆಗಮಿಸಿ ನಮ್ಮ ಊರನ್ನು ಪಾವನಗೊಳಿಸುವ ಕೃಪೆಯಾಗಬೆಕೆಂದು ಬೇಡಿಕೊಳ್ಳಹತ್ತಿದರು. ಅಗ ಶಿವಯೋಗಿಗಳು ಅವರ ಭಕ್ತಿಗೆ ಮಣಿದು ಮನಸೋತು ಮುರುಗೋಡಕ್ಕೆ ದಯಮಾಡಿಸಿ ಶೆಟ್ಟರ ಸಂಗಪ್ಪನ ಮನೆಯಲ್ಲಿ ಉಳಿದುಕೊಂಡರು ಸಂಗಪ್ಪನು ಭಕ್ತಿ ವಿಶ್ವಾಸಗಳಿಂದ ಸ್ವಾಮಿಗಳ ಸೇವೆಗೈದು ಅವರ ಕೃಪೆಗೆ ಪಾತ್ರನಾದನು.

ಸ್ವಾಮಿಗಳು ಪ್ರತಿ ದಿನವು ಒಂದು ಹೊತ್ತು ಸ್ನಾನ ಪೂಜಾದಿಗಳನ್ನು ಸಂಗಪ್ಪ ಶೆಟ್ಟಿಯ ಮನೆಯಲ್ಲಿ ತೀರಿಸಿ ಪ್ರಸಾದ ಕೊಂಡು ತಿರುಗಿ ಸಿದ್ಧನ ಗವಿಗೆ ಹೋಗಿ ರಾತ್ರಿ ಅಲ್ಲೇ ವಾಸ ಮಾಡುತ್ತಿದ್ದರು.

———

೨೭ ನೆಯ ಪ್ರಕರಣ

ಅಯ್ಯನವರ ಲಿಂಗಗಳು ಮಾಯವಾಗಿ ಪುನಃ ದೊರೆತದ್ದು

ಒಂದು ದಿನ ಶ್ರಾವಣ ಮಾಸದ ನಿಮಿತ್ತ ಸಂಗಪ್ಪ ಶೆಟ್ಟಿಯು ಪೂರ್ವ ಪದ್ಧತಿಯಂತೆ ಸಾವಿರಾರು ಗಣಂಗಳಿಗೆ ಗಣಾರಾಧನೆಯನ್ನು ಏರ್ಪಡಿಸಿದ್ದನು. ಆಗ ಪಂಕ್ತಿಯಲ್ಲಿ ಸೇರಿದ ಸಾವಿರಾರು ಗಣಂಗಳು ಆರೂಢರಾದ ಮಡಿ ವಾಳೇಶ್ವರರ ಕುಲಶೀಲಾದಿಗಳಿಗೆ ಗಣಂಗಳು ಏನೆಂದುಕೊಳ್ಳುವರೋ ಎಂದು ಅಂಜಿದ ಸಂಗಪ್ಪನು ಮನದಲ್ಲಿ ಮಿಡುಕಹತ್ತಿದನು. ಆಗ ತಮ್ಮ ಜ್ಞಾನ ಚಕ್ಷುಗಳಿಂದ ಸಂಗಪ್ಪನ ಅಂತರಂಗವನ್ನರಿತ ಮಡಿವಾಳೇಶ್ವರರು ತಾವೇ ಮುಂದಾಗಿ ಹಳ್ಳದತ್ತ ಸಾಗಿ ಮಿಂದು ಮಡಿಯಾಗಿ ತಿರುಗಿ ಶೆಟ್ಟಿಯ ಮನೆ ಹೊಕ್ಕು ಆತನ ಹೆಂಡತಿ ಬಾಯವ್ವನನ್ನು ಕರೆದು ಎಚ್ಚರಿಕೆ ಕೊಡುವ ರೀತಿಯಲ್ಲಿ ಅವ್ವಾ ನಾವು ಲಿಂಗಪೂಜೆ ಮುಗಿಸಿ ಗಂಟೆ ಬಾರಿಸಿದೊಡನೆ ಎಡೆ ಯಾಗಬೇಕು ನೆನಪಿರಲಿ ಎಂದು ಪೂಜೆಗೆ ಕುಳಿತು ಲಿಂಗಾರ್ಚನೆ ಮುಗಿಸಿ ಗಂಟೆಯನ್ನು ಬಾರಿಸಿದರು. ಆಗ ಬಾಯವ್ವ ಲಗುಬಗೆಯಿಂದ ಯಾವತ್ತು ಪದಾರ್ಥಗಳನ್ನು ಎಡೆಮಾಡಿ ಒಯ್ದು ಸ್ವಾಮಿಗಳ ಮುಂದಿಟ್ಟು ಸಾಷ್ಟಾಂಗ ಹಾಕಿದಳು. ಬಳಿಕ ಸ್ವಾಮಿಗಳು ಎಲ್ಲರಿಗಿಂತಲೂ ಮುಂದಾಗಿ ಪ್ರಸಾದ ತೀರಿಸಿ ಏನು ಅರಿಯದವರಂತೆ ಚಳ್ಳಹಳ್ಳಕ್ಕೆ ಹೋಗಿ ಬಿಟ್ಟರು. ಇತ್ತ ಉಳಿದ ಸಹಸ್ರ ಗಣಂಗಳು ಹೇಗೂ ಮಡಿವಾಳರು ಪಂಕ್ತಿಯಲ್ಲಿ ಸೇರಲಿಲ್ಲ. ಇದು ಒಂದು ದೇವರು ಕರುಣೆ ದೋರಿದಂತಾಯಿತೆಂದು ಬಲು ಹಿಗ್ಗಿನಿಂದ ತಮ್ಮ ತಮ್ಮ ಲಿಂಗಗಳಿಗೆ ನೈವೇದ್ಯ ತೋರಿಸಬೇಕೆಂದು ಲಿಂಗದೊಸ್ತ್ರ ವನ್ನು ಬಿಚ್ಚಿ ನೋಡುತ್ತಾರೆ. ಒಬ್ಬರ ವಸ್ತ್ರದಲ್ಲಿಯೂ ಲಿಂಗಗಳೇ ಕಾಣ

ದಾಂದವು. ಬಳಿಕ ಎಲ್ಲರೂ ಹೌಹಾರಿ ಲಿಂಗಗಳು ಮಾಯವಾದ ಪರಿಯನ್ನು ಅರಿಯದೆ ಒಬ್ಬರ ಮುಖವನ್ನೊಬ್ಬರು ನೋಡಹತ್ತಿದರು.

ಬಳಿಕ ಜ್ಞಾನ ಸಂಪನ್ನ ಜಂಗಮ ಮೂರ್ತಿಗಳೊಬ್ಬರು ಅಯ್ಯಾ ನಾವು ಮಡಿವಾಳೇಶ್ವರರ ಬಗ್ಗೆ ತಾತ್ಸಾರದ ನುಡಿಗಳನ್ನಾಡಿ ಹೀಯಾಳಿಸಿದ್ದರ ಪರಿಣಾಮವಿದು ಎಂದು ಯಾವತ್ತರು ಘನಲಿಂಗ ಚರಮೂರ್ತಿಗಳೊಂದಿಗೆ ಮಡಿವಾಳೇಶ್ವರರಿರುವ ಠಾವನ್ನು ಹುಡುಕುತ್ತ ಚಳ್ಳಹಳ್ಳಕ್ಕೆ ಬಂದು ಸ್ವಾಮಿಗಳನ್ನು ಕಂಡು ನಮ್ಮಿಂದ ಅಪರಾಧವಾಗಿದೆ ಕ್ಷಮಿಸಬೇಕೆಂದು ಅವರ ಪಾದಗಳನ್ನು ಪಿಡಿದು ಕೇಳಿಕೊಳ್ಳಹತ್ತಿದರು.

ಆಗ ಮಡಿವಾಳೇಶ್ವರ ಸ್ವಾಮಿಗಳು ಲಿಂಗಗಳನ್ನು ಕಳೆದುಕೊಂಡ ಜಂಗಮರನ್ನು ಮನ್ನಿಸುವ ಮಾತಿನೊಡನೆ ಅಯ್ಯಾ ನಿಮ್ಮ ಘನತೆಯಂತಹದು ನಮ್ಮ ಘನತೆ ಏನು ಮಹಾ ತಮ್ಮಗಳ ಲಿಂಗಗಳು ನಮ್ಮಲ್ಲೇನು ಕಾರಣ ಬರಲು ಸಾಧ್ಯವಯ್ಯಾ ಎಂದು ಚುಚ್ಚು ಮಾತಿನ ಛಾಟಿಯ ಏಟು ಕೊಟ್ಟರು. ಬಳಿಕ ಲಿಂಗಗಳಿಲ್ಲದೆ ಬಲು ನೊಂದ ಜಂಗಮರ ಮನ್ನಿಸುತ್ತ ನೋಡಿರಯ್ಯಾ ನಿಮ್ಮ ನಿಮ್ಮ ಲಿಂಗಮೂರ್ತಿಗಳು ನಿಮ್ಮ ನಿಮ್ಮ ವಸ್ತ್ರದಲ್ಲಿ ಇರಲೇಬೇಕೆಂದು ನುಡಿದರು.

ಆಗ ಯಾವತ್ತೂ ಜಂಗಮರು ಲಗುಬಗೆಯಿಂದ ತಮ್ಮ ತಮ್ಮ ಲಿಂಗ ದೊಸ್ತ್ರಗಳ ಗಂಟು ಬಿಚ್ಚಿ ನೋಡಿಕೊಳ್ಳಲು ಲಿಂಗಗಳೆಲ್ಲವೂ ವಸ್ತ್ರದಲ್ಲಿ ವಿರಾಜಮಾನವಾಗಿ ಕಂಗೊಳಿಸಹತ್ತಿದವು. ಆಗ ಎಲ್ಲರಿಗೂ ಆನಂದ ಆಶ್ಚರ್ಯ ಆಗ ಮಡಿವಾಳೇಶ್ವರ ಸ್ವಾಮಿಗಳ ಬಗ್ಗೆ ಭಯಭಕ್ತಿ ಹುಟ್ಟಿ ವಿನಯ ಶಾಲಿಗಳಾಗಿ ಬೇಡಿಕೊಳ್ಳುತ್ತ ಆದ ಅಪರಾಧವನ್ನು ಮನ್ನಿಸಿ ನಮ್ಮೊಡನೆ ಶೆಟ್ಟಿ ಸಂಗಪ್ಪನ ಮನೆಯಲ್ಲಿ ಬಿನ್ನಹ ತೀರಿಸಬೇಕೆಂದು ಪರಿಪರಿಯಿಂದ ಬೇಡಿಕೊಂಡು, ನಿರ್ಮಲ ವಿಶ್ವಾಸ ಭಕ್ತಿಯಿಂದ ಮಡಿವಾಳೇಶ್ವರ ಸ್ವಾಮಿಗಳ ಪಾದ ಪೂಜೆ ಗೈದು ಸಂತಸದಿಂದ ಎಲ್ಲರೂ ಸೇರಿ ಪ್ರಸಾದ ಸೇವಿಸಿ ಶೆಟ್ಟರನ್ನು ಮನಸಾರೆ ಆಶೀರ್ವದಿಸಿ ಮಡಿವಾಳೇಶ್ವರ ಸ್ವಾಮಿಗಳ ಅಪ್ಪಣೆಯಂತೆ ಹೊರಟು ಹೋದರು. ಮುಂದೆ ವರುಷ ತುಂಬುವದರೊಳಗಾಗಿ ಶಿವಯೋಗಿಗಳ ಅನುಗ್ರಹದಿಂದ ಶೆಟ್ಟರಿಗೆ ಪುತ್ರ ಸಂತಾನ ಭಾಗ್ಯ ಲಭಿಸಿತು.

ಸಂಗಪ್ಪ ಶೆಟ್ಟಿಯು ಶಿವಯೋಗಿಗಳ ಮಹಿಮೆಯನ್ನು ಕೊಂಡಾಡುತ್ತ ಆನಂದ ದಿಂದ ಸಕಲ ಸಂಪತ್ತ ಪಡೆದು ಸ್ವಾಮಿಗಳ ಸೇವೆಯಲ್ಲಿ ಭಯ ಭಕ್ತಿಯಿಂದ ನಡೆದು ಶಿವಸಾಯುಜ್ಯವನ್ನು ಹೊಂದಿದನು.

....

೩೮ ನೇ ಪ್ರಕರಣ

ಕಾಮಾಂಧಳಾದ ವೇಶ್ಯಾಸ್ತ್ರೀಯಳ ಬುದ್ಧಿಗಲಿಸಿದ್ದು

ಮುರಗೋಡ ಸಂಗಪ್ಪ ಶೆಟ್ಟಿಯು ತನ್ನ ಮಗಳ ಮದುವೆಯನ್ನು ಏರ್ಪ ಡಿಸಿ ಸಿದ್ಧನ ಗವಿಗೆ ಬಂದು ಸ್ವಾಮಿಗಳನ್ನು ಕಂಡು-ಬುದ್ಧಿ, ಮಗಳ ಮದುವೆಗಾಗಿ ತಾವು ಬಾಗಲಕೋಟೆಗೆ ದಯಮಾಡಿಸುವದಾಗಬೇಕೆಂದು ಬಿನ್ನೈಸಿಕೊಂಡನು. ಆಗ ಸ್ವಾಮಿಗಳು ಶೆಟ್ಟಿಯ ಮಾತಿಗೆ ಮನ್ನಣೆ ಕೊಟ್ಟು ಆಗಲಿ ನಡಿಯೋ ಶಟ್ಟೆಪ್ಪಾ ಎಂದು ಹೊರಟು ಬಂದರು. ಮದುವೆಯ ಮಂಗಲಮಹೋತ್ಸವ ಜರುಗಿದ ಬಳಿಕ ಓರ್ವ ಪಾತರದವರ ಹುಡುಗಿಯನ್ನು ಕರೆಯಿಸಿ ನರ್ತನದ ಏರ್ಪಾಡು ಮಾಡಿದ್ದರು. ಪಾತರದವಳ ನೃತ್ಯ ಸುರುವಾಗಿತ್ತು ಸ್ವಾಮಿಗಳು ಮಂಚದ ಮೇಲೆ ಕುಳಿತು. ನೋಡುತ್ತಿದ್ದರು.

ಬಳಿಕ ನರ್ತನ ಮುಗಿದು ಎಲ್ಲರೂ ತಮ್ಮ ತಮ್ಮ ಬಿಡಾರಗಳಿಗೆ ತೆರಳಿದ ಮೇಲೆ ನೃತ್ಯಗಾರ್ತಿಯು ಸ್ವಾಮಿಗಳ ಬಳಿಗೆಬಂದು ಸ್ವಾಮಿಗಳನ್ನು ಮೋಹಕಂಕ ಗಳಿಂದ ನೋಡಹತ್ತಿದಳು. ಆಗ ಸ್ವಾಮಿಗಳು ಮಗುಳುನಗೆಯಿಂದ ಏನೇ ಹುಡುಗಿ ಇಲ್ಲೇನು ನಿನಗೆ ಕೆಲಸವೆಂದು ಕೇಳಿದರು. ಸ್ವಾಮಿಗಳ ನುಡಿಮುತ್ತು ಗಳಂತಹ ಮಾತುಗಳಿಗೂ ಅವರ ರೂಪ ಗುಣ ಸೌಂದರ್ಯಗಳಿಗೂ ಮೋಹಿತ ಳಾದ ತರುಣಿಯು ವಯ್ಯಾರದಿಂದ ತನ್ನ ಗುಪ್ತಾಂಗಗಳ ಪ್ರದರ್ಶನ ಮಾಡುತ್ತ ನಾನು ನಿಮ್ಮೊಡನೆ ಒಂದು ದಿನವಾದರೂ ಇದ್ದು ತೃಪ್ತಿಹೊಂದಬೇಕೆಂದು ಬಯಸಿ ಬಂದವಳು ಎಂದು ಲಜ್ಜೆಯನ್ನು ತೊರೆದು ಮಾತನಾಡಿದಳು.

ಆಗ ಸ್ವಾಮಿಗಳು ನಸುನಕ್ಕು ಇರುವೆಯಂತೆ, ನಾಳೆ ಸಕ್ಕರಿಯವರ ತೋಟದ ಹತ್ತಿರ ಒಂದು ಕಂಬಳಿ ಸೊಟ್ಟಿತಕ್ಕೊಂಡು ಬಾ ನಿನ್ನ ಇಚ್ಛೆಯಂತೆ

ತೃಪ್ತಿಪಡಿಸಿ ಕಳುಹಿಸುತ್ತೇವೆ ಎಂದು ಹೇಳಿ ಕಳುಹಿಸಿದರು. ಆಗ ವೇಶ್ಯಾ ಸ್ತ್ರೀಯಳು ಮನದಲ್ಲಿ ಹಿಗ್ಗುತ್ತ ಮನೆಗೆ ಹೋದಳು. ಬಳಿಕ ಸ್ವಾಮಿಗಳು ತೋಟದ ಹತ್ತಿರ ಡೇರೆ ಹೊಡೆಯಿಸಿ ಸಕಲ ಭಕ್ತ ಜನತೆಯನ್ನು ದೂರದಲ್ಲಿ ಕುಳ್ಳಿರಲು ತಿಳುಹಿಸಿ ವೇಶ್ಯೆಗೆ ಬರುವಂತೆ ಹೇಳಿ ಕಳುಹಿಸಿದರು. ತಾವಾಗಿ ಕರೆ ಕಳುಹಿದ ಸ್ವಾಮಿಗಳು ನನಗೆ ಸಂಪೂರ್ಣ ಸೋತು ಹೋಗಿರ ಬೇಕೆಂದು ತಿಳಿದವಳು ಟೆಂಗಿನ ಪರಟೆಯೊಡನೆ ಸ್ವಾಮಿಗಳ ಬಿಡಾರಕ್ಕೆ ಬಂದಳು. ಆಗ ಸ್ವಾಮಿಗಳು ಸಿಟ್ಟಿನಿಂದ ಛೀ ಇದು ಕುಂಬಳ ಸೊಟ್ಟೆಯು ಲ್ಲಲೇ ಛೀಮಾರಿ ಟೆಂಗಿನಪಟ್ಟೆ ಇದು ಬೇಡ ಇದು ಉಪಯೋಗವಾಗುವದು ಎಂದು ಒಂದು ತಲೆಬುರುಡೆಯನ್ನು ತಾವೇ ತರಿಸಿ ಅದನ್ನುಅವಳ ಕೈಯಲ್ಲಿ ಡುತ್ತ ಇದನ್ನು ಗಟ್ಟಿಯಾಗಿ ಹಿಡಿದುಕೊಂಡಿರಲೇ ಹುಡಿಗಿ ಎಂದು ಶಿವನ ಧ್ಯಾನದಲ್ಲಿ ಬಲದೊಡೆಯನು ಚಪ್ಪರಿಸಲ್ಕು ಸ್ವಾಮಿಗಳ ಜನನೇಂದ್ರಿಯು ಚೇತನಗೊಂಡು ವೀರ್ಯವು ವೇಶ್ಯ ಹಿಡಿದುಕೊಂಡಿದ್ದ ತಲೆಬುರಡೆ ಯಲ್ಲಿ ಧಾರಾಕಾರವಾರ ಸುರಿಯಹತ್ತಿತು. ಆಗ ಅತ್ಯಂತ ಉಷ್ಣತೆಯುಳ್ಳ ವೀರ್ಯದ ಕಾವಿಗೆ ಆ ಸ್ತ್ರೀಯಳ ಕರಗಳು ನಡುಗಹತ್ತಿದವಲ್ಲದೆ ಆ ಶಕೆಯು ಕಡು ಕೋಪವನ್ನು ತಾಳಲಾರದೆ ತಿಳುವಳಿಕೆ ಎಂಬುದು ಮನದಿ ಮೂಡಿ ಕೃಪೆ ಮಾಡುವ ಶಿವಯೋಗ ಸಾಮ್ರಾಟ, ಕರುನಾಳು ಮಡಿವಾಳೇಶಾ ಎಂದು ಬೇಡಿ ಕೊಳ್ಳಹತ್ತಿದಳು. ಆಗ ಸ್ವಾಮಿಗಳು ಅನುಭವ ತುಂಬಿಧ ಅಮರವಾಣಿಯಿಂದ-

ಎಲೇ ಎಲೇ ಹುಚಮಂಗಿ ಈಗಾದೆ ನೋಡು ಕಮಂಗಿ
ಭಲೇ ಶಿವಯೋಗಿ ಸಾಮರ್ಥ್ಯವ ಕೆಣಕಿದ ಮೂಲಂಗಿ
ಕಾಲ ಪುರುಷ ಹರನೊರದ ಇಷ್ಟೊಂದು ವೀರ್ಯ ದಕ್ಕಿಸಬಲ್ಲೆಯೇನೆ ಹುಚಮಂಗಿ
ಶೀಲವಮಾರಿ ಹೊಟ್ಟೆ ಹೊರೆದುಕೊಳ್ಳುವಳಿಗೇಕೆ ಪೌರುಷದ ಆಸೆ
ಕಾಲ ರಾಯರ ಕೈ ತಟ್ಟೆ ಹಣ ಸುಲಿಯುವ ಹೆಣ್ಣೆ ಈಗ ನಂದಿ
ಬಲು ಬಲಶಾಲಿ ಕಿತ್ತೂರ ಮಡಿವಾಳ ಶಿವಯೋಗಿಯ ಬಯಸಿ ಬಂದಿ

ಎಂದರು. ಆಗ ಪಾತರದಳು ಪರಮೇಶ್ವರ ಪ್ರಿಯ ಮರಮಹಿಮಾನಿಧಿಯೇ ಕೃಪೆದೋರಿ ಕಾಪಾಡು ತಾಳಲಾರೆ ಈ ವೀರ್ಯ ಉಷ್ಣವ ಎಂದು ಪರಿಪರಿಯಿಂದ ಬೇಡಿಕೊಳ್ಳಲು ಕನಿಕರದಿಂದ ಸ್ವಾಮಿಗಳು ತಮ್ಮ ವೀರ್ಯವನ್ನು ಮತ್ತೆ ಜನ

ನೇಂದ್ರಿಯ ದ್ವಾರ ಸೆಳೆದುಕೊಂಡರು. ನೋಡುತ್ತಿರುವ ಭಕ್ತ ಜನತೆ ಬೆರಗಾಗಿ ಶಿಲಾಪ್ರತಿಮೆಗಳಂತೆ ಮೂಕರಾಗಿ ಅಚ್ಚರಿಗೊಂಡರು. ಬಳಿಕ ಜ್ಞಾನೋದಯ ಹೊಂತಿದ ವೇಶ್ಯ ಸ್ತ್ರೀಯಳು ಸ್ವಾಮಿಗಳಲ್ಲಿ ಮತ್ತೊಮ್ಮೆ ಇನ್ನೊಮ್ಮೆ ಕ್ಷಮೆ ಬೇಡಿ ಹೊರಟು ಹೋದಳು. ಇತ್ತ ಭಕ್ತ ಸಂಗಣ್ಣ ಶಟ್ಟಿಯು ಸ್ವಾಮಿಗಳನ್ನು ಆದರದಿಂದ ತಿರುಗಿ ಸಿದ್ಧನ ಗವಿಗೆ ಕರೆತಂದು ಬಿಟ್ಟು ಅವರ ಅಪ್ಪಣೆಯಂತೆ ಧರ್ಮ ನ್ಯಾಯ ನೀತಿಗಳನ್ನವಲಂಬಿಸಿ ಸದಾ ಗುರು ಚರ ಬಳಗದ ಸತ್ಕಾರ್ಯದಲ್ಲಿ ಜೀವನ ಸಾಗಿಸಿ ಸ್ವಾಮಿಗಳ ಕೃಪೆಗೆ ಪಾತ್ರನಾದನು.

....

೩೯ ನೆಯ ಪ್ರಕರಣ

ಕಾಯ್ದು ಸಳಮಳಗೊಳ್ಳುವ ನೀರಿನಿಂದ ಮೈಯೆರೆದುಕೊಂಡದ್ದು

ಪುನಃ ಸಿದ್ಧನ ಗವಿಯಲ್ಲಿ ರಾಯಪ್ಪನೊಡನೆ ಶಿವಯೋಗಿಗಳು ಮಾತಿಗೆ ಕುಳಿತಾಗ ರಾಯಪ್ಪನು ಚೇಷ್ಟೆಗೆಂದು— ಬುದ್ಧಿ ಬಾಗಲಕೋಟೆ ಹುಡಿಗಿ ಹೊಡೆತಕ್ಕೆ ಮೆತ್ತಗಾಗಿ ಹೋಗಿರಬೇಕಲ್ಲವೆ ತಾವು ಎಂದು ನಗೆಯಾಡಿದನು. ರಾಯಪ್ಪನ ನುಡಿಯಿಂದ ಸ್ವಾಮಿಗಳಿಗೆ ಸಿಟ್ಟು ಬಂತು ಆದರೂ ತಾವು ಅದೇ ಚೇಷ್ಟೆಯಿಂದ ಹುಡುಗನ ಹೊಡೆತ ಎಂತಹದು ನೋಡಿದು ಇಲ್ಲೋ ಹುಚಮಂಗಾ ಎಂದರು. ನಾವು ಮೆತ್ತಗಾದವರು ಎನ್ನುವದೊ ನಿನಗಷ್ಟು ಖಾತ್ರಿ ಎನಿಸಿದ್ದರೆ ಮೈ ಹಗುರಾಗುವಂತೆ ಮೈಗೆಲ್ಲ ಬೆಣ್ಣೆಯನ್ನು ಹಚ್ಚಿ ಸಳಮಳ ಹೊಯ್ದಾಡುವ ಒಂದು ಕೊಪ್ಪರಿಗೆ ನೀರು ಕಾಸಿ ನಮ್ಮ ಮೈಗೆ ಸುರುವಿರಿ ಎಂದು ಅಪ್ಪಣೆ ಮಾಡಿದರು. ಆಗ ಕರಿಯಪ್ಪ ರಾಯಪ್ಪ ಊರೊಳಗೆ ಹೋಗಿ ಒಂದು ಕೊಪ್ಪರಿಗೆಯನ್ನು ಪಡೆದು ತಂದು ನೀರು ತುಂಬಿಸಿ ಸಳಮಳ ಎಸರು ಬರುವ ರೀತಿಯಲ್ಲಿ ಕಾಯಿಸಿ ನೀರು ಮುಟ್ಟುವ ಮಾತಿರಲಿ ಕಾಯ್ದು ಹೊರಟ ಉಗಿ ಜಳಕ್ಕೇನೆ ತತ್ತರಿಸಿ ಹೋಗಿದ್ದ ರಾಮಪ್ಪನು ಒಂದು ಅಕಲು ಮಾಡಿ ನೀರು ಹಣಿಸುವ ಮಗೆಯ ಮಗ್ಗಲು ಕೋಲು ಕಟ್ಟಿ ಕೋಲಿನ ತುದಿ ಹಿಡಿದು ಹೊಯ್ದಾಡುವ

ನೀರು ಮಗಿಯಲ್ಲಿ ತುಂಬಿ ಸ್ವಾಮಿಗಳ ಮೇಲೆ ಹಣಿಸಹತ್ತಿದನು. ಅಷ್ಟಾದರೂ ಶಿವಯೋಗಿಗಳು ಸ್ವಲ್ಪಾದರೂ ಹಾ ಎಂದು ಉಸುರು ಬಿಡದೆ ಸಂತೋಷದಿಂದ ನೀರೆರೆದುಕೊಂಡರು. ಆಗ ಕರಿಯಪ್ಪನು ಮುಂದಾಲೋಚನೆಯಿಂದ ಶಿವಭಕ್ತರೊಬ್ಬರ ಮನೆಯಿಂದ ಎಂಟು ಚಕ್ಕು ಶಾವಿಗೆಯುನ್ನು ಅದಕ್ಕೆ ಸಾಲುವಷ್ಟು ಚಿನ್ನಿ ಸಕ್ಕರೆಯುನ್ನು ಪಡೆದು ತಂದನು ಸ್ವಾಮಿಗಳಿಗೆ ಶಾವಿಗೆ ಪಾಯಸವು ಸಿದ್ಧವಾಗಿ ಕರಿಯಪ್ಪನು ಕೈತುತ್ತು ಮಾಡಿ ಉಣಿಸಿ ಮನಾನಂದ ಹೊಂದಿದನು, ಬಳಿಕ ಮೂವರು ಕಂಬಳಿಯ ಕೊರಿಗಳನ್ನು ಹೊಚ್ಚಿ ಕೈ ಕಾಲು ಒತ್ತುತ್ತ ಉಪಚಾರ ಗೈಯಲು ಸ್ವಾಮಿಗಳು ಸುಖವಾಗಿ ನಿದ್ರೆಗೈದರು. ಬಳಿಕ ಬೆಳಗಿನ ಜಾವದಲ್ಲಿ ಶಿವಯೋಗಿಗಳು ಎಚ್ಚತ್ತ ಕರಿಯಪ್ಪ ರಾಮಪ್ಪರನ್ನು ಮಾತನಾಡಿಸುತ್ತ ಧ್ಯಾಂಗರೋ ಹುಡುಗನ ಹೊಡತಾ ಎಂದು ಕೇಳಿದರು. ಆಗ ರಾಮಪ್ಪನು ಮಹಿಮಾಶಾಲಿ ಮಡಿವಾಳೇಶಾ ತಮ್ಮ ಮಹಿಮೆಯುನ್ನರಿಯದೆ ಉಸುರಿನ ಅಪರಾಧಿಗಳು ನಾವು. ಮನ್ನಿಸುವದಾಗಬೇಕೆಂದು ಬೇಡಿಕೊಳ್ಳಹತ್ತಿದನು.

ಆಗ ಸ್ವಾಮಿಗಳು ಅವರನ್ನು ಸಮಾಧಾನಪಡಿಸುತ್ತ ದೃಷ್ಟಿಗೀಶ ಶಿವನ ಆಜ್ಞಾ ಪಾಲಕರಾದ ನಾವು ಅವನು ಕುಣಿಸಿದಂತೆ ಕುಣಿಯುಬೇಕಲ್ಲವೆ ಎಂಬು ತಿಳಿ ಹೇಳಿ ಮತ್ತೆ ಪಾತರದವರ ಹುಡಿಗಿಗೆ ಈ ಮಡಿವಾಳರ ಸಂಗ ಬೇಕಂತೇನು? ಎಂದು ನಗೆಯಾಡಿದರು.

....

೧೪ ನೆಯ ಪ್ರಕರಣ

ಸ್ವಾಮಿಗಳ ಪ್ರಭಾವದಿಂದ ಶಿಕ್ಷೆಗೊಳಗಾದ ಬಾಲಕನು ಮುಕ್ತನಾದದ್ದು

ಮುರುಗೋಡದಲ್ಲಿ ವಾಸವಾಗಿದ್ದ ಸ್ವಾಮಿಗಳು ಭಕ್ತರ ಆಶೋತ್ತರಗಳನ್ನು ಈಡೇರಿಸುತ್ತ ಸಾಗಿರಲು ಮಲ್ಹಾರಿರಾವ್ ಎಂಬ ಕುಲಕರ್ಣಿಯವರು ಶಿವಯೋಗಿಗಳ ದರ್ಶನಕ್ಕೆ ಬಂದು ತಮ್ಮ ಮಗನೊಡನೆ ಬಯು ಭಕ್ತಿಯಿಂದ ನಮಸ್ಕರಿಸಿ, ಪೂಜ್ಯರೆ ಇವನು ನನ್ನಮಗನು ಅಪರಾಧಿ ಎಂದು ತೀರ್ಮಾನಿಸಿ ಸರಕಾರದ ಶಿಕ್ಷೆಗೊಗಾಗುವ ಪ್ರಸಂಗ ಪ್ರಾಪ್ತವಾಗಿದೆ

ಎಂದು ಬಿನ್ನೈಸಿಕೊಂಡನು. ಕುಲಕರ್ಣಿಯು ನುಡಿಯನ್ನು ಆಲಿಸಿದಸ್ವಾಮಿಗಳು ಎಲ್ಲವನ್ನು ಅರಿತವರಾದ ಕಾರಣ ಅಂಜಬೇಡಯ್ಯಾ ಎಂದು ಅಪ್ಪಣೆ ಮಾಡಿ ಗಾಣಗಾಪೂರದ ದತ್ತಾತ್ರೇಯ ದರ್ಶನಕ್ಕೆ ಹೋಗೋಣ ಎಂದು ತಿಳಿಸುತ್ತ ಊರಿನ ಹಲವಾರು ಭಕ್ತಿ ಜನರನ್ನು ಕುಲಕರ್ಣಿಯನ್ನು ಅಪರಾಧಿ ಅವನ ಮಗನನ್ನು ಕರೆದುಕೊಂಡು ಗಾಣಗಾಪೂರದ ಶ್ರೀದತ್ತ ಕ್ಷೇತ್ರಕ್ಕೆ ದಯಮಾಡಿಸಿದರು. ಅಲ್ಲಿ ಸ್ವಾಮಿಗಳು ಭಕ್ತರೊಡಗೂಡಿ ನದಿಯ ಸ್ನಾನಕ್ಕೆ ಬಂದು ಸ್ನಾನಮಾಡಿ ತಾವು ಅರಿತೂ ಅರಿಯದವರಂತೆ ತಮ್ಮ ಪೂಜಾ ಕ್ರಮ ಕೈಕೊಳ್ಳುತ್ತಿದ್ದರು.

ಆಗ ಆ ಕಡೆಯಿಂದ ಬಂದ ಕುಲಕರ್ಣಿಯ ಮಗನು ಮಡಿ ಎಂದ ತಿಳಿಯದಲೆ ನೀರು ತುಂಬಿಟ್ಟ ಸ್ವಾಮಿಗಳ ತಂಬಿಗೆಯನ್ನು ಮುಟ್ಟಿ ಮೈಲಿಗೆ ಎನ್ನುವಂತೆ ಮಾಡಿದನು. ಆಗ ಪೂಜ್ಯ ಗುರುಗಳು ಸಿಟ್ಟು ಬಂದವರಾಗಿ ತಮ್ಮ ಕೈಯಲ್ಲಿರುವ ಬೆತ್ತದಿಂದ ತಂಬಿಗೆ ಮುಟ್ಟಿದ ಕುಲಕರ್ಣಿಯ ಮಗನನ್ನು ವಳಿತಾಗಿ ಥಳಿಸಿದರು. ಆಗ ಆ ಬಾಲಕನು ಸ್ವಾಮಿಗಳ ಹೊಡೆತಕ್ಕೆ ಮೂರ್ಛೆ ಬಂದು ನೆಲಕ್ಕೆ ಬಿದ್ದನು. ಅದನ್ನು ಕಂಡ ಭಕ್ತರು ಸಧ್ಯದ ಪರಿಸ್ಥಿತಿಗೆ ಗಾಬರಿಗೊಂಡು ಆ ಹುಡುಗನನ್ನು ಉಪಚರಿಸುತ್ತಿದ್ದರು. ಸ್ವಾಮಿಗಳು ನಸುನಕ್ಕು ನನ್ನ ಬೆತ್ತದ ಪೆಟ್ಟು ತಿಂದು ಶಿಕ್ಷೆ ಅನುಭವಿಸಿದ ಮೇಲೆ ಸರಕಾರದ ಶಿಕ್ಷೆಯಲ್ಲಿದು ಬಿಡಿರೋ ಎಂದು ನಗೆಯಾಡಿದರು. ಆಗ ಸ್ವಾಮಿಗಳ ಮರ್ಮಯುಕ್ತ ಮಾತುಗಳನ್ನು ಅರಿತ ಭಕ್ತರಿಗೆ ಆಶ್ಚರ್ಯವೂ ಆನಂದವೂ ಆಯಿತು.

ಮುಂದೆ ಕೆಲವು ದಿನಗಳದ ಬಳಿಕ ಸರಕಾರದ ಆಜ್ಞೆಯಂತೆ ಶಿಕ್ಷೆ ಗೊಳಪಡಬೇಕಾದ ಕುಲಕರ್ಣಿಯವರ ಪುತ್ರನು ಕೋರ್ಟಿನಲ್ಲಿ ನ್ಯಾಯಾಧೀಶರ ತೀರ್ಪಿನಂತೆ ನಿರಪರಾಧಿ ಎಂದು ತೀರ್ಮಾನಿಸಿ ಶಿಕ್ಷೆಯಿಂದ ಬಿಡುಗಡೆ ಹೊಂದಿ ಸ್ವಾಮಿಗಳ ಮಹಿಮೆಯನ್ನು ಕೊಂಡಾಡುತ್ತ ಸುಖ ಸಂಪದಗಳನ್ನು ಹೊಂದಿ ಬಾಳಿದನು. ಆಗ ಭಕ್ತ ಅವನು ಬೆತ್ತದಏಟು ಸರಕಾರದ ಶಿಕ್ಷೆಯನ್ನು ತಪ್ಪಿಸಿದನೆಂದು ಆನಂದಗೊಂಡು ಶಿವಯೋಗಿಗಳ ಮಹಿಮೆಯನ್ನು ಕೊಂಡಾಡಿದರು.

೪೨ನೆಯ ಪ್ರಕರಣ

ಶಿಷ್ಯರಿಗೊದಗಿದ ಕಳುವಿನ ಆರೋಪದ ಪರಿಹಾರ

ಸಿದ್ಧನ ಗವಿಯಲ್ಲಿ ವಾಸವಾಗಿದ್ದ ಸ್ವಾಮಿಗಳಿಗೆ ನಿತ್ಯ ಸೇವಕರಾಗಿ ಕುರುಬರ ಕರಿಯಪ್ಪ ಹಾಗೂ ರಾಮಪ್ಪ ಎಂಬುವವರು ಉಳಿದುಕೊಂಡಿದ್ದರು. ರಾಮಪ್ಪನು ಸಂಸಾರದಲ್ಲಿ ಬೇಸರಗೊಂಡು ಬಾವಾನಂತೆ ಮೊದಲಿನಿಂದಲೂ ಸೊಗಲ ಗುಡ್ಡದಲ್ಲಿ ವಾಸವಾಗಿದ್ದನು. ಕರಿಯಪ್ಪನು ಕುರಿಗಳನ್ನು ಮೆಯ್ಯಿಸುವದಕ್ಕೆ ಪ್ರತಿನಿತ್ಯವು ಗುಡ್ಡದಲ್ಲಿ ಇರಹತ್ತಿ ಸ್ವಾಮಿಗಳು ವಾಸಗೈದ ಮೇಲೆ ರಾತ್ರಿ ವೇಳೆ ಸ್ವಾಮಿಗಳ ಸನ್ನಿಧಿಯಲ್ಲಿ ಸೇವೆಗೆಂದು ಗವಿಯಲ್ಲಿಯೇ ಇರುತ್ತಿದ್ದನು. ಗಾಣಗಾಪೂರದಿಂದ ಮರಳಿ ದಯಮಾಡಿಸಿದ ಸ್ವಾಮಿಗಳು ಒಂದು ದಿನ ರಾಮಪ್ಪ ಬಾವಾನನ್ನು ಕರಿಯಪ್ಪನನ್ನು ಎಚ್ಚರಿಸುತ್ತ ಈ ದಿವಸ ನಾವು ಇಲ್ಲಿ ಇರುವದು ಬೇಡವೆಂದು ತಿಳಿಸಿದ್ದಲ್ಲದೆ ಇನ್ನೊಂದು ಕಡೆ ನಮ್ಮ ಠಾವು ನೋಡೋಣ ಸುಮ್ಮನೆ ಆಪತ್ತು ಬೇಡ ಎಂದರು. ಆದರೆ ರಾಮಪ್ಪ ಕರಿಯಪ್ಪರು ಸ್ವಾಮಿಗಳ ಮಾತನ್ನು ಮನ್ನಿಸದೆ ಚಳಿಗಾಲದ ಈ ದಿವಸದಲ್ಲಿ ಬಯಲು ಗುಡ್ಡದಲ್ಲಿ ಮತ್ತೆಲ್ಲಿ ಹೋಗುವದು ಇಲ್ಲೇ ಉಳಿದುಕೊಳ್ಳೋಣ ಎಂದು ಹಟ ಹಿಡಿದರು. ಸ್ವಾಮಿಗಳು ಬೇಡವೆಂದು ಎಷ್ಟು ಹೇಳಿದರೂ ಕೇಳದಾದರು ಆಗ ಸ್ವಾಮಿಗಳು ನಾವು ಮಾತ್ರ ಇಲ್ಲಿ ಇರಲಾರೆವು ನಿಮ್ಮ ಇಷ್ಟ ಬಂದಂತೆ ಮಾಡಿಕೊಳ್ಳಿ ಎಂದು ಸಿದ್ಧನ ಗವಿಯಲ್ಲಿ ಉಳಿದುಕೊಳ್ಳದೆ ಸೋಮನಾಥನ ಗುಡಿಗೆ ಹೊರಟು ಹೊದರು, ಮುಂದೆ ಕೆಲವು ಸಮಯ ಗತಿಸಲು ಊರಲ್ಲಿ ಸಾಹುಕಾರನ ಮನೆಗೆ ಕನ್ನವಿಕ್ಕಿ ಬೆಳ್ಳಿ ಬಂಗಾರ ನಗದು ಹಣ ಹೊಡೆದುಕೊಂಡು ಬಂದ ಕಳ್ಳರು ಸಿದ್ಧನ ಗವಿಗೇನೆ ಬಂದರು. ಕಳ್ಳ ಸುಳಿವು ಹಿಡಿವ ಬೊಗಳಿದ ನಾಯಿಗಳ ಜಾಡು ಹಿಡಿದು ಗಸ್ತಿಯಲ್ಲಿದ್ದ ಗೌಡರ ವಾಲಿಕಾರರೊಡನೆ ಕಳ್ಳರನ್ನು ಬೆಂಬತ್ತಿ ಬರಹತ್ತಿದರು. ಆಗ ಆ ಕಳ್ಳ ಮಹಾಶಯರು ತಡವರಿಸುತ್ತ ಇನ್ನು ಸಿಕ್ಕುಬಿದ್ದರೆ ಘಾತವಾಗುವದೆಂದು ತಿಳಿದು ತಾವು ಅಪಹರಿಸಿಕೊಂಡು ಬಂದ ಬಂಗಾರ ಹಣ ಇನ್ನಿತರ ಯಾವತ್ತು ಸಂಗ್ರಹವನ್ನು ಸಿದ್ಧನ ಗವಿಯಲ್ಲಿದ್ದ ಕರಿಯಪ್ಪ ರಾಮಪ್ಪರ ಉಪಜೀವನದ ಆಸರವೆನಿಸಿದ ಗಂಟಿನಲ್ಲಿ ಬಚ್ಚಿಟ್ಟು ಹೊರಟುಹೋದರು.

ಮುಂದೆ ಕಳ್ಳರ ಶೋಧನೆಯಲ್ಲಿ ತೊಡಗಿದ ಗೌಡರು ಸರಕಾರದಿಂದ ಜವಾನರನ್ನು ಕರೆಯಿಸಿಕೊಂಡು ಸುತ್ತೆಲ್ಲ ಶೋಧಮಾಡುತ್ತ ಸಾಗಿ ಗವಿಯಲ್ಲಿ ಒಳಹೊಕ್ಕು ಶೋಧಿಸಲು ರಾಮಪ್ಪ ಕರಿಯಪ್ಪರ ಗಂಟಿನಲ್ಲಿ ಕಳವಾದ ಯಾವತ್ತೂ ಬೆಳ್ಳಿ ಬಂಗಾರ ನಗನಾಣ್ಯಗಳ ಸಂಗ್ರವು ದೊರೆಯಿತು. ಆಗ ಗೌಡರು ಜವಾನರು ಈ ಗವಿಯಲ್ಲಿ ವಾಸಿಸುವ ಬಾವಾ ಬೈರಾಗಿಗಳು ಎಲ್ಲಿದ್ದರೂ ಸರಿ ಹಿಡಿಯಲೇ ಬೇಕೆಂದು ತೀರ್ಮಾನಿಸಿಕೊಂಡು ಹೊರಗೆ ಬರುತ್ತಿರುವಂತೆ ಕೊಳ್ಳದಲ್ಲಿ ಜಳಕ ಮಾಡಿ ಬರಲು ಹೋದ ಕರಿಯಪ್ಪ ರಾಮಪ್ಪ ಇಬ್ಬರೂ ಎದುರಾಗಿ ಗವಿಯಲ್ಲಿ ಹೋಗುವದಕ್ಕೆ ಬಂದರು. ಆಗ ಜವಾನರು ಇಲ್ಲಿ ವಾಸಿಸುವವರು ನೀವೆ ಏನು ಎಂದು ಪ್ರಶ್ನೆ ಮಾಡಿದರು ಆಗ ಕರಿಯಪ್ಪನು ಹೌಹಾರಿ ಹೌದು ಎಂದು ನುಡಿಯಲು ಈರ್ವರಿಗೂ ಕೈಕೋಳ ತೊಡಿಸಿ ಕಳ್ಳರು ಇವರೇ ಎಂದು ಕೋರ್ಟಿಗೆ ಎಳೆದೊಯ್ದರು.

ನಡೆದ ಘಟನೆಯ ಬಗ್ಗೆ ನ್ಯಾಯಾಧೀಶರೆದುರು ವಿವರಿಸುತ್ತ ರಾಮಪ್ಪನು ಅದೇನೋ ನಮಗೆ ತಿಳಿಯದು ನಮ್ಮ ಗುರುಗಳಿಗೆ ಗೊತ್ತು ಎಂದು ಮಡಿವಾಳೇಶ್ವರ ಸ್ವಾಮಿಗಳ ಹೆಸರು ಉಸುರಿದನು. ಬಳಿಕ ಜವಾನರು ತಿರುಗಿ ಸೊಗಲ ಕ್ಷೇತ್ರಕ್ಕೆ ಬಂದು ಸ್ವಾಮಿಗಳನ್ನು ಕಂಡು ನಮಸ್ಕರಿಸಿ ಅವರನ್ನು ನ್ಯಾಯಾಸ್ಥಾನಕ್ಕೆ ಕರೆದುಕೊಂಡು ಬಂದರು. ಆಗ ನ್ಯಾಯಾಸ್ಥಾನಕ್ಕೆ ಬಂದು ಸ್ವಾಮಿಗಳು ನ್ಯಾಯಾಧೀಶರಿಗೆ ತಿಳಿಸಿ ಹೇಳುತ್ತ ಮುಂಬರುವ ಅನಿಷ್ಟ ಪ್ರಸಂಗವನ್ನು ಅರಿತೆ ಇವರಿಗೆ ಅಲ್ಲಿ ಇರುವದೆ ಬೇಡವಲ್ಲೆಂದು ಹೇಳಿದರೂ ಕೇಳಲಿಲ್ಲ ಕಳ್ಳತನವಾದುದು ಇಂಥವರಿಂದ ಎಂದು ಕಳ್ಳರ ಗುರುತು ಪರಿಚಯವನ್ನು ಸವಿಸ್ತಾರವಾಗಿ ತಿಳುಹಿಸಿದರು.

ಆಗ ಸ್ವಾಮಿಗಳ ಅಪ್ಪಣೆಯಂತೆ ಅವರಿತ್ತ ಪರಿಚಯದ ಮೇಲೆ ಶೋಧಿಸಲು ನಿಜವಾದ ಕಳ್ಳರು ಸಿಕ್ಕರು, ಆಗ ನ್ಯಾಯಧೀಶ ಆದಿಯಾಗಿ ಕೋರ್ಟಿನ ಅಧಿಕಾರಿಗಳೆಲ್ಲರು ಸ್ವಾಮಿಗಳ ಮಹಿಮೆ ಲೀಲಾ ವಿನೋದಗಳಿಗೆ ಬೆರಗಾಗಿ ಭಯಭಕ್ತಿಯಿಂದ ನಮಸ್ಕರಿಸಿ ಶಿವಯೋಗಿಗಳ ಭಕ್ತರಲ್ಲಿ ಬೆರೆತು ಅವರ ಕೃಪಾಶೀರ್ವಾದಗಳ ಬಲದಲ್ಲಿ ಗೌರವದ ಅಧಿಕಾರಿಗಳೆನಿಸಿ ಬಾಳಹತ್ತಿದರು. ಅಪರಾಧದಿಂದ ಮುಕ್ತರಾದ ರಾಯಪ್ಪ ಕರಿಯಪ್ಪರಂತೂ ಸ್ವಾಮಿಗಳ ಸೇವಾನುಸೇವಕರಾಗಿ ಜನ್ಮ ಸಾಫಲ್ಯವನ್ನು ಪಡೆದುಕೊಂಡರು.

೪೩ ನೆಯ ಪ್ರಕರಣ

ಮಡಿವಾಳೇಶ್ವರರು ಶ್ರೀ ಚಿದಂಬರ ದೀಕ್ಷಿತರ ಭೆಟ್ಟಿಗೆ ಬಂದದ್ದು

ಮುರುಗೋಡ ಪುಣ್ಯ ನೆಲದಲ್ಲಿ ನೆಲಸಿದ ಶಿವಾವತಾರಿಗಳಾದ ಚಿದಂಬರ ದೀಕ್ಷಿತರ ಸಂದರ್ಶನ ಬಯಸಿದ ಸ್ವಾಮಿಗಳು ಅತೀಯಾಶೆಯಿಂದ ಆ ಪ್ರಸಂಗವನ್ನು ಕಾಯುತ್ತಲಿದ್ದರು. ಶಿವನ ಸ್ವರೂಪ ದೀಕ್ಷಿತರಾದರೆ ಶಿವಕುಮಾರ ವೀರಭದ್ರನ ಪ್ರತಿ ಅವತಾರವೇ ಮಡಿವಾಳೇಶ್ವರ ಸ್ವಾಮಿಗಳು. ಹೀಗಿರುವಾಗ ತಂದೆ ಮಕ್ಕಳ ಭೆಟ್ಟಿಯಲ್ಲಿ ಅದಾವ ಮಾಯೆ ಅಡ್ಡೈಸಿತ್ತೊ ಏನೋ ಕೆಲವು ಕಾಲ ತಂದೆ ಮಗ ಈರ್ವರು ಅರಿತೂ ಅರಿಯದವರಂತೆ ಕಾಲ ಕಳೆದರು. ಆದರೆ ಒಂದು ದಿವಸ ಮಡಿವಾಳೇಶ್ವರ ಸ್ವಾಮಿಗಳಿಗೆ ದೀಕ್ಷಿತರನ್ನು ಕಾಣಬೇಕೆಂಬ ಹಂಬಲ ಹೆಚ್ಚಾಯಿತು. ಅಂತೇ ಚಿದಂಬರ ದೀಕ್ಷಿತರ ಆಶ್ರಮಕ್ಕೆ ತಾವಾಗಿಯೇ ಬಂದರು

ಆಗ ದೀಕ್ಷಿತರು ಸ್ವಾಮಿಗಳು ಬರುತ್ತಿರುವದನ್ನು ಕಂಡು ಅವರನ್ನು ಸಂಧಿಸಿ ಮಮತೆಯ ನುಡಿಗಳಿಂದ ಕರೆತಂದು ಮಗ್ಗುಲಲ್ಲಿ ಕೂಡ್ರಿಸಿಕೊಂಡರು. ಅಲ್ಲಿಯೇ ಸಮೀಪದಲ್ಲಿ ಶಿಷ್ಯಗಣವು ದೀಕ್ಷಿತರಲ್ಲಿ ವಿದ್ಯಾರ್ಜನೆಗೆಂದು ಬಂದು ಕುಳಿತುಕೊಂಡಿದ್ದರು. ಅವರೆಲ್ಲರೂ ಲಂಗೋಟಿಯ ಈ ವೈರಾಗ್ಯಮೂರ್ತಿ ಮಡಿವಾಳೇಶ್ವರರನ್ನು ಘನವಿದ್ವಾಂಸರೆನಿಸಿದ ದೀಕ್ಷಿತರು ಸ್ವಾಗತಿಸಿ ಬಳಿಯಲ್ಲಿ ಕುಳ್ಳಿರಿಸಿಕೊಂಡದ್ದನ್ನು ನೋಡಿ ತಬ್ಬಿಬ್ಬಾದರು ಅಲ್ಲದೆ ಅಸೂಹೆಪಟ್ಟರು ಅವರೀರ್ವರ ಸ್ನೇಹಕ್ಕೆ ಅರದಾಳ ಹಾಕುವ ಹಂಚಿಕೆಯನ್ನು ಹುಡುಕಹತ್ತಿದರು.

ಒಂದು ದಿನ ದೀಕ್ಷಿತರು ಶಿವಯೋಗಿಗಳನ್ನು ಕುರಿತು ವೇದಾಂತ ಶ್ರವಣ ಇಂದು ನಿನ್ನಿಂದ ನಡೆಯಬೇಕೆಂದು ಅಪ್ಪಣೆಯನ್ನು ದಯಪಾಲಿಸಿದರು ಮಡಿವಾಳೇಶ್ವರರು ದೀಕ್ಷಿತರ ನುಡಿಗೆ ಪ್ರತಿ ಹೇಳದೆ ಅವತ್ತಿನ ದಿವಸ ಒಳ್ಳೇ ಮಾರ್ಮಿಕವಾಗಿ ಬೋಧಪ್ರದವಾಗಿ ರಸವತ್ತಾಗಿ ವೇದಾಂತ ಶ್ರವಣ ಮಾಡಿದರು. ಆಗ ಶಿವಯೋಗಿಗಳ ಬುದ್ಧಿವಂತಿಕೆಯನ್ನು ದೀಕ್ಷಿತ

ರಾದಿಯಾಗಿ ಯಾವತ್ತರು ಬಲು ಮೆಚ್ಚಿ ಹಿರಿ ಹಿರಿ ಹಿಗ್ಗಿದರು. ವೈಮನಸ್ಸು ಜಾತಿ, ಮತ್ಸರದ ಜಳ ತಾಕಿದ ಅನೇಕ ಬ್ರಾಹ್ಮಣ ಬಂಧುಗಳು ಮಣಿದು ಸ್ನೇಹದಿಂದ ವರ್ತಿಸಹತ್ತಿದರು.

ಇದೇ ರೀತಿಯಾಗಿ ಸ್ವಾಮಿಗಳು ಬ್ರಾಹ್ಮಣ ಸಮೂಹದೊಡನೆ ಸ್ನೇಹ ಸಹಕಾರಗಳಿಂದ ವರ್ತಿಸುತ್ತಿರುವಾಗ ತಾರ್ಕಿಕ ಪಂಡಿತನೆಂದು ಹೆಸರುವಾಸಿಯಾದ ತರ್ಕಜ್ಞಾನ ಪಂಡಿತನೋರ್ವನು ದೀಕ್ಷಿತರ ಆಶ್ರಮಕ್ಕೆ ಬಂದು ದೀಕ್ಷಿತರಿಗೆ ವಂದಿಸಿ ಗುರುಗಳೆ ನಿಮ್ಮವರು ಏನೇ ಪ್ರಶ್ನೆ ಹಾಕಿದರೂ ಅದು ಸುಳ್ಳೆಂದು ಸಿದ್ಧಮಾಡಿ ಕೊಡಬಲ್ಲೆ ಎಂದು ತನ್ನ ಗರ್ವೋಕ್ತಿಗಳನಾಡ ಹತ್ತಿದನು.

ಬಳಿಕ ದೀಕ್ಷಿತರು ಗುರು ಮಡಿವಾಳೇಶ್ವರ ಸ್ವಾಮಿಗಳಿಗೆ ವಾದಕ್ಕೆ ನಿಲ್ಲುವಂತೆ ಅಪ್ಪಣೆಯನ್ನು ದಯಪಾಲಿಸಿದರು. ಆಗ ಮಡಿವಾಳೇಶ್ವರ ಸ್ವಾಮಿಗಳು ಮಾರ್ಮಿಕ ನುಡಿಮುತ್ತುಗಳನ್ನು ಸುರಿಸಿ ಈತನನ್ನು ಹಣ್ಣಿಗೆ ತರುವದು ಒಳಿತೆಂದು ತರ್ಕಿಸಿಕೊಂಡು, ಅಯ್ಯಾ ತರ್ಕಜ್ಞಾನ ಶ್ರೇಷ್ಠನೇ ನಿನ್ನ ಹೆತ್ತ ತಾಯಿ ಪತಿವ್ರತಾ ನೇಮನಿಷ್ಠೆಯಿಂದ ತನ್ನ ಗಂಡ ನಿನ್ನ ತಂದೆ ಇತ್ತ ವೀರ್‍ಯ ಬಲದಿಂದ ನಿನ್ನಂ ಹೆತ್ತಿಹಳು ಇದನ್ನು ಸುಳ್ಳು ಎಂದು ಸಾಧಿಸಿ ಸಿದ್ಧಪಡಿಸಯ್ಯಾ ಘನ ವಿದ್ವಾಂಸನೆ ಎಂದು ಮರು ಪ್ರಶ್ನೋತ್ತರಗಳಿಗೆ ಅವಕಾಶವಿಲ್ಲದಂತೆ ನುಡಿದರು.

ಆಗ ತಾರ್ಕಿಕ ಮಹಾಶಯನು ಬಲು ನಾಚಿಕೆಯಿಂದ ಉತ್ತರಕೊಡುವ ಮಾತಿರಲಿ ಮಾತನಾಡುವದಕ್ಕೂ ಹೇಸಿಕೆ ಎನಿಸಿ ತನ್ನ ಅಪರಾಧಕ್ಕೆ ಗರ್ವಹರಣಗೊಂಡು ಮಡಿವಾಳೇಶ್ವರ ಸ್ವಾಮಿಗಳ ಪಾದಗಳಿಗೆ ಸಾಷ್ಟಾಂಗ ಹಾಕಿ ತನ್ನಿಂದಾದ ಅಪರಾಧಕ್ಕೆ ಕ್ಷಮೆ ಕೇಳಿದನು ಅಲ್ಲದೆ ಮುಂದೆ ನಿಗರ್ವಿಯಾಗಿ ಬಾಳಿದನು.

....

೪೪ ನೆಯ ಪ್ರಕರಣ

ನೀರು ಸಿಂಪಡಿಸಿ ತುಪ್ಪದ ಕೊರತೆ ನೀಗಿಸಿದ್ದು

ಮಡಿವಾಳೇಶ್ವರ ಸ್ವಾಮಿಗಳಿಗೆ ಚಿದಂಬರ ದೀಕ್ಷಿತರೆಂದರೆ ಎಲ್ಲಿಲ್ಲದ ಪ್ರೀತಿ ತಂದೆ ಮಕ್ಕಳ ವಿಶ್ವಾಸವು ಈರ್ವರಲ್ಲಿಯೂ ನೆಲೆಯಾಗಿದ್ದು ಕಾಣುವ ಭಕ್ತಬಳಗವನ್ನು ಬೆರಗುಗೊಳಿಸಿತು. ಹೀಗಿರಲು ಒಂದು ದಿನ ದೀಕ್ಷಿತರು ಶಿವಯೋಗಿಗಳನ್ನು ಕುರಿತು—ಮಗು ನಮ್ಮದೊಂದು ಕೋರಿಕೆಯು ನಿನ್ನಿಂದ ಪೂರೈಸಬೇಕಾಗಿದೆಯಪ್ಪಾ ಎಂದರು. ದೀಕ್ಷಿತರ ಮಾತಿಗೆ ದಾಟಿಗೆ ಸ್ವಾಮಿಗಳು ಬೆರಗಾಧರಲ್ಲದೆ ಅಪ್ಪಾಜಿ ಕೋರಿಕೆ ಎಂದು ನುಡಿಯುವದಕ್ಕಿಂತ ತಮ್ಮ ಕುಮಾರನಾದ ನಿನ್ನಿಂದ ಸೇವೆಯಾಗಬೇಕಾಗಿದೆ ಎಂದು ಹೇಳಿದರೆ ಒಳ್ಳೇದಲ್ಲವೆ ಎಂದು ಮರು ಪ್ರಶ್ನೆ ಹಾಕಿದರು.

ಆಗ ಚಿದಂಬರ ದೀಕ್ಷಿತರು ಹೋಗಲಿಬಿಡು ,ತಂದೆ ಮಕ್ಕಳಲ್ಲಿ ವಾದವೇಕೆ ನೋಡು ಮಡಿವಾಳೇಶಾ ಜಗತ್ಕಲ್ಯಾಣಕ್ಕಾಗಿ ದುಷ್ಟ ಶಕ್ತಿಗಳ ಮರ್ದನಕ್ಕಾಗಿ ನಾವೊಂದು ಯಜ್ಞವನ್ನು ಪೂರೈಸುವ ಆಸೆಯುಳ್ಳಿದ್ದೇವೆ ಆದಕ್ಕೆ ನಿನ್ನ ಸಹಕಾರ ಸೇವೆ ಅಗತ್ಯವೆಂದು ನಿನ್ನನ್ನೇ ನಂಬಿದ್ದೇವೆ ನೀನೊಪ್ಪಿದರೆ ಮುಂದಿನ ಕಾರ್ಯಕ್ಕೆ ಅಣಿಯಾಗುತ್ತೇವೆ ಎಂದರು ಅಗ ಮಡಿವಾಳೇಶ್ವರ ಸ್ವಾಮಿಗಳು ಅತೀ ಉತ್ಸಹದಿಂದ ಅಪ್ಪಾಅವರೇ ದೇವನ ಪ್ರೀತಿ ಧರ್ಮ ಪ್ರೀತಿ ಗುರುವಿನ ಸಂಪಾದನೆಗಾಗಿ ತಾವು ಹೂಡಬೇಂಕೆಂದಿರುವ ಯಜ್ಞ ಕಾರ್ಯದಂತಹ ಪುಣ್ಯ ಕಾರ್ಯವನ್ನು ಯಾರಾದರೂ ಅಲ್ಲಗಳೆಯಬಹುದೆ? ಹೇಳಿ ತಾವು ಯಾವು ಕಾರ್ಯಭಾರವನ್ನು ನನಗೊಪ್ಪಿಸಿದರೂ ನಿಷ್ಠೆಯಿಂಧ ನಿರ್ವಹಿಸಬಲ್ಲೆ ಎಂದರು.

ಆಗ ಚಿದಂಬರ ಗುರು ಮೂರ್ತಿಗಳ ಆನಂದಕ್ಕೆ ಅಳತೆ ಇಲ್ಲದಾಯಿತು. ಬಳಿಕ ಶಿವಯೋಗಿಗಳ ಒಪ್ಪಿಗೆ ದೊರೆಯುವದೊಂದೆ ತಡ ಹಲವಾರು ಪ್ರಮುಖ ಭಕ್ತರನ್ನು ಸಂಸ್ಥಾನಿಕರನ್ನು ದೇಸಾಯಿ ದೇಸಪಾಂಡೆಯವರನ್ನು ಕರೆಯಿರಿ ತಮ್ಮ ಇಚ್ಛೆಯನ್ನು ಯಾನತ್ತರಿಗೂ ತಿಳುಹಿಸಿ ನೀವೆಲ್ಲರೂ ಸಹಕಾರ ಸಹಾಯಗಳಿಂದ ಯಜ್ಞ ಕಾರ್ಯಕ್ಕೆ ತನು ಮನ ಧನಗಳನ್ನಿತ್ತು ನಮ್ಮ ಬಹುದಿನಗಳ ಆಸೆಯಂತೆ ಪರಮಾತ್ಮನ ಪ್ರೀತಿಗೆ ಪಾತ್ರರಾಗಬೇಕೆಂದು ಅಪ್ಪಣೆ ಮಾಡಿದರು.

ದೀಕ್ಷಿತರ ಅಪ್ಪಣೆಯ ಪ್ರಕಾರ ಯಾವತ್ತೂ ಭಕ್ತಬಾಂಧವರು ತಮ್ಮ ತಮ್ಮ ಶಕ್ತ್ಯಾನುಸಾರ ಯಜ್ಞ ಕಾರ್ಯಕ್ಕೆ ಸಹಾಯ ಸಲ್ಲಿಸಹತ್ತಿದರು. ಆಗ ಶುಭಗಳಿಗೆ ಶುಭಯೋಗಗಳಲ್ಲಿ ಯಜ್ಞ ಕಾರ್ಯ ಸಾಂಗವಾಯಿತು. ಯಜ್ಞ ಕಾರ್ಯದ ಒಂದೊಂದು ಜವಾಬ್ದಾರಿಯನ್ನು ಒಬ್ಬೊಬ್ಬರಿಗೆ ವಹಿಸಿಕೊಟ್ಟಂತೆ ಮಡಿವಾಳೇಶ್ವರ ಸ್ವಾಮಿಗಳಿಗೆ ಕೋಠ್ಯಾಗಾರದ ವ್ಯವಸ್ಥಾಪಕರೆಂದು ನೇಮಿಸಿ ದೀಕ್ಷಿತರು ನಿಶ್ಚಿಂತೆಯಿಂದ ಯಜ್ಞ ಕಾರ್ಯಕ್ಕೆ ಅಣಿಯಾಗಿದ್ದರು. ಸ್ವಾಮಿಗಳ ಜವಾಬ್ದಾರಿಯಲ್ಲಿ ಭೋಜನಕ್ಕೆ ಬೇಕಾಗುವ ಸುವ್ಯವಸ್ಥೆಯು ವರ್ಣಿಸುವಂತೆ ಹದು. ಪ್ರತಿ ದಿನವು ಸಾವಿರಾರು ಜನರು ಇಚ್ಛಿತ ಭೋಜನದಿಂದ ತೃಪ್ತರಾಗಿ ಶಿವಯೋಗಿಗಳ ಮಹಿಮೆಯ ಪ್ರಸಾದವೆಂದು ಆನಂದದಿಂದ ಹಾಡಿ ಹೊಗಳುತ್ತಿದ್ದರು.

ಹೀಗಿರುವಾಗ ಒಂದು ದಿನ ಯಥಾ ಪ್ರಕಾರ ಸಾವಿರಾರು ಜನರ ಭೋಜನ ಸಮಾರಂಭ ಸಾಗಿದೆ ಊಟಕ್ಕೆ ಬಡಿಸುವವರ ಬೆಂಬತ್ತಿ ಸ್ವಾಮಿಗಳು ಮತ್ತ್ರಾಯದಿಂದ ನೀಡಿಸುತ್ತ ತಮ್ಮ ಮೇಲ್ವಿಚಾರಣೆಯಲ್ಲಿ ಯಾವದೊಂದು ಪದಾರ್ಥವೂ ಕೊರತೆಯಾಗದಂತೆ ಮುಂಜಾಗ್ರತೆ ವಹಿಸಿ ಕಾರ್ಯ ಮಾಡುತ್ತಿದ್ದಾರೆ. ಊಟಕ್ಕೆ ಕುಳಿತವರು ಸ್ವಾಮಿಗಳ ಮತ್ತ್ರಾಯಕ್ಕೆ ಮಣಿದು ಮನದಣಿಯುವಂತೆ ಭೋಜನ ಮಾಡಿ ತೃಪ್ತಿ ಹೊಂದುತ್ತಿದ್ದಾರೆ. ಮೊದಲಿನ ಎರಡು ಪಂಕ್ತಿಗಳು ಮುಗಿದು ಮೂರನೆ ಪಂಕ್ತಿ ಸುರುವಾಗಿರುವಾಗ ಭೋಜನಕ್ಕೆ ತುಪ್ಪ ಬಡಿಸುವವನು ತುಪ್ಪ ತಪೇಲಿ ಬರಿದಾಗಿರುವದನ್ನು ನೋಡಿ ಗಾಬರಿಗೊಂಡನಲ್ಲದೆ ಊಟಕ್ಕೆ ಕುಳಿತಾಗ ತುಪ್ಪ ತೀರಿ ಹೋಗಿದೆ ಎಂದು ಹೇಳಿದರೆ ಮೇಲ್ವಿಚಾರಕರೆನಿಸಿದ ಶಿವಯೋಗಿಗಳಿಗೆ ಅಪಮಾನವಾಗುವದಲ್ಲವೆ ? ಎಂದು ಹೆದರಿ ಹೌಹಾರಿ ಸ್ವಾಮಿಗಳಿಗೆ ತುಪ್ಪ ತೀರಿದ ವಿಷಯ ತಿಳಿಸುವದಕ್ಕೂ ಅಂಜಹತ್ತಿದನು.

ಕೊನೆಗೊಮ್ಮೆ ಎಲ್ಲಿಲ್ಲದ ಧೈರ್ಯ ತಂದುಕೊಂಡು ಸ್ವಾಮಿಗಳನ್ನು ಸಮೀಪಿಸಿ ನಡುಗುವ ಧ್ವನಿಯಲ್ಲಿ ಸೂಕ್ಷ್ಮರೀತಿಯಿಂದ ಬುದ್ಧಿ ತುಪ್ಪವಂತೂ ತೀರಿ ಹೋಗಿದೆ. ಊಟಕ್ಕೆ ಕುಳಿತ ಸಮೂಹದೆದುರು ಕೊರತೆಯಾಗಿದೆ ಎಂದು ಉಸುರುವದು ಹೇಗೆ ಎಂದು ಮೂಕದ ಪ್ರಶ್ನೆಯನ್ನು ಮೌನದರ್ಥದಲ್ಲಿ ತಿಳಿಹಿಸಿದನು. ಆಗ ಸ್ವಾಮಿಗಳು, ಏನಲೆ ಅನಾದಿ ತುಪ್ಪದ ಹೊಳೆಯೇ

ಹರಿಯುತ್ತಿರುವಾಗ ಕೊರತೆ ಎಂದು ಉಸುರುವದೇಕೆ, ಕರೆಯಲೀ ಹತ್ತು ಮಂದಿ ಸೇವಕರನ್ನು ಎಂದು ಆಜ್ಞಾಪಿಸಿದರು. ಸ್ವಾಮಿಗಳ ಆಜ್ಞೆಯಂತೆ ಹತ್ತು ಜನ ವ್ಯವಸ್ಥಾಪಕರು ಮುಂದಾಗಿ ಬಂದು ಕರಜೋಡಿಸಿ ನಿಂತು ಕೊಂಡರು.

ಬಳಿಕ ಸ್ವಾಮಿಗಳು ಅವರೆಲ್ಲರಿಗೂ ಒಂದೊಂದು ಕೊಡವನ್ನು ತೆಗೆದು ಕೊಂಡು ಹೊಳೆಗೆ ಹೋಗಿ ಹರಿವ ಗಂಗೆಯನ್ನು ತರುಬಿ ನಿಲ್ಲಿಸಿ ಜಲವನ್ನು ತುಂಬಿ ತರುವಂತೆ ಅಪ್ಪಣೆ ಮಾಡಿದರು. ಆಗ ಭಕ್ತರೆನಿಸಿದ ಸೇವಕರು ಮತ್ತೊಂದು ಮಾತಿಗೆ ಅವಕಾಶ ಕೊಡದೆ ಹೊಳೆಗೆ ಹೋಗಿ ಗಂಗೆಯೊಡಲ ಜಲ ತುಂಬಿ ತಂದು ಕೊಡಗಳನ್ನು ಮಡಿವಾಳೇಶ್ವರ ಸ್ವಾಮಿಗಳ ಸನ್ನಿಧಿಯಲ್ಲಿ ಇಳುಹಿಸಿ ಕೈಕಟ್ಟಿ ನಿಂತುಕೊಂಡರು.

ಆಗ ಸ್ವಾಮಿಗಳು ನಸುನಗುತ್ತ ಪ್ರತಿಯೊಂದು ಕೊಡಗಳಲ್ಲಿ ತಮ್ಮ ಕೈಬೆರಳು ಎದ್ದಿ ತೆಗೆಯುತ್ತ ನಿಂತುಕೊಂಡಿದ್ದ ಸೇವಕರಿಗೆ—ನೋಡಿರೋ ಇಂಥಾ ಸುವಾಸನೆಯುಳ್ಳ ತಾಜಾ ತುಪ್ಪ ನಮ್ಮ ಭೋಜನ ಸಮಾರಂಭ ಕ್ಕೆಂದೇ ಹೊಳೆ ತುಂಬಿ ಹರಿದು ಹೋಗುತ್ತಿರುವಾದ ಕೊರತೆ ಅಂತಾ ಬಂದು ಬಿಟ್ಟದ್ದೀರೀ ನೋಡ್ರೋ ಇಲ್ಲಿ ಎಂದು ಕೈ ಮುಂದೆ ಮಾಡಿ ಮೂಸಿ ನೋಡಲು ತಿಳುಹಿಸಿದರು. ಶಿವಯೋಗಿಗಳ ಘನ ಮಹಿಮೆಯಿಂದ ಹತ್ತು ಕೊಡಗಳನ್ನು ತುಂಬಿ ತಂದ ನೀರು ತುಪ್ಪವಾಯಿತು ಉತ್ತಮ ವಾಸನೆ ಯಿಂದ ಭೋಜನ ಗೃಹವು ಗಮಗಮಿಸಿ ಪ್ರತಿಯೊಬ್ಬರಿಗೂ ಆಶ್ಚರ್ಯ ಆನಂದ ಅಭಿಮಾನಗಳು ಏಕ ಕಾಲಕ್ಕೆ ಜಾಗೃತವಾಗುವಂತಾಯಿತು. ಬಳಿಕ ಸ್ವಾಮಿಗಳ ಅಪ್ಪಣೆಯಂತೆ ಭೋಜನಕ್ಕೆ ಕುಳಿತವರಿಗೆ ನೀರು ನೀಡಿ ತುಪ್ಪವನ್ನು ಸವಿದು ಆನಂದವನ್ನುಂಟು ಮಾಡಿದರು. ಊಟ ಮಾಡು ತ್ತಿದ್ದ ಪ್ರತಿಯೊಬ್ಬರೂ ಇಂಥ ಊಟ ನಮಗೆ ಇಲ್ಲಿಯವರೆಗೆ ಸಿಕ್ಕಿದ್ದಿಲ್ಲ ವೆಂದು ಆನಂದದಿಂದ ನೀರು ಸುರಿದುಕೊಂಡವರಂತೆ ಸುರಿಸುರಿದು ಭೋಜನ ಮಾಡಿದರು.

ಬಳಿಕ ದೀಕ್ಷಿತರು ಯಜ್ಞವನ್ನು ಯಥಾಪ್ರಕಾರ ಮುಕ್ತಾಯಗೊಳಿಸಿ ಮಡಿವಾಳೇಶ್ವರಾ ನಮ್ಮ ಯಜ್ಞ ಕಾರ್ಯದಲ್ಲಿ ತುಪ್ಪದ ಕೊರತೆಯನ್ನು ನೀರು ನೀಡಿ ನಿವಾರಿಸಿ ನಿನ್ನ ಮಹಿಮೆ ನಮ್ಮನ್ನು ಆಶ್ಚರಿಪಡಿಸಿತು.

ಅಂತೂ ನಮ್ಮ ಮಾನ ಕಾಯ್ದು ಕರುಣಿಸು ಕಂದ ನೀನೆಂದು ಹೆಮ್ಮೆಯಿಂದ ಅಪ್ಪಿ ಆಲಿಂಗಿಸಿ ಮಡಿವಾಳೇಶ್ವರನನ್ನು ಸಿದ್ಧನ ಗವಿಗೆ ಬೀಳ್ಕೊಟ್ಟರು.

....

೪೫ ನೆಯ ಪ್ರಕರಣ

ನರಗುಂದ ಸಂಸ್ಥಾನದ ಅವನತಿಯ ಭವಿಷ್ಯ ನುಡಿದದ್ದು

ಬಳಿಕ ದೀಕ್ಷಿತರಿಂದ ಅಪ್ಪಣೆ ಪಡೆದು ಸಿದ್ಧನ ಗವಿಗೆ ಬಂದ ಸ್ವಾಮಿಗಳು ಮತ್ತೆ ಅದೇಕೋ ಸಂಚಾರ ಕಾರ್ಯವನ್ನು ಕೈಕೊಂಡು ಕಾಳು ತಿನ್ನುವ ಭಾವಾನಿಗೂ ರಾಮಪ್ಪನಿಗೂ ಗವಿಯಲ್ಲಿಯೇ ಇರುವಂತೆ ಅಪ್ಪಣೆ ಮಾಡಿ ಹೊರಟು ನರಗುಂದ ಸಂಸ್ಥಾನವನ್ನು ತಲುಪಿದರು. ಆಗ ನರಗುಂದ ನಗರದೇವತೆಯ ರಥೋತ್ಸವವಿದ್ದ ಪ್ರಯುಕ್ತ ದೇವಿಯ ತೇರನ್ನು ಸಿದ್ಧಪಡಿಸಿ ರಥೋತ್ಸವ ಸಾಂಗವಾಗುವ ಸಮಯಕ್ಕೆ ಸ್ವಾಮಿಗಳ ಅನೇಕ ಭಕ್ತರು ಸ್ಥಾನಿಕರನ್ನು ಕಂಡು ಮಡಿವಾಳೇಶ್ವರ ಸ್ವಾಮಿಗಳನ್ನು ತೇರಿನಲ್ಲಿ ಕುಳ್ಳಿರಿಸುವದಕ್ಕೆ ಅನುಮತಿ ಬಯಸಿದರಲ್ಲದೆ ಸ್ವಾಮಿಗಳ ಯೋಗ ಶಕ್ತಿಯನ್ನು ಅನೇಕ ಲೀಲೆಗಳನ್ನು ವರ್ಣಿಸಿ ಇಂತಹ ಮಹಾತ್ಮರನ್ನು ನಾವು ಪೂಜಿಸಿ ಪೂಜ್ಯಭಾವನೆಯಿಂದ ಸೇವಿಸಿದರೆ ನಮ್ಮ ನಗರಕ್ಕೆ ಕ್ಷೇಮವಾಗುವದೆಂದು ತಿಳುಹಿಸಿದರು. ಆದರೂ ದೊರೆಯು ಮಾತನ್ನು ಅಲಕ್ಷ್ಯ ಮಾಡಿದವನಲ್ಲದೆ ತೇರಿನಲ್ಲಿ ಮಡಿವಾಳೇಶ್ವರ ಸ್ವಾಮಿಗಳನ್ನು ಕೂಡ್ರಿಸಬೇಕೆಂಬ ಅಭಿಲಾಷೆ ನಿಮಗಿದ್ದರೆ ನಮ್ಮ ನಗರವಾಸಿ ಸ್ವಾಮಿಗಳನ್ನು ಕುಳಿರಿಸಿ ತೇರು ಸಾಗಿಸಬಹುದೆಂದು ಅಪ್ಪಣೆ ಮಾಡಿದರು.

ಬಳಿಕ ತೇರು ಯಥಾ ಪ್ರಕಾರ ಸಾಂಗವಾಗಿ ಪಾದಗಟ್ಟೆಯನ್ನು ಮುಟ್ಟುವ ಪೂರ್ವದಲ್ಲಿ ಮಧ್ಯಕ್ಕೆ ನಿಂತು ರಥದಲ್ಲಿದ್ದ ಜ್ಯೋತಿಗಳು ತಮ್ಮಷ್ಟಕ್ಕೆ ತಾವೆ ನಂದಿದವು. ಬಳಿಕ ರಥವು ಜಯ ಜಯ ಜಗದಂಬೆ ಹರ ಹರಿ ಶಂಭೋ ಮಹಾದೇವ ಎಂಬ ಧ್ವನಿಯಲ್ಲಿ ಮುಂದೆ ಸಾಗಿಸಲು ಎಷ್ಟು ಪ್ರಯತ್ನ ಪಟ್ಟರೂ ರಥವು ಮುಂದೆ ಚಲಿಸದಾಯಿತು. ಬಂದೊದಗಿದ ವಿಪತ್ತು ಯಾರಿಗೂ ತಿಳಿಯದೆ ಗಾಬರಿಗೊಂಡರು, ಆಗ ಸ್ವಾಮಿಗಳ ಭಕ್ತ

ರೆನಿಸಿದ ಕೆಲವು ಹಿರಿಯರು ಮಡಿವಾಳೇಶ್ವರ ಸ್ವಾಮಿಗಳ ಮಹಿಮೆಯನ್ನು ತಿಳುಹಿಸುತ್ತ ಅವರ ಬಳಿಗೆ ಹೋಗಿ ದೊರೆಗಳಾದಿಯಾಗಿ ಶರಣಾಗತರಾಗದ ವಿನಃ ಗತಿ ಇಲ್ಲವೆಂದು ಸಂಸ್ಥಾನಿಕರನ್ನು ಉಳಿದ ಪ್ರಮುಖರನೇಕರನ್ನು ಕೂಡಿಕೊಂಡು ಸ್ವಾಮಿಗಳ ವಾಸ್ತವ್ಯಸ್ಥಳಕ್ಕೆ ಬಂದು ಶಿವಯೋಗಿಗಳಿಗೆ ನಮಸ್ಕರಿಸಿ ನಮ್ಮ ಅಪರಾಧವನ್ನು ಮನ್ನಿಸುವದಾಗಬೇಕೆಂದರು.

ಆಗ ಸ್ವಾಮಿಗಳು ತಮ್ಮ ಬಳಿಯಲ್ಲಿದ್ದ ಒಂದು ಕಾಯಿ ಕೊಟ್ಟು ಈ ಕಾಯಿ ಒಯ್ದು ದೇವಿಯ ಹೆಸರಿನಿಂದ ರಥದ ಮುಂದು ಗಡೆ ಒಡೆಯು ವಂತೆ ಹೇಳಿ ಬಳಿಕ ಈಗ ಕಾಲ ನಿರ್ಣಯ ಬದಲಾಯಿತು. ಇನ್ನು ಈ ಸಂಸ್ಥಾನ ಬಹಳ ದಿವಸ ಉಳಿಯುವದಿಲ್ಲವೆಂದು ಮುಂದಾಗುವ ಬಂಡಾ ಯದ ಭವಿಷ್ಯ ನುಡಿದು ನವಲಗುಂದದತ್ತ ಸಾಗಿದರು. ರಥವೇನೋ ಸಾಂಗವಾಯಿತು ಮತ್ತು ಸ್ವಾಮಿಗಳು ನುಡಿದಂತೆ ಸಂಸ್ಥಾನವೂ ಹಾಳಾ ಯಿತು.

....

೪೬ ನೆಯ ಪ್ರಕರಣ

ಗಂದಿಗವಾಡದಲ್ಲಿ ಮಾರಿಕಾ ಬೇನೆಯನ್ನು ಪ್ರತಿಬಂಧಿಸಿದ್ದು

ನವಲಗುಂದಕ್ಕೆ ಬಂದ ಸ್ವಾಮಿಗಳು ಪತ್ತಾರ ಕುಲೋದ್ಭವರಾದ ನಾಗಲಿಂಗಪ್ಪನವನೆಂಬ ಅವಧೂತ ಯೋಗಿಶ್ವರನನ್ನು ಭೆಟ್ಟಿಯಾಗಿ ಈರ್ವರೂ ಕುಶಲ ಪ್ರಶ್ನೋತ್ತರಗಳಿಂದ ಆನಂದಹೊಂದಿ ಸಂಚಾರ ಕಾರ್ಯ ಕೈಕೊಂಡರು. ಸ್ವಾಮಿಗಳು, ನಾಗಲಿಂಗಪ್ಪನವರು ಗಂದಿಗವಾಡ ಗ್ರಾಮ ದತ್ತಸಾಗಿದರು. ಗಂದಿಗವಾಡ ಗ್ರಾಮ ಇನ್ನೂ ಮೈಲೆರಡರಷ್ಟು ದೂರ ವಿದೆ. ಆಗ ಹೊತ್ತು ಮುಳುಗಿ ಕತ್ತಲಾವರಿಸುವ ಸಮಯ ಒಬ್ಬರಿಗೊಬ್ಬರು ಅಸರದ ಊರುಗೋಲಾಗಿ ಗ್ರಾಮದ ಹೊರ ವಲಯಕ್ಕೆ ಬಂದರು. ಬಳಿಕ ಅಲ್ಲಿ ಗ್ರಾಮದೇವತೆ ಮಾರಿಕಾಂಬೆಯ ದೇವಸ್ಥಾನ ಇರುವದನ್ನು ತಿಳಿದು ಒಳಗೆ ಹೋಗಿ ಕುಳಿತಿರಲು ನಾಗಲಿಂಗಪ್ಪನವರ ದೃಷ್ಟಿ ಮಾರಿಕಾಂಬೆಯ ವಿಗ್ರಹದತ್ತ ಹರಿತು. ಅದೇ ಆಗ ಅರ್ಚಕನು ದೀಪ ಹಚ್ಚಿ ಹೋಗಿ

ದ್ದನು. ವಿಗ್ರಹವು ನಿಚ್ಚಳವಾಗಿ ನಾಗಲಿಂಗಪ್ಪನವರ ದೃಷ್ಟಿಯಲ್ಲಿ ಭವ್ಯವಾಗಿ ಕಾಣುತ್ತಿತ್ತು.

ಆಗ ಮಡಿವಾಳೇಶ್ವರ ಸ್ವಾಮಿಗಳತ್ತ ಹೊರಳಿ ಮಡಿವಾಳಾ ಈ ದೇವಿ ವಿಗ್ರಹ ಬಲು ದೊಡ್ಡದಿವೆ. ನೋಡೋ ಇವಳ ಕೈಕಾಲು ನೋಡಿದರೆ ಬೆಳಗಿನ ತನಕ ಉರಿ ಹಚ್ಚಿಸುಟ್ಟರೂ ಸವೆಯೋದಿಲ್ಲ ಬಾ ಬಾ ಕಿತ್ತುತಂದು ಉರಿಹಚ್ಚಿ ಕಾಸಿಕೊಂಡು ಛಳಿಯಿಂದ ಮುಕ್ತರಾಗೋಣ ಎಂದರು. ಆಗ ಸ್ವಾಮಿಗಳು ಬ್ಯಾಡ ಬಿಡಲೆ ಯಪ್ಪಾ ಬೆಳಿಗ್ಗಿ ನಮ್ಮನ್ನೆ ಪ್ಯಾಣ ಆದಾವೋ ಎಂದು ಭವಿಷ್ಯನುಡಿದರು. ,

ಆದರೂ ಹಟಯೋಗಿ ಎನಿಸಿದ ನಾಗಲಿಂಗಪ್ಪನವರು ಮುಂದಾಗಿ ದೇವಿಯ ವಿಗ್ರಹ ತಂದು ಬೆಂಕಿ ಹಚ್ಚಿ ಈರ್ವರೂ ಚೇಷ್ಟೆಯ ಮಾತುಗಳನ್ನಾಡುತ್ತ ಉರಿ ಕಾಯಿಸಿಕೊಂಡು ಬೆಳಕು ಹರಿಯುವಷ್ಟರಲ್ಲಿ ಅರಿತೂ ಅರಿಯದವರಂತೆ ಒಂದು ಮೂಲೆಯಲ್ಲಿ ಮಲಗಿದರು. ಬೆಳಿಗ್ಗೆ ಅರ್ಚಕನು ಪೂಜಾ ಸಾಹಿತ್ಯಗಳೊಡನೆ ಗುಡಿಗೆ ಬಂದು ದೇವಿಯ ವಿಗ್ರಹ ಕಾಣದಾಗಲು ಹೊರ ಅಂಗಳದಲ್ಲಿ ಅರ್ಧ ಉರಿದು ಬಿದ್ದ ಬಣ್ಣದ ಕಟ್ಟಿಗೆಯ ತುಂಡುಗಳನ್ನು ಕಂಡು ಮೂರ್ತಿಯ ಕಟ್ಟಿಗೆ ಎಂದು ಗುರ್ತಿಸಿ ಊರಿನಲ್ಲಿ ಹೊಕ್ಕು ತಮ್ಮ ದೇವಿಗಾದ ಸ್ಥಿತಿಯನ್ನು ವರ್ಣಿಸುತ್ತ ಬೊಬ್ಬೆ ಹೊಡೆದನು.

ಅವನ ಹಲಬುವಿಕೆಯಿಂದ ಹಲಕೆಲವು ಭಕ್ತ ಜನರ ಮಾರಿ ಕಾಂಬೆಯ ಗುಡಿಗೆ ಬಂದು ದೇವಿ ಸುಟ್ಟು ಬೂದಿಯಾಗಿರುವದನ್ನು ನೋಡಿ ಸಿಟ್ಟುಸಂತಾಪಗಳಿಂದ ರೊಚ್ಚಿಗೆದ್ದು ಈ ಪರಿ ನಮ್ಮ ದೇವಿಯ ಸ್ಥಿತಿಯಾಗಲು ಕಾರಣರಾರು ಎಂದು ಶೋಧನೆಯೊಳಗಿರಲು ಮೂಲೆಯಲ್ಲಿ ಮಲಗಿದ ಯೋಗಿ ಶಿವಯೋಗಿಗಳೀರ್ವರು ಅವರ ಕಣ್ಣದಿಟ್ಟಿಗೆ ತಾಕಿ ಇವರಿಂದಲೇ ದೇವಿಯನ್ನು ಸುಡುವ ಅಪರಾಧವಾಗಿದೆ ಎಂದರಿತು ಸಿಟ್ಟಿನ ಭರದಲ್ಲಿ ಈರ್ವರನ್ನೂ ಎಳೆದು ತಂದು ತಮ್ಮ ಕೈ ಸೋಲುವವರಿಗೆ ಮನಸಾರೆ ಥಳಿಸಹತ್ತಿದರು.

ಅಷ್ಟರಲ್ಲಿ ಜ್ಞಾನವೃದ್ಧ ಹಿರಿಯನೋರ್ವನು ಮುಂದಾಗಿ ಸತ್ಪುರುಷರ ಸ್ಥಿತಿಗಾಗಿ ಮರುಗುತ್ತ ಎಲೈ ನಿಷ್ಕರುಣಿಗಳಿರಾ ಇವರು ಸಾಧುಗಳು, ಸತ್ಪು

ರುಷರು ಮಹಿಮಾಶಾಲಿಗಳಾದ ಮಹಾತ್ಮರು, ತ್ರಿಕಾಲಜ್ಞಾನ ಸಂಪನ್ನರು ಪಾಪ ಪುಣ್ಯದ ಪರಿಚಯದಲ್ಲಿ ಅವರು ಮಾಡುವ ಪ್ರತಿಯೊಂದು ಕೃತಿಗಳಲ್ಲಿಯೂ ಒಂದೊಂದು ರೀತಿಯ ಪವಾಡನೆ ಅಡಕವಾಗಿರುವದನ್ನು ಅರಿಯದಲೆ ಮೂಢರಾಗಿ ಅವರನ್ನು ದಂಡಿಸುವ ನಿಮ್ಮ ಸಾಹಸ ನಿಮ್ಮ ಅವಸಾನಕ್ಕೆ ನಾಂದಿ ಎಂದು ತಿಳಿಯಿರಿ ಸಾಕು ಸರಿಯಿರೊ ಶ್ವಾನ ಬುದ್ಧಿಯ ಮನುಜರೆ ಎಂದು ಬೈದು ನಾಗಲಿಂಗಪ್ಪನವರು ಮಡಿವಾಳೇಶ್ವರ ಸ್ವಾಮಿಗಳನ್ನು ಅವರಿಂದ ಬಿಡಿಸಿ ಕಳುಹಿಸಿದನು.

ಬಳಿಕ ಈರ್ವರೂ ತಮ್ಮ ತಮ್ಮೊಳಗೆ ಮಾತನಾಡಿಕೊಳ್ಳುತ್ತ ನೀನೆಷ್ಟು ಏಟು ತಿಂದೆ ನೀನೆಷ್ಟು ಏಟು ತಿಂದೆ ಎಂದು ಒಬ್ಬರಿಗೊಬ್ಬರು ಕೇಳಿಕೊಳ್ಳುತ್ತ ಊರ ಮುಂದಿನ ಹಳ್ಳಕ್ಕೆ ಬಂದು ಕುಳಿತುಕೊಳ್ಳುವಾಗ ನಾಗಲಿಂಗಪ್ಪನವರು—ಮಡಿವಾಳೇಶಾ ಗಂದಿಗವಾಡದವರು ಕುಟ್ಟಿ ಕಟ್ಟಿ ಈ ಕೊಟ್ಟ ದೇಹಾ ಅನ್ನುದನ್ನ ಕಣಕದ್ಹಂಗ ಮೆತ್ತಗೆ ಮಾಡಿದರು ನೋಡೊ ಎಂದರು. ಆಗ ಮಡಿವಾಳೇಶ್ವರ ಸ್ವಾಮಿಗಳ ಶ್ರೀಮುಖದಿಂದ—ನಾಗಲಿಂಗಾ ಇನ್ನು ಮೇಲೆ ನೋಡುವಿಯಂತೆ ಗಂದಿಗವಾಡದವರ ಗದ್ದಿಗ್ಗಲ್ಲ ಸರಿದರಾತಿಲ್ಲ ಎಂಬ ಮಾರ್ಮಿಕ ನುಡಿ ತನ್ನ ತಾನೇ ಚಿಮ್ಮಿ ಬಂತು.

ಅತ್ತ ಗ್ರಾಮದ ತುಂಬೆಲ್ಲ ಮಾರಿ ಬೇನೆ ಆವರಿಸಿ ಸಾವು ನೋವುಗಳ ಸುಗ್ಗಿಯೇ ಸುರುವಾಯಿತು. ಹಲವರು ಹಾಸಿಗೆ, ಹಿಡಿದು ತ್ರಾಣಗೆಟ್ಟು ತತ್ತರಿಸಹತ್ತಿದರು. ಕೆಲವರು ಆಗಲೇ ಗೋರಿಯ ಸ್ಥಿತಿಗೂ ಮುಟ್ಟಿದರು. ಆಗ ಗ್ರಾಮದ ಜನರು ಒಮ್ಮಿಂದೊಮ್ಮೆಲೇ ಏನು ವಿಷಮ ಪರಿಸ್ಥಿತಿ ಎಂದು ಹೌಹಾರಿದರು. ಆಗ ಯೋಗಿ ಶಿವಯೋಗಿಗಳನ್ನು ಹೊಡೆತದಿಂದ ಪಾರುಗೊಳಿಸಿದ ಹಿರಿಯನು ಹಲವು ಜನ ಪ್ರಮುಖರನ್ನು ಕೂಡಿಸಿ ಅಜ್ಞಾನಿ ಅವಿವೇಕಿ ಮನುಜರೆ ಮಹಾತ್ಮರು ಇರುವದನ್ನು ಅರಿಯದೆ ವರ್ತಿಸಿದ್ದರ ಪಾಪಕ್ಕೆ ಪ್ರಾಯಶ್ಚಿತ್ತವಿದೆಂದರಿಯಿರಿ ನೀವೀ ಧಾರುಣ ಪರಿಸ್ಥಿತಿಯಿಂದ ಮುಕ್ತರಾಗಬೇಕಾದರೆ ನಿಮ್ಮ ದಂಡನೆಗೊಳಗಾದ ಆ ಮಹಾತ್ಮರಲ್ಲಿ ಶರಣು ಹೋಗದ ಏನ ಃ ಗತಿಯಿಲ್ಲವೆಂದು ತಿಳಿಸಿ ಹೇಳಿದನು.

ಆಗ ಗ್ರಾಮದ ಕೆಲವು ಜನರು ಹಿರಿಯನ ಹಿತನುಡಿಯಂತೆ ಸ್ವಾಮಿಗಳನ್ನು ಹುಡುಕುತ್ತ ಹಳ್ಳದ ದಡಕ್ಕೆ ಬಂದು ಸ್ವಾಮಿಗಳೀರ್ವರನ್ನೂ ಗುರ್ತಿಸಿ

ದೀರ್ಘದಂಡ ಪ್ರಣಾಮಗೈದು ತಮ್ಮ ಗ್ರಾಮಕ್ಕೆ ಬಂದೊದಗಿದ ದಾರುಣ
ಸ್ಥಿತಿಯನ್ನು ವಿವರಿಸಿ ತಮ್ಮ ಅಪರಾಧವನ್ನು ಮನ್ನಿಸಿ ಉದ್ಧಾರಗೈಯಿ
ರೆಂದು ಬೇಡಿಕೊಳ್ಳಹತ್ತಿದರು. ಬಳಿಕ ಸ್ವಾಮಿಗಳವರು ಅವರ ಭಕ್ತಿ
ಭಾವಕ್ಕೆ ಒಲಿದು ತಮಗಾದ ನೋವನ್ನು ಮರೆತು ಅಯ್ಯಾ ನಾಗಲಿಂಗಾ
ಏನು ಮಾಡಬೇಕೊ ಇವರಿಗೆ ಎಂದು ಮಡಿವಾಳೇಶ್ವರರು ನಾಗಲಿಂಗಪ್ಪನವ
ರೊಡನೆ ನಗೆ ಮಾಡಿದರು.

ಆಗ ನಾಗಲಿಂಗಪ್ಪನವರು ಮಡಿವಾಳಾ ಒಲಿದ ಭಕ್ತರ ಬೇಡಿಕೆ
ಏನಿದ್ದರೂ ತೀರಿಸುವದು ನಿನ್ನ ಕರ್ತವ್ಯವಾಗಿರುವಾಗ ನನ್ನನ್ನು ಕೇಳುವ
ದೇಕೆ ಅವರನ್ನೇ ಕೇಳಿ ಅವರಿಗೆ ಬೇಕಾದ್ದ ಕೊಟ್ಟು ಕಳಸೊ ಎಂದರು. ಬಳಿಕ
ಸ್ವಾಮಿಗಳು ಗ್ರಾಮವಾಸಿಗಳನ್ನು ಉದ್ದೇಶಿಸಿ ಎಲೈ ಗಂದಿಗವಾಡದ ಭಕ್ತರೆ
ನಿಮಗೆ ಮಾರೆಮ್ಮನ ಮೂರ್ತಿ ಬೇಕೊ ಅಥವಾ ಈಗ ಹಬ್ಬಿಕೊಂಡಿರುವ
ಮಾರಿಕಾ ಬೇನೆ ಬೇಕೋ ಎರಡರಲ್ಲಿ ಒಂದನ್ನು ನಿರಿಸಿಕೊಳ್ಳಿರೆಂದು ನುಡಿ
ದರು. ಆಗ ಹಿರಿಯ ಭಕ್ತನು ಸ್ವಾಮಿಗಳ ಮಾತಿಗೆ ಮರ್ಮವನ್ನು ಅರಿತು
ಬುದ್ಧಿ ತಮ್ಮ ಅನುಗ್ರಹದಿಂದ ಏನು ಕೊಟ್ಟರೂ ಸ್ವೀಕರಿಸುತ್ತೇವೆ ಎಂದು
ಸ್ವಾಮಿಗಳ ಪಾದವನ್ನು ಹಿಡಿದನು. ಆಗ ಮಡಿವಾಳೇಶ್ವರ ಸ್ವಾಮಿಗಳು
ಹಿರಿಯ ಗ್ರಾಮಸ್ಥನ ಭಕ್ತಿಗೆ ಮೆಚ್ಚಿ ನಮ್ಮಿಂದ ಸುಟ್ಟುರಿದು ಹೋದ ಈ
ಮಾರಿಯ ಅವತಾರ ಇನ್ನು ಮೇಲೆ ನಿಮ್ಮ ಗ್ರಾಮಕ್ಕೆ ಬೇಡವೇ ಬೇಡ
ಯಾವ ಕಾಲದಲ್ಲಿಯೂ ಗಂದಿಗವಾಡ ಗ್ರಾಮ ನಿವಾಸಿಗಳು ಮಾರಿ ಅವ
ತಾರಕ್ಕೆ ಬಲಿಯಾಗದಿರಲಿ ಎಂದು ಆಶೀರ್ವದಿಸಿದರು.

ಬಳಿಕ ಗ್ರಾಮಸ್ಥರೆಲ್ಲರೂ ವೈಭವಪೂರ್ಣ ಸ್ವಾಗತ ಸಿದ್ಧತೆಯಲ್ಲಿ
ಈರ್ವರೂ ಯೋಗಿಗಳನ್ನು ಊರಲ್ಲಿ ಕರೆದುಕೊಂಡು ಬಂದು ಭಕ್ತಿ ಭಾವದಿಂದ
ಪೂಜಿಸಿ ತಮ್ಮ ಅಭಿಲಾಷೆಗಳನ್ನು ಸಾರ್ಥಕಪಡಿಸಿಕೊಳ್ಳುವವರಾದರು.
ಸ್ವಾಮಿಗಳ ಶ್ರೀ ನುಡಿಯಂತೆ ಗಂದಿಗವಾಡದ ಭಕ್ತ ಜನತೆಯು ಮಾರಿಕಾ
ಬೇನೆಯಿಂದ ಮುಕ್ತರಾಗಿ ಪ್ರತಿ ವರ್ಷದ ಪದ್ಧತಿಯಂತೆ ಜಾತ್ರೆಯ ಸಮ
ಯಕ್ಕೆ ಯಾರಿಂದಲೋ ಸಿದ್ಧವಾಗಿ ಬಂದ ಹೊಸ ದೇವಿಯ ಮೂರ್ತಿಯನ್ನು
ಗುಡಿಯಲ್ಲಿ ಪ್ರತಿಷ್ಠಾಪಿಸಿ ಸ್ವಾಮಿಗಳ ಕೃಪೆಗೆ ಪಾತ್ರರಾದರು. ಆಗ
ದೇವಿಯ ವಿಗ್ರಹ ಮಾಡಿಸಿಕೊಂಡು ಬಂದ ಅಳಣಾವರ ಸಾಹುಕಾರನು

ತನ್ನ ಕನಸಿನಲ್ಲಿ ಮಡಿವಾಳೇಶ್ವರ ಶಿವಯೋಗಿಗಳು ಬಂದು ಮಾರಿಕಾಂಬಾ ದೇವಿಯನ್ನು ಮಾಡಿಸಿ ಗಂದಿಗವಾಡ ಗ್ರಾಮಕ್ಕೆ ಸಲ್ಲಿಸಿದರೆ ನಿನ್ನ ಹೊಟ್ಟೆ ನೋವು ವಾಸಿಯಾಗುವದೆಂದು ತಿಳುಹಿಸಿದರು. ನಂತರ ಅವರ ಶ್ರೀವಾಣಿ ಯಂತೆ ನನ್ನ ಹೊಟ್ಟೆನೋವು ಮಾಯವಾಗಿದೆ ಎಂದು ಕೂಡಿದ ಭಕ್ತ ಜನರ ಸಮ್ಮುಖದಲ್ಲಿ ಅವನು ಆನಂದದಿಂದ ಹೇಳಿದನು.

ಆಗ ಭಕ್ತರು ಸ್ವಾಮಿಗಳ ಮಹಿಮೆಯನ್ನು ಕೊಂಡಾಡಿ ಅವರ ಆಶೆ ಯಂತೆ ಸಂಚಾರ ಸಿದ್ಧತೆಗೆ ಅನುಕೂಲ ಮಾಡಿ ಗಂದಿಗವಾಡದಿಂದ ಈರ್ವರೂ ಯೋಗೀಶ್ವರನನ್ನು ಸಂತಸದಿಂದ ಬೀಳ್ಕೊಟ್ಟರು.

....

೪೭ ನೆಯ ಪ್ರಕರಣ

ನಾಗಲಿಂಗಪ್ಪನವರಿಂದ ಅನಾಥನ ಬಾಳು ಮಂಗಲಮಯವಾದದ್ದು

ಶ್ರೀಗುರು ಮಡಿವಾಳೇಶ್ವರ ಸ್ವಾಮಿಗಳೂ ನಾಗಲಿಂಗಪ್ಪನವರೂ ಅತ್ಯಂತ ಹತ್ತಿರದ ಬಂಧುಗಳಂತೆ ಸಂಚಾರದಲ್ಲಿ ಹೊಂದಿಕೊಂಡು ವಿವಿಧ ಪವಾಡಗಳನ್ನೆಸಗುತ್ತ ಭಕ್ತ ಜನರ ಆಶೆ ಆಕಾಂಕ್ಷೆಗಳನ್ನು ಪೂರೈಸುತ್ತ ಮುತ್ತಳ್ಳಿ ಎಂಬ ಗ್ರಾಮಕ್ಕೆ ಬಂದು ಬಸವಣ್ಣ ದೇವರ ಗುಡಿಯಲ್ಲಿ ಗುಡ ಗುಡಿ ಸೇದಿ ಆನಂದದಿಂದ ಸುಖನಿದ್ರೆ ಹೊಂದಿದರು. ಅಷ್ಟರಲ್ಲಿ ರಾತ್ರಿ ನಾಲ್ಕು ತಾಸು ಮಿಕ್ಕಿರಬಹುದು ಆಗ ಓರ್ವ ತರುಣ ಅನಾಥನು ಸಂಸಾರದ ಆಸೆಗೆ ನೀರು ಬಿಟ್ಟು ತಿರಿದು ತಿನ್ನುವ ತನಗೆ ಹೆಂಡತಿ ಮಕ್ಕಳ ಭಾಗ್ಯ ಸುಖ ಅಸಾಧ್ಯವಾಯಿತಲ್ಲಾ ನಾನೇಕೆ ಕಡು ಬಡತನದ ಗೋಳಿನಲ್ಲಿ ಹುಟ್ಟಿ ಬಂದೆನೋ ಏನೋ, ಹುಟ್ಟಿಸಿದ ದೇವರಿಗೆ ನನ್ನ ಬಗ್ಗೆ ಸ್ವಲ್ಪಾದರೂ ಕರುಣೆ ಬೇಡವೇ ಎಂದು ವ್ಯಸನದ ಉಸುರುಗರೆಯುತ್ತ ಅದೇ ಬಡವನ ಗುಡಿಗೆ ಬಂದ ಯೋಗಿ ಶಿವಯೋಗಿಗಳೀರ್ವರು ಮಲಗಿಕೊಂಡ ಕೆಳಗಡೆಯ ಪಠಾಂಗ ಣದಲ್ಲಿ ಮರಗುತ್ತ ಗುರುವೇ ಮಡಿವಾಳೇಶ್ವರಾ ನೀನೇ ಕಾಪಾಡಬೇಕು ತಂದೆ ಎಂದು ಮಡಿವಾಳೇಶ್ವರರ ದರ್ಶನ ಲಾಭವನ್ನು ಪಡೆಯದಿದ್ದರೂ

ಅವರ ಅನೇಕ ಲೀಲೆಗಳನ್ನು ಕೇಳಿ ತಿಳಿದ ಸ್ವಾಮಿಗಳ ಬಗ್ಗೆ ಭಕ್ತಿ ಭಾವ ಉತ್ಪತ್ತಿಯಾಗಿ ಮಲಗುವಾಗ ಏಳುವಾಗ ಶ್ರೀಸ್ವಾಮಿಗಳು ನಾಮಸ್ಮರಣೆಗೈದ ಪರಿಪಾಠದವನಾಗಿದ್ದನು. ಅಂತೇ ಶಿವಯೋಗಿಗಳ ನಾಮೋಚ್ಚಾರಗೈದು ಮಲಗಿದನು.

ಆದರೆ ಬಾಳಿನ ಬೇಗುದಿಯಲ್ಲಿ ಬೆಂದು ಜೀವನವೇ ಬೇಸರವೆನಿಸಿದ ಆತನಿಗೆ ಅಷ್ಟೊಂದು ತೀವ್ರ ನಿದ್ರೆ ಆವರಿಸದಾಯಿತು ಬಳಿಕ ಕೆಲವು ಸಮಯದಲ್ಲಿ ನಾಗಲಿಂಗಪ್ಪನವರಿಗೆ ಮೂತ್ರ ವಿಸರ್ಜನೆಯ ಆಶೆಯಾಗಿ ಮಡಿವಾಳೇಶ್ವರ ಸ್ವಾಮಿಗಳನ್ನು ಎಬ್ಬಿಸುತ್ತ ಗುಡಿಯ ಹೊರಗೆ ಹೋಗಿ ಮೂತ್ರ ಬಿಟ್ಟು ಬಂದು ಮಲಗೋಣ ಬಾ ಎಂದು ಕರೆದರು. ಆಗ ಸ್ವಾಮಿಗಳು—ನಿನ್ನ ಉಪದ್ರವ ಅತಿಯಾಯಿತು. ಅಲ್ಲೇ ಹೊಯ್ದು ಸುಮ್ಮನೇ ಮಲಗು ಎಂದರು. ಆಗ ನಾಗಲಿಂಗಪ್ಪನವರು ಮಡಿವಾಳೇಶ್ವರ ಸ್ವಾಮಿಗಳ ನುಡಿಯಲ್ಲಿ ಅಡಕವಾದ ಮರ್ಮವನ್ನು ಅರಿತು ಅಲ್ಲೇ ಮಲಗಿಕೊಂಡು ಮೂತ್ರ ವಿಸರ್ಜನೆ ಮಾಡಿದರು. ಆಗ ಕೆಳಗಡೆ ಮಲಗಿದ ಆ ತರುಣನ ಮೈಮೇಲೆ ಮೂತ್ರವು ಬಿದ್ದದ್ದರಿಂದ ಈ ಹೊತ್ತಿನಲ್ಲಿ ಬಿಸಿ ಜಲ ಅದೆಲ್ಲಿಂದ ಬಂತು, ಅಂದ ಮೇಲೆ ಇದು ಮೇಲೆ ಮಲಗಿದವರು ಮೂತ್ರ ವಿಸರ್ಜಿಸಿದ ಬಿಸಿ ಜಲವೆಂದು ತರ್ಕಿಸಿ—ಯಾವನೋ ನೀನು ಮಲಗಿಕೊಂಡೇ ಮೂತ್ರ ಬಿಡುವದೇನು ಕೆಳಗಡೆ ಮಲಗಿದವರನ್ನು ನೋಡಬಾರದೇ ಎಂದು ಬಿರುಸಿನಿಂದ ನುಡಿದು ಎದ್ದು ಕುಳಿತನು. ಅವನ ಬಿರುಸಿನ ನುಡಿಯನ್ನು ಕೇಳಿದ ಸ್ವಾಮಿಗಳು ಅನಾಥನನ್ನು ಮಾತನಾಡಿಸುತ್ತ ಎಲ್ಲವೋ ಅವಿವೇಕಿ ನಿನ್ನ ಮೈಮೇಲೆ ಸುರಿದು ಬಟ್ಟೆ ತೊಯಿಸಿದ್ದು ಮೂತ್ರವಲ್ಲವೋ ಸುರಗಿ ನೀರು ಎರೆದುಕೊಂಡಿರುವಿ ಎಂದು ಅವನ ಮುಂದಿನ ಭವಿಷ್ಯ ಜೀವನದ ಇತಿಹಾಸವನ್ನೇ ಅರುಹಿದರು.

ಮುಂದೆ ಸ್ವಾಮಿಗಳ ಶ್ರೀವಾಣಿಯಂತೆ ಶ್ರೀಮಂತ ಶೆಟ್ಟರೊಬ್ಬರು ಆ ಅನಾಥ ತರುಣನಿಗೆ ತಮ್ಮ ಮಗಳನ್ನು ಕೊಟ್ಟು ಮದುವೆ ಮಾಡಿದರಲ್ಲದೇ ಅಳಿಯತನಕ್ಕೆ ಮನೆಯಲ್ಲಿಯೇ ಉಳಿದುಕೊಂಡು ತನ್ನ ಸರ್ವ ಸಂಪತ್ತಿನ ಒಡೆಯನನ್ನಾಗಿ ಮಾಡಿದರು. ಬಳಿಕ ತರುಣನಾದರೂ ಸ್ವಾಮಿಗಳನ್ನು ನಾಗಲಿಂಗಪ್ಪನವರನ್ನು ಹುಡುಕಿ ಅವರ ದರ್ಶನಾಶೀರ್ವಾದಗಳನ್ನು ಪಡೆದು

ವಲ್ಲದೆ ನಂಬಿದವರ ಪಾಲಿನ ಕಾಮಧೇನು,ಕಲ್ಪವೃಕ್ಷ ತಾನೆಂದು ತನ್ನ ಮಹಿಮೆ ಯಿಂದ ನನ್ನ ಕಡುಬಡತನ ದೂರಾಗಿ ಶ್ರೀಮಂತ ಶೆಟ್ಟರ ಅಳಿಯನಾಗಿ ಬಾಳು ವಂತಾಯಿತು. ತಂದೆ ಗುರುವೇ ಮಡಿವಾಳೇಶ್ವರಾ ನನ್ನ ಅಲ್ಪ ಆತಿಥ್ಯಕ್ಕೆ ಆಗ ಮಿಸಬೇಕೆಂದು ಬೇಡಿಕೊಳ್ಳಹತ್ತಿದನು.

ಆಗ ಸ್ವಾಮಿಗಳು ನಾಗಲಿಂಗಪ್ಪನವರನ್ನು ತೋರಿಸುತ್ತ ನಿನ್ನ ಮಂಗಲಮಯ ಬದುಕು ಉಜ್ವಲವಾಬೇಕಾದರೆ ಈ ಕಿಡಿಗೇಡಿ ನಾಗ ಲಿಂಗನು ಕಾರಣನಾದನು, ಕಾರಣ ಈತನನ್ನು ಆದರಿಸಿ ಸತ್ಕರಿಸುವದು ನಿನ್ನ ಧರ್ಮವೆಂದು ಅಪ್ಪಣೆ ಮಾಡಿದರಲ್ಲದೆ ಪ್ರತಿ ವರ್ಷ ತಪ್ಪದೇ ನೂರೊಂದು ಗಣಂಗಳಿಗೆ ಅನ್ನ ಸಂತರ್ಪಣೆಯಿಂದ ತೃಪ್ತಿಪಡಿಸಿ ದಾನ ಧರ್ಮದಿಂದ ಸಂತುಷ್ಟರನ್ನಾಗಿಸಿ, ನಿನ್ನ ಬಾಳಿನ ಇತಿಹಾಸವನ್ನು ಮುಕ್ತ ಗೊಳಿಸುವವನಾಗೆಂದು ಆಶೀರ್ವದಿಸಿ ಮುಂದಿನ ತಮ್ಮ ಪಯಣವನ್ನು ಬೆಳೆಯಿ ಸಿದರು. ಇತ್ತ ಅನಾಥ ಭಕ್ತನು ಸ್ವಾಮಿಗಳ ಅಪ್ಪಣೆಯಂತೆ ನಡೆದುಕೊಂಡು ಸುಖದಿಂದ ಬಾಳಿದನು.

....

೪೮ ನೆಯ ಪ್ರಕರಣ

ಕುದಿಯುವ ಕಾಜಿನ ರಸವನ್ನು ಕುಡಿದದ್ದು

ಸಂಚರಿಸುತ್ತ ಬಂದ ಯೋಗಿಗಳು ಮತ್ತೊಂದು ಹಳ್ಳಿಗೆ ಬಂದರು. ರಾತ್ರಿಯಾದ ಪ್ರಯುಕ್ತ ವಸತಿಗಾಗಿ ಮಠಮಂದಿರಗಳನ್ನು ಶೋಧಿಸುವವರಾ ದರು. ಬಳಿಕ ನಾಗಲಿಂಗಪ್ಪನು ಮಿಣುಕು ದೀಪದಿಂದ ವಿರಾಜಿಸುತ್ತಿದ ಚಾವಡಿ ಯನ್ನು ಕಂಡು—ಮಡಿವಾಳಾ ಅಲ್ಲಿ ಯಾರೂ ಇದ್ದಂತಿಲ್ಲ. ಬಹುತೇಕ ಅದು ಈ ಊರ ಚಾವಡಿಯಂತೆ ತೋರುವದು. ಅಲ್ಲಿ ಉಳಿದು ಊಳಗದ ಕಾರ್ಯ ಮಾಡುವದು ಹಳಬರ ಕರ್ತವ್ಯ ಆದರೆ ಹಳಬನ ಮಯಾ ಸೂಳೆಯ ಮನೆಯಲ್ಲಿ ಬಿದ್ದಿರುವನೋ ಏನೋ ಅದಕ್ಕಾಗಿ ಅವನ ಪಾಲಿನ ಕರ್ತವ್ಯವನ್ನು ಇಂದು ನಾವು ತೀರಿಸೋಣ ಬಾ ಎಂದು ಸ್ವಾಮಿಗಳನ್ನು ಚಾವಡಿಗೆ ಕರೆದುಕೊಂಡು ಬಂದು ಅಲ್ಲಿ ಮಲಗಿದರು.

ಬಳಿಕ ಕೆಲವು ಸಮಯದಲ್ಲಿ ಹಳಬನ ಪ್ರೇಯಿಸಿ ತನ್ನ ಪ್ರಿಯ ಪುರುಷನಿಗಾಗಿ ಕರಿಗಡಬಿನ ಬುತ್ತಿ ಕಟ್ಟಿಕೊಂಡು ಚಾವಡಿಗೆ ಬಂದಳು. ಅವರು ಊರಲ್ಲಿ ಇಲ್ಲವೆಂಬುದನ್ನು ಅರಿಯದ ಅವಳು ಅವಸರವಸರದಿಂದ ಹಳಬನ ಸ್ಥಾನದಲ್ಲಿ ಮಲಗಿದ ನಾಗಲಿಂಗಪ್ಪನವರ ಹತ್ತಿರ ಬಂದು ತನ್ನ ಪ್ರಿಯತಮನೇ ಎಂದು ಭಾವಿಸಿ ಬುತ್ತಿಗಂಟು ತಲೆದಿಂಬಿಗೆ ಇಟ್ಟು ಎಚ್ಚರ ಗೊಳಿಸಿ ನನ್ನನ್ನು ಮನೆಯಲ್ಲಿ ಕಾಯುತ್ತಾರೆ, ನೀನು ಊಟ ಮಾಡು ಎಂದು ಹೇಳಿ ಹೊರಟು ಹೋದಳು.

ಬಳಿಕ ನಾಗಲಿಂಗಪ್ಪನವರು ಎದ್ದು ನೋಡುತ್ತಾರೆ ಬಿಸಿ ಬಿಸಿ ಕರಿಗಡಬು ಹಸಿವು ಮುನ್ನುಗ್ಗಿ ಕಾಡುತ್ತಿದ್ಧ ಸಮಯದಲ್ಲಿ ಕರಿಗಡಬು ಸಿಕ್ಕರೆ ಯಾರು ಬಿಟ್ಟಾರು ಎಂದವರು ಮಡಿವಾಳೇಶ್ವರ ಸ್ವಾಮಿಗಳನ್ನು ಕೂಗದೇ ತಾವೇ ಹೊಡೆದು ಮುಖ ಮೇಲೆ ಮಾಡಿ ಮಲಗಿ ಸುಖನಿದ್ರೆಗೈದರು. ಇದೆಲ್ಲವನ್ನು ಎಚ್ಚರವಾಗಿದ್ದು ನೋಡುತ್ತಿದ್ದ ಶಿವಯೋಗಿಗಳು ಬೆಳಗಿನವರೆಗೆ ಕಾಲ ಕಳೆದು ಬೆಳಗಾದ ಕೂಡಲೇ ನಾಗಲಿಂಗಪ್ಪನವರನ್ನು ಎಚ್ಚರಗೊಳಿಸಿ ನಾಗಲಿಂಗಾ ಹಸಿವೆಯ ತಾಪದಲ್ಲಿ ತಡವರಿಸುತ್ತ ಮಲಗಿದಾಗ ತನ್ನಿಂದ ತಾನೇ ಸಿಹಿ ಭೋಜನ ದೊರೆಯಿತಲ್ಲಾ ನೀನು ನಿಜವಾಗಿ ಸುದೈವಿ ಎಂದು ತಮ್ಮ ಹಸಿವೆಯ ಬಾಧೆಯನ್ನು ವ್ಯಕ್ತಪಡಿಸಿ, ಈಗ ಏನು ಮಾಡೋದ ಹೇಳಲೇ ಎಂದು ಸಿಟ್ಟಿಗೆದ್ದರು.

ಆಗ ನಾಗಲಿಂಗಪ್ಪನವರು ಮನದಲ್ಲಿ ನಗುತ್ತ—ಏ ಮಡಿವಾಳಾ ನಿನಗೆ ಹೊಟ್ಟೆಕಿಚ್ಚೇನು ಎಂದು ಹಾಸ್ಯ ಮಾಡುತ್ತ ನಡಿ ನಡಿ ಭಿಕ್ಷೇ ಮಾಡಿ ತಂದು ತಿನ್ನುವಿಯಂತೆ ಎಂದು ವತ್ಸಾಯದಿಂದ ಸ್ವಾಮಿಗಳನ್ನು ಕರೆದುಕೊಂಡು ಊರಲ್ಲಿ ಭಿಕ್ಷೆಗೆ ಹೊರಟರು.

ಓಣಿಯಲ್ಲಿ ಭಿಕ್ಷೆಗಾಗಿ ಹೊರಟ ಈರ್ವರೂ ಬಳಿಗಾರ ಸಂದಿಗೆ ಬಂದರು. ಆಗ ಬೆಳಗಿನ ಸಮಯದಲ್ಲಿ ಭಿಕ್ಷೆಯನ್ನು ಯಾರು ನೀಡಬೇಕು ಬಳಿಕ ಒಂದೊಂದು ಮನೆಯನ್ನು ದಾಟುತ್ತ ಬಳಿಗಾರ ಮರಚಪ್ಪನ ಮನೆಗೆ ಬಂದರು. ಆಗ ಆತನು ಬಳೆಗಳನ್ನು ಸಿದ್ಧಪಡಿಸುವದಕ್ಕಾಗಿ ಕಾಜು ಕರಗಿಸುತ್ತ ಕುಳಿತುಕೊಂಡಿದ್ದನು. ಅವನ ಮನೆಗೆ ಬಂದು ಸ್ವಾಮಿಗಳ

ಭಿಕ್ಷೆಯನ್ನು ಕೇಳಿದರು. ಆಗ ಮರಚಪ್ಪನು ಸಿಡಿಮಿಡಿಗೊಳ್ಳುತ್ತ ಅಯ್ಯಾ ಇದು ಕಾಜು ಕರಗಿಸುವ ಕುಲುಮೆ ಮನೆ. ಇಲ್ಲೇನು ಭಿಕ್ಷೆ ನೀಡಬೇಕು ಎಂದು ಸಿಟ್ಟಿನಿಂದ ನುಡಿದನು.

ಆಗ ಶಿವಯೋಗಿಗಳು ಏನೇ ಇದ್ದರೂ ನೀಡು ಎಂದು ಅಗ್ರಹಪಡಿಸ ಹತ್ತಿದರು. ಆಗ ಮರಚಪ್ಪನು ಮತ್ತಷ್ಟು ಸಿಟ್ಟಿನಿಂದ ಏನು ಹಟವಾದಿಯೋ ನೀನು ಹಾಗಾದರೆ ಹಿಡಿ ಈ ಕಾಜಿನ ರಸವನ್ನೇ ಕುಡಿ ಎಂದು ಚಮಟಿಗೆಯಿಂದ ರಸತುಂಬಿ ಕುದಿದ ಮುಸಿಯನ್ನು ಮೇಲೆತ್ತಿದನು. ಆಗ ಮಡಿವಾಳಪ್ಪನವರು ಅಡ್ಡಿಯಿಲ್ಲ ಹಾಕೋ ಹಸಿವೆ ಬಹಳವಾಗಿದೆ ಅದನ್ನೇ ಕುಡಿಯುವೆನು ಹಾಕು ಎಂದು ಬೊಗಸೆ ಒಡ್ಡಿದರು. ಬಳಿಕ ಮರಚಪ್ಪನು ಅನಿವಾರ್ಯವೆಂದು ಮಣಿದು ರಸವನ್ನು ಬೊಗಸೆಯಲ್ಲಿ ಹನಿಸಿದನು. ಆಗ ಮಡಿವಾಳೇಶ್ವರ ಸ್ವಾಮಿಗಳು ಗಟಗಟನೆ ಕಾಜಿನ ರಸವನ್ನು ಹೀರಿ ತಮ್ಮ ಅದೊದ್ವಾರದಿಂದ ಹೊರಹಾಕಿದರು. ಆಗ ಬಳೆಗಾರ ಮರಚಪ್ಪನು ಭಯ ಮಿಶ್ರಿತ ಧ್ವನಿಯಲ್ಲಿ ಅಯ್ಯೋ ಇವರು ಸಾಮಾನ್ಯರಲ್ಲ ದೇವಾಂಶ ಸಂಭೂತ ಮಹಾತ್ಮರೆಂದು ಅರಿತುಕೊಂಡು ಭಕ್ತಿ ಭಾವದಿಂದ ನಮಸ್ಕರಿಸುತ್ತ, ತನ್ನ ಮನೆಯಲ್ಲಿ ಈರ್ವರೂ ಯೋಗೀಶ್ವರರನ್ನು ಮೃಷ್ಟಾನ್ನ ಭೋಜನದಿಂದ ತೃಪ್ತಿಪಡಿಸಿ ಅವರ ಆಶೀವಾದ ಪಡೆದು ಸುಖ ಸಂಪತ್ತಿನಿಂದ ಬಾಳುವವನಾದನು. ನಂತರ ಸ್ವಾಮಿಗಳು ಸಂಚಾರವನ್ನು ಮುಂದುವರೆಯಿಸಿ ಸಾಗುವವರಾದರು.

....

೪೯ ನೇ ಪ್ರಕರಣ

ಮಲವನ್ನು ಬಂಗಾರವನ್ನಾಗಿಸಿದ್ದು

ಸಂಚಾರದಲ್ಲಿ ಸಾಗಿದ ಈರ್ವರಲ್ಲಿಯೂ ಕೆಲವು ತತ್ವಗಳಿಗಾಗಿ ವಾದ—ವಿವಾದ ಸುರುವಾಯಿತು. ಬರುಬರುತ್ತ ಇವರ ವಾದ ಈರ್ಷೆಗೆ ಮಾರ್ಪಟ್ಟು ಮನಸ್ತಾಪವಾಗಿ ನಾಗಲಿಂಗಪ್ಪನವರು ಸಿಟ್ಟು ಶಿಷ್ಯಗಳಿಂದ ಕೂಡಿದವರಾಗಿ ಮಡಿವಾಳೇಶ್ವರ ಸ್ವಾಮಿಗಳಿಂದ ಬೇರೆಯಾಗಿ ಬೇರೊಂದು ಕಡೆಗೆ ಹೊರಟು ಹೋದರು. ಬಳಿಕ ಶಿವಯೋಗಿಗಳು ಜಂಬಲ ಪೂರದತ್ತ ಸಾಗಿ

ಒಬ್ಬರೇ ಜಬಲಪುರ ಗ್ರಾಮಕ್ಕೆ ಬಂದರು. ಆದರೂ ಸ್ವಾಮಿಗಳ ಮನಸ್ಸು ನಾಗಲಿಂಗಪ್ಪನವರನ್ನು ಮರೆತು ಬಿಡದಷ್ಟು ವ್ಯಾಕುಲಗೊಂಡಿತ್ತು. ಹನುಮನ ಪಾಳು ದೇವಾಲಯದಲ್ಲಿ ಅವರು ಅಸ್ತವ್ಯಸ್ತರಾಗಿ ಕುಳಿತುಕೊಂಡರು.

ಆಗ ಮಾರುತಿರಾಯನ ದರ್ಶನಕ್ಕೆಂದು ಬಂದ ವಿಧವೆ ಗೌಡತಿಯು ಸ್ವಾಮಿಗಳನ್ನು ಕಂಡು ಪೂಜ್ಯ ಭಾವನೆಯಿಂದ ನಮಸ್ಕರಿಸಿ ತನ್ನ ಮನೆಗೆ ಬಂದು ಆತಿಥ್ಯವನ್ನು ಸ್ವೀಕರಿಸಬೇಕೆಂದು ಬೇಡಿಕೊಳ್ಳಹತ್ತಿದಳು. ಆಗ ಸ್ವಾಮಿಗಳು ಆ ಹೆಣ್ಣುಮಗಳನ್ನು ಪರೀಕ್ಷಿಸುವ ಉದ್ದೇಶದಿಂದ—ಅವ್ವಾ ನಮ್ಮ ಸ್ವಭಾವ ವಿಚಿತ್ರ, ಕೆಲವು ಚಟಗಳೆ ಅಧೀನರಾದ ನಮ್ಮ ದುಷ್ಟ ವರ್ತನೆ ನಿನಗೆ ಬೇಸರವನ್ನುಂಟು ಮಾಡಬಹುದು ನೋಡು ಈಗಲೇ ಇನ್ನಷ್ಟು ವಿಚಾರ ಮಾಡಿಕೊಂಡು ನಮ್ಮನ್ನು ಆದರಿಸುವ ಮನಸ್ಸು ಮಾಡುವವಳಾಗೆಂದು ನುಡಿದರು.

ಆಗ ಗೌಡತಿಯು ಮತ್ತಷ್ಟು ಭಕ್ತಿಯಿಂದ—ಬುದ್ಧಿ ತಮಗೇನೇ ದುರಭ್ಯಾಸವಿದ್ದರೂ ಅವುಗಳನ್ನು ಸಹಿಸುವ ಸಾಮರ್ಥ್ಯವು ತಮ್ಮ ಆಶೀರ್ವಾದದಿಂದ ಬಲವಾಗಿದೆ, ತಾವು ದಯಮಾಡಿ ಮನೆಗೆ ಬರಬೇಕೆಂದು ಬೇಡಿಕೊಳ್ಳಹತ್ತಿದಳು. ಬಳಿಕ ಸ್ವಾಮಿಗಳು ಗೌಡತಿಯ ಬೇಡಿಕೆಯನ್ನು ಮಾನ್ಯ ಮಾಡಿ ಅವಳ ಮನೆಗೆ ಹೋದರು. ಆಗ ಗೌಡತಿಯು ಸ್ವಾಮಿಗಳನ್ನು ಸಕಲ ಮರ್ಯಾದೆಗಳಿಂದ ಸತ್ಕರಿಸಿ ಕುತನಿ ಗಾದಿಯಲ್ಲಿ ಕುಳ್ಳಿರಿಸಿ ಉಪಚಾರಗೈದಳು.

ಗಾದಿಯಲ್ಲಿ ಕುಳ್ಳಿರಿಸುವದೇ ತಡ ಸ್ವಾಮಿಗಳು ಗಾದಿಯ ಮೇಲೆ ಮಲವಿಸರ್ಜನೆ ಮಾಡುವವರಾದರು ಅದನ್ನು ಕಂಡು ಗೌಡತಿಯು ಸ್ವಲ್ಪೂ ಬೇಸರಿಸದೇ ಮಲವನ್ನು ಬಳಿದು ತಿಪ್ಪಿಯಲ್ಲಿ ಚೆಲ್ಲಿ ಬಂದಳು. ಬಳಿಕ ಬೇರೊಂದು ರತ್ನಗಂಬಳಿಯ ಆಸನವನ್ನು ಸಿದ್ಧ ಪಡಿಸಿ ಅದರ ಮೇಲೆ ಸ್ವಾಮಿಗಳನ್ನು ಕುಳ್ಳಿರಿಸಿದಳು. ಅಲ್ಲಿಯೂ ಶಿವಯೋಗಿಗಳು ಮಲವಿಸರ್ಜನೆಗೈದು ಮಲಿನಗೊಳಿಸಿದರು. ಆಗಲೂ ಗೌಡತಿಯು ಸ್ವಾಮಿಗಳನ್ನು ತಾತ್ಸಾರ ಭಾವದಿಂದ ತಿರಸ್ಕರಿಸದೇ ತನ್ನ ನಿತ್ಯ ನೇಮದಂತೆ ಮಲವನ್ನು ತಿಪ್ಪಿಯಲ್ಲಿ ಚೆಲ್ಲಿ ಯಥಾ ಪ್ರಕಾರ ಅವರ ಉಪಚಾರ ಮಾಡಹತ್ತಿದಳು. ಆಗ ಸ್ವಾಮಿ

ಗಳು ಗೌಡತಿಯ ಭಕ್ತಿಗೆ ಮೆಚ್ಚಿ ತಮ್ಮ ಭೋಜನ ತೀರಿಸಿಕೊಂಡು ತಾವು ಸಂಚಾರಕ್ಕೆ ಹೊರಡುವದಾಗಿ ತಿಳಿಸಿ ಹೊರಟು ನಿಂತರು. ಆಗ ಗೌಡತಿಯು ಸ್ವಾಮಿಗಳ ಪಾದಗಳಿಗೆ ನಮಸ್ಕರಿಸಿ-ಬುದ್ಧಿ ತಮ್ಮ ಇರವು ಅರಿಯದ ನನಗೆ ಮತ್ತೆ ತಮ್ಮ ದರ್ಶನ ದೊರೆಯುವದು ಹೇಗೆ, ನನಗೆ ಬಾಳಿನ ಕ್ರಮವನ್ನು ತಿಳಿಸಿ ಉದ್ಧಾರಗೊಳಿಸುವ ಕೃಪೆಯಾಗಬೇಕೆಂದು ಬೇಡಿಕೊಳ್ಳಹತ್ತಿದಳು. ಆಗ ಸ್ವಾಮಿಗಳು ತಮ್ಮ ಮಲದಿಂದ ತುಂಬಿಹೋದ ತಿಪ್ಪಿಯನ್ನು ತೋರಿಸಿ ಅಲ್ಲಿರುವ ತಮ್ಮ ಮಲವನ್ನಷ್ಟೇ ತಂದು ಮನೆಯಲ್ಲಿಟ್ಟುಕೋ ಎಂದು ಹೇಳಿದರು. ಅದರಂತೆ ಗೌಡತಿಯು ತಿಪ್ಪಿಯಲ್ಲಿ ಚೆಲ್ಲಿಬಂದ ಮಲವನ್ನು ತರಲಿಕ್ಕೆ ಹೋಗಿ ನೋಡಲು ಶಿವಯೋಗಿಗಳ ಮಲವೆಂದು ತಿಳಿದುಕೊಂಡಿದ್ದೆಲ್ಲವೂ ಬಂಗಾರವಾಗಿ ಕಂಗೊಳಿಸುವದಾಯಿತು. ಆಗ ಅವಳು ಅದನ್ನು ತಂದು ಸ್ವಾಮಿಗಳ ಪಾದಕ್ಕೆ ಅರ್ಪಿಸಲು ಸ್ವಾಮಿಗಳು ಅಮ್ಮಾ ಈ ಬಂಗಾರವನ್ನು ನಿನ್ನ ಬಳಿಯಲ್ಲಿಸಿಕೊಂಡು ಅನಾಥ ಯಾತ್ರಿಕರಿಗೆ ಅನ್ನ ಸತ್ರವನ್ನು ಸಾಗಿಸು. ಅನ್ನದಾನದ ಮುಂದೆ ಇನ್ನಾವ ದಾನವೂ ಸಾಟಿಯಾಗದು ಎಂದು ತಿಳಿಸಿ ದಾನದ ಮಹಿಮೆಯಿಂದ ನಿನ್ನ ಕುಲ ಕೋಟಿಗಳು ಉದ್ಧಾರವಾಗುವದೆಂದು ತಿಳುಹಿಸಿ ಆಶೀರ್ವಾದ ಮಾಡಿ ಹೊರಟುಹೋದರು. ಮುಂದೆ ಸ್ವಾಮಿಗಳ ಬಲಯುತ ಆಶೀರ್ವಾದದಂತೆ ಸಿರಿ – ಸುಖ – ಸಂಪದಗಳ ಆಗರವೆನಿಸಿ ಅವಳ ಮನೆತನವೇ ಪಾವನವಾಯಿತು.

ಬಳಿಕ ಸ್ವಾಮಿಗಳು ಮಾರ್ಗಕ್ರಮಣಗೈದು ಮತ್ತೆ ಸಿದ್ಧನ ಗವಿಯ ತಮ್ಮ ತಾವಿಗೆ ಬಂದರು. ಅಲ್ಲಿ ಕಾಳು ತಿನ್ನುವ ಭಾವಾ ರಾಮಪ್ಪನು ಸ್ವಾಮಿಗಳ ಬರುವಿನಿಂದ ಆನಂದಿತನಾದನು.

…………

೫೦ ನೆಯ ಪ್ರಕರಣ

ಶಿಷ್ಯನು ಕಾಳು ತಿಂದು ಜೀವಿಸುವ ಬಾವಾ ಆದದ್ದು

ಸಿದ್ಧನ ಗವಿಯಲ್ಲಿ ವಾಸವಾಗಿದ್ದ ಸ್ವಾಮಿಗಳ ಜೊತೆಯಲ್ಲಿ ಸೇವೆ ಮಾಡಿಕೊಂಡಿದ್ದ ಕುರುಬರ ರಾಮಪ್ಪನು ಬರಬರುತ್ತ ಗುಗ್ಗರಿ ತಿಂದು ಜೀವಿಸುವ ಒಂದು ಸಾಧನೆಯನ್ನೇ ಮಾಡಹತ್ತಿದನು. ಎಲ್ಲವೂ ಶಿವಯೋಗಿ

ಗಳೆ ಇಚ್ಛೆಯೆಂದು ತಿಳಿದುಕೊಂಡಿದ್ದ ಆತನ ಚಿರ ಸ್ನೇಹಿತ ಕರಿಯಪ್ಪನು ಗುಗ್ಗರಿ ಆಹಾರ ಭುಂಜಿಸುತ್ತ ರಾಯಪ್ಪ ಜೀವ ಹಿಡಿದು ಕಾಲ ತಳ್ಳುವ ವಿಷಯವನ್ನು ಸ್ವಾಮಿಗಳಲ್ಲಿ ಅರಿಕೆ ಮಾಡಿಕೊಂಡನು.

ಆಗ ಎಲ್ಲವನ್ನೂ ಬಲ್ಲವರಾದ ಸ್ವಾಮಿಗಳು-ಏನೋ ರಾಯಾ-ಗುಗ್ಗರಿ ತಿಂದು ಜೀವಾಹಿಡಿದಿಯಾ ? ಎಂದು ನಸು ಮುನಿಸಿನಿಂದ ಕೇಳಿದರು. ಆಗ ರಾಮಪ್ಪನು ನಮ್ರಭಾವದಿಂದ ಬುದ್ಧಿ ಈ ಕೋಡಿಜೀವನಕ್ಕೆ ಏನು ಹಾಕಿದ ರೇನು ? ತಾವೆ ಹೇಳಿದಂತೆ ಈ ದೇಹಗಟಾ ಹರಕ ಪಾವು ಅಂದಮ್ಯಾಲೆ ಗುಗ್ಗರಿ ಏನು ಪಣಕಾಳು ಏನು ಎಂದು ಮಾತು ಮುಗಿಸುವವನಾದನು.

ಆಗ ಸ್ವಾಮಿಗಳು-ರಾಯ ಹರಕ ಪಾವು ಅನ್ನೋದು ತಿಳಿದಮ್ಯಾಲೆ ಹಾಕಿದರ ಕೆಳಗೆ ಸರದ ಹೋಗುತ್ತ ಅನ್ನೋದು ಗೊತ್ತು ಇದ್ನ ಯಾಕೆ ಸುಮ್ಮ ಸುಮ್ಮನ ಮ್ಯಾಲೆ ಹಾಕಿ ಕೆಳಗೆ ಸರದಹೋಗಿ ಹಾಳ ಆಗಬೇಕ ಬ್ಯಾಡಾ ಇನ್ನ ಮುಂದ ಜೀವಾ ಹಿಡಿಯೋ ಮಟ್ಟಿಗೆ ಪಣಕಾಳ ತಿಂದು ಜೀವಿಸುವ ಬಾವಾ ಆಗಿರು ಅದು ಬ್ಯಾಡ ಅಂತ ಹೇಳಬಹುದಿತ್ತು ಆದರೆ, ಆತ್ಮಾ ಮರುಗಿಸಿದ ಪಾಪಬರುತ್ತ. ಆತ್ಮನೇ ಪರಮಾತ್ಮನೆಂದು ಸ್ಮೃತಿ ವಚನವಿದ್ದ ಪ್ರಯುಕ್ತ ಈ ಜಗದ ಋಣ ಶಿವನ ಇಚ್ಛೆಯಂತೆ ಮುಗಿಯಬೇಕಲ್ಲಾ ಅವನ ಆಜ್ಞೆ ಇಲ್ಲದೆ ಹುಲ್ಲುಕಡ್ಡಿ ಮಿಸುಕಾಡೂದಕ್ಕೆ ಆಸ್ಪದ ಇಲ್ಲ ಇವತ್ತಿನಿಂದ ನೀನು ಕಾಳ ತಿನ್ನುಭಾವಾ ಆಗು ಎಂದು ದೇಹದ ಮೇಲಿನ ಮಮಕಾರ ಜೀವದ ಮೇಲಿನ ಹಂಗು, ಶರೀರವೆನ್ನುವದು ಹರಕು ಪಾವು ತಳಹೋದ ತಪೇಲಿ ಏನಿದೆಯೋ ಇಂಥಾ ನಿರುಪಯೋಗಿ ದೇಹದ ಮೇಲೆ ಆಸೆ ಮಾಡುವದರಿಂದ ಬರುವ ಭಾಗ್ಯವೇನೋ ಎಷ್ಟುದಿನ ಜತನ ಮಾಡಿದರೂ ಒಂದು ದಿವಸ ಎಲ್ಲಾನು ಇಲ್ಲೇ ಬಿಟ್ಟು ಮಣ್ಣಿನ ಕಾಯ ಮಣ್ಣಾಗಿ ಹೋಗು ವದು ಬಿಟ್ಟಿದ್ದಲ್ಲ. ಆದರೆ ಮಣ್ಣಗುಡಿ ಮಣ್ಣಾಗುವ ಮಾನವ ಜೀವಿ ಮಹಾ ದೇವನ ಪ್ರೀತಿ ವಿಶ್ವಾಸಗಳಿಗೆ ಪಾತ್ರವಾಗುವಂತೆ ಶ್ರದ್ಧಾ ಭಕ್ತಿಯಿಂದ ದುಡಿದು ಆತನ ಕೃಪೆಯಲ್ಲಿ ಮತ್ತೊಮ್ಮೆ ಪುಟ್ಟಬಾರದಂತೆ ಜೀವನ್ಮುಕ್ತನಾಗಬೇಕು ಎಂದು ಬೋಧಿಸಿದರು.

....

ಮಡಿವಾಳೇಶ್ವರರ ಇತರ ೨೦ ಪವಾಡಗಳು

೧. ಲಿಂಗಪೂಜೆಗಾಗಿ ಉಳುವೆಯಿಂದ ತುಂಬೀ ಹೂವು ತರಿಸುತ್ತಿದ್ದದ್ದು

ಬರುಬರುತ್ತ ಶಿವಯೋಗಿಗಳ ಮಹಿಮೆಯನ್ನು ಕೇಳಿದ ಭಕ್ತ ಬಳಗವು ಎಲ್ಲ ಕಡೆಯಿಂದಲೂ ಧಾವಿಸಿ ಬರುತ್ತ, ಬುದ್ಧಿ ನಮ್ಮ ಊರಲ್ಲಿ ಬಂದು ಉಳಿಯಲು ಕೃಪೆಯಾಗಬೇಕೆಂದು ಬಿನ್ನವಿಸಿಕೊಳ್ಳಹತ್ತಿದರು. ಆದರೆ ಸ್ವಾಮಿಗಳು ಮಾತ್ರ ಯಾವ ಆಸೆ ಆಕಾಂಕ್ಷೆಗಳಿಗೆ ಮೋಹಿತರಾಗದೆ ಕರೆಯಲು ಬಂದ ಸಕಲ ಭಕ್ತರಿಗೆ ಒಂದೇ ಉತ್ತರವೆಂದು– ಅಯ್ಯಾ ನಾವು ಶಿವನ ಆಜ್ಞೆಯಂತೆ ನಡೆಯತಕ್ಕವರು ಆತನು ಆಸೆಪಟ್ಟು ಕಳುಹಿದತ್ತ ಸಾಗುವದು ನಮ್ಮ ಮೂಲ ಗುರಿಯೆಂಬ ಹೇಳುತ್ತಿದ್ದರು. ಆದರೂ ಒಮ್ಮೊಮ್ಮೆ ಭಕ್ತರ ಮನನೋಯಿಸಬಾರದು ಎಂಬ ಸದಿಚ್ಛೆಯಿಂದ ಒಪ್ಪಿಕೊಂಡು ಹೋಗುತ್ತಿದ್ದರು. ಮರಳಿ ಮತ್ತೆ ತಮ್ಮ ನಿವಾಸವೆನಿಸಿದ ಸಿದ್ಧನ ಗವಿಗೆ ಬಂದು ಶಿಷ್ಯತ್ವವಹಿಸಿ ಬಾವಾ ಹಾಗೂ ಕರಿಯಪ್ಪರೊಡನೆ ಆಧ್ಯಾತ್ಮ ತತ್ವ ವಿಚಾರದಲ್ಲಿ ಕಾಲ ಕಳೆಯುತ್ತಿದ್ದರು. ಸ್ವಾಮಿಗಳು ನಿತ್ಯವೂ ತಮ್ಮ ಲಿಂಗ ಪೂಜೆಗಾಗಿ ಉಳುವೆಯ ಕ್ಷೇತ್ರದಿಂದ ತುಂಬೀ ಹೂವುಗಳನ್ನು ತರಿಸುತ್ತಿದ್ದರು. ಇದಕ್ಕೆ ಆಶ್ಚರ್ಯಪಟ್ಟ ಭಕ್ತರು ಇದು ಸತ್ಯವೇ ? ಎಂದು ವಿಚಾರಿಸಿದಾಗ ಅದಕ್ಕೆ ಬಾವಾ ಹೇಳುವದೇನೆಂದರೆ ಸ್ವಾಮಿಗಳು ಅದು ಹೇಗೆ ನನ್ನನ್ನು ಅಲ್ಲಿಗೆ ಮುಟ್ಟಿಸುವರೊ ನನಗೇ ತಿಳಿಯದಾಗಿದೆ ಮಡಿವಾಳೇಶ್ವರ ಸ್ವಾಮಿಗಳು ನನಗೆ ಆವುಗೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಮೆಟ್ಟಿದ ತಕ್ಷಣದಲ್ಲಿ ವಾಯುವೇಗದಲ್ಲಿ ಸಂಚಾರಗೈವ ಸ್ಫೂರ್ತಿ ಬರುತ್ತದೆ. ಮೂರು ತಾಸು ಇಲ್ಲಿಂದ ಹೋಗಿ ಬರಲಿಕ್ಕೆ ವೇಳೆ ಸಾಕು. ತುಂಬೀ ಹೂಗಳನ್ನು ತಂದು ಸ್ವಾಮಿಗಳಿಗೆ ಸಲ್ಲಿಸಿ ಆವುಗೆಗಳನ್ನು ಕಳಚಿದೊಡನೆ ನನ್ನ ನಡಿಗೆಯು ಪೂರ್ವಸ್ಥಿತಿಗೆ ಬರುತ್ತದೆ ಎಂದು ಹೇಳುತ್ತಿದ್ದನು. ಆದರೆ ಸ್ವಾಮಿಗಳನ್ನು ವಿಚಾರಿಸುವ ಧೈರ್ಯ ಯಾರಿಗೂ ಬರಲಿಲ್ಲ ಅಂತೇ ಮಹಿಮಾಶಾಲಿಗಳು ತಪೋನಿಷ್ಠ ಸದ್ಗುರು ಶಿವಯೋಗಿಗಳನ್ನು

ಕಡವಿ ಈ ಹಿಂದೆ ಶಿವಲಿಂಲಸರ್ಜದೊರೆ ಅನುಭವಿಸಿದ ದುರ್ಧರ ಪ್ರಸಂಗ ತಮಗೆ ಬರುವದು ಬೇಡವೆಂದು ಸುಮ್ಮನಾಗುತ್ತಿದ್ದರು.

....

೨. ಸ್ವಾಮಿಗಳನ್ನು ಪರೀಕ್ಷಿಸಲೆತ್ನಿಸಿದ ಸೇವಕರ ಮನೆಗಳಿಗೆ ಬೆಂಕಿ ಹತ್ತಿದ್ದು

ಒಮ್ಮೆ ವಕ್ಕುಂದ ನಾಯಕನು ಸ್ವಾಮಿಗಳನ್ನು ತಮ್ಮ ಊರಿಗೆ ಕರೆದು ಕೊಂಡು ಹೋಗಬೇಕೆಂದು ಸ್ವಾಮಿಗಳ ಸನ್ನಿಧಾನಕ್ಕೆ ಬಂದು ತನ್ನೂರಿಗೆ ದಯಮಾಡಿಸುವದಾಗಬೇಕೆಂದು ಬೇಡಿಕೊಳ್ಳಹತ್ತಿದನು. ಸ್ವಾಮಿಗಳು ನಾಯಕನ ಇಚ್ಛೆಯನ್ನು ನಿರಾಕರಿಸಬಾರದೆಂದು ವಕ್ಕುಂದಕ್ಕೆ ದಯ ಮಾಡಿಸಿದರು. ಅವರ ಸೇವೆಗೆಂದು ನಾಯಕರು ತಮ್ಮ ಆಪ್ತ ಸ್ನೇಹಿತ ಬಂಧುಗಳಾದ ಶಿವಲಿಂಗಪ್ಪ ಹಾಗೂ ಹೂಗಾರ ಗಂಗಣ್ಣ ಮತ್ತು ಹಲ್ವಿ ಮುದಣ್ಣ ಎಂಬುವವರನ್ನು ನೇಮಿಸಿದನು. ಸ್ವಾಮಿಗಳ ಸ್ನಾನಕ್ಕೆಂದು ನೀರು ಕಾಯಿಸುತ್ತಿದ್ದ ಅವರು ಮೂವರು ತಮ್ಮ ತಮ್ಮಲ್ಲಿ ಮಾತಾಡಿ ಕೊಳ್ಳುತ್ತ—ಅಲ್ಲಾ ಮುದಕಣ್ಣಾ ಸ್ವಾಮಿಗಳು ಸಳಮಳ ಹೊಯ್ದಾಡುವ ನೀರಿನಿಂದ ಸ್ನಾನ ಮಾಡುತ್ತಾರಂತೆ ಇವತ್ತು ಅದೇ ರೀತಿ ನೀರು ಕಾಯಿಸಿ ಶಿವಯೋಗಿಗಳನ್ನು ಪರೀಕ್ಷಿಸೋಣ ಎಂದು ಕುದಿಯುತ್ತ ಪುಟದೇಳುವ ಹಾಗೆ ನೀರು ಕಾಯಿಸಿ ಎಸರು ಬರುವಂತಾಗಿರಲು ಸ್ವಾಮಿಗಳು ಬಂದು ಕೊಪ್ಪಂಗೆಯಲ್ಲಿ ಲೀಲಾಜಾಲವಾಗಿ ಕೈ ಎದ್ದಿ ನೀರು ಇನ್ನೂ ತಣ್ಣಗಿವೆ ಇನ್ನಷ್ಟು ಕಾಯಿಸಿರೊ ಎಂದು ಮೈಗೆ ಎಣ್ಣೆಯನ್ನು ಹಚ್ಚಿಕೊಂಡರು ಬಳಿಕ ಕವಲುಗಟ್ಟೆಗೆಗೆ ಮಗಿ ಕಟ್ಟೆ ಕುದಿಯುವ ನೀರು ಹಾಕುತ್ತಿದ್ದ ಶಿವಲಿಂಗಪ್ಪ ಮುದಕಪ್ಪರು–ಬುದ್ಧಿ ನೀರು ಹೇಗಿವೆ ಎಂದು ಕೇಳಿದರು. ಆಗ ಸ್ವಾಮಿಗಳು ಮಕ್ಕಳೇ ಇನ್ನೂ ಚನ್ನಾಗಿ ಉರಿ ಹಚ್ಚಲಿಲ್ಲ ನೀವು ಎಂದರು. ಅಷ್ಟರಲ್ಲಿ ಆ ಮೂವರು ಸೇವಕರ ಮನೆಗಳಿಗೆ ಬೆಂಕಿ ಹತ್ತಿದೆ ಎಂದು ಕರೆಯಲಿಕ್ಕೆ ಬಂದರು. ಆಗ ಸೇವಕರಾಗಿದ್ದ ಮುದಕಪ್ಪ ಶಿವಲಿಂಗಪ್ಪ ಗಂಗಣ್ಣರು ಗಾಭರಿಯಿಂದ ಹತ್ತಿದ ಬೆಂಕಿಯನ್ನು ನಂದಿಸುವದಕ್ಕಾಗಿ ಮನೆಗಳತ್ತ ಸಾಗಬೇಕೆಂದರು. ಆದರೆ ಯಜಮಾನ ಎನಿಸಿದ ಮುದಕಪ್ಪನು ತನ್ನ

ತುಂಡು ಬಡಿಸಿರುವಾಗ ಕುರಿ ತಲೆ ಮಾಂಸದ ಮುದ್ದೆ ಎಂದು ಬಂದಿದ್ದಾರೆ ನನ್ನ ಮಕ್ಕಳು ಜಾತಿ ಕುಲ ಗೋತ್ರಗಳ ಗೊಂದಲದಲ್ಲಿ ಮೊದಲೇ ಕಣ್ಣು ಮುಚ್ಚಿದವರು, ತಿಂತು ಹೋಗು ಈಗ ನೀನೇ ಹೋಗಿ ಅವರ ತಟ್ಟೆಗಳನ್ನು ಪರೀಕ್ಷಿಸಿ ನೋಡು ಎಂದರು. ಬಳಿಕ ರಾಮಭಟ್ಟನು ಶಿವಯೋಗಿಗಳ ನುಡಿಯಂತೆ ಭೋಜನ ಗೃಹದಲ್ಲಿ ಹೋಗಿ ನೋಡಿದರೆ ಮೊದಲಿನಂತೆ ಹೋಳಿಗೆ, ಹುಗ್ಗಿ, ಚಾಳಿಕಣ್ಣುಗಳು ಕಂಗೊಳಿಸುತ್ತಿದ್ದವು.

ಆಮೇಲೆ ಯಾವತ್ತೂ ಬ್ರಾಹ್ಮಣ ಬಂಧುಗಳು ಸ್ವಾಮಿಗಳಲ್ಲಿ ಕ್ಷಮೆ ಯಾಚಿಸಿ ಸರಿ ಪಂಕ್ತಿಯಲ್ಲಿ ಕರೆದುಕೊಂಡು ಮಹಿಮಾ ಪುರುಷ ಮಡಿವಾಳೇಶ್ವರ ತಮ್ಮ ಲೀಲೆಯನ್ನು ಅದಾವ ರೀತಿ ಬಣ್ಣಿಸಿದರೂ ಕಡಿಮೆ ಎಂದು ಹಾಡಿ ಹೊಗಳುತ್ತ ಪಂಕ್ತಿಯನ್ನು ಸಾಗಿಸಿದರು.

....

೫. ಗುಂಡದ ನೀರು ಕುಡಿದ ಬಸವಲಿಂಗಪ್ಪನಿಗೆ ಶಾಪ

ಈಶ್ವರ ದೇವಾಲಯಕ್ಕೆ ಬಂದ ಶಿವಯೋಗಿಗಳು ಬಾವಾನನ್ನು ಕರೆದು ಲೇ ಕಾಳ ತಿಂದ ಜೀವಾ ಹಿಡಿದಿರೋ ಕನಿಗೇಡಿ ನಿನಗ ಇನ್ನೂ ಆ ಹರಕ ಪಾವಿನ ಮ್ಯಾಲಿರೋ ಮಮಕಾರ ಅಳದಿಲ್ಲ ಅಂತ ಕಾಣುತ್ತ ಸೊಗಲದ ಕೊಳ್ಳಕ್ಕೆ ಹೋಗಿ ಅಲ್ಲೇ ಇರು ಮತ್ತ ಇಚ್ಛೆಯಾದಾಗ ಕರಿಸಿಕೊಳ್ಳುತ್ತೇವೆ ಎಂದು ಅವನನ್ನು ಸೊಗಲ ಕ್ಷೇತ್ರಕ್ಕೆ ಕಳುಹಿಸಿದರು ಸಿದ್ಧರಾದರು ಮಡಿವಾಳೇಶ್ವರ ಸ್ವಾಮಿಗಳ ಆಜ್ಞೆಯಂತೆ ರಾಯಪ್ಪಬಾಬಾ ತುಟಿ ಎರಡು ಮಾಡದೆ ಹೊರಟು ನಿಂತನು. ಆಗ ಸ್ವಾಮಿಗಳು ಕಾಳ ತಿಂದ ಜೀವಹಿಡಿದಿರೋ ಬಾವಾ ಭಾರೋ ಇಲ್ಲಿ ಎಂದು ಕರೆದು ಈ ಈಶ್ವರ ದೇವಸ್ಥಾನದಲ್ಲಿ ಘಟಸರ್ಪವಿದೆ ಎಂದು ಯಾರಲ್ಲಿಯೂ ಉಸರದಿರು ಯಾಕೆಂದರೆ ಗುಡಿಗೆ ಬರುವ ಭಕ್ತರು ಭಯಗೊಂಡು ವಿಷ ಜಂತುವನ್ನು ನಾಶಗೊಳಿಸುವ ಹೊಂಚು ಹಾಕಿ ನಾಗರಾಜನನ್ನು ಕೊಲ್ಲಬಹುದು ಎಚ್ಚರ ಎಂದು ಹೇಳಿ ಕಳುಹಿಸಿದರು.

ಬಳಿಕ ಕೆಲವು ದಿವಸ ಸ್ವಾಮಿಗಳು ತಮ್ಮ ಲಿಂಗಪೂಜೆ ಅನುಷ್ಠಾನ ಯೋಗ ಸಾಧನೆಯಲ್ಲಿ ನಿಶ್ಚಿಂತವಾಗಿ ಉಳಿದುಕೊಂಡರು. ಗುಡಿಯ

ಸಮೀಪದಲ್ಲಿ ಭೂಮಿಯಿಂದ ಪುಟಿದೇಳುವ ನೀರಿನ ಗುಂಡುವೊಂದು ಸ್ವಾಮಿಗಳಿಗೆ ಮೆಚ್ಚಿಗೆಯ ಹೊಂಡವಾಗಿತ್ತು. ಒಂದು ದಿವಸ ನಗರದ ರೈತಜೀವಿ ಬಸವಲಿಂಗಪ್ಪ ಎಂಬಾತನು ಬಂದು ಹೊಂಡದಲ್ಲಿ ನೀರಸ್ನಾದರು ಕುಡಿದು ಹೋಗಬೇಕೆಂದು ಹೊಂಡಕ್ಕೆ ಬಂದನು. ದೇವಾಲಯದ ಹೊರಗಿನಗೋಡೆಗೆ ಆತ ಕುಳಿತು ಸ್ವಾಮಿಗಳನ್ನು ಕಂಡು ಆನಂದಗೊಂಡು ನಮ್ರಭಾವದಿಂದ ನಮಸ್ಕರಿಸಿ ನಿಂತುಕೊಂಡನು. ಆಗ ಸ್ವಾಮಿಗಳು ಬಾರಪಾ ಶಿವಾ ಒಳ್ಳೇದ ಮಾಡ್ಲಿ ಆದರೆ ನೀನು ಮಾತ್ರ ಈ ಗುಂಡುವೊಳಗಿನ ನೀರು ಕುಡಿಯ ಕೂಡದು ನೆನಪಿರಲಿ ಎಂದು ಆಶೀರ್ವದಿಸಿ ಕಳುಹಿಸಿದರು. ಬಳಿಕ ಅವನಾದರೂ ಕೆಲವು ದಿವಸ ಸ್ವಾಮಿಗಳು ಹೇಳಿದ ಮಾತಿಯನ್ನು ಸದಾ ಜಾಗ್ರತಿಯಲ್ಲಿ ಉಳಿಸಿಕೊಂಡು ಹತ್ತೆಂಟು ಸಾರೆ ಗುಡಿಗೆ ಬಂದು ಹೋದಾನಾದರೂ ಒಂದು ದಿನವೂ ಗುಂಡದ ನೀರಿನಲ್ಲಿ ಕೈ ಎದ್ದುವ ಹೊಸಗೇಡಿಯಾಗಲಿಲ್ಲ. ಅಂತೇ ಅವನ ಮನೆತನದಲ್ಲಿ ಶಿರಿ ಸಂಪತ್ತು ಅಭಿವೃದ್ಧಿ ಸುಖದಿಂದ ಬಾಳಿಕೊಂಡಿದ್ದನು.

ಆದರೆ ಮುಂದೆ ಒಮ್ಮೆ ಬೇಸಿಗೆಯ ಬಿಸಿಲು ಹರಗುತ್ತಿದ್ದ ಬಸವಲಿಂಗಪ್ಪನಿಗೆ ದಾಹ ಅತಿಯಾಗಿ ಹೊಂಡದತ್ತ ಬಂದು ಸ್ವಾಮಿಗಳ ಕಾಣದಾಗಲು ಗುಂಡದ ನೀರಿಗಿಳಿದು ಬೊಗಸೆ ತುಂಬನೀರು ಬಾಯಿಗೆ ಒಯ್ಯುತ್ತಿರುವಂತೆ ಗುಡಿಯಿಂದ ಹೊರಗೆ ಬರುತ್ತಿರುವ ಸ್ವಾಮಿಗಳ ದೃಷ್ಟಿಗೆ ಬಸವಲಿಂಗಪ್ಪನು ನೀರು ಕುಡಿಯುವ ಸಾಹಸದಲ್ಲಿದ್ದಾನೆ ಎಂದು ತಿಳಿದು ತಟ್ಟನೆ ಸ್ವಾಮಿಗಳಿಂದ ನಿನ್ನ ವಂಶಪರಂಪಾರ ಒಂಟಿದೀಪವಾಗಲಿ ಹೋಗು ಎಂಬ ಶಾಪ ವಾಣಿ ಚಿಮ್ಮಿ ಬಂತು ಆಗ ಆತನು ಬೇಕಾದಷ್ಟು ರೀತಿಯಿಂದ ಬೇಡಿಕೊಂಡರು ಉಶ್ಯಾಪ ದೊರೆಯಲಿಲ್ಲ. ಆದರೆ ಮತ್ತೆ ಮಮತೆಯ ಆಳದಲ್ಲಿ ಸಿಲುಕಿದ ಸ್ವಾಮಿಗಳು ವಂಶೋದ್ಧಾರಕ್ಕೆ ಓರ್ವ ಸುಪುತ್ರನ ಜನನವಾಗಿ ಕಾಲಕಾಲಕ್ಕೆ ನಿನ್ನ ಮನೆತನವು ಶಿರಿಯಿಂದ ತುಂಬಿ ತುಳುಕುವಂತಾಗುವದು ಬಿಡು ಹದಗೇಡಿ ಹದನೆಂಟು ಮಕ್ಕಳನ್ನು ಯಾಕೆ ಬಯಸುತ್ತಿ ಎಂದು ಸಮಾಧಾನ ಹೇಳಿ ಕಳುಹಿಸಿದರು. ಸ್ವಾಮಿಗಳ ವಾಣಿಯಂತೆ ಇಂದಿಗೂ ಐದಾರು ತಲೆ ಉರುಳಿದರೂ ಗರಗದ ಮೊರಬದವರ ಮನೆತನಕ್ಕೆ ಒಂದೇ ಗಂಡು ಸಂತಾನಯೋಗ ಸಾಗಿ ಬಂದಿರುವದು. ಅಂತೆ ಸ್ವಾಮೀ ಶಿವಯೋಗಿ

ಸಾಮ್ರಾಟ ಶ್ರೀ ಗುರು ಶ್ರೀ ಮಡಿವಾಳೇಶ್ವರರ ಲೀಲೆ ಅಗಾಧ ಅಗಮ್ಯವಾದವುಗಳು ಎಂದು ಭಕ್ತ ಜನತೆ ಭಯ ಭಕ್ತಿಯಿಂದ ನಡೆದುಕೊಳ್ಳುವರು.

---

೬. ಪಾದ್ರಿ ಸಾಹೇಬನಿಗೆ ವರಳುಕಲ್ಲು ದೇವರೆಂದು ತೋರಿಸಿದ್ದು

ಬರುಬರುತ್ತ ಶಿವಯೋಗಿಗಳ ಪವಾಡಗಳು ಎಡಬಿಡದೆ ಜರುಗಹತ್ತಿದವು. ಮಡಿವಾಳೇಶ್ವರ ಸ್ವಾಮಿಗಳು ಸಂಸಾರಿಕರ ಉದ್ಧಾರ ಮಾಡುವ ಕರ್ತವ್ಯದ ಕಂಕಣ ತೊಟ್ಟವರಾಗಿದ್ದರು. ಗರಗ ನಿವಾಸಿಗಳಂತೂ ಸದುಪದೇಶದ ಸವಿ ಉಣಿಸಿ ಸದ್ವರ್ತನೆಯಲ್ಲಿ ತಣಿಸಿ ಭಕ್ತಿ ಮಾರ್ಗದತ್ತ ಮಣಿಸಿ ಸದಾಚಾರ ಸಂಪನ್ನರಾಗಿ ಮಾಡಹತ್ತಿದರು. ಒಮ್ಮೆ ಗರಗ ಗ್ರಾಮಕ್ಕೆ ಪಾದ್ರಿಯೊಬ್ಬ ಬಂದು ಕ್ರೈಸ್ತ ಧರ್ಮ ತತ್ವವನ್ನು ಬೋಧಿಸುತ್ತ ತನ್ನ ಧರ್ಮದ ಹೆಚ್ಚಳಕ್ಕಾಗಿ ಹುಚ್ಚೆದ್ದು ಹೆಣಗಾಡಹತ್ತಿದನು. ಆಗ ಗ್ರಾಮದ ಕೆಲವು ಹಿರಿಯರು ಅವನನ್ನು ಮಡಿವಾಳೇಶ್ವರ ಸ್ವಾಮಿಗಳ ಸನ್ನಿಧಿಗೆ ಕರೆದುಕೊಂಡು ಬಂದರು.

ಆಗ ಸ್ವಾಮಿಗಳು ಪಾದ್ರಿಯನ್ನು ಉದ್ದೇಶಿಸಿ ನೀವು ಯಾರು ಎಲ್ಲಿಂದ ಬಂದಿರಿ ಇಲ್ಲಿ ನಿಮಗೇನು ಕೆಲಸವೆಂದು ಕೇಳಿದರು. ಆಗ ಪಾದ್ರಿಯು ನಾನು ಪಾದ್ರಿ. ನಮ್ಮ ದೇವರ ಮುಂದೆ ನಿಮ್ಮ ದೇವರುಗಳೆಲ್ಲಿ ಪೊಳ್ಳು. ಜೊಳ್ಳು ಶಾಸ್ತ್ರ ಪುರಾಣಗಳಿಂದ ಸುಮ್ಮನೆ ಭಕ್ತರನ್ನು ವಂಚಿಸುತ್ತಿದ್ದೀರಿ ನಮ್ಮ ದೇವರು ಜಗತ್ತಿನ ರಕ್ಷಕನು ಹಾಗೆಂದು ಜನರಲ್ಲಿರುವ ನಿಮ್ಮ ದೇವರ ಮೇಲಿನ ಮೂಢ ನಂಬಿಕೆಯನ್ನು ಕಿತ್ತೊಗೆದು ನಮ್ಮ ದೇವನಿಗಿಂತ ಬೇರೆ ದೊಡ್ಡ ದೇವರಿಲ್ಲವೆಂದು ಬೋಧಿಸಿ ಧರ್ಮ ಪ್ರಸಾರ ಮಾಡುವದಕ್ಕೆ ನಮ್ಮ ಏಸು ಸ್ವಾಮಿಯ ಆಜ್ಞೆಯಾಗಿದೆ ಎಂದು ಬಡಬಡನೆ ಬಿರುಸಿನಿಂದ ಬಿತ್ತರಿಸಿದನು. ಅಲ್ಲದೆ ನನ್ನ ಮಾತಿನಲ್ಲಿ ನಂಬಿಕೆ ಇಟ್ಟು ವಿಶ್ವಾಸದಿಂದ ಬರುವವರನ್ನ ಪರಲೋಕಕ್ಕೆ ಕರೆದುಕೊಂಡು ಹೋಗಬಲ್ಲೆನೆಂದು ಹೇಳಿದನು.

ಆಗ ಸ್ವಾಮಿಗಳು ಇಲ್ಲಿಯವರೆಗೆ ತಾಳಿಕೊಂಡವರು ಈಗ ತಾಳ್ಮೆ ತಪ್ಪಿ ಸಿಟ್ಟಿನಿಂದ ಸಿಡಿಮಿಡಿಗೊಂಡು–ಅಲ್ಲದೆ ನಿಜ ಪಾದ್ರಿಸಾಬಾ. ನಿಮ್ಮ

ದೇವರು ದೊಡ್ಡವನಾದರೆ ನಮ್ಮ ದೇವಾಧಿದೇವ ಮಹಾದೇವರು ಚೆಲ್ಲಿದೆ ಮಲವನ್ನೇಕೆ ತಿನ್ನುವದು ಎಂದು ಕೇಳಿದರು. ಆಗ ಪಾದ್ರಿ ಸಾಹೇಬನು ನಾಚಿಕೆಯಿಂದ ನಿರುತ್ತರನಾಗಿ ಬಳಿಕ ಹಾಗಾದರೆ ನಿಮ್ಮ ದೇವರು ಅದಾವನು ಎಲ್ಲಿರುವನು ಎಂದು ಕೇಳಿದನು. ಆಗ ಸ್ವಾಮಿಗಳು ನಮ್ಮ ದೇವರುಗಳೆಂದರೆ ವರಳು ಕಲ್ಲು, ಬೀಸುವ ಕಲ್ಲು. ಪ್ರತಿಯೊಬ್ಬರ ಮನೆಯಲ್ಲಿಯೂ ಇರುವವು ಎಂದು ಹೇಳಿದರು. ಆಗ ಪಾದ್ರಿ ಸಾಹೆಬನ ಉತ್ತರಕೊಡಲಿಕ್ಕೆ ಬಾರದೆ ನಿರುತ್ತರನಾಗಿ ಸ್ವಾಮಿಗಳಿಗೆ ಮಣಿದು ಅಲ್ಲಿಂದ ಹೇಳದೆ ಕೇಳದೆ ಹೊರಟು ಹೋದನು.

೭. ಪ್ರಸಾಧ ಮಹಿಮೆಯಿಂದ ಪುರುಷತ್ವ ಪ್ರಾಪ್ತನಾದದ್ದು

ಒಂದು ದಿವಸ ಸ್ವಾಮಿಗಳು ತಮ್ಮ ಬೋಧಾಮೃತದಿಂದ ಭಕ್ತರ ಮನಸ್ಸನ್ನು ತಿದ್ದುವ ಸಾಹಸದಲ್ಲಿ ಕುಳಿತಿರಲು ನೇಗಿನಹಾಳದ ಪ್ರಮುಖ ಭಕ್ತರಾದ ಪಡೆಪ್ಪ ಹಾಗೂ ಅಜ್ಜಪ್ಪ ಎಂಬುವವರು ಬಂದು ಸ್ವಾಮಿಗಳ ಪಾದಕ್ಕೆ ಸಾಷ್ಟಾಂಗ ನಮಸ್ಕಾರಗೈದು ಬಳಿಕ ಪರಸ್ಪರರು ಕರ ಜೋಡಿಸಿ ಮೌನದಿಂದ ನಿಂತುಕೊಂಡರು. ಆಗ ಎಲ್ಲವನ್ನು ಅರಿತವರಾದ ಸ್ವಾಮಿಗಳು ಯಾಕೋ ಬಂದಿರುವದು ಎಂದು ಕೇಳಿದರು. ಆದರೂ ಪಡೆಪ್ಪ ಅಜ್ಜಪ್ಪರು ಹೇಳುವದಕ್ಕೆ ನಾಚಿಕೆಪಟ್ಟು ಮುಖ ಕೆಳಗೆ ಮಾಡಿದವರು ಮೇಲೆತ್ತಲಿಲ್ಲ. ಆಗ ಸ್ವಾಮಿಗಳು ತಾವೇ ಮಾತು ಮುಂದುವರೆಯಿಸಿ–ಏನು ಪಡಿಯಾ ನಿಮ್ಮ ದೇಸಾಯಿ ನಪುಂಸಕ ಆದಾನ ಅವನ ಪುರುಷತ್ವದ ಬಗ್ಗೆ ಹಾಗೇ ಏನೋ ಅಂತ ಕೇಳಬಯಸಿ ಬಂದಿ ಹೌದಲ್ಲ ಎಂದರು. ಆಗ ಅವರು ನಿಜ ಎನ್ನುವಂತೆ ತಲೆ ಹಾಕಿದರು. ಬಳಿಕ ಸ್ವಾಮಿಗಳು ಅಪ್ಪಣೆಯಂತೆ ಹೊರಟು ಹೆಂಡತಿಯೊಡನೆ ನಿಂತುಕೊಂಡಿದ್ದ ರುಕುಮಣ್ಣನನ್ನು ಒಳಗೆ ಬರುವಂತೆ ತಿಳಿಹಿಸಿ ಕರೆತಂದರು. ಆಗ ಸ್ವಾಮಿಗಳು ಭಕ್ತಿಯಿಂದ ನಮಸ್ಕರಿಸಿದ ದೇಸಾಯಿಗೆ–ಏನು ರುಕುಮ್ಯಾ ಬಾ ಹೀಗೆ ಈ ಪ್ರಸಾದವನ್ನು ಸೇವಿಸಿ ಕುದುರೆ ಕಟ್ಟೊ ಜಾಗದಲ್ಲಿ ಇವತ್ತು ಗಂಡ--ಹೆಂಡತಿ ಸಂತಸದಲ್ಲಿ

ಸ್ನೇಹಿತರನ್ನು ಒಳಿತಾಗಿ ಬೈದುದಲ್ಲದೆ ಸ್ವಾಮಿಗಳನ್ನು ಸಂಕಟದಲ್ಲಿ ಗುರಿಪಡಿಸಿ ಪರೀಕ್ಷೆ ಮಾಡುವದಕ್ಕೆ ಹೋಗಿ ನಾವೇ ನಮ್ಮ ಕೈಯಾರೆ ಹೊತ್ತಿಸಿದ ಈ ಬೆಂಕಿ ಆರಬೇಕಾದರೆ ಸ್ವಾಮಿಗಳಲ್ಲಿ ಪಶ್ಚಾತ್ತಾಪದಿಂದ ಪರಿಶುದ್ಧರಾಗಿ ಬೇಡಿಕೊಳ್ಳುವದೇ ಸೂಕ್ತ ಉಪಾಯವೆಂದು, ಬುದ್ಧಿ ಅಜ್ಞಾನಿಗಳು ನಾವು ನಮ್ಮ ತಪ್ಪನ್ನು ಮನ್ನಿಸಿ ಕಾಪಾಡಬೇಕೆಂದು ಸ್ವಾಮಿಗಳ ಪಾದಗಳ ಮೇಲೆ ಬಿದ್ದು ಬೇಡಿಕೊಳ್ಳಹತ್ತಿದರು.

ಆಗ ಸ್ವಾಮಿಗಳ ಮನ ಕರಗಿ ಕುದಿಯುವ ನೀರಿನಲ್ಲಿ ತಣ್ಣೀರು ಹಾಕಿರೋ ಮಕ್ಕಳೇ ಎಂದು ಬೋಧಿಸಲು ಅದರಂತೆ ತಣ್ಣೀರು ಹಾಕುತ್ತಿದ್ದಂತೆ ಅಲ್ಲಿ ಅವರ ಮನೆಗಳಿಗೆ ಹತ್ತಿದ ಬೆಂಕಿ ನಂದಿ ಶಾಂತವಾಯಿತು. ಬಳಿಕ ಮೂವರೂ ಶಿವಯೋಗಿಗಳ ಮಹಿಮೆ ಅಗಾಧವೆಂದು ಕೊಂಡಾಡುತ್ತ ಸೇವೆ ಮಾಡಹತ್ತಿದರು.

---

೩. ಬಂದೊದಗಿದ ದುರಂತದಿಂದ ಚಲ್ಲಿ ಗ್ರಾಮ ರಕ್ಷಿಸಿದ್ದು

ಶಿವಯೋಗಿಗಳಿಗೆ ಹಗಲು, ರಾತ್ರಿ, ಮಳೆ, ಗಾಳಿ, ಬಿಸಿಲು ನೆರಳು ಎಂದು ಭೇದಗಳೇ ಇದ್ದಿಲ್ಲ. ಒಂದು ದಿನ ಸರಿ ರಾತ್ರಿಯ ವೇಳೆಯಲ್ಲಿ ಶಿವಧ್ಯಾನ್ಯದಲ್ಲಿ ಸಂಚಾರ ಕೈಕೊಂಡರು. ಆಗ ಮಠದ ಕಟ್ಟೆಯ ಮೇಲೆ ಮಲಗಿದ ರುದ್ರಪ್ಪ ಎಂಬ ಹಡಪಿಗನು ಸ್ವಾಮಿಗಳ ಶಿವ ಪಂಚಾಕ್ಷರಿಯು ಧ್ಯಾನವನ್ನು ಕೇಳುವ ಆಶೆಯಿಂದ ಬೆಂಬತ್ತಿ ಸಾಗಿದನು. ಬರು ಬರುತ್ತ ಮಲಪ್ರಭಾ ನದಿಯ ಸಮೀಪಕ್ಕೆ ಬರಲು ರುದ್ರಪ್ಪನು ಸ್ವಾಮಿಗಳ ಬೆನ್ನು ಬಿಡಲಿಲ್ಲ. ಸ್ವಾಮಿಗಳು ಆತನನ್ನು ಮಾತನಾಡಿಸದೆ, ಪಂಚಾಕ್ಷರಿ ಧ್ಯಾನದಲ್ಲಿ ತಲ್ಲೀನರಾಗಿ ಮುಂದೆ, ಮುಂದೆ ಸಾಗಿದವರು ನದಿಯ ದಡಕ್ಕೆ ಬಂದು ಆಕಾಶದತ್ತ ಮುಖ ತಿರುಗಿಸಿ ನೋಡಿದವರು ಮಲಪಹಾರಿಯ ಮಡುವಿನಲ್ಲಿ ಹಾರಿ ಮುಳುಗಿದವರು ಮೇಲೇಳಲಿಲ್ಲ.

ಆಗ ರುದ್ರಪ್ಪನು ಹೌಹಾರಿ ಏಳುತ್ತ ಬೀಳುತ್ತ ಊರೊಳಗೆ ಬಂದು ಸ್ವಾಮಿಗಳು ನದಿಯಲ್ಲಿ ಮುಳುಗಿರುವ ಸುದ್ದಿಯನ್ನು ಹರಡಿದನು. ಬಳಿಕ

ಊರಿನ ಜನರೆಲ್ಲರು ಗಾಭರಿಯಿಂದ ನದಿಯ ದಡಕ್ಕೆ ಧಾವಿಸಿ ಬಂದು ನೋಡುತ್ತಾರೆ. ಆಚೆಯ ದಡದಲ್ಲಿ ಪದ್ಮಾಸನಾರೂಢರಾಗಿ ಶಿವಧ್ಯಾನದಲ್ಲಿ ನಿಶ್ಚಿಂತೆಯಿಂದ ಕುಳಿತ ಮಡಿವಾಳೇಶ್ವರ ಸ್ವಾಮಿಗಳನ್ನು ಕಂಡು ಭಯಭಕ್ತಿಯಿಂದ ನಮಸ್ಕರಿಸಿ ದೂರ ದೂರ ಸರಿದು ನಿಂತು ನೋಡಹತ್ತಿದರೆ ವಿನಃ ಮುಂದಾಗಿ ಮಾತನಾಡಿಸು ಧೈರ್ಯ ಯಾರಿಗೂ ಬರಲಿಲ್ಲ.

ಆಗ ರುದ್ರಪ್ಪನು ಸ್ವಾಮಿಗಳಿಗೆ ಛಳಿಯಾಗುತ್ತದೆ ಎಂದು ಮರುಗುತ್ತ ಮನೆಗೋಡಿ ಹೋಗಿ ಕಂಬಳಿಗಳನ್ನು ತಂದು ಒಂದರ ಮೇಲೊಂದರಂತೆ ಹೊಚ್ಚಿ ಸ್ವಾಮಿಗಳಿಗೆ ಬೆಚ್ಚ ಮಾಡಿದನು. ಆದರೆ ಉಳಿದವರು ಛಂಡಿಯಲ್ಲಿ ನಾವೇಕೆ ನಡುಗುತ್ತ ನಿಲ್ಲಬೇಕೆಂದು ತಮ್ಮತಮ್ಮ ಮನೆಗಳಿಗೆ ತೆರಳಿದರು. ರುದ್ರಪ್ಪನು ಮಾತ್ರ ಸ್ವಾಮಿಗಳನ್ನು ಬಿಟ್ಟು ಕದಲದಾದನು. ಬಳಿಕ ಕೆಲವು ಸಮಯದ ಮೇಲೆ ಸ್ವಾಮಿಗಳು ಧ್ಯಾನ ತಲ್ಲೀನತೆಯಿಂದ ಎಚ್ಚತ್ತು ಥೂ ಕಳ್ಳಸೊಳ್ಳೆಯ ಮಕ್ಕಳು ಅಂಥಾ ಡಾಂಬಿಕ ಭಕ್ತರ ಶಿವ ನೊಲುಮೆ ದೊರೆಯುವದೇ ಎಂದು ತಟ್ಟನೆ ನುಡಿದು ಬಿಟ್ಟರು.

ಒಮ್ಮೆ ಘೋರವಾದ ಮಳೆ ಸುರಿದು ಗ್ರಾಮದ ಮಗ್ಗುಲಲ್ಲಿ ಹರಿಯುತ್ತಿದ್ದ ಹಳ್ಳ ತುಂಬಿ ಬಂದು ಊರಿಗೇ ಊರೇ ಕೊಚಿಕೊಂಡು ಹೋಗುವಂತೆ ನೀರು ಊರಲ್ಲಿ ರಭಸದಿಂದ ಹೊಕ್ಕು ಗ್ರಾಮದ ಮನೆಗಳು ಬಿಳಹತ್ತಿದವು. ಆದರೆ ರುದ್ರಪ್ಪನ ಮನೆಯ ಸಮೀಪ ನೀರು ಹೋಗದೆ ಉಳಿದವರ ಮನೆ ಮಾರುಗಳು ಕೊಚ್ಚಿ ಹೋಗುವದೇನೋ ಎನ್ನುವಂತಾಯಿತು.

ಆಗ ಗ್ರಾಮದ ಜನತೆಯು ಹಾಹಾಕಾರ ಮಾಡುತ್ತ ಗುರುವೇ ತಂದೆ ಮಡಿವಾಳೇಶ್ವರಾ, ನಮ್ಮನು ಈ ಕುತ್ತಿನಿಂದ ಪಾರು ಮಾಡುವ ಕೃಪೆಯಾಗಬೇಕೆಂದು ಬೇಡಿಕೊಳ್ಳಹತ್ತಿದರು. ಆಗ ಶಿವಯೋಗಿವರೇಣ್ಯರು ಎರಡು ಕಾಯಿ ತರಿಸಿ ಗಂಗಾಮಾತೆಯನ್ನು ಪೂಜೆಸಿ ಜಲದೇವಿಯ ಸ್ತೋತ್ರದೊಡನೆ ಕಾಯಿ ತರಿಸಿ ಒಡೆದು ನೀರಿನಲ್ಲಿಟ್ಟು, ಹರಿಯುತ್ತಿರುವ ನೀರಲ್ಲಿ ನಿಂತು ಬೊಗಸೆಯಿಂದು ನೀರು ತೆಗೆದು ತಮಗೆ ಕಳದತ್ತ ಸೂರೆ ಮಾಡಲು ಹಳ್ಳದ ನೀರು ಸರಸರನೇ ಸರಿದು ಗ್ರಾಮದಲ್ಲಿ ಹೊಕ್ಕ ನೀರು ಹಳ್ಳದ ಪಾತ್ರದಲ್ಲಿ ಸೇರಿ ಸರಿಹೋಯಿತು.

ಆಗ ಭಕ್ತ ಬಳಗವು ಮಡಿವಾಳೇಶ್ವರ ಸ್ವಾಮಿಗಳ ಮಹಿಮೆಯನ್ನು ಕೊಂಡಾಡುತ್ತ ಸ್ವಾಮಿಗಳ ಅಪ್ಪಣೆಯಂತೆ ಗಣತೃಪ್ತಿಯನ್ನು ಮಾಡಿ ಬಂದೊದಗಿದ ಕುತ್ತಿನಿಂದ ಪಾರಾಗಿ ಬೊಗಸೆಯಿಂದ ನೀರು ತುಂಬಿ ಚೆಲ್ಲಿ ನಮ್ಮ ಗ್ರಾಮದ ದುರಂತವನ್ನೇ ದೂರೀಕರಿಸಿದ ಮಹಿಮಾನಿಧಿ ಮಡಿವಾಳೇಶ್ವರಾ, ನಿನ್ನ ಮಹಿಮೆ ಅಗಾಧವಾದದ್ದೆಂದು ಕೊಂಡಾಡಹತ್ತಿದರು.

……………

೪. ತಡಕೋಡ ಗ್ರಾಮದಲ್ಲಿ ತೋರಿದ ಲೀಲಾವಿನೋದ

ಶಿವಪೇಠೆ ಎಂಬ ಗ್ರಾಮದಿಂದ ಹೊರಟ ಸ್ವಾಮಿಗಳು ತಡಕೋಡ ಎಂಬ ಗ್ರಾಮಕ್ಕೆ ದಯಮಾಡಿಸಿದರು. ತಡಕೋಡ ಗ್ರಾಮದಲ್ಲಿ ಬ್ರಾಹ್ಮಣ ಬಂಧುಗಳು ಶ್ರೀಮಂತಿಕೆಯೊಡನೆ ಧರ್ಮ ಸಂಕೀರ್ತನೆಯಲ್ಲಿ ಕಾವಿ ಕಳೆಯುವ ಧರ್ಮಿಷ್ಟರಾಗಿದ್ದರು. ತಡಕೋಡ ಗ್ರಾಮಕ್ಕೆ ದಯಮಾಡಿಸಿದ ಸ್ವಾಮಿಗಳನ್ನು ಕಂಡು ರಾಮಭಟ್ಟ, ನರಸಿಂಹಭಟ್ಟರು ಒಳ್ಳೇ ಆದರಿಂದ ಸ್ವಾಗತಿಸಿ ಬರಮಾಡಿಕೊಂಡು ಸ್ವಾಮಿಗಳ ಮನಸ್ಸಿಗೆ ಆನಂದವನ್ನುಂಟು ಮಾಡಿದರು. ನಿತ್ಯ ಶಿವಯೋಗಿಗಳ ಬೋಧೆಯಿಂದ ಭಕ್ತರ ಮನವು ಭಕ್ತಿಯ ಮಾರ್ಗದತ್ತ ಮುನ್ನುಗ್ಗುವಂತಾಯಿತು.

ಹೀಗೆ ಕೆಲವು ಕಾಲ ಗತಿಸಲು ಭಟ್ಟರು ತಮ್ಮ ತಂದೆಯ ಶ್ರಾದ್ಧವು ಬಂದ ಪ್ರಯುಕ್ತ ಬ್ರಾಹ್ಮಣ ಸಮೂಹಕ್ಕೆ ಭೋಜನದ ಏರ್ಪಾಡು ಮಾಡಿಸಿ ಶಿವಯೋಗಿಗಳಿಗೂ ಆಮಂತ್ರಣ ಕೊಟ್ಟರು. ಆದರೆ ಮಡಿವಂತರೆನಿಸಿದ ಬ್ರಾಹ್ಮಣರು ಮಡಿವಾಳೇಶ್ವರರು ತಮ್ಮೊಡನೆ ಪಂಕ್ತಿಯಲ್ಲಿ ಸೇರಲು ಅಯೋಗ್ಯರೆಂದು ಮೂದಲಿಸಿ ಜಾತಿಯ ಹೆಚ್ಚಳದ ಹುಚ್ಚಿನಲ್ಲಿ ಚುಚ್ಚು ಮಾತುಗಳನ್ನಾಡಿದರು. ಆಗ ರಾಮಭಟ್ಟರಿಗೆ ಧರ್ಮ ಸಂಕಟಕ್ಕಿಟ್ಟುಕೊಂಡ ಈ ಪ್ರಸಂಗದಿಂದ ಏನು ಅನಾಹುತ ಜರಗುವದೋ ಎಂದು ಹಳಹಳಿಸಹತ್ತಿದರು. ಅಲ್ಲದೆ ಆಮಂತ್ರಣ ಕೊಟ್ಟು ತಿರಸ್ಕರಿಸುವದೆಂದರೆ ಬೆಂಕಿಯನ್ನು ಪದರಿನಲ್ಲಿ ಸುರಿದುಕೊಂಡಂತೆ ಎಂದು ಬಹುವಾಗಿ ಮಿಡುಕ

ಹತ್ತಿದರು. ಅತ್ತ ಸ್ವಾಮಿಗಳ ಮಹಾನಡೆ ಪ್ರಶ್ನೆ. ಇತ್ತ ಜಾತಿ ಬಾಂಧವರ ವಿರೋಧ ಪ್ರಸಂಗ, ಏನು ಮಾಡುವದೆಂದು ತಮ್ಮಲ್ಲಿ ತಾವೇ ಪ್ರಶ್ನಿಸಿಕೊಳ್ಳ ಹತ್ತಿದರು. ಅಷ್ಟರಲ್ಲಿ ಪಂಕ್ತಿ ಸುರುವಾಯಿತು. ಶಿವಯೋಗಿಗಳಿಗೆ ಆಮಂತ್ರಣ ಕೊಟ್ಟಂತೆ ಕರೆತರುವದನ್ನು ಬಿಟ್ಟು, ಬ್ರಾಹ್ಮಣರ ಮಾತಿನಂತೆ ಶಿವಯೋಗಿಗಳು ಪಂಕ್ತಿ ಬಾಹಿರರು. ಆಮೇಲೆ ಕರೆದು ಭೋಜನ ಮಾಡಿಸಿದರಾಯಿತೆಂದು ಸುಮ್ಮನಾದರು. ಆಗ ಭೋಜನ ಕೂಟದಲ್ಲಿ ಬಡಿಸುತ್ತಿದ್ದ ಭಟ್ಟರು ಸಿದ್ಧವಾದ ಪದಾರ್ಥಗಳನ್ನು ತಟ್ಟೆಯಲ್ಲಿ ಬಡಿಸುತ್ತ ಮುಂದಾದರೆ ಪ್ರತಿಯೊರ್ವ ಬ್ರಾಹ್ಮಣರ ತಟ್ಟೆಯಲ್ಲಿದ್ದ ಹೋಳಿಗೆ ಹುಗ್ಗಿ, ಬಾಳೇಹಣ್ಣಿನ ತುಂಡುಗಳು ಕುರಿ ತಲೆಯ ಮಾಂಸದ ಮುದ್ದೆಯಾಗಿ ಕಾಣಹತ್ತಿದವು. ಆಗ ಆ ಭಟ್ಟರು ಅಯ್ಯೋ ರಾಮ ರಾಮ ಎಂದು ಕುರಿ ತಲೆಯಂತೆ ತೋರುವ ಮಾಂಸದ ತುಡುಗಳನ್ನು ಕಂಡು ಹೌಹಾರಿ ಇದೆಲ್ಲವೂ ಜಾತಿಯ ಹುಚ್ಚಿನಲ್ಲಿ ಶಿವಯೋಗಿ ಸಾಮ್ರಾಟ ಮಡಿವಾಳೇಶ್ವರ ಸ್ವಾಮಿಗಳನ್ನು ತುಚ್ಛವಾಗಿ ಕಂಡದ್ದರ ಪ್ರತಿಫಲವೆಂದು ಅರಿತು ಯಾವತ್ತು ಬ್ರಾಹ್ಮಣ ಸಮೂಹವೇ ಸ್ವಾಮಿಗಳ ಸನ್ನಿಧಿಗೆ ಬಂದು ಜಾತಿಯ ಹೆಚ್ಚಳದಲ್ಲಿ ಕಣ್ಣು ಮುಚ್ಚಿ ತಮ್ಮ ಘನತೆಯನ್ನು ಗಣನೆಗೆ ತಾರದ ತಪ್ಪಿಗಾಗಿ ಕ್ಷಮಿಸಿ ನಮ್ಮ ನಮ್ಮ ಧರ್ಮ ನೀತಿಗಳು ಹಾಳಾಗದಂತೆ ಕಾಪಾಡಿರೆಂದು ಬೇಡಿಕೊಳ್ಳಹತ್ತಿದರು.

ಆಗ ಸ್ವಾಮಿಗಳು ನಿಮ್ಮ ಪಂಕ್ತಿಯಲ್ಲಿ ಸೇರಿಕೊಳ್ಳಲು ಯೋಗ್ಯರೆನಿಸಿದ ತಮ್ಮಿಂದ ಏನಾಗಲು ಸಾಧ್ಯವೋ ಎಂದರು. ಆಗ ಬ್ರಾಹ್ಮಣರು ರಾಮ ಭಟ್ಟರನ್ನು ಮುಂದೂಡಿ ನಿಮ್ಮ ಭಕ್ತಿ ರಜ್ಜುವಿನಲ್ಲಿ ಬಂಧಿತರಾದ ಶಿವಯೋಗಿಗಳು ನಿಮ್ಮ ಮಾತಿಗೆ ಬೆಲೆ ಕೊಟ್ಟು ನಮ್ಮಗಳ ಅಪರಾಧವನ್ನು ಕ್ಷಮಿಸಬಹುದು ಹೋಗಿರಿ ನೀವೆ ಸ್ವಾಮಿಗಳಲ್ಲಿ ಇನ್ನಷ್ಟು ಬಿನ್ನವಿಸಿಕೊಂಡು ನಮ್ಮ ನೀತಿಯನ್ನು ಕಾಪಾಡಿರಿ ಎಂದು ಒತ್ತಾಯದಿಂದ ಮುಂದೂಡಿದರು.

ಆಗ ರಾಮಭಟ್ಟನು ನಿರ್ವಾಹವಿಲ್ಲದೆ ಮುಂದಾಗಿ– ಬುದ್ಧಿ ಅಲ್ಪ ಮತಿಯಿಂದಾದ, ಅಪರಾಧವನ್ನು ಕ್ಷಮಿಸಿ ಕಾಪಾಡಬೇಕೆಂದು ಸಾಷ್ಟಾಂಗ ಹಾಕಿದನು ಬಳಿಕ ಸ್ವಾಮಿಗಳು ಏನಯ್ಯಾ. ರಾಮಭಟ್ಟ ಇಗೇನಂತಹ ಪ್ರಮಾದವಾಗಿದೆ ಹೋಗು ತಟ್ಟೆಯಲ್ಲಿ ಹೋಳಿಗೆ, ಹುಗ್ಗಿ, ಬಾಳೆಹಣ್ಣಿನ

ಉಳಿಯಿರೆಂದು ಅಪ್ಪಣೆ ಮಾಡಿದರು. ಸ್ವಾಮಿಗಳ ಅಪ್ಪಣೆಯಂತೆ ಪ್ರಸಾದ ಸ್ವೀಕರಿಸಲು ಆತನ ಹಣೆಗೆ ಸ್ವಾಮಿಗಳು ತಮ್ಮ ಕೈಯಾರೆ ಭಸ್ಮಲೇಪಿಸಿ ಗಂಡ ಹೆಂಡತಿ ಈರ್ವರೂ ಊಟ ಮಾಡಿ ಮಲಗಲಿಕ್ಕೆ ಹೋಗಿರೆಂದು ಹೇಳಿ ಕಳಿಸಿದರು. ಬಳಿಕ ಅಂದಿನ ರಾತ್ರಿ ಕುದುರೆ ಪಾಗಾದಲ್ಲಿ ಉಳಿದ ದೇಸಾಯಿಗೆ ಅಳಿದು ಹೋದ ಪುರುಷತ್ವ ಪ್ರಾಪ್ತವಾಗಿ ಮಡದಿಯೊಡಗೂಡಿ ಸಂಭೋಗದಿಂದ ತೃಪ್ತನಾದನು. ಬೆಳಿಗ್ಗೆ ಎದ್ದು ಸ್ನಾನ ತೀರಿಸಿ ಮಡಿ ಉಟ್ಟು ಸ್ವಾಮಿಗಳ ಸನ್ನಿಧಿಗೆ ಬಂದು ಪೊಡಮೊಟ್ಟು ಸ್ವಾಮಿಗಳ ಪಾದಕ್ಕೆ ಒಂದ ನೂರಾ ಒಂದು ರೂಪಾಯಿ ಇಟ್ಟು ಕರಜೋಡಿಸಿ ನಿಂತುಕೊಂಡನು. ಮಗ್ಗುಲಲ್ಲಿ ನಾಚಿಕೆಯಿಂದ ತಲೆ ತಗ್ಗಿಸಿ ನಿಂತ ಬಂದವ್ವನು ಸ್ವಾಮಿಗಳ ಘನ ಮಹಿಮೆಗೆ ಮೂಕಳಂತಾಗಿದ್ದಳು.

ಆಗ ಸ್ವಾಮಿಗಳು ನಸುನಗುತ್ತ ಯಾಕ ಬಂದವ್ವ ನಿನ್ನ ಗಂಡಗ ಪುರುಷತ್ವ ಇದೆಯೋ, ಅವನ ಪ್ರಕೃತಿ ಹೇಗಿದೆ ಎಂದು ಕೇಳಿದರು. ಆಗ ಬಂದವ್ವ ಲಜ್ಜಿತಳಾಗಿ ಒಳಿತಾಗಿದೆ ಬುದ್ಧಿ ಎಂದು ತಡವರಿಸುತ್ತ ನುಡಿದು ತಣ್ಣಗಾದಳು. ಬಳಿಕ ದಂಪತಿಗಳನ್ನು ಆಶೀರ್ವದಿಸಿ ಊರಿಗೆ ಕಳುಹಿಸುತ್ತ ಗಂಡು ಸಂತಾನ ಲಭಿಸುವದೆಂದು ಹೇಳಿದರು. ಸ್ವಾಮಿಗಳ ನುಡಿಯಂತೆ ಬಂದವ್ವನು ಗಂಡು ಮಗುವನ್ನು ಹೆತ್ತು ಸ್ವಾಮಿಗಳಲ್ಲಿ ನಿಷ್ಠೆಯಂತೆ ನಡೆಯಹತ್ತಿದಳು.

---

೮. ಶಿವಲಿಂಗಪ್ಪನ ಭಕ್ತಿಗೆ ಮಣಿದು ವಂಶೋದ್ಧಾರಗೈದದ್ದು

ಇದೇ ರೀತಿ ಶಿವಯೋಗಿ ವರೇಣ್ಯರಾದ ಮಡಿವಾಳೇಶ್ವರ ಸ್ವಾಮಿಗಳು ತಮ್ಮ ಶಿವಯೋಗ ಸಾಮರ್ಥ್ಯದಲ್ಲಿ ಭಕ್ತರ ಉದ್ಧಾರ ಕಾರ್ಯದಲ್ಲಿ ನಿರತ ರಾಗಿರಲು ಒಂದು ದಿನ ಕನಗಿನಾಳ ಭಕ್ತ ಶಿವಲಿಂಗಪ್ಪನು ಪ್ರತಿಯೊಂದು ಅಮವಾಸ್ಯೆಗೆ ತಪ್ಪದೇ ಸ್ವಾಮಿಗಳ ದರ್ಶನಕ್ಕೆಂದು ಗರಗ ಗ್ರಾಮಕ್ಕೆ ಬರು ತ್ತಿದ್ದವನು ಯಾವ ಫಲಾಪೇಕ್ಷೆ ಮಾಡದೆ ಹಿಂತಿರುಗುತ್ತಿದ್ದನು. ಆದರೆ ಈ ಸಾರೆ ಸ್ವಾಮಿಗಳ ಪಾದದಡಿಯಲ್ಲಿ ಪೊಡಮೊಟ್ಟು ತನ್ನ ಬಹು ದಿನಗಳ

ಇಚ್ಛೆಯನ್ನು ತಿಳುಹಿಸಲು ಆಸೆ ಮಾಡಿದನು. ಅದನ್ನು ಅರಿತ ಸ್ವಾಮಿಗಳು ಒಂದು ದಿನ--ಶಿವಲಿಂಗಾ ಹನ್ನೊಂದು ಅಮವಾಸ್ಯೆಗಳಲ್ಲಿ ಆಸೆ ಹುಟ್ಟಲಿಲ್ಲ ಇನ್ನೊಂದಾಗಿ ಬಂದಿರುವ ಈ ಅಮವಾಸಿಯು ಏನು ಬೇಡಬೇಕು ಅಂತಿಯೋ ಎಂದು ಕೇಳಿದರು.

ಆಗ ಸ್ವಾಮಿಗಳ ಅಪ್ಪಣೆಯಾದದ್ದೆ ತಡ ನಯವಿನಯ ಭಕ್ತಿಯಿಂದ ಕರಗಳನ್ನು ಜೋಡಿಸಿ--ಬುದ್ಧಿ ಮದುವೆಯಾಗಿ ಇಪ್ಪತ್ತೆಂಟು ವರುಷ ಗತಿಸಿದರೂ ವಂಶೋದ್ಧಾರಕ್ಕಾಗಿ ಒಂದು ಮಗು ಹುಟ್ಟಲಿಲ್ಲ ಇನ್ನಾದರೂ ತಮ್ಮ ಕೃಪಾಶೀರ್ವಾದ ಬಲದಿಂದ ನನಗೆ ಸಂತಾನ ಭಾಗ್ಯ ಲಭಿಸಲೆಂದು ಆಸೆ ಮಾಡುತ್ತಿದ್ದೇನೆ ಎಂದು ಅರಿಕೆ ಮಾಡಿಕೊಂಡನು.

ಬಳಿಕ ಶಿವಯೋಗಿಗಳು ನಸುನಕ್ಕು-ಶಿವಲಿಂಗಪ್ಪ ಹನ್ನೊಂದು ಕಳೆದು ಇನ್ನೊಂದು ಕಳೆಯುವದರೊಳಗಾಗಿ ಗಂಡು ಮಗನ ಸಂತಾನವಾಗುವದು. ಆದರೆ ಮಗು ಹುಟ್ಟಿದ ಮೂರು ತಿಂಗಳೊಳಗಾಗಿ ಕೂಸನ್ನು ಕೂಸಿನ ತಾಯಿಯನ್ನು ಮಠಕ್ಕೆ ಕರೆದುಕೊಂಡು ಬಾ ಎಂದು ಆಜ್ಞೆ ಮಾಡಿ ಅಪ್ಪಣೆ ಕೊಟ್ಟು ಕಳುಹಿಸಿದರು. ಬಳಿಕ ಶಿವಲಿಂಗಪ್ಪ ಸ್ವಾಮಿಗಳಿಗೆ ಸಮಸ್ಕರಿಸಿ ತನ್ನೂರಿಗೆ ಹೊರಟು ಹೋದನು. ಮುಂದೆ ಸ್ವಾಮಿಗಳ ಅಮರ ವಾಣಿಯಂತೆ ಶಿವಲಿಂಗಪ್ಪನ ಹೆಂಡತಿಯು ಗಂಡು ಮಗುವನ್ನೇ ಹೆತ್ತಳು, ಬಳಿಕ ಮೂರು ತಿಂಗಳು ಸರಿದು ಸ್ವಾಮಿಗಳು ತಿಳುಹಿಸಿದ ಮಿತಿಕೂಡಿ ಬರಲು ನಿಷ್ಠಾಭಕ್ತನಾದ ಶಿವಲಿಂಗಪ್ಪನು ಹೆಂಡತಿ ಹಾಗೂ ಕೂಸನು ಕರೆದುಕೊಂಡು ಮಠಕ್ಕೆ ಬಂದು ಸ್ವಾಮಿಗಳ ಪಾದದಡಿದಲ್ಲಿ ಕೂಸನ್ನು ಹಾಕಿ ನಿಶ್ಚಿಂತೆಯಿಂದ ಕೈಜೋಡಿಸಿ ನಿಂತುಕೊಂಡನು.

ಬಳಿಕ ಶಿವಯೋಗಿಗಳು ಕೂಸಿನ ಲಕ್ಷಣಗಳನ್ನು ನೋಡಿ ಮನದಲ್ಲಿಯೇ ಮಮತೆ ತುಂಬಿ ನಗುವ ಹೊರಸೂಸಿ ನೀಲಕಂಠಾ ನಿನ್ನ ಮಹಿಮೆ ಅದೆಷ್ಟು ವಿಚಿತ್ರವಪ್ಪಾ ಎಂದೆನುತ ಶಿವಲಿಂಗಪ್ಪನತ್ತ ಹೊರಳಿ ಶಿವಲಿಂಗಾ ನೀನು ಬಲು ಭಾಗ್ಯವಂತನೋ ಶಿವಾ ನಿನ್ನ ಭಕ್ತಿಗೆ ಮೆಚ್ಚಿಒಪ್ಪುಳ್ಳ ಮಗನನ್ನು ಕರುಣಿಸಿದ್ದಾನೆ ಈ ಕೂಸು ಸರ್ವ ಸುಲಕ್ಷಣ ಸಂಪತ್ತಿನಿಂದ ಪರಿಶೋಭಿಸುವದನ್ನು ನೋಡಿದರೆ ಈತನು ವಿದ್ಯಾವಂತನಾಗುತ್ತಾನೆ. ಬಲು ಬುದ್ಧಿವಂತನೆಂದು ಪ್ರಸಿದ್ಧನಾಗುತ್ತಾನೆ. ಅಲ್ಲದೆ ಧರ್ಮ ಕಾರ್ಯಗಳಲ್ಲಿ

ಮನೆಮುಟ್ಟ ದುಡಿದು ಹೆಸರು ಗಳಿಸುತ್ತಾನೆ. ಈತನಿಗಿಂತಲೂ ಈತನ ಮಗನು ಅಂದರೆ ನಿನ್ನ ಮೊಮ್ಮಗನು ಇನ್ನೂ ಹೆಚ್ಚಿನ ವಿದ್ಯಾವಂತನಾಗಿ ನ್ಯಾಯ ನಿಗದಿ ಬಗೆಹರಿಸುವ ಹಿರಿಯ ಅಧಿಕಾರ ಪಡೆದು ದೈವಭಕ್ತಿಯಿಂದ ಗುರುಚರ ಬಳಗವನ್ನು ಸೇವಿಸಿ ಕೃತಾರ್ಥನಾಗುತ್ತಾನೆ ಅಂತೂ ನಿನ್ನ ವಂಶದ ಕೀರ್ತಿ ಮಕ್ಕಳಿಂದ ಮೊಮ್ಮಕ್ಕಳಿಂದ ಆ ಚಂದ್ರಾರ್ಕ ಬೆಳಗುವದು ಎಂದು ಆಶೀರ್ವಾದ ಮಾಡಿ ಕೂಸಿಗೆ ತಾವೇ ತಮ್ಮ ಮನದಾಸೆಯಂತೆ ನೀಲಕಂಠನೆಂದು ಹೆಸರಿಟ್ಟು ತಾಯಿಯಾದವಳಿಗೆ ಮಮತೆಯ ಮಗಳನ್ನು ಪರಾಂಭರಿಸಿ ಸಂತೋಷಪಡಿಸುವ ಹಾಗೆ ಶೀರೆ ಖಣಗಳನ್ನಿತ್ತು ಸತ್ಕರಿಸಿ ಕೂಸು ನೀಲಕಂಠನಿಗೆ ಕಾಲ್ಗೆಜ್ಜೆ ಕೈ ಕಡಗಗಳನ್ನು ತೊಡಿಸಿ ನಿಲುವಂಗಿ ಕುಂಚಿಗೆಗಳಿಂದ ಅಲಂಕರಿಸಿ ಸಂತಸದಿಂದ ಹರಿಸಿ ಊರಿಗೆ ಬೀಳ್ಕೊಟ್ಟರು.

ಬಳಿಕ ಗರಗದ ಭಕ್ತ ಜನರು ಸ್ವಾಮಿಗಳು ನಿರ್ವಂಚನೆಯ ನಿರ್ವಿಕಾರ ಮಮತಾ ದೃಷ್ಟಿಗೆ ಬೆರಗಾಗಿ ಬೆರಳು ಕಚ್ಚಿದರಲ್ಲದೆ ಸ್ವಾಮಿಗಳ ಸಂಪೂರ್ಣ ಆಶೀರ್ವಾದ ದೊರೆಯುವದಕ್ಕೂ ಪುಣ್ಯ ಬೇಕೆಂದು ತಮ್ಮ ತಮ್ಮಲ್ಲಿ ಅಭಿಮಾನದಿಂದ ಮಾತನಾಡಿಕೊಳ್ಳಹತ್ತಿದ್ದರು. ಮುಂದೆ ಶಿವಲಿಂಗಪ್ಪನ ಮಗ ನೀಲಕಂಠನು ಬೆಳೆದು ದೊಡ್ಡವನಾಗಿ ಸ್ವಾಮಿಗಳ ಆಶೀರ್ವಾದ ಬಲದಿಂದ ಒಂದು ಶಾಲೆಯ ಮುಖ್ಯ ಶಿಕ್ಷಕನೆನಿಸಿ ಧರ್ಮ ನೀತಿಗಳ ಪರಿಸರದಲ್ಲಿ ಬಾಳಿ ಕೀರ್ತಿಗಳಿಸಿ ಗಾಲವಾದನು. ಈತನ ಮೊಮ್ಮಗ ಶಿವಲಿಂಗಪ್ಪನ ಮೊಮ್ಮಗ ಚಿನ್ನಪ್ಪನು ಹದಿನೆಂಟನೂರಾ ಅರವತ್ತೆರಡರಲ್ಲಿ ಬೆಳಗಾಂವದಲ್ಲಿ ಪ್ರಸಿದ್ಧ ವಕೀಲ ವೃತ್ತಿಯಿಂದ ಮುಂದೆ ಬಂದು ಪ್ರತಿ ವರುಷ ತಪ್ಪದೆ ಗರಗದ ಶ್ರೀ ಮಡಿವಾಳೇಶ್ವರ ಮಠಕ್ಕೆ ಬಂದು ಭಕ್ತಿ ವಿಶ್ವಾಸಗಳಿಂದ ನಡೆದುಕೊಂಡು ಎಂಟು ಹತ್ತು ಸಾವಿರ ಹಣದ ವೆಚ್ಚದಲ್ಲಿ ಭೋಜನ ಶಾಲೆಯನ್ನು ಕಟ್ಟಿಸಿ ಶಿವಯೋಗಿಗಳ ಕೃಪೆಗೆ ಪಾತ್ರನಾಗಿ ಪತ್ನಿ ಪುತ್ರರನ್ನು ಪಡೆದು ಧರ್ಮದಿಂದ ನಿಷ್ಠೆಯಿಂದ ಬಾಳಿ ಸಕಲ ಸುಖಭೋಗ ಭಾಗ್ಯಗಳನ್ನು ಪಡೆದು ಗುರುಚರ ಮೂರ್ತಿಗಳ ಸೇವೆಯಲ್ಲಿ ಕಾಲ ಕಳೆಯುತ್ತಿದ್ದನು. ಭಕ್ತ ಜನರು ಮಡಿವಾಳೇಶ್ವರ ಸ್ವಾಮಿಗಳು ಶಿವಲಿಂಗಪ್ಪನ ಭಕ್ತಿಗೆ ಮಣಿದು ವಂಶೋದ್ಧಾರಗೈದ ಪವಾಡ ಪುರುಷರೆಂದು ಹಾಡಿ ಹೊಗಳುತ್ತಿದ್ದರು.

೯. ಕುರ್ಲಿಗಂಗಪ್ಪನ ಭೂತಬಾಧೆ ನಿವಾರಿಸಿದ್ದು

ಒಂದು ದಿನ ಕುರ್ಲಿಗಂಗಪ್ಪನು ಸ್ವಾಮಿಗಳ ಸನ್ನಿಧಿಗೆ ಬಂದು ನಮಸ್ಕರಿಸಿ ಬುದ್ಧಿ ನನ್ನ ಮನೆತನಕ್ಕೆ ಅದೇನು ಪೀಡೆ ಕಾಡುತ್ತಿದೆಯೋ ಸರ್ವ ಮಂಡಳಿಯೂ ಪಿಶಾಚಿ ಭಾಧೆಯಿಂದ ನಿತ್ಯ ಸಂಕಟ ಪಡುವದನ್ನು ನಾನು ನೋಡಲಾರೆ. ಪರಿಹರಿಸಿ ಭಕ್ತೋದ್ಧಾರವಾಗಬೇಕೆಂದು ಹಲುಬಹತ್ತಿದನು. ಆಗ ಮಡಿವಾಳೇಶ್ವರ ಸ್ವಾಮಿಗಳು ಮನದಲ್ಲಿ ವಿಚಾರಿಸಿಕೊಂಡು ಜಿಪುಣರಲ್ಲಿ ಅತೀಜಿಪುಣ ಎನಿಸಿದ ಗಂಗಪ್ಪನ ಈ ಹೀನ ಗುಣವನ್ನು ಹೊಡೆದೋಡಿಸುವ ಉದ್ದೇಶದಿಂದ—ಎಲೋ ಗಂಗ್ಯಾ ನಮ್ಮ ಮಠದ ದಾಸೋಹಕ್ಕೆ ಇನ್ನೂರು ರೂಪಾಯಿ ಧಾನ್ಯ ತಂದು ಕೊಡುವದಾದರೆ ಎಲ್ಲರ ಪಿಶಾಚಿಗಳನ್ನು ಹೊಡದಟ್ಟುತ್ತೇವೆ ಎಂದು ಬೇಕಂತಲೇ ಕೇಳಿದರು. ಆಗ ಜಿಪುಣನಾದ ಗಂಗಪ್ಪ ಮಹಾಶಯನು ತನ್ನ ಸ್ವಭಾವಕ್ಕನುಗುಣವಾಗಿ ಮಡಿವಾಳಪ್ಪನಿಗೆ ಇನ್ನೂರು ರೂಪಾಯಿ ಧಾನ್ಯ ಏಕೆ ಕೊಡಬೇಕು ಇಂದಿಲ್ಲ ನಾಳೆ ಪಿಶಾಚಿ ಬಾಧೆಯಿಂದ ಮುಕ್ತರಾಗಬಹುದೆಂದು ತಿಳಿದು ಹೊರಟು ಹೋದನು. ಮನೆಗೆ ಹೋಗಿ ಮುಟ್ಟುವದಕ್ಕೆ ಪುರಸತ್ತ ಕೊಡದಂತೆ ಆತನಿಗೇನೆ ಪಿಶಾಚಿಯು ಅಂಟಿಕೊಂಡು ಕೈಸೊನ್ನೆಯ ಮೂಕನಾಗಿ ವರ್ತಿಸಹತ್ತಿದನು.

ಆಗ ಗಂಗಪ್ಪನ ಸ್ಥಿತಿಯನ್ನು ಕಂಡು ನೆರೆಹೊರೆಯವರು ಆತನ ಹೆಂಡತಿ ಬಾಳವ್ವನನ್ನು ಕರೆದು ಇದು ಮಡಿವಾಳೇಶ್ವರ ಸ್ವಾಮಿಗಳನ್ನು ವಂಚಿಸಿದ ಪ್ರತಿಫಲ ಅಲ್ಲದೇ ಜಿಪುಣತನದ ಪರಮಾಧಿಯ ಪರಿಣಾಮ ಆದಕ್ಕಾಗಿ ಸ್ವಾಮಿಗಳ ಮಠಕ್ಕೆ ಹೋಗಿ ಶಿವಯೋಗಿಗಳಲ್ಲಿ ಮೊರೆ ಹೋಗು ಅಂದರೆ ನಿನ್ನ ಮನೆತನಕ್ಕೆ ನಿನ್ನ ಗಂಡನಿಗೆ ಕ್ಷೇಮವಾಗುವದೆಂದು ಬುದ್ಧಿ ಹೇಳಿದರು. ಆಗ ಗಂಗಪ್ಪನ ಹೆಂಡತಿಯು ಹಿರಿಯರ ಮಾತಿನಂತೆ ಓಡುತ್ತ ಸ್ವಾಮಿಗಳ ಸನ್ನಿಧಿಗೆ ಬಂದು ಅವರ ಪಾದಗಳನ್ನು ಪಿಡಿದು-ಬುದ್ಧಿ ನನ್ನ ಗಂಡನಿಗೆ ಪಿಶಾಚಿ ಬಡಿದುಕೊಂಡಿದೆ. ಮಾತನಾಡಲು ಬಾಯಿ ಇಲ್ಲ ಬಲು ನಿಶ್ಶಕ್ತಿಗೊಂಡು ಈಗೋ ಇನ್ನೊಂದು ಗಳಿಗೆಗೋ ಎನ್ನುವ ಸ್ಥಿತಿಯಲ್ಲಿದ್ದಾನೆ ನನ್ನ ಮನೆತನವನ್ನು ಕಾಪಾಡುವ ಕೃಪೆಯಾಗಬೇಕೆಂದು ಅನನ್ಯ ಭಕ್ತಿಭಾವದಿಂದ ಬೇಡಿಕೊಳ್ಳಹತ್ತಿದಳು. ಆಗ ಸ್ವಾಮಿಗಳು ಅಮ್ಮಾ ನೀನಾ

ದರೂ ದಾಸೋಹಕ್ಕೆ ಈಗ ತಿಳಿಸಿದ್ದರ ಎರಡರಷ್ಟು ಧಾನ್ಯತಂದು ಕೊಡುವಿಯಾ ಎಂದು ಕೇಳಿದರು. ಆಗ ಸಂಗಪ್ಪನ ಪತ್ನಿ ಬಾಳವ್ವ ಲಗುಬಗೆಯಿಂದ ಮನೆಗೆ ಹೋಗಿ ನಾಲ್ಕು ನೂರು ರೂಪಾಯಿ ತಂದು ಸ್ವಾಮಿಗಳ ಪಾದಕ್ಕೆ ಸಲ್ಲಿಸಿದಳು ಆಗ ಸ್ವಾಮಿಗಳು ಅವಳ ದೃಢಭಕ್ತಿಗೆ ಮೆಚ್ಚಿ ಮಗಳೆ ಈ ವಿಭೂತಿಯನ್ನು ಒಯ್ದು ನಿನ್ನ ಗಂಡನ ಮೈಗೆಲ್ಲ ಬಳಿದು ಇನ್ನುಳಿದ ಪಿಶಾಚಿ ಬಾಧೆಯುಳ್ಳ ನಿಮ್ಮ ಮನೆಯವರಾದ ಯಾವತ್ತರಿಗೂ ನಿತ್ಯ ಈ ವಿಭೂತಿಯನ್ನು ಸೇವಿಸು ವಂತೆ ಹೇಳು ಮತ್ತು ಪ್ರತಿ ಸೋಮವಾರದಂತೆ ಹತ್ತು ವಾರದ ವರೆಗೆ ಐದು ಜನ ಗಣಂಗಳಿಗೆ ಸಿಹಿ ಭೋಜನದಿಂದ ತೃಪ್ತಿಪಡಿಸಿರಿ. ಆಗ ಆ ದೆವ್ವ ನಿಮ್ಮವರಲ್ಲಿ ಉಳಿಯಲಿ ನೋಡೋಣ ಎಂದು ಆಶೀರ್ವಾದ ಮಾಡಿ ಕಳುಹಿದರು.

ಬಳಿಕ ಬಾಳವ್ವ ಸ್ವಾಮಿಗಳ ಅಪ್ಪಣೆಯಂತೆ ಭಕ್ತಿ ವಿಶ್ವಾಸಗಳಿಂದ ವಿಭೂತಿಯ ಲೇಪನ ಸೇವನೆಯಿಂದಲೂ ಜಂಗಮಾರ್ಚನೆಯಿಂದಲೂ ಅವರ ಮನೆಯನ್ನೇ ಗುತ್ತಿಗೆ ಹಿಡಿದು ಕಾಡುತ್ತಿದ್ದ ಎರಡು ವಾರ ಕಳೆಯುವದರೊಳ ಗಾಗಿ ಚೀರುತ್ತ ಎತ್ತಲೋ ಪಲಾಯಣ ಮಾಡಿ ತಿರುಗಿ ಗಂಗಪ್ಪನ ಮನೆಯತ್ತ ಸುಳಿಯದಾಯಿತು. ಆಗ ಗಂಗಪ್ಪನಿಗೆ ಬುದ್ಧಿ ಸಂಚಾರವಾಗಿ ಸ್ವಾಮಿಗಳ ಸನ್ನಿಧಿಗೆ ಬಂದು ತನ್ನ ತಪ್ಪನ್ನು ಕ್ಷಮಿಸಿ ಕೃಪೆದೋರಿದ ಕರುಣಾನಿಧಿಯೇ ತಮ್ಮ ಮಹಿಮೆಯನ್ನರಿಯದ ಮೂಢನಾದ ನನ್ನ ಅಪರಾಧವನ್ನು ಕ್ಷಮಿಸಿ ನನ್ನ ಮನದಾಸೆಯಂತೆ ಬಿನ್ನಹಕ್ಕೆ ಆಗಮಿಸಿ ನನ್ನ ಗೃಹವನ್ನು ಪಾವನಗೊಳಿಸ ಬೇಕೆಂದು ಬೇಡಿಕೊಳ್ಳಹತ್ತಿದನು.

ಆಗ ಸ್ವಾಮಿಗಳು ಗಂಗಪ್ಪನ ಜಿಪುಣ ಗುಣವನ್ನು ಅಳಿಸುವದಕ್ಕಾಗಿ ಗಂಗ್ಯಾ ನಮ್ಮ ಪಂಕ್ತಿಯಲ್ಲಿ ನೂರೊಂದು ಗಣಂಗಳಿಗೆ ಅನ್ನ ಸಂತರ್ಪಣೆ ಯಾಗಬೇಕು ಅಂದರೇನೇ ನಾವು ನಿನ್ನ ಮನೆಗೆ ಬರುವದೆಂದು ತಿಳಿಸಿದರು. ಅದಕ್ಕೆ ಗಂಗಪ್ಪನು ನಸು ನಾಚಿಕೆಯಿಂದ ಬುದ್ಧಿ ನನ್ನ ಮನದ ಆಸೆ ಯನ್ನು ಅಳಿದು ನಿರ್ಮಲ ಬದುಕಿನ ಮಾರ್ಗ ತೋರುವದಕ್ಕೆಂದೆ ತಾವು ಈ ರೀತಿ ನುಡಿಯುತ್ತಿದ್ದೀರಿ ತಮ್ಮ ಅಪ್ಪಣೆಯಂತೆ ಯಾವತ್ತರನ್ನೂ ಸಿಹಿ ಭೋಜನದಿಂದ ತೃಪ್ತಿಪಡಿಸಿ ತಮ್ಮ ಕೃಪೆಗೆ ಪಾತ್ರನಾಗ ಬಯಸಿರುವೆನು

ಚಿತ್ರಯಿಸುವದಾಗಬೇಕೆಂದು ಸಾಷ್ಟಾಂಗ ಹಾಕಿದನು. ಆಗ ಸ್ವಾಮಿಗಳು ಸಿಹಿ ಭೋಜನದಿಂದ ತೃಪ್ತರಾಗಿ ಬಳಿಕ ದಾನ ದಕ್ಷಿಣೆಯ ಕಾರ್ಯವನ್ನು ಉತ್ಸಾಹದಿಂದ ಜರುಗಿಸಿ ಸ್ವಾಮಿಗಳ ಕೃಪಾಶೀರ್ವಾದಗಳ ಬಲದಿಂದ ಗಂಗಪ್ಪನ ಮನೆತನ ಮತ್ತಷ್ಟು ಅಭಿವೃದ್ಧಿ ಹೊಂದಿ ದೈವಭಕ್ತಿಯುತ ಸಕಲ ಭೋಗ ಭಾಗ್ಯಗಳನ್ನು ಪಡೆದ ಶ್ರೀ ಶಿವಯೋಗಿಗೆ ಸಾಮ್ರಾಟ ಮಡಿವಾಳೇಶ್ವರ ಸ್ವಾಮಿಗಳ ಅನುಗ್ರಹದಿಂದ ಸುಖದಿಂದ ಬಾಳಿಕೊಂಡಿದ್ದನು

....

೧೧. ರುದ್ರಪ್ಪನನ್ನು ಐಶ್ವರ್ಯರಕ್ಷಣೆಗೆ ಕಳುಹಿಸಿದ್ದು

ಒಮ್ಮೆ ಸ್ವಾಮಿಗಳು ಶಿವಧ್ಯಾನ ತಲ್ಲೀನತೆಯಲ್ಲಿರುವಾಗ ಗುರ್ಲ ಹೊಸೂರ ಗ್ರಾಮದ ಕೆಲವು ಭಕ್ತರೊಡಗೂಡಿ ರುದ್ರಪ್ಪ ಎಂಬವನು ತನ್ನ ಹೆಂಡತಿಯನ್ನು ಕರೆದುಕೊಂಡು ಸ್ವಾಮಿಗಳ ಮಠಕ್ಕೆ ಬಂದು ಭಕ್ತಿಯಿಂದ ನಮಸ್ಕರಿಸಿ--ಬುದ್ಧಿ ಮಠಕ್ಕೆ ಪ್ರಸ್ಥ ಮಾಡಬೇಕೆಂದು ಬಹುದಿನಗಳಿಂದ ಆಸೆಯಿದೆ ತಮ್ಮ ಅಪ್ಪಣೆಯಾಗಬೇಕೆಂದು ಬಿನ್ನವಿಸಿಕೊಂಡನು.

ಆಗ ಸ್ವಾಮಿಗಳು ಶಿವನ ಅಪ್ಪಣೆಯೇ ಹಾಗಿ ಇರುವಾಗ ನಾವೇಕೆ ಬೇಡವೆಂದು ಅಡ್ಡಿಪಡಿಸೋಣ. ನಿನ್ನ ಮನದಾಸೆಯಂತೆ ಪ್ರಸ್ತವನ್ನು ಜರುಗಿಸಬಹುದೆಂದು ಅಪ್ಪಣೆಯನ್ನು ದಯಪಾಲಿಸಿದರು. ಆಗ ರುದ್ರಪ್ಪನು ತನ್ನ ಬಂಧು—ಬಾಂಧವರಾದಿಯಾಗಿ ಸ್ನೇಹಿತರೊಡಗೂಡಿ ಆಡ್ಡೂರಿಯಿಂದ ಅನ್ನ ಪ್ರಸ್ತವನ್ನು ಗರಗದ ಮಡಿವಾಳೇಶ್ವರ ಸ್ವಾಮಿಗಳ ಮಠದಲ್ಲಿ ಮಾಡಿಸಿ ಸ್ವಾಮಿಗಳ ಮನತಣಿಸಿ ಅವರ ಕೃಪಾಶೀರ್ವಾದ ಪಡೆದು ಬಳಿಕ ಯಾವತ್ತರೂ ಸ್ವಾಮಿಗಳ ಅಪ್ಪಣೆಯಂತೆ ತಮ್ಮ ಗ್ರಾಮಕ್ಕೆ ತೆರಳ ಬಯಸಿದರು. ಆಗ ಸ್ವಾಮಿಗಳು ರುದ್ರಪ್ಪನನ್ನು ಕರದು–ರುದ್ರಾ ಅನ್ನದಾನಕ್ಕಿಂತ ಇನ್ನೂ ದಾನ ಉಂಟೇ ಪ್ರಸಾದ ಹಂಚುವ ಕಾರ್ಯ ಮಾಡಿ ಪುಣ್ಯಶಾಲಿಯಾದೆಪ್ಪಾ ಶಿವನು ನಿನ್ನಸರ್ವ ಸಂಪತ್ತನ್ನು ಕಾಯುತ್ತಾನೆ ಎಂದು ಸಹಜವಾಗಿ ನುಡಿದು ಅವನ ಹೆಂಡತಿಯನ್ನು ಆಶೀರ್ವದಿಸುತ್ತ ಮಗಳೆ ವರುಷ ತುಂಬುವದರೊಳಗಾಗಿ ಗಂಡು ಮಗನ ತಾಯಿಯಾಗುವೆಯಮ್ಮಾ

ಎಂದು ಮಮತೆಯಿಂದ ಆಶೀರ್ವದಿಸಿದರು. ಆ ಮೇಲೆ— ರುದ್ರಾ ಇಂದು ಇಲ್ಲೇ ಮಠದಲ್ಲಿ ಉಳಿದುಕೊಳ್ಳುವಿಯೋ ಊರಿಗೆ ಹೋಗುವಿಯೋ ಎಂದು ಕೇಳಿದರು, ಯಾಕಂದರೆ ಉಳಿದವರೆಲ್ಲರೂ ಆಗಲೇ ಊರಿಗೆ ಹೋಗಿಬಿಟ್ಟಿದ್ದರು. ಆಗ ರುದ್ರಪ್ಪನು ಭಯಭಕ್ತಿಯಿಂದ ಗರಜೋಡಿಸಿ ಬುದ್ಧಿ ಈಗಾಗಲೆ ಹೊತ್ತು ಮುಳುಗುವ ಸಮಯವಾಗಿದೆ. ಈಗ ಹೊರಟು ಊರ ಮುಟ್ಟಬೇಕಾದರೆ ಮಧ್ಯರಾತ್ರಿ ಯಾಗಬಹುದು ಅದಕ್ಕಾಗಿ ಇಂದು ರಾತ್ರಿ ಇಲ್ಲೇ ಮಠದಲ್ಲಿ ಉಳಿದು ಬೆಳಿಗ್ಗೆ ಊರಿಗೆ ಹೊರಡಬೇಕೆಂದಿರುವೆನು ಎಂದು ಭಯದಿಂದ ನುಡಿದನು. ಆಗ ಸ್ವಾಮಿಗಳಿಗೆ ಅದೇನು ತಿಳಿಯಿತೋ ಏನೋ ರಾತ್ರಿಯಾದರೇನಾಯಿತು, ಊರಿಗೆ ಹೋಗಲೇ ಅಲ್ಲಿ ಮನೆ ಮುಂದೆ ಯಾರು ಎಂದು ಒತ್ತಾಯದಿಂದ ಊರಿಗೆ ಕಳುಹಿಸಿದರು. ರುದ್ರಪ್ಪನಾದರೂ ಶಿವಯೋಗಿಗಳ ವಾಣಿಯಲ್ಲಿ ಅದೇನಾದರೂ ಗೂಢವಿರಲೇಬೇಕೆಂದು ಹೊತ್ತು ಮುಳುಗಿ ಕತ್ತಲಾಗಿದ್ದರೂ ಅವರ ಅಪ್ಪಣೆಯಂತೆ ಊರಿಗೆ ಹೊರಟು ಬಂದನು. ದೊಡ್ಡವರ ಮಾತು ಮೀರಬಾರದೆಂಬ ತತ್ವವನ್ನು ಅಂತ ರುದ್ರಪ್ಪ ಊರಿಗೆ ಹೊರಟು ಬಂದನು ಮನೆಯತ್ತ ಬರುತ್ತಿರಲು ಅಂತ ರುದ್ರಪ್ಪನ ಮನೆಗೆ ಕನ್ನವಿಕ್ಕಿ ಮನೆಯೊಳಗಿನ ಬದುಕನ್ನು ಒಯ್ಯುವ ಸಿದ್ಧತೆಯಲ್ಲಿದ್ದರು ಆಗ ರುದ್ರಪ್ಪ ಬರುತ್ತಿರುವ ಸುಳುವು ಗೊತ್ತಾಗಿ ಅಪಹರಿಸಿದ ಬದುಕನ್ನು ಮನೆಯಲ್ಲಿ ಚಲ್ಲಾಪಿಲ್ಲಿಯಾಗುವಂತೆ ಹಾಗೆ ಬಿಟ್ಟು ಮನೆಯ ಹಿಂದಿನ ಭಾಗದಿಂದ ಪಾರಾಗಿ ಓಡಿ ಹೋದರು.

ಬಳಿಕ ರುದ್ರಪ್ಪನು ಕದ ತೆರೆದು ಒಳಗೆ ಹೋಗಿ ನೋಡುತ್ತಾನೆ ಬೆಳ್ಳಿ ಬಂಗಾರ ನಗ ನಾಣ್ಯ ಕಿಮ್ಮತ್ತಿನ ಬಟ್ಟೆಬರೆಗಳು ಮನೆತುಂಬ ಚಲ್ಲಾಪಿಲ್ಲಿಯಾಗಿ ಬಿದ್ದಿರುವದನ್ನು ಕಂಡು ಹೌಹಾರಿದನು. ಹಾಗೇ ಮುಂದೆ ಒಳಗೆ ಹೋಗಿ ನೋಡಲು ಕಳ್ಳ ಕೊರೆದ ಕನ್ನಗಿಂಡಿಯನ್ನು ಕಂಡು ಮತ್ತಷ್ಟು ಗಾಬರಿಪಟ್ಟು ತನ್ನ ಸಂಪತ್ತನ್ನು ಸರಿಯಾಗಿ ನೋಡಿಕೊಂಡು ಒಂದು ಗುಂಜಿ ಬಂಗಾರ ಬೆಳ್ಳಿಯಾಗಲಿ ಒಂದು ನಾಣ್ಯವಾಗಲಿ ಬಟ್ಟೆ ಬರೆಗಳನ್ನಾಗಲಿ ಕಳ್ಳರು ಅಪಹರಿಸಿಲ್ಲವೆಂದು ತಿಳಿದು ಸಮಾಧಾನ ಉಸುರು ಬಿಟ್ಟು ಹೆಂಡತಿಯೊಡಗೂಡಿ, ಮಡಿವಾಳೇಶ್ವರಾ ತಂದೆ ಗುರುವೇ ಅಂತೇ ನಮ್ಮನ್ನು ಒತ್ತಾಯದಿಂದ ಊರಿಗೆ ಅಟ್ಟಿ ನಮ್ಮ ಸಂಪತ್ತನ್ನು ಕಾಪಾಡಿ

ದಿಯಾ ನಿನ್ನ ಮಹಿಮೆ ಸಾಮಾನ್ಯ ಮಾನವರಾದ ನಮಗೆಂದು ತಿಳಿಯು ಬೇಕು. ಮಹಿಮಾಪುರುಷಾ, ನಿನ್ನ ಲೀಲೆ ಅಗಾಧ ಅಥವ್ಯ ಅಗೋಚರ ವೆಂದು ಮನಸಾರೆ ಕೊಂಡಾಡಿದನು ಮತ್ತು ಶ್ರೀ ಸ್ವಾಮಿಗಳ ಕೃಪಾಶೀರ್ವಾದ ಗಳ ಬಲದಿಂದ ಸಕಲ ಸುಖ ಸಂಪತ್ತಿನಿಂದ ಬಾಳಿ ಬದುಕಿ ನಿಜಾನಂದ ಹೊಂದುವವನಾದನು.

....

೧೧. ಕಲೆಕ್ಟರ ಸಾಹೇಬರ ಗರ್ವಹರಣ ಮಾಡಿದ್ದು

ಸ್ವಾಮಿಗಳು ದಿಗಂಬರರಾಗಿ ತಮ್ಮ ಯೋಗಸಾಧನೆಯನ್ನು ಸಾಗಿಸಿ ಕೊಂಡಾಡಿದ್ದರು ನೋಡುವ ಸಕಲ ಅಲ್ಪ ಜ್ಞಾನಿಗಳಿಗೆ ಇರುವ ದಿಗಂಬರತ್ವವು ನಾಚಿಕೆ ತರುವಂತಹದಾದರೂ ಸ್ವಾಮಿಗಳು ವಿಕಾರವೆಂದರೆ ಏನು ಅನ್ನುವ ದನ್ನು ಅರಿತೂ ಅರಿಯದವರಂತೆ ಅರಶಿಗಳನ್ನು ಇರಿದು ತೂರಿ ತೂರ್ಯಾ ವಸ್ಥೆಯ ತುತ್ತ ತುದಿಯಲ್ಲಿ ಶಿವಸಾಕ್ಷಾತ್ಕಾರದ ಸಾಧನೆಯಲ್ಲಿದ್ದರು.

ಒಮ್ಮೆ ಧಾರವಾಡದಿಂದ ಕಲೆಕ್ಟರ ಸಾಹೇಬರು ಗರಗದ ಸ್ವಾಮಿಗಳ ಮಠಕ್ಕೆ ಬಂದು ಸ್ವಾಮಿಗಳಿಗೆ ವಿನಯ ಭಕ್ತಿಯಿಂದ ನಮಸ್ಕರಿಸಿ ಅವರ ದಿಗಂಬರ ರೂಪವನ್ನು ಕಂಡು ತುಸು ನಾಚಿ ತಾವು ಲಂಗೋಟಿಯನ್ನು ಬಿಸುಟ ಮೈತುಂಬ ಬಟ್ಟೆಗಳನ್ನು ಧರಿಸಲೇಬೇಕೆಂದು ಅಧಿಕಾರಿ ಮದಾಂಧತೆ ಯಿಂದ ಒತ್ತಾಯಿಸಿದನು. ಆಗ ಸ್ವಾಮಿಗಳು--ಅಯ್ಯಾ ಜಗದ ಜಂಜಡ ದಿಂದ ದೂರಾದ ವಿರಕ್ತರಿಗೇಕೆ ವೇಷ ಭೂಷಣಗಳ ಆಶೆಯೆಂದು ಬಹುವಾಗಿ ತಿಳಿಸಿದರೂ ಸಾಹೇಬನ ಅಧಿಕಾರವಾಣಿ ತನ್ನ ಹಟವನ್ನು ಬಿಡಲಿಲ್ಲ ಬಳಿಕ ಅನಿವಾರ್ಯವೆಂದು ಶಿವಯೋಗಿಗಳು ಬಟ್ಟೆಗಳನ್ನು ತೊಟ್ಟು ಕೊಂಡರು. ಈಗ ಸಾಹೇಬನು ತನ್ನ ಅಧಿಕಾರದ ಉಪಯೋಗವಾಯಿತು ಎಂಬ ಉಬ್ಬಿನಲ್ಲಿ ಯುರೋಪಿಯನ್ನರ ದರ್ಪದ ಮುಂದೆ ಸ್ವಾಮಿಗಳೇನು ಮಹಾ ಎಂದು ತಾತ್ಸಾರ ಭಾವನೆಯುಳ್ಳವನಾದನು:

ಬಳಿಕ ಗರಗದ ಭಕ್ತರು, ಸ್ವಾಮಿಗಳು ಯುರೋಪಿಯನ್ನ ಸಾಹೇಬ ನಿಗೆ ಮಣಿದು ಮೂಕರಾಗಿ ಬಟ್ಟೆ ಧರಿಸಿದರಲ್ಲಾ ಎಂದು ಅಚ್ಚರಿಪಟ್ಟರು ಅದರಲ್ಲಿ ಶಿವಯೋಗಿಗಳು ಲೀಲಾ ವಿಲಾಸವನ್ನು ಗುರುತಿಸಿದ ಕೆಲವರು

ಸಾಹೇಬನ ಬಗ್ಗೆ ಇಷ್ಟೊಂದು ಸಾಧುವಾಗಿ ವರ್ಣಿಸಿದ ಶಿವಯೋಗಿಗಳ ವರ್ತನೆಯಲ್ಲಿ ಅದೇನೋ ಗೂಢವಾದ ಪವಾಡ ಪ್ರಸಂಗ ಅಡಕವಾಗಿದೆಯಲ್ಲದೆ, ಆ ಸಾಹೇಬನ ಹಣೆಯ ಬರಹದಲ್ಲಿ ಅದೇನು ಕೇಡು ಕಾದಿದೆಯೋ ಬಲ್ಲವರಾರು ಎಂದು ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳಹತ್ತಿದರು.

ಅಷ್ಟರಲ್ಲಿ ಮಠದಲ್ಲಿ ಹೊರಟು ಸಾಹೇಬರು ಗರಗ ಗ್ರಾಮವನ್ನು ದಾಟಿ ಕುದುರೆಯನ್ನು ಓಡಿಸುತ್ತ ಒಂದರ್ಧ ಮೈಲು ಹೋಗಿರಬಹುದು ಆಗ ಅವನ ಮೈಮೇಲಿನ ಬಟ್ಟೆಗಳೆಲ್ಲವೂ ತಮ್ಮಿಂದ ತಾವೇ ಅದು ಹೇಗೆ ಮಾಯವಾದವೋ ಏನೋ ! ಸಾಹೇಬನು ದಿಗಂಬರನಾಗಿ ಕುದುರೆಯ ಮೇಲೆ ಕುಳಿತವನು ತನ್ನಲ್ಲಿ ತಾನೇ ಅಚ್ಚರಿಪಟ್ಟನು. ಅಲ್ಲದೆ ನಾಚಿಕೆಯೆಂಬುದು ಆವರಿಸಿ, ಬತ್ತಲೆಯಾಗಿದ್ದ ತನ್ನ ಸ್ಥಿತಿಗೆ ತಾನೇ ಹಳಹಳಿಸುತ್ತ ಇವೆಲ್ಲವೂ ಶಿವಯೋಗಿ ಸಾಮ್ರಾಟ ಮಡಿವಾಳೇಶ್ವರ ಸ್ವಾಮಿಗಳಿಗೆ ಒತ್ತಾಯದಿಂದ ಬಟ್ಟೆಹಾಕಿಕೊಳ್ಳುವಂತೆ ಆಜ್ಞಾಪಿಸಿದ್ದಕ್ಕೆ ತಕ್ಕ ಪ್ರಾಯಶ್ಚಿತ್ತವಾಯಿತೆಂದು ತನ್ನ ಮೂಢಮತಿಯನ್ನು ತಾನೇ ಹಳಿಯುತ್ತ ತಿರುಗಿ ದಿಗಂಬರನಾಗಿಯೇ ಮಠಕ್ಕೆ ಬಂದನು. ಅತ್ತ ನೆರೆದ ಭಕ್ತ ಜನರು ಸಾಹೇಬನ ಸ್ಥಿತಿಯನ್ನು ನೋಡಿ ಮರುಗಿದರಲ್ಲದೆ, ತಮ್ಮ ತರ್ಕದಂತೆ ತಕ್ಕ ಶಾಸ್ತಿಯಾಗಿದೆ ಎಂದರು. ಆಗ ಸಾಹೇಬನು ಮಠಕ್ಕೆ ಬರುವದಷ್ಟೇ ತಡ ಮಡಿವಾಳೇಶ್ವರ ಸ್ವಾಮಿಗಳು ತಮಗೆ ಒತ್ತಾಯದಿಂದ ತೊಡಿಸಿದ ಬಟ್ಟೆಗಳನ್ನು ಕಳೆದು ಬಿಸಾಕಿ ಮತ್ತೆ ಲಂಗೋಟಿಯನ್ನು ಧರಿಸಿದರು. ಆಗ ತತ್‌ಕ್ಷಣದಲ್ಲಿ ಸಾಹೇಬನ ಬಟ್ಟೆಗಳು ಅದಾವ ಮಾಯೆಯಿಂದ ಅವನ ಮೈಮುಚ್ಚಿ ಮರ್ಯಾದೆಯನ್ನುಳಿಸಿದವೋ ಏನೋ. ಆಗ ಯುರೋಪಿಯನ್ ಸಾಹೇಬನಿಗೆ ತನ್ನ ತಪ್ಪಿನ ಅರಿವಾಗಿ ಸ್ವಾಮಿಗಳ ಪಾದಕ್ಕೆ ನಮಸ್ಕರಿಸಿ—ಬುದ್ಧಿ ನನ್ನಿಂದಾದ ಅಪರಾಧವನ್ನು ಕ್ಷಮಿಸಿ ಕೃಪೆದೋರಿ ನನ್ನ ಮರ್ಯಾದೆ ಉಳಿಸಿದಿರಿ ತಮ್ಮ ಲೀಲೆ ಅಗಾಧ ಅಗಮ್ಯ. ತಮ್ಮ ಮಹಿಮೆಯ ಮರ್ಮವನ್ನರಿಯದೇ ಅವಿವೇಕಿಯಾಗಿ ತಮ್ಮ ದಿವ್ಯ ಯೋಗ ಸಾಧನೆಗೆ ಅಡ್ಡಿ ಮಾಡಿದ ಅಧಮ ನಾನು ಎಂದು ಪದೇ ಪದೇ ವಂದಿಸಿ ಸ್ವಾಮಿಗಳ ಅಪ್ಪಣೆಯಂತೆ ಧಾರವಾಡಕ್ಕೆ ಹೊರಟು ಹೋದನು.

ಬಳಿಕ ಸ್ವಾಮಿಗಳು ಕೂಡಿದ ಭಕ್ತ ಜನರನ್ನು ಉದ್ದೇಶಿಸಿ—ಕೊಟ್ಟೆ ಸೂಳೆ ಮಗ ಮೊದಲು ತಾ ಮತ್ತಿದಾ ನಾವು ಸರದ್ವಿ, ಈಗ ಶಿವ ಮತ್ತಿದಾ ಸಾಹೇಬ ಸರದಾ ಹೀಗಿದೆ ಜಗದ ವ್ಯಾಪಾರಾ ನೇರಿಗೆ ಸವ್ವಾಸೇರೇ ಉತ್ತಮ ಮದ್ದು ಎಂಪು ನಗೆಯಾಡಿದರು. ಭಕ್ತರಂತೂ ನಿಬ್ಬೆರಗಾಗಿ ಶಿವಯೋಗಿ ಗಳ ನುಡಿಯನ್ನಾಲಿಸುತ್ತ ಭಕ್ತಿಪರವಶತೆಯಲ್ಲಿ ಕರಜೋಡಿಸಿ ನಿಂತು ಕೊಂಡಿದ್ದರು.

---

೧೨. ಸ್ವಾಮಿಗಳನ್ನು ಸುಡಲೆತ್ನಿಸಿ ತಾನೇ ಬೆಂಕಿಗಾಹುತಿಯಾದ ಕೇಡಾಳಿ

ಒಂದೊಂದು ಸಾರೆ ಮಡಿವಾಳೇಶ್ವರ ಸ್ವಾಮಿಗಳು ಯೋಗಸಮಾಧಿ ಸ್ಥಿತಿಯಲ್ಲಿ ಉಳಿದುಕೊಂಡರೆ ಹೊತ್ತು ಗೊತ್ತುಗಳ ಗುರಿಯಿಲ್ಲದೆ ಮೂರು ಆರು ಒಂಭತ್ತು ಹನ್ನೊಂದು ದಿನಗಳವರೆಗೆ ಸಮಾಧಿಯಿಂದ ಮೇಲೇಳುತ್ತಿರ ಲಿಲ್ಲ. ತಾವು ಸಮಾಧಿಯಲ್ಲಿಯಂತೂ ದಿಗಂಬರರಾಗಿ ಜಗದ ವ್ಯಾಪಾರ ದಿಂದ ದೂರಾಗಿ ಶಿವಸಭೆಯಲ್ಲಿ ಶಿವಗಣ ಸಮೂಹದೊಡನೆ ಶಿವತತ್ವ ವಿಚಾರಗೋಷ್ಠಿಗೆ ಹೋಗಿರುತ್ತಿದ್ದರೆಂದು ಅವರ ಆಚರಣೆಯಿಂದ ತಿಳಿದುಕೊಳ್ಳು ವಂತೆ ಅವರ ಶಿವ ವೃತ ಸಾಗುತ್ತಿತ್ತು. ಒಂದೊಂದು ಸಲ ಮರಿದೇವರಾದ ಚರ ಸಿದ್ಧಲಿಂಗರು ಇನ್ನುಳಿದ ಸೇವಕರು ಅಚ್ಚರಿಯಿಂದ ನೋಡುತ್ತ ಕುಳಿತು ಶಿವ ಯೋಗಿಗಳನ್ನು ಸ್ತುತಿಸುತ್ತಿದ್ದರು.

ಹೀಗಿರಲು ಒಮ್ಮೆ ಶಿವಯೋಗಿಗಳು ಸಮಾಧಿಗೆ ಕುಳಿತುಕೊಂಡಿರು ವಾಗ ಕೇಡಾಳಿಯೊಬ್ಬನು ಸ್ವಾಮಿಗಳ ತಪಃಪ್ರಭಾವವನ್ನು ಲೆಕ್ಕಿಸದೆ ಸಾಗಿ ನಿಗಿಸುವ ಕೆಂಡದುಂಡಿಗಳನ್ನು ತಂದು ಸ್ವಾಮಿಗಳ ತಲೆಯ ಮೇಲೆ ಇಟ್ಟು ಹೊರಟು ಹೋದನು ಅದೇ ಸಮಯದಲ್ಲಿ ಸಜ್ಜನ ಸಾಧು ಸದ್‌ಗೃಹತ್ ನೋರ್ವ ಹಾದಿಯಲ್ಲಿ ಹೋಗುತ್ತಿದ್ದವನು ಶಿವಯೋಗಿಗಳ ತಲೆಯ ಮೇಲೆ ಕೆಂಡದ ಉಂಡಿ ನಿಗಿನಿಗಿಸುತ್ತಿರುವದನ್ನು ಕಂಡ ಕನಿಕರದಿಂದ ಓಡುತ್ತ ಬಂದು ತನ್ನ ಕೈ ಸುಡುವದೆಂಬ ಭಯವಿಲ್ಲದೆ, ಬೆಂಕಿಯನ್ನು ತೆಗೆದೊಗೆದು ಸ್ವಾಮಿಗಳ ಪಾದಗಳಿಗೆ ನಮಸ್ಕರಿಸಿ ಹೊರಟು ಹೋದನು.

ಬಳಿಕ ಕೆಲವು ಕಾಲ ಗತಿಸುವಷ್ಟರಲ್ಲಿ ಬೆಂಕಿಯನ್ನಿಟ್ಟು ಸ್ವಾಮಿಗಳನ್ನು ತಾಪಕ್ಕೆ ಗುರಿಪಡಿಸಲೆತ್ನಿಸಿದ ದುಷ್ಟ ದುರ್ಮಾರ್ಗಿಯು ದೀಪದ ಕುಡಿಯನ್ನು ಸರಿಸುವ ಸಮಯದಲ್ಲಿ ಬಟ್ಟೆಗೆ ಬೆಂಕಿ ಹೊತ್ತಿ ಉರಿದುಕೊಂಡು ಸತ್ತು ಹೋದನಲ್ಲದೆ, ಆತನ ಹೆಣವು ಅರೆಬೆಂದು ಹೋದ ಕಾರಣದಿಂದಹದ್ದು ಕಾಗೆಗಳಿಂದ ಆಹಾರವಾಯಿತು. ಆದರೆ ಸ್ವಾಮಿಗಳನ್ನು ಕೆಂಡದ ತಾಪದಿಂದ ಬಿಡುಗಡಿಸಲೆತ್ನಿಸಿ ತಲೆಯ ಮೇಲಿನ ಬೆಂಕಿಯನ್ನು ತೆಗೆದೊಗೆದು ಸಜ್ಜನ ಸದ್ಗೃಹಸ್ಥನ ವಂಶ ಉದ್ಧಾರವಾಗಿ ಪುತ್ರಪೌತ್ರಾದಿ ಸಕಲ ಸಂಪತ್ತಿಂದ ಸುಖ ಭೋಗ ಭಾಗ್ಯದಲ್ಲಿ ಶಿವಯೋಗಿಗಳ ನಿಜಭಕ್ತನಾಗಿ ಬಾಳಿ ಜೀವನ್ಮುಕ್ತಿಯನ್ನು ಹೊಂದಿದನು.

---

೧೩. ಸಿದ್ಧಲಿಂಗ ಮರಿದೇವರಿಗಿ ಅಹಿಂಸಾ ಬೋಧೆ ನೀಡಿದ್ದು

ಒಂದು ದಿನ ಶಿವಯೋಗಿಗಳು ಶಿವತತ್ವ ಬೋಧಾಮೃತದಿಂದ ಭಕ್ತರ ಮನವನ್ನು ತಣಿಸುತ್ತ ಹಸನ್ಮುಖಿಗಳಾಗಿ ಮಠದಲ್ಲಿ ಕುಳಿತಿದ್ದರು. ಶಿವಯೋಗಿಗಳ ಪ್ರವಚನ ಸಾಗಿರುವ ಸಮದಲ್ಲಿ ಬೆಕ್ಕೊಂದು ತನ್ನ ಕರ್ಕಶ ಕಂಠದಿಂದ ಒಂದೇ ಸನನ ಒದರುತ್ತ ಗದ್ದಲವನ್ನುಂಟುಮಾಡಿತು.

ಆಗ ಭಕ್ತ ಜನರ ಲಕ್ಷ್ಯ ಬೆಕ್ಕಿನ ಧ್ವನಿಯನ್ನು ತಿರುಗುತ್ತಿರುವದನ್ನು ಗುರ್ತಿಸಿದ ಮರಿದೇವರು ಬೆಕ್ಕನ್ನು ಹಿಡಿದು ಶಿಟ್ಟಿನಿಂದ ಹಳ್ಳದ ಮಡುವಿನಲ್ಲಿ ಬಿಸಾಕಿದರು. ಬೆಕ್ಕು ಮಡುವಿನಲ್ಲಿ ಬಿದ್ದು ಪ್ರಾಣದಾಸೆಯಿಂದ ಒಂದೇ ಸವನ ಚಟಪಡಿಸಹತ್ತಿತು. ಇಲ್ಲಿ ಮಠದಲ್ಲಿ ಕುಳಿತು ಸ್ವಾಮಿಗಳ ಮನಸ್ಸು ಬೆಕ್ಕಿನ ಪ್ರಾಣ ರಕ್ಷಣೆಗಾಗಿ ಚಡಪಡಿಸುವದಾಯಿತು. ಆಗ ಸ್ವಾಮಿಗಳು ತತ್ವ ಬೋಧನೆಯನ್ನು ಅಷ್ಟಕ್ಕೆ ನಿಲ್ಲಿಸಿ ತಾವು ಮಮತೆಯಿಂದ ಸಲುಹಿದ ಬೆಕ್ಕಿನ ಸ್ಥಿತಿಗಾಗಿ ಮರುಗುತ್ತ–ಅಜ್ಜಿ ಬಾ ಬಾ, ಅಜ್ಜಿ ಬಾ ಬಾ ಎಂದು ಕೈಮಾಡಿ ಕರೆಯುತ್ತ ಹಳ್ಳದತ್ತ ಮುಖ ತಿರುಗಿಸಿದರು. ಕೂಡಿದ್ದ ಭಕ್ತ ಜನತೆ ಬೆರಗಾಗಿ ಸ್ವಾಮಿಗಳನ್ನು ನೋಡುತ್ತ ಕುಳಿತವರು ತುಟಿ ಎರಡು ಮಾಡಲಿಲ್ಲ. ಅಷ್ಟರಲ್ಲಿ ಮಡುವಿನಲ್ಲಿ ಮುಳುಗೇಳುತ್ತಿದ್ದ ಬೆಕ್ಕು ಸರಾಗವಾಗಿ

ನೀರಲ್ಲಿ ಈಸಿಕೊಂಡು ಸ್ವಾಮಿಗಳ ಧ್ವನಿಯತ್ತ ಓಡಿ ಬಂದು ಶಿವಯೋಗಿಗಳ ತೊಡೆಯೇರಿ ಕುಳಿತು ಮಮತೆಯಲ್ಲಿ ಸ್ವಾಮಿಗಳ ಮೈ ಕೈ ನೆಕ್ಕುವದಾಯಿತು.

ಆಗ ಶಿವಯೋಗಿಗಳು ಮರಿದೇವರನ್ನು ಕರೆದು ಮೂಕ ಪ್ರಾಣಿಗಳ ಬಗ್ಗೆ ದಯಾ ಬುದ್ಧಿ ಇರಬೇಕು. ಸಿಟ್ಟಿನ ಭರದಲ್ಲಿ ನೀರಿಗೆಸೆದು ಪ್ರಾಣಹತ್ಯ ದೋಷಕ್ಕೆ ಗುರಿಯಾಗುತ್ತಿದ್ದಿರಲ್ಲಾ ಎಂದು "ದಯವೇ ಧರ್ಮದ ಮೂಲ" ಎಂಬ ಪಾಠ ವನ್ನು ತಿಳುಹಿಸಿದರು ಆಗ ಮರಿದೇವರು ತಮ್ಮಿಂದ ಜಿಕ್ಕಿಗಾದ ಪ್ರಾಣಾಪಾಯದ ಪ್ರಸಂಗವನ್ನು ಭಕ್ತರ ಸಮ್ಮುಖದಲ್ಲಿ ವಿವರಿಸಿ ಇನ್ನೆಂದೂ ಇಂತಹ ಕಾರ್ಯ ವನ್ನು ಮಾಡುವದಿಲ್ಲವೆಂದು ಶಪಥಗೈದರು.

ಆಗ ಸ್ವಾಮಿಗಳು ಮರಿದೇವರಿಂದ ಮಾಡಿದ ತಪ್ಪಿನ ಪ್ರಾಯಶ್ಚಿತ್ತವೆಂದು ಏಕಾದಶ ರುದ್ರ ಪೂಜೆಯನ್ನು ಮಾಡಿಸಿ ಗಣತೃಪ್ತಿಪಡಿಸಿ ಪಾಪದಿಂದ ಮುಕ್ತರ ನ್ನಾಗಿ ಮಾಡಿದರು. ಬಳಿಕ ಮರಿದೇವರಾದ ಚರಶಿದ್ಧಲಿಂಗರು ಗುರು ಮಡಿವಾ ಳೇಶ್ವರ ಸ್ವಾಮಿಗಳು ಹಾಕಿಕೊಟ್ಟ ಪಾಠವನ್ನು ತಪ್ಪದೇ ಪಾಲಿಸುವವರಾದರು.

....

೧೪. ಬಿದರೂರ ಶಿದ್ದಪ್ಪ ಶಿದ್ಧಾರೂಢ ಸ್ವಾಮಿಗಳಾದದ್ದು

ಒಂದು ದಿವಸ ಮಡಿವಾಳೇಶ್ವರರು ಶಿವಯೋಗಿಗಳ ಯೋಗಬಲ ಸಾಧನೆ ಬಗ್ಗೆ ಮರಿದೇವರಾದ ಸಿದ್ಧಲಿಂಗರಿಗೆ ಬೋಧಿಸುತ್ತ ಕುಳಿತಿದ್ದರು. ಇದೇ ಸಮ ಯದಲ್ಲಿ ವೈರಾಗ್ಯ ತಾಳಿ, ಶಾಂತಿಯೇ ತನ್ನ ಮೂಲ ಮಂತ್ರವಾಗಿರಲೆಂದು ಅನುದಿನವು ಪ್ರಯತ್ನಿಸುತ್ತ ಧರ್ಮ ಸಂಸ್ಕೃತಿಯನ್ನು ಅರಿತು ಅರಗಿಸಿಕೊಳ್ಳುವ ಆಸೆಯುಂತೆ ಹುಟ್ಟೂರು ಬಿದರೂರು ತೊರೆದು ಹುಬ್ಬಳ್ಳಿಯಲ್ಲಿ ವಾಸವಾಗಿದ್ದರೂ ಮನಸ್ಸಿನ ಆಸೆಯಂತೆ ಗುರುಕಾರುಣ್ಯದ ಬೀಜವನ್ನು ಅರಸುತ್ತ ಸ್ವಾಮಿಗಳ ಸನ್ನಿಧಿಗೆ ಬಂದನು.

ಹುಡುಗನು ಮಠದಲ್ಲಿ ಕಾಲಿಡುತ್ತಲೆ ಸ್ವಾಮಿಗಳ ಶ್ರೀಪಾದಗಳಿಗೆ ಪೂಜಮುಟ್ಟು ಕರಜೋಡಿಸಿ ವಿನಯಶೀಲ ಸೌಜನ್ಯ ಭಾವದಲ್ಲಿ ನಿಂತು

ಕೊಂಡನು. ಆಗ ಸ್ವಾಮಿಗಳು ಆ ತೇಜಸ್ವಿ ತರುಣನನ್ನು ವಾತ್ಸಲ್ಯ ಭಾವದಿಂದ ಮಾತನಾಡಿಸುತ್ತ--ಅಯ್ಯಾ ನೀನಾರು ನೀನಿರುವ ಸ್ಥಳವಾವದು ತಂದೆ ತಾಯಿ ಬಂಧು ಬಳಗ ಉಂಟೋ, ಇಲ್ಲಿಯ ವರೆಗೆ ಬಂದ ಕಾರಣವನ್ನು ತಿಳುಹಿಸಿ ಮೇಲೆ ಬಾರಯ್ಯಾ ಎಂದು ಪ್ರೀತಿಯಿಂದ ಪ್ರಾರಂಭಿಸಿದರು.

ಬಳಿಕ ಆ ತರುಣನು—ಗುರುವೆ ನನ್ನ ಹುಟ್ಟೂರು ಬಿವರೂರು ನನ್ನ ಹೆಸರು ಸಿದ್ದಪ್ಪ ತಂದೆ ತಾಯಿ ಬಂಧು ಬಳಗ ಎಲ್ಲರೂ ಇದ್ದಾರೆ. ಆದರೆ ನನಗೆ ಪರಮಾತ್ಮನ ಇರುವನ್ನು ಅರಿಯುವ ಅಭಿಲಾಷೆ ಹುಟ್ಟಿ ಲೌಕಿಕ ಸಂಕೋಲೆ ಗಳನ್ನು ಹರಿದೊಗೆದು ಜ್ಞಾನಾರ್ಜನೆಗೋಸ್ಕರ ಹೊರಟು ಬಂದು ಹುಬ್ಬಳ್ಳಿ ಯಲ್ಲಿ ನೆಲೆಸಿರುವೆನು. ಆದರೆ ಅಲ್ಲಿಯೂ ನನ್ನ ಮನಸ್ಸಿಗೆ ನಿಜವಾದ ಶಾಂತಿ ದೊರಕದಾಯಿತು. ಅಂತೆ ತಮ್ಮ ಇರುವನ್ನು ಅರಿತುಕೊಂಡು ತಮ್ಮ ಸನ್ನಿಧಿಗೆ ಹೊರಟು ಬಂದಿರುವೆನೆಂದು ವಿನಯದಿಂದ ನುಡಿಯುತ್ತ ಕರಗಳನ್ನು ಜೋಡಿಸಿದನು.

ಆಗ ಸ್ವಾಮಿಗಳು, ತಮ್ಮಾ ನಿನಗೇನು ಬೇಕು ಅದನ್ನು ಪಡೆದುಕೊಂಡು ಹೋಗಬಹುದು ಸೇವೆ ಮಾಡುವ ನಿನ್ನ ಸಹಕಾರ ಭಾವಕ್ಕೆ ಮೆಚ್ಚಿದ್ದೇವೆ. ಆದರೆ ನಿನ್ನ ಜೀವನ ಮುನ್ನೋಟವನ್ನು ನೋಡಿದರೆ ನಿನ್ನಸೇವೆಗಾಗಿ ಹುಬ್ಬಳ್ಳಿಯೇ ಸಿದ್ಧವಾಗುವಹೆಂದು ಅರಿತುಕೊಂಡು ವೈರಾಗ್ಯದ ನಿಸ್ಸೀಮ ಗುರುವೆನಿಸಿ ಬಾಳುವವನಾಗು ಎಂದು ಆಶೀರ್ವದಿಸಿದರು.

ಆಗ ತರುಣ ಸಿದ್ಧಪ್ಪನು—ಬುದ್ಧಿ ತಮ್ಮ ಸೇವಾ ಭಾಗ್ಯಪಡೆದು ಭವಬಂಧನವನ್ನು ದೂರೀಕರಿಸುವ ಆಸೆಯಿಂದ ಬಂದಿರುವೆನು ಕರುಣಾಕರ ಮೂರುತಿಯೇ ಆದರಿಸಿ ರಕ್ಷಿಸುವ ಮನಸ್ಸು ಮಾಡಬೇಕೆಂದು ಬೇಡಿ ಕೊಂಡನು. ಬಳಿಕ ಶಿವಯೋಗಿ ಮಡಿವಾಳೇಶ್ವರ ಸ್ವಾಮಿಗಳು ಉಪಾಯ ಗಾಣದೆ ಒಪ್ಪಿಕೊಂಡು- ತಮ್ಮಾ ನೀನು ಇಂದಿನಿಂದ ನಾವು ಹಾಕಿ ಕೊಟ್ಟ ಕಾಯಕವನ್ನು ತಪ್ಪದೇ ಪಾಲಿಸಬೇಕು. ದಿನಾಲು ಊರಿನಲ್ಲಿ ಭಿಕ್ಷೆ ಬೇಡಿ ಜೀವನಸಾಗಿಸಬೇಕೆಂದು ಅಪ್ಪಣೆ ಮಾಡಿದರು. ಆಗ ಸಿದ್ದಪ್ಪನು ಸ್ವಾಮಿಗಳ ಆಶೀರ್ವಾದದಂತೆ ಎಲ್ಲ ಕಾರ್ಯಗಳನ್ನು ನಿರ್ವಂಚನಾ ಬುದ್ಧಿಯಿಂದಮಾಡಿ

ಸ್ವಾಮಿಗಳ ಸೇವೆಯಲ್ಲಿಯಂತೂ ಸ್ವಾಮಿಗಳ ಮನಸ್ಸನ್ನೇ ಸೂರೆಗೊಂಡು ಸೇವಾ ಕಾರ್ಯ ತತ್ಪರತೆಯಲ್ಲಿ ನಿಷ್ಠಾವಂತ ಎನಿಸಿದನು, ಮತ್ತು ಶಿವಯೋಗಿಗಳ ತತ್ವ ಶಾಸ್ತ್ರಗಳನ್ನು ಬಹುಬೇಗ ಅರಿತು ಅರಗಿಸಿಕೊಂಡನು. ಪ್ರತಿನಿತ್ಯವೂ ಶಿವಯೋಗಿಗಳ ತತ್ವೋಪದೇಶ ಪಡೆದು ಕೃತಾರ್ಥನಾದನು.

ಒಂದು ದಿನ ಸಿದ್ದಪ್ಪನ ಸೇವೆಯಿಂದ ಸಂತುಷ್ಟರಾದ ಸ್ವಾಮಿಗಳು ಆತನನ್ನು ಕರೆದು-ಸಿದ್ದಪ್ಪಾ ನಿನ್ನ ಪೂರ್ವ ಸುಕೃತ ಫಲ ವಿಶೇಷದಿಂದ ನಿನಗೀಗ ಜ್ಞಾನ ಉಂಟಾಗದೆ ಅಜ್ಞಾನದ ಕತ್ತಲೆಯನ್ನು ಹೊಡೆದೋಡಿಸುವ ಬೆಳಕು ಪ್ರಬಲವಾಗಿದೆ. ನೀನು ಜೀವನ್ಮುಕ್ತನಾಗುವದರಲ್ಲಿ ಸಂದೇಹವಿಲ್ಲ ಕೀರ್ತಿ ಪ್ರಭೆಯಿಂದ ನಿನ್ನ ಹೆಸರು ದಶ ದಿಕ್ಕುಗಳಲ್ಲಿ ಪಸರಿಸುವದು ಸಿದ್ದಪ್ಪಾ ನೀನು ಸಿದ್ಧಾರೂಢ ಸ್ವಾಮಿ ಎಂದು ಹುಬ್ಬಳ್ಳಿ ಪುರವನ್ನೇ ಬೆಳಗುವ ಭಕ್ತ ಬಳಗವು ನಿನ್ನನ್ನು ಮತ್ತು ರತ್ನಮಣಿ ಮಾಣಿಕ್ಯಾಜರಿ ಉಡುಗರೆ ಬಂಗಾರ ಕಿರೀಟದೊಡನೆ ಮೆರೆಯಿಸುವದು ಎಂದು ಆನಂದದಿಂದ ಆಶೀರ್ವದಿಸಿ ಬೀಳ್ಕೊಟ್ಟರು. ಆ ಮೇಲೆ ಸಿದ್ದಪ್ಪನು ಹುಬ್ಬಳ್ಳಿಗೆ ಹೋಗಿ ಸ್ವಾಮಿಗಳ ಶ್ರೀ ವಾಣಿಯಂತೆ ಆರೂಢ ಪಟ್ಟವನ್ನು ಪಡೆದು ಸಿದ್ಧಾರೂಢನಾದನು. ಬರುಬರುತ್ತ ಸಿದ್ಧಾರೂಢರು ಜಗದ್ವಂದ್ಯ ಸ್ವಾಮಿಗಳಾಗಿ ಮೆರೆದರು.

---

೧೫. ಹಾಳಕೇರಿ ಶ್ರೀ ಅನ್ನದಾನ ಸ್ವಾಮಿಗಳಿಗೆ ಕ್ಯಾವಿ ಟೊಪ್ಪಿಗೆ ಅನುಗ್ರಹಿಸಿದ್ದು

ಶ್ರೀಗುರು ಶಿವಯೋಗಿ ಸಾಮ್ರಾಟ ಮಡಿವಾಳೇಶ್ವರ ಸ್ವಾಮಿಗಳಿಗೆ ಸಂಚಾರ ಕೈಕೊಳ್ಳುವದೆಂದರೆ ಬಲು ಹಿಗ್ಗು ಭಕ್ತರ ಇಚ್ಛಾನುಸಾರ ಪಾದ ಪೂಜೆಗಾಗಿ ಅವರ ಕಷ್ಟ-ಪರಂಪರೆಯ ಪರಿಹಾರಕ್ಕಾಗಿ ಎನಿತೆಲ್ಲ ಕಷ್ಟವನ್ನು ಲೆಕ್ಕಿಸದ ಹೊರಟು ಬಿಡುತ್ತಿದ್ದರು.

ಒಮ್ಮೆ ಇಟಗಿ ಗ್ರಾಮದ ಪೋಲೀಸ ಪಾಟೀಲರು ಸ್ವಾಮಿಗಳ ಲೀಲೆಗಳನ್ನು ಮಹಿಮೆಯನ್ನು ಕೇಳಿ ಹೊಸದಾಗಿ ಕಟ್ಟಿಸಿದ ತನ್ನ ಗೃಹಪ್ರವೇಶ ಮಾಡಿ ಪಾದಪೂಜೆಯಿಂದ ಸಂತುಷ್ಟರಾಗಬೇಕೆಂದು ಬಯಸಿ ಗರಗ

ಗ್ರಾಮಕ್ಕೆ ಬಂದು ಸ್ವಾಮಿಗಳ ದರ್ಶನ ಪಡೆದು ವಿನಯದಿಂದ ನಮಸ್ಕರಿಸಿ ಬುದ್ಧಿ ನೂತನ ಗ್ರಹ ಪ್ರವೇಶಕ್ಕೆಂದು ತನ್ನೂರಿಗೆ ದಯಮಾಡಿಸುವದಾಗ ಬೇಕೆಂದು ಬೇಡಿಕೊಂಡರು.

ಆಗ ಸ್ವಾಮಿಗಳು ನಿರಾಕರಿಸಿದರೆ ಭಕ್ತರ ಮನಸ್ಸಿಗೆ ನೋವಾದೀತು ಎನ್ನುವ ಸದಿಚ್ಛೆಯಿಂದ ತಮಗೆ ಆಗ ವಿಪರೀತ ಜ್ವರ ಇದ್ದರೂ ಸಂತಸದಿಂದ ಮರಿ ದೇವರನ್ನು ತನ್ನ ನೆಚ್ಚಿನ ಶಿಷ್ಯರಾದ ಗಂಟೆಪ್ಪ, ಭೀಮಪ್ಪನನ್ನು ಸಂಗಡ ಕರೆದುಕೊಂಡು ಇಟಗಿ ಗ್ರಾಮಕ್ಕೆ ದಯಮಾಡಿಸಿದರು. ಬಳಿಕ ಪದ್ಧತಿಯಂತೆ ಗೃಹ ಪ್ರವೇಶ ಪಾದಪೂಜೆ ಗಣಾರಾಧನೆ ನಡೆದು ಇನ್ನೂ ಸಾಯಂಕಾಲ ಹೊರಡುವ ಸಿದ್ಧತೆಯಲ್ಲಿರಲು ಅತ್ತ ಹಾಲಕೇರಿ ಶ್ರೀ ಅನ್ನದಾನೇಶ್ವರ ಸ್ವಾಮಿ ಗಳು ಮಡಿವಾಳೇಶ್ವರ ಶಿವಯೋಗಿಗಳನ್ನು ಕಾಣಬೇಕು ಎನ್ನುವ ಲವಲವಿಕೆ ಯಲ್ಲಿ ರೋಣಕ್ಕೆ ಬಂದು ವೀರನಗೌಡರನ್ನು ಹಾಗು ಹೊನ್ನಪ್ಪ ಗೌಡರೊಡ ಗೂಡಿ ಇಟಗಿ ಗ್ರಾಮಕ್ಕೆ ಬರುತ್ತಿರುವದನ್ನು ತಮ್ಮ ಜ್ಞಾನಚಕ್ಷುಗಳಿಂದ ಗುರ್ತಿಸಿದ ಸ್ವಾಮಿಗಳು ಗಂಟೆಪ್ಪನನ್ನು ಕರೆದು ಗಂಟ್ಯಾ ನಮ್ಮ ಸಂದರ್ಶನಕ್ಕಾಗಿ ನಮಗೆ ಸರಿಯಾದ ಸ್ವಾಮಿಗಳೊಬ್ಬರು ಬರುತ್ತಿರುವರೋ ನಾಳೆ ಬೆಳಗು ಮುಂಜಾನೆ ಹೊರಡೋಣವೇ ಎಂದರು.

ಆಗ ಗಂಟೆಪ್ಪನು ಬುದ್ಧಿ ತಮ್ಮ ಚಿತ್ತವೆಂದು ಒಪ್ಪಿದರು ಅಷ್ಟರಲ್ಲಿ ಅನ್ನ ದಾನ ಸ್ವಾಮಿಗಳು ಗೌಡರೊಡಗೂಡಿ ಬಂದು ಶಿವಯೋಗಿಗಳಿಗೆ ನಮಸ್ಕರಿಸಿ ಕರಜೋಡಿಸಿ ನಿಂತು ಕೊಂಡರು. ಬಳಿಕ ಮಡಿವಾಳೇಶ್ವರ ಶಿವಯೋಗಿಗಳು ಅನ್ನದಾನ ಸ್ವಾಮಿಗಳ ಲಿಂಗತೇಜವನ್ನು ಕಂಡು ವಿರಕ್ತ ವೀರವಿರತಿ ಯನ್ನು ಗುರ್ತಿಸಿ ಬ್ರಹ್ಮಚರ್ಯ ವೃತಪಾಲನೆಯ ದಿವ್ಯ ಕಾಂತಿಗೆ ಮನಸೋತು ಅತಿ ಆನಂದಗೊಂಡು ಸಂತೋಶದ ಭರದಲ್ಲಿ —ಅಯ್ಯಾ ನೀನು ವಿರಕ್ತ ಮಠಾ ಧೀಶರಲ್ಲಿ ಉನ್ನತಿಯ ಸ್ಥಾನಮಾನಗಳನ್ನು ಪಡೆಯುವೆ ಎಂದು ಜ್ಞಾನೋಪದೇ ಮಾಡಿ ತಮ್ಮ ತಲೆಯ ಮೇಲೆ ಬಹುದಿನಗಳಿಂದಲೂ ಮೆರೆದ ಕ್ಯಾವಿ ಟೊಪ್ಪಿಗೆ ಯನ್ನು ಅನ್ನದಾನೇಶ್ವರ ಸ್ವಾಮಿಗಳ ತಲೆಯ ಮೇಲೆ ತಮ್ಮ ಕೈಯಾರೆ ಹಾಕಿ ಆಶೀರ್ವದಿಸಿದರು.

ಬಳಿಕ ಅನ್ನದಾನ ಸ್ವಾಮಿಗಳು ಆ ಟೊಪ್ಪಿಗೆಯನ್ನು ಭಕ್ತಿಪೂರಕ ವಾಗಿ ಸ್ವೀಕರಿಸಿ ತಾವು ಲಿಂಗೈಕ್ಯರಾಗುವ ವರೆಗೆ ಕಾಪಾಡಿಕೊಳ್ಳುವದಾಗಿ

ವೆಚನವಿತ್ತರು. ಆ ಮೇಲೆ ಸ್ವಾಮಿಗಳು ಅವರನ್ನು ಆನಂದದಿಂದ ಬೀಳ್ಕೊಟ್ಟ ಬಳಿಕ ಗರಗದ ತಮ್ಮ ಮಠಕ್ಕೆ ಹೊರಟು ಬಂದರು.

---

೧೬. ಕರಿಗೌಡನಿಗೆ ಸಮಾಧಿಯಲ್ಲಿಡಲು ಕಾಯಿ ಕರುಣಿಸಿದ್ದು

ಒಂದು ದಿವಸ ಸ್ವಾಮಿಗಳು ತತ್ವ ಬೋಧವನ್ನು ಕೊಡುತ್ತಿರುವ ಸಮಯದಲ್ಲಿ ಮುಂಬೇನೂರ ಕರಿಗೌಡನು ಬಂದು ಶ್ರೀ ಸ್ವಾಮಿ ನಮ್ಮಪ್ಪ ಕಾಪಾಡು ಎಂದು ನಮಸ್ಕರಿಸಿ ಬಳಿಕ ಸ್ವಾಮಿಗಳ ಅಪ್ಪಣೆಯಂತೆ ತಾಳಲಯಬದ್ಧರಾಗದೊಡನೆ ನಿಜಗುಣರ ಪದ್ಯವನ್ನು ಬಲು ಸೊಗಸಾಗಿ ಹಾಡ ಹತ್ತಿದರು. ಆಗ ಪದವನ್ನು ಕೇಳುತ್ತಿದ್ದ ಸ್ವಾಮಿಗಳು ಆನಂದದಿಂದ ಕುಣಿದಾಡಿದರು. ಬಳಿಕ ಸ್ವಾಮಿಗಳಿಗೆ ಸದಾ ನಿಜಗುಣಾರ್ಯರ ಪದಗಳನ್ನು ಕೇಳಬೇಕೆಂಬ ಲವಲವಿಕೆ ಹುಟ್ಟಿ–ಕರಿಗೌಡಾ ನಿನ್ನ ಊರಲ್ಲಿ ನಮಗೊಂದು ಸಮಾಧಿಯನ್ನು ಕಟ್ಟಿಸಿಬಿಡು. ನಾವು ನಿನ್ನ ಊರಲ್ಲಿಯೇ ಸದಾ ನಿನ್ನ ಬಳಿಯಲ್ಲಿಯೇ ಇರುತ್ತೇವೆ ಎಂದು ಅಪ್ಪಣೆ ಮಾಡಿದರು.

ಆಗ ಕರಿಗೌಡನು ಸ್ವಾಮಿಗಳ ಆಜ್ಞೆಗೆ ಒಪ್ಪಿ ಊರಿಗೆ ಹೋಗಿ ಅಂದವಾದ ಸಮಾಧಿಯನ್ನು ಸಿದ್ಧಗೊಳಿಸಿ ತನ್ನ ಆಳು ಸಿದ್ಧಲಿಂಗನ ಕೈಯಲ್ಲಿ ಕರೆಯೋಲೆಯನ್ನು ಕೊಟ್ಟು ಸ್ವಾಮಿಗಳನ್ನು ಕರೆದುಕೊಂಡು ಬರಲು ಸ್ವಾಮಿಗಳ ಸನ್ನಿಧಿಗೆ ಕಳುಹಿಸಿದನು. ಆದರೆ ಬಳಿಕ ತನ್ನ ತಪ್ಪಿನ ಅರುವಾಗಿ ಮರುದಿವಸ ತಾನೇ ಸ್ವತಃ ಓಡುತ್ತ ಬಂದು ಸ್ವಾಮಿಗಳ ಪಾದಗಳಿಗೆ ಪೊಡಮೊಟ್ಟು—ಬುದ್ಧಿ ಅರಿಯದಲೇ ಅಪರಾಧವಾಯಿತು ಎಂದು ಗೋಳಿಡಹತ್ತಿದನು. ಆದರೆ ಸ್ವಾಮಿಗಳು ಅವರಿಸಿದ ಸಿಟ್ಟನ್ನು ಶಮನ ಮಾಡಿಕೊಂಡು ಥೂ ಅವಿವೇಕಿ ನೀನು ಜ್ಞಾನಶೂನ್ಯನಿರುವಿ ಹೋಗು. ನಾವು ನಿನ್ನೂರಿಗೆ ಬರಲಾರೆವು. ರೀತಿ ನಡಾವಳಿ ದೊಡ್ಡಸ್ತನಗಳು ಸ್ವಲ್ಪಾದರೂ ಬೇಡವೆನೋ ಎಂದು ಮೂದಲಿಸಿ ನಮ್ಮ ಇರುವು ಇಲ್ಲೇ ಇರಬೇಕೆಂದು ಪರಶಿವನ ಆಜ್ಞೆಯಾಗಬಹುದು ಅಂತೆ ಶಿವನು ನಿನ್ನಿಂದ ಇಂತಹ ಅನುಚಿತ ಕಾರ್ಯ ಮಾಡಿಸಿದನೆಂದು ಕಾಣುವದು. ಇರಲಿ ನೀನು ಊರಿಗೆ ಹೋಗಿ ಸಮಾಧಿ

ಯಲ್ಲಿ ಈ ಒಂದು ಕಾಯಿ ಇಟ್ಟು ಆ ಸಮಾಧಿಯನ್ನು ಮುಚ್ಚಿ ನಿತ್ಯ ನೇಮ ದಂತೆ ನಮ್ಮ ಇರುವು ನಿನ್ನ ಊರಲ್ಲಿ ಆ ಸಮಾಧಿಯಲ್ಲಿ ಈ ಕಾಯಿ ರೂಪದ ನಮ್ಮ ಕಾಯುವಿದು ಬಳಿಯಲ್ಲಿ ಉಂಟೆಂದು ಭಾವಿಸಿ ಪೂಜಿಸುವವನಾಗೆಂದು ಆಶೀರ್ವದಿಸಿ ಕಳುಹಿಸಿಬಿಟ್ಟರು. ಮತ್ತು ನೂರೊಂದು ಗಣಾರಾಧನೆ ಮಾಡುವಂತೆ ತಿಳಿಹಿಸಿದರು. ಆಗ ಮುದೇನೂರು ಕರಿಗೌಡನು ಪ್ರತಿ ಮಾತ ನಾಡಿದರೆ ಮತ್ತೇನು ಪರಿಣಾಮವಾಗುವದೋ ಎಂದು ಅಂಜಿ ಹಿಂಜರಿದು ಶಿವಯೋಗಿಗಳ ಅಪ್ಪಣೆಯಂತೆ ಊರಿಗೆ ಬಂದು ಸಮಾಧಿಯಲ್ಲಿ ಕಾಯಿ ಇಟ್ಟು ಮುಚ್ಚಿಸಿ ನೇಮದಿಂದ ಅರ್ಚಿಸಿ ನೂರೊಂದು ಗಣಂಗಳಿಗೆ ಅನ್ನ ಸಂತರ್ಪಣೆಯಿಂದ ತೃಪ್ತಿಪಡಿಸಿ ದಾನದಕ್ಷಿಣೆಗಳಿಂದಲೂ ಸೌಖ್ಯ ಜೀವನ ಸಾಗಿಸಿದನು. ಹಾಗೂ ಪ್ರತಿ ಅಮಾವಾಸ್ಯೆಗೆ ಸ್ವಾಮಿಗಳ ದರ್ಶನಕ್ಕೆಂದು ಗರಗದ ಮಠಕ್ಕೆ ಬರುವ ಪರಿಪಾಠವನ್ನೆ ಕೈಕೊಂಡು ಭಕ್ತರಲ್ಲಿ ಶ್ರೇಷ್ಠ ಭಕ್ತನಾಗಿ ಬಾಳಿ ಬದುಕಿದನು.

---

೧೭. ಮತ್ತೆ ನಾಗಲಿಂಗಪ್ಪನವರ ಭೆಟ್ಟಿ

ಒಂದು ದಿನ ಸ್ವಾಮಿಗಳು ಭಕ್ತರೊಡನೆ ಮಾತನಾಡುತ್ತ ಕುಳಿತಿರಲು ನಾಗಲಿಂಗಪ್ಪನವರು ಹೊರಟು ಬರುತ್ತಿರುವದನ್ನು ಗುರುತಿಸಬೇಕೆಂದೇ ಭಕ್ತರಿಗೆ ಹೇಳಿ ಕದವನ್ನು ಮುಚ್ಚಿಸಿ, ಏನೂ ಅರಿಯದವರಂತೆ ಮಲಗಿ ಕೊಂಡರು. ಅಷ್ಟರಲ್ಲಿ ನಾಗಲಿಂಗಪ್ಪನು ಬಂದು ಮಡಿವಾಳಾ ಏ ಮಡಿ ವಾಳೇಶಾ ಬಾಗಿಲವನ್ನು ತೆರೆಯೋ ಎಂದನು. ಆಗಲೂ ಸ್ವಾಮಿಗಳು ಉತ್ತರ ವನ್ನು ಕೊಡಲಿಲ್ಲ. ಆಗ ನಾಗಲಿಂಗಜ್ಜನವರು ಸಿಟ್ಟಿನಿಂದ ಸಿಡಿಮಿಡಿಗೊಂಡು ಎಲೇ ಮಡಿವಾಳಾ ಕದಾ ತೆಗಿಯೋ ಎಂದು ಗಂಭೀರವಾಗಿ ಕೂಗಿದರು ಬಳಿಕ ಬೇಸತ್ತ ಸ್ವಾಮಿಗಳು ಚೇಷ್ಟೆ ಮಾಡಬೇಕೆಂದು ನೀನಾರು ನಿನಗೇನು ಕೆಲಸದ ನಿಮಿತ್ಯ ಇಲ್ಲಿಗೆ ಬಂಧಿರುವೆಯೋ? ಸುಮ್ಮನೆ ಬಂದ ದಾರಿಗೆ ಸುಂಕ ವಿಲ್ಲವೆಂದು ಮರಳಿ ಹೋಗಬಾರದೆ ಎಂದರು. ಆ ಮೇಲೆ ಸ್ವಲ್ಪ ಸಮಯ ತಡೆದು ನೀನು ನಾಗಲಿಂಗನಲ್ಲವೇ ಎಂದು ಕೇಳಿದರು. ಆಗ ಹೌದು ಎಂದು ಉತ್ತರ ಕೊಟ್ಟ ನಾಗಲಿಂಗಜ್ಜ. ಹಟಯೋಗಿಯಾಗಿ ಕುಳಿತವನು ಮೇಲೇಳ

ದಾದನು. ಆಗ ಮಡಿವಾಳಜ್ಜನವರು ಅನಿವಾರ್ಯವೆಂದು ಕದ ತೆರೆದು ಇಬ್ಬರೂ ದರ್ಶನಾನಂದ ಹೊಂದಿದರು. ಬಳಿಕ ನಾಗಲಿಂಗಪ್ಪನವರು ಮಡಿ ವಾಳಾ ನಿನ್ನ ಕಣ್ಣು ಕಾಣುವದಿಲ್ಲವಂತೆ. ನಾನು ನಿನ್ನ ಕಣ್ಣು ನೆಕ್ಕಿದರೆ ಇಂಗಿದ ಕಣ್ಣು ಬಂದಾವು ಬಾರೋ ಇಲ್ಲಿ ಎಂದು ತಾನೆ ಮುಂದಾಗಿ ಮಡಿವಾಳ ಜ್ಜನವರ ಕಣ್ಣುಗಳನ್ನು ನೆಕ್ಕಿದರು. ಬಳಿಕ ಅಲ್ಲಾ ಮಡಿವಾಳೇಶಾ ಈ ಜೀವನದ ಉದ್ದೇಶವೇನು ಎಂದು ಕೇಳಿದರು.

ಅದಕ್ಕೆ ಮಡಿವಾಳ ಸ್ವಾಮಿಗಳು ಜಗತ್ತಿನ ಜನರಿಗೆ ಉಪದೇಶದಿಂದ ಜ್ಞಾನ ಮಾರ್ಗವನ್ನು ಕರುಣಿಸಿ ಅವರ ಸಂಸಾರವನ್ನು ಸುಖಮಯಗೊಳಿ ಸುವದೇ ಮುಖ್ಯ ಉದ್ದೇಶ. ನೀನು ಸಿದ್ಧಾರೂಢನಂತೆ, ಶರೀಫ ಸಾಹೇಬ ನಂತೆ ಆ ಕಾರ್ಯದಲ್ಲಿ ತೊಡಗಿ ಈ ಉನ್ಮತ್ತತನವನ್ನು ಮರೆಯಬೇಕೆಂದು ಬೋಧಿಸಿ ನಮ್ಮ ಉದ್ದೇಶ ಪೂರ್ಣವಾಗಿದೆ. ನಾವು ಶಿವನ ಠಾವು ಕುರಿತು ಸಾಗಬಯಸಿದ್ದೇವೆ ಎಂದರು. ಆಗ ನಾಗಲಿಂಗಪ್ಪಜ್ಜನು ಸ್ವಾಮಿಗಳ ಮಾತಿಗೆ ಹೂಂಗುಟ್ಟಿದವರು ಮಡಿವಾಳಾ ನೀನು ಮುಂದೆ ನಡೆ ನಾನು ನಿನ್ನ ಹಿಂದೆ ಬರುವ ಉದ್ದೇಶವಿಟ್ಟುಕೊಂಡಿದ್ದೇನೆ ಎಂದು ನುಡಿದು ಶ್ರೀ ಗುರು ಮಡಿವಾಳೇಶ್ವರ ಶಿವಯೋಗಿಗಳಿಗೆ ನಮಸ್ಕರಿಸಿ ಹೊರಟು ಹೋದರು. ಆಗ ಕೂಡಿದ ಭಕ್ತ ಸಮೂಹವು ಈರ್ವರೂ ಯೋಗೀಶ್ವರರ ಈ ಆತ್ಮೀಯತೆಯನ್ನು ಬೆರಗಾಗಿ ನೋಡುತ್ತ ಶಿಲಾಪ್ರತಿಮೆಗಳಾಗಿ ನಿಂತುಕೊಂಡಿದ್ದರು.

೧೮. ಬರಗಾಲದ ಬಾಧೆಯಿಂದ ಜನರನ್ನು ರಕ್ಷಿಸಿದ್ದು

ಬರುಬರುತ್ತ ಮಡಿವಾಳೇಶ್ವರ ಸ್ವಾಮಿಗಳಿಗೆ ಮುಪ್ಪು ಆವರಿಸಿ ಗಲ್ಲದ ತೊಗಲು ಮುದಿಯಾಗಿ ಕಣ್ಣು ಕಾಣದಂತಾದವು. ಆದಗೂ ಸ್ವಾಮಿಗಳು ತಮ್ಮ ಜ್ಞಾನ ಚಕ್ಷುಗಳಿಂದ ಭಕ್ತರನ್ನು ಕಂಡು ಅವರಿಗೆ ಉಪದೇಶಾ ಮೃತವನ್ನು ಕೊಟ್ಟು ನಿಜ ಬಾಳಿನ ದಾರಿ ತೋರಿಸುತ್ತಲೇ ಸಾಗಿಸಿದ್ದರು. ಒಂದು ದಿನ ಅದೇನು ತಿಳಿಯಿತೋ ಮರಿದೇವರಾದ ಶಿದ್ಧಲಿಂಗರನ್ನು ಕರೆದು ಅಯ್ಯಾ ಸಿದ್ಧಲಿಂಗನು ಇನ್ನು ಮೇಲೆ ನೀನು ಕಂತೆ ಭಿಕ್ಷೆ ಮಾಡಿ ತರುವ ಕಜ್ಜಾಯಗಳನ್ನು ಚೆನ್ನಾಗಿ ವಣಗಿಸಿ ಹರವಿಗಳಲ್ಲಿ ಸೇರಿಸಿ ಇಡು ಮುಂದೆ

ಹ್ಯಾಗಿನಿ ಪ್ರಸಂಗ ಹ್ಯಾಗೋ ಏನೋ ಎಂದರು. ಆಗ ಮರಿದೇವರಿಗೆ ಸ್ವಾಮಿಗಳ ಮರ್ಮಯುಕ್ತ ಮಾತಿನ ಅರ್ಥವಾಗಲಿಲ್ಲ. ಆದರೂ ಅವರ ಶ್ರೀವಾಣಿಯಂತೆ ನಡೆದು ಅವರ ಅಪ್ಪಣೆ ಪಾಲಿಸುವದು ತನ್ನ ಕರ್ತವ್ಯ ವೆಂದು ಗುರುಗಳ ಅಪ್ಪಣೆಯಂತೆ ಕಜ್ಜಾಯವನ್ನು ಒಣಗಿಸಿ ಹರವಿಗಳಲ್ಲಿ ತುಂಬಿಡುತ್ತಿದ್ದರು. ಮುಂದೆ ಮಡಿವಾಳೇಶ್ವರ ಸ್ವಾಮಿಗಳ ಅಮರವಾಣಿ ಯಂತೆ ೧೮೭೭ ರಲ್ಲಿ ಭೀಕರ ಸ್ವರೂಪದ ಬರವು ನಾಡಿನ ತುಂಬೆಲ್ಲ ಆವರಿಸಿ ಬಡಬಗ್ಗರಂತೂ ಕೂಳಿಲ್ಲದೆ ಕಂಗಾಲಾಗಿ ಸಾಯುವ ಸ್ಥಿತಿಯು ಪ್ರಾಪ್ತ ವಾಯಿತು. ಆಗ ಸ್ವಾಮಿಗಳು ಕೂಳು ಕಾಣದೆ ಕಂಗೆಟ್ಟು ಕಂಗಾಲಾಗಿ ಸಾವು ನೋವುಗಳನ್ನು ಅನುಭವಿಸುತ್ತಿದ್ದ ಬಡಬಗ್ಗರನ್ನು ಕರೆ ಕರೆದು ಕಾಯ್ದಿಟ್ಟಿದ್ದ ಒಣಗಿದ ಕಜ್ಜಾಯಗಳನ್ನು ಕೊಟ್ಟು ಉಪಚರಿಸಿ ಸಮಾ ಧಾನಗೊಳಿಸಹತ್ತಿದರು.

ಇದೇ ಸಮಯದಲ್ಲಿ ಸ್ವಾಮಿಗಳ ಶಿಷ್ಯತ್ವ ವಹಿಸಲು ಬಂದ ಮಠ ದಲ್ಲಿದ್ದ ಮೈಸೂರ ನಾಡಿನ ಸಿದ್ಧಲಿಂಗ ಎಂಬುವವನು ಸ್ವಾಮಿಗಳು ಮರಿ ದೇವರಿಗೆ ಕಜ್ಜಾಯ ಒಣಗಿಸಿಡಲು ಹೇಳಿದ ನುಡಿಯನ್ನು ಕೇಳಿಕೊಂಡಿದ್ದ ನಾದ್ದರಿಂದ ತಾನು ತಂದ ಭಿಕ್ಷೆಯ ಹೋಳಿಗೆ ಕಡಬುಗಳನ್ನು ಒಣಗಿಸಿ ಹರವಿಗಳಲ್ಲಿ ತುಂಬಿ ಇಟ್ಟಿದ್ದನು. ಇಂತಹ ಸಮಯದಲ್ಲಿ ಸ್ವಾಮಿಗಳಿಗೆ ತಿನಿಸುವದು ಒಳ್ಳೇದೆಂದು ಭಾವಿಸಿ ಶಿವಯೋಗಿಗಳ ಸನ್ಮುಖದಲ್ಲಿ ಸಕಲ ವಿಷಯವನ್ನು ತಿಳುಹಿಸಿ ಸ್ವಾಮಿಗಳ ಕೃಪೆಗೆ ಪಾತ್ರನಾದನಲ್ಲದೆ ಬಡಬಗ್ಗ ರಿಗೆ ಜೀವನಾವಶ್ಯಕ ಆಹಾರ ಕೊಟ್ಟ ಪುಣ್ಯಾತ್ಮ ಎನಿಸಿಕೊಂಡನು.

ಸ್ವಾಮಿಗಳು ಕಜ್ಜಾಯವನ್ನು ಒಣಗಿಸಿಡಲು ಅಪ್ಪಣೆ ಮಾಡಬೇಕಾ ದರೆ ಬರಗಾಲದ ಸೂಚನೆ ಅವರಿಗೆ ತಿಳಿದಿರಬೇಕೆಂದು ಭಕ್ತಜನತೆಯು ಸ್ವಾಮಿಗಳ ಮುನ್ಸೂಚನೆಯ ಮಹಿಮೆಗೆ ಬೆರಗಾಗಿ ಮಹಿಮಾಪುರುಷ ಮಡಿವಾಳೇಶ್ವರನೆಂದು ಕೊಂಡಾಡಹತ್ತಿದರು.

———

೧೯. ಶಿಷ್ಯ ಸಿದ್ಧಲಿಂಗ ಮರಿದೇವರಿಗೆ ಉಪದೇಶ ಮಾಡಿದ್ದು

ಸಿದ್ಧಲಿಂಗ ಮರಿದೇವರು ಸ್ವಾಮಿಗಳ ಸೇವೆಯನ್ನು ಮನಮುಟ್ಟಿ ಮಾಡುತ್ತ ಅವರ ಕಣ್ಣು ಕಾಣದ ಪ್ರಯುಕ್ತ ಶೌಚಾದಿ ಕಾರ್ಯಗಳಿಗೆ ಕೈ ಹಿಡಿದು ಕರೆದುಕೊಂಡು ಹೋಗಿ ಬರುವದು, ಅವರಿಗೆ ಗುಡಿಗುಡಿಯನ್ನು ಸಿದ್ಧಪಡಿಸಿ ಸೇದಿಸುವದು ಸ್ನಾನಪೂಜಾದಿ ಕಾರ್ಯಗಳಲ್ಲಿ ಮನಮುಟ್ಟಿ ನೆರವಾಗುತ್ತ ಗುರುಗಳಿಗೆ ನೆಚ್ಚಿನ ಶಿಷ್ಯನಾಗಿದ್ದನು. ಹೆಚ್ಚೇನು ಸ್ವಾಮಿಗಳನ್ನು ತೊಡೆಯ ಮೇಲೆ ಕೂಡ್ರಿಸಿಕೊಂಡು ತನ್ನ ಕೈತುತ್ತಿನಿಂದ ಊಟ ಮಾಡಿಸಿ ಮೆತ್ತನೆಯ ಹಾಸಿಗೆಯಲ್ಲಿ ಮಲಗಿಸಿ ಕೈ ಕಾಲು ವತ್ತಿ ಉಪಚಾರ ಗೈಯುತ್ತಿದ್ದನು. ಸ್ವಾಮಿಗಳಿಗಂತೂ ಶಿಷ್ಯ ಸಿದ್ಧಲಿಂಗ ಮರಿದೇವರ ಬಗೆ ಅಭಿಮಾನ ಆನಂದಗಳು ಹುಟ್ಟಿ ಆದಷ್ಟು ತೀವ್ರ ಈತನಿಗೆ ಅನುಗ್ರಹ್ಗ ಮಾಡಿ ಉಪದೇಶ ಕೊಡಬೇಕೆಂದು ತವಕಿಸಹತ್ತಿದರು. ಬಳಿಕ ಒಂದು ದಿನ ಹಲವಾರು ಭಕ್ತಜನರ ಸಮಕ್ಷಮ ಶಿದ್ದಲಿಂಗಾ ಎಂದು ಮಮತೆಯಿಂದ ಕರೆದು; ನೀನು ನಮ್ಮ ಸೇವೆಯ ಊಳಿಗಳನ್ನು ಮನಮುಟ್ಟಿ ಮಾಡಿ ನಮ್ಮ ಮನವಲಿಸಿಕೊಂಡಿರುವಿ ಮಗನೇ ನಿನಗೆ ಶುಭಯೋಗ ಶುಭಗಳಿಗೆಯಲ್ಲಿ ಉಪದೇಶ ಕೊಡಬೇಕಂದಿರುವೆವು. ನೀನು ನಾಳೆ ಸೋಮವಾರ ಮಾಡಲಿ ಪ್ರಸ್ತ ಮಾಡಿಸಿ ಗಣತೃಪ್ತ ಮಾಡಬೇಕು ಎಂದು ಅಪ್ಪಣೆಯನ್ನಿತ್ತರು.

ಆ ಬಳಿಕ ಸಿದ್ಧಲಿಂಗ ಮರಿದೇವರು ಗುರುಗಳ ಅಪ್ಪಣೆಯಂತೆ ಮಾಡಲಿ ಪ್ರಸ್ತಗೈದು ಗಣದವರನ್ನು ತೃಪ್ತಿಪಡಿಸಿ ಅವರ ಆಶೀರ್ವಾದ ಹೊತ್ತು ಶ್ರೀ ಸ್ವಾಮಿಗಳ ಪಾದಗಳಿಗೆ ನಮಸ್ಕರಿಸಿದರು. ಅದರಂತೆ ಶುಭ ಮುಹೂರ್ತ ಕೂಡಿ ಬರಲು ಸ್ವಾಮಿಗಳು ಗರಗ ಗ್ರಾಮ ಪ್ರಮುಖ ರಾಮನ ಗೌಡ ಗಂಟೆಪ್ಪ ಬಸವಲಿಂಗಪ್ಪ, ಇನ್ನಿತರ ತಮ್ಮ ಭಕ್ತರನ್ನು ಕರೆಯಿಸಿ ಕೊಂಡು ಅವರಿಗೆ ಉಪದೇಶಕೊಡುವ ವಿಷಯ ತಿಳುಹಿಸಿ ಸಿದ್ಧಲಿಂಗ ಮರಿ ದೇವರಿಗೆ ಉಪದೇಶಕೊಟ್ಟು ನಿಶ್ಚಿಂತರಾದರು. ಆಗ ಮರಿದೇವರು ಗುರು ಗಳ ದೊಡ್ಡ ಗುಣವನ್ನು ಕೊಂಡಾಡಿ ಅವರಿತ್ತ ಉಪದೇಶದಂತೆ ಸಾಗುವ ಹಾಗಿ ಮಡಿವಾಳೇಶ್ವರ ಸ್ವಾಮಿಗಳ ಪಾದಮುಟ್ಟಿ ಪ್ರಯಾಣ ವಚನವಿತ್ತರು.

ಆಗ ಕೂಡಿದ ಭಕ್ತರು ಗುರುಶಿಷ್ಯರೀರ್ವರ ಆತ್ಮಿಯ ಬಂಧುತ್ವವನ್ನು ಕಂಡು ಹರುಷಗೊಂಡು "ಜೈ ಗುರುದೇವ ಮಡಿವಾಳೇಶ್ವರ ಜೈ ಗುರುರಾಜ ಶಿವಯೋಗಿ ಸಾಮ್ರಾಟ ಮಡಿವಾಳೇಶ್ವರಾ'' ಎಂದು ಜಯಜಯಕಾರ ಮಾಡಿದರು.

---

೨೦. ನಾಯಕನ ಹೊಲದಲ್ಲಿ ದೊರೆತ ನಿಧಿಯನ್ನು ಬಡಬಗ್ಗರಿಗೆ ಹಂಚಿಸಿದ್ದು

ಒಂದು ದಿನ ವಕ್ಕುಂದ ಗ್ರಾಮದ ತಮ್ಮ ಮಠದಲ್ಲಿ ಸ್ವಾಮಿಗಳು ಶಿವ ಚಿಂತನೆಯಲ್ಲಿ ಮಲಗಿರಲು ಮಧ್ಯರಾತ್ರಿಯ ಸಮಯಕ್ಕೆ ಅದೇನು ತಿಳಿಯಿತೋ ಏನೋ ಎದ್ದು ಕುಳಿತು ಪೂರ್ವದಿಕ್ಕಿನತ್ತ ಏನನ್ನೋ ನೋಡುತ್ತಿರುವಂತೆ ತದೇಕ ದೃಷ್ಟಿಯಲ್ಲಿ ಕಳಿತು ಬಿಟ್ಟರು. ಬಳಿಕ ಕೆಲವು ಸಮಯ ಗತಿಸಲು ಬಾವಾನನ್ನು ಸಂಗಡ ಕರೆದುಕೊಂಡು ಶಿವ ನಾಯಕನ ಮನೆಯವರೆಗೆ ತಾವೇ ಮುಂದಾಗಿ ಹೋಗಿ ಆತನನ್ನು ಕೂಗಿ ಎಬ್ಬಿಸಿದರು. ಆಗ ಶಿವನಾಯಕನು ಸ್ವಾಮಿಗಳು ಈ ಅಪವೇಳೆಯಲ್ಲಿ ಈ ರೀತಿ ನನ್ನನ್ನು ಎಚ್ಚರಗೊಳಿಸಿದ ಕಾರಣ ವೇನಿರಬಹುದೆಂದು ತಡವರಿಸುತ್ತ ಎದ್ದು ಬಂದು ಕದ ತೆರೆದು ಸ್ವಾಮಿಗಳ ದಿವ್ಯತೇಜಸ್ಸಿಗೆ ಮಣಿದು ನಮಸ್ಕರಿಸಿ ಬುದ್ಧಿ ಏನು ಕಾರಣ ನನ್ನನ್ನು ಕರೆದದ್ದು ಅಪ್ಪಣೆಯಾಗಬೇಕೆಂದು ಕರೆಜೋಡಿಸಿದನು. ಆಗ ಸ್ವಾಮಿಗಳು-ಲೇ ಹುಂಬ ಮಗನೆ ಅಲ್ಲಿ ನಿನ್ನ ಪೂರ್ವದಿಕ್ಕಿನ ಹೊಲದಲ್ಲಿ ಕಳ್ಳರು ಗುಪ್ತವಾಗಿದ್ದ ನಿಧಿಯನ್ನು ದೋಚಿಕೊಂಡು ಹೋಗುತ್ತಿದ್ದಾರೆ ತಿಂದು ತೆಪ್ಪಗೆ ಮಲಗಿದರೆ ಹ್ಯಾಗೋ ಮಗನ ಹೋಗು ಹೋಗು ಹೊಲಕ ಎಂದು ತಿಳಿಸಿ ಮತ್ತೆ ಸರಸರ ಮಠಕ್ಕ ಬಂದರು.

ಅತ್ತ ನಾಯಕನು ಶಿವಯೋಗಿಗಳ ವಾಣಿಯಲ್ಲಿ ಹುಸಿ ಎಂಬುವ ದನ್ನೇ ಕೇಳಬಾರದು ಎನ್ನುತ್ತ ನಾಲ್ಕು ಆಳುಗಳನ್ನು ಸಂಗಡ ಕರೆದು ಕೊಂಡು ಲಗುಬಗೆಯಿಂದ ಹೊಲಕ್ಕೆ ಬಂದನು. ಆಗ ನೆಲ ಅಗಿದು ತಪೇಲಿ ಯನ್ನು ಮೇಲೆತ್ತಿದ ಕಳ್ಳರು ನಾಯಕ ಹಾಗು ಆಳುಗಳು ಬರುತ್ತಿರುವ ಸುಳುವು ಗೊತ್ತಾಗಿ ನಾಗಲೋಟದಿಂದ ಪಲಾಯನ ಹೇಳಿದರು. ಬಳಿಕ

ನಾಯಕನು ಬಂದು ನಿಧಿಯಿಂದ ತುಂಬಿದ ತಪೇಲಿಯನ್ನು ಕಂಡು ವೀರಿ ಪಾಳೇಶ್ವರಾ ಇದೆಲ್ಲವೂ ನಿನ್ನ ಮಹಿಮೆ ಎಂದು ಆಳುಗಳ ಸಂಗಡ ನಿಧಿಯನ್ನು ಹೊರಿಸಿಕೊಂಡು ಬಂದು ಸ್ವಾಮಿಗಳ ಶ್ರೀಪಾದಗಳಿಗೆ ಆ ನಿಧಿ ಸಂಗ್ರಹವನ್ನು ಅರ್ಪಿಸಿ ಸ್ವೀಕರಿಸುವ ಕೃಪೆಯಾಗಬೇಕೆಂದು ಬೇಡಿಕೊಳ್ಳ ಹತ್ತಿದನು.

ಆಗ ಶಿವಯೋಗಿಗಳು-ಮಳ್ಳ ನನ್ನ ಮಗನ ಹೊನ್ನು ಹೆಣ್ಣು ಮಣ್ಣಿನಿಂದ ದೂರಾದ ವಿರಕ್ತರಿಗೇಕೋ ಹೊನ್ನಿನ್ನ ಆಸೆ ಎಂದು ನಿಧಿಯನ್ನು ನಿರಾಕರಿಸಿದ್ದಲ್ಲದೆ ಆ ಸರ್ವ ಶಿರಿಯನ್ನು ಬಡಬಗ್ಗರಿಗೆ ಅನಾಥರಿಗೆ ದಾನ ಮಾಡುವಂತೆ ಅಪ್ಪಣೆಯನ್ನು ದಯಾಪಾಲಿಸಿದರು. ಅದರಂತೆ ನಾಯಕನು ಸರ್ವ ಶಿರಿಯನ್ನು ದೀನ ದಲಿತ ಅನಾಥ ಬಂಧು ವರ್ಗದವರಿಗೆ ಹಂಚಿ ಶಿವಯೋಗಿಗಳ ಕೃಪೆಗೆ ಪಾತ್ರನಾಗಿ ಸುಖ ಸಂತೋಷಗಳಿಂದ ಬಾಳಿಕೊಂಡಿದ್ದನು.

೫೨ ನೆಯ ಪ್ರಕರಣ

ಮುಡಿವಾಳೀಶ್ವರ ಸ್ವಾಮಿಗಳ ಕೊನೆಯ ಸಂದೇಶ

ಬರುಬರುತ್ತ ಶಿವಯೋಗಿಗಳು ತಮ್ಮ ನಡೆಯಲ್ಲಿ ನುಡಿಯಲ್ಲಿ ಸ್ವಧರ್ಮವನ್ನು ಪರಧರ್ಮವನ್ನು ಒಂದೇ ದೃಷ್ಟಿಯಲ್ಲಿ ಕಾಣುತ್ತ ಬ್ರಾಹ್ಮಣ ಆಚಾರಶೀಲ ಸಂಪನ್ನ ಚಿದಂಬರ ದೀಕ್ಷಿತರಂತಹ ಈಶ್ವರಾಂಶ ಸಂಭೂತರೊಡನೆ ತಂದೆ ಮಕ್ಕಳ ನಡಾವಳಿಯಲ್ಲಿ ನಡೆದುದುಕೊಂಡರು. ತಡಕೋಡ ರಾಮ ಭಟ್ಟರಂತಹ ನಿಸ್ಸೀಮ ಬ್ರಾಹ್ಮಣ ಭಕ್ತರನ್ನು ಬೆನ್ನಿಗೆ ಹಾಕಿಕೊಂಡರು. ಇನ್ನೂ ಪತ್ತಾರ ವಂಶದಲ್ಲಿ ಪುಟ್ಟಿ ಯೋಗ ಮಾರ್ಗದ ಅವಧೂತ ನಾಗಲಿಂಗಜ್ಜನವರನ್ನು ಹಿತ ಬಂಧುಗಳಂತೆ ಹೊಂದಿಸಿಕೊಂಡಿದ್ದರು. ಚಮನಶಹನಂತಹ ಅನ್ಯಮತಿಯರಿಗೆ ತಮ್ಮ ಒಡನಾಟದಲ್ಲಿ ಸ್ಥಾನಕೊಟ್ಟರು. ನಾ ನೀ ಎನ್ನುವ ಘನಪಂಡಿತರನ್ನು ವಾದ ವೈಖರಿಯಿಂದ ಪರಾಭವಗೊಳಿಸಿದರು. ಕ್ರೈಸ್ತಧರ್ಮ ಗ್ರಂಥಗಳನ್ನು ಮುಸಲ್ಮಾನರ ಧರ್ಮಗ್ರಂಥವಾದ ಕುರಾನವನ್ನು ಓದಿ ಸೈ ಎನಿಸಿಕೊಂಡಿದ್ದರು.

ಅಲ್ಲದೆ ಭಕ್ತ ಬಳಗವನ್ನು ಕೂಡಿಸಿಕೊಂಡು ತಾಸೆರಡು ತಾಸುಗಳವರೆಗೆ ತಮ್ಮ ಅದ್ಭುತ ವಾಣಿಯಿಂದ ಹಿತೋಪದೇಶ ನೀಡುತ್ತ ಪರಮತಗಳನ್ನು ದ್ವೇಷಿಸಬಾರದು, ಸರ್ವಮತ ಧರ್ಮ ತತ್ವಗಳಂತೆ ಆಚರಿಸಬೇಕು. ಪರಶಿವ ಪರಮಾತ್ಮನಲ್ಲಿ ನಂಬಿಕೆ ಇಟ್ಟು ನಡೆದುಕೊಳ್ಳುವದೇ ಮಾನವ ಧರ್ಮದ ಮೂಲ ಗುರಿ ಎಂದು ತಿಳಿ ಹೇಳಿ ಸತ್ಸಂಗದಲ್ಲಿ ಸನ್ಮಾರ್ಗದಲ್ಲಿ ಸದ್ಗುಣ ವಿವೇಕ ಉಳ್ಳವರಾಗಿ ಬಾಳಬೇಕು. ಕಾಮ ಕ್ರೋಧ ಮದ ಮತ್ಸರಗಳನ್ನು ತಳಿದು ಅಹಂಕಾರ ಮಮಕಾರವಳಿದು, ಪರನಿಂದ ಪರಪೀಡೆಗಳ ಕಳೆದು ಮಾನವನ ನಿಜ ಸೌಖ್ಯಾನಂದಕ್ಕೆ ಅರ್ಹರಾಗಿರೆಂದು ಬೋಧಿಸುತ್ತಿದ್ದರು.

ಅಲ್ಲದೆ ಈಶ್ವರನು ಇರುವ ಗುರಿ ತಿಳಿಯಲೆಂದೇ ಕಾಲಕಾಕ್ಕೆ ಯೋಗಿ ವವಯೋಗಿ, ಸಾಧು ಸತ್ಪುರುಷ ಸನ್ಯಾಸಿಗಳ ಉದಯವಾಗುವದೆಂದು ತಿಳಿಯಿರಿ ಸ್ವಾಮಿಗಳು ಮಹಾನ್ನ, ಪೀಠಾಧೀಶ ಮಹಿಮಾಶಾಲಿ ಮಹಾತ್ಮರು ಅವತಾರಗೊಂಡ ನೆಲ ಪುಣ್ಯ ನೆಲ; ಅವರು ಹಾಕಿಕೊಟ್ಟ

ಧರ್ಮಪಾಠವೆ ಮಾನವ ಜೀವಿಗೆ ಮೋಕ್ಷಪ್ರದ ಹಾದಿ, ಕಾರಣಪುರುಷ ಶಿವನು ತನ್ನ ಅಂಶವನ್ನು ಅವತಾರಿಕರಲ್ಲಿ ಆಳವದಿಸಿ, ಭಕ್ತೋದ್ಧಾರ ಕಾರ್ಯ ಮಾಡುವವ ನೆಂದು ಅರಿತು, ಸರ್ವಧರ್ಮದ ಸ್ವಾಮಿ, ಸತ್ಪುರುಷ, ಮಹಾತ್ಮ ಮಹಾ ಯೋಗಿ ಶಿವಯೋಗಿಗಳಲ್ಲಿ ಸದಾಚಾರದಿಂದ ವರ್ತಿಸಿ ಭಕ್ತಿಯಿಂದ ಪೂಜಿಸಿ ಪುನೀ ತರಾಗಿ ಎಂದು ತಮ್ಮ ಹಿತ ನುಡಿ ಮುತ್ತುಗಳಿಂದ ಭಕ್ತ ಬಳಗದ ಮನಸ್ಸನ್ನೇ ಸೂರೆಗೊಂಡರು.

ಬಳಿಕ ಗಂಟೆಪ್ಪನತ್ತ ತಿರುಗಿ, ಗಂಟ್ಯಾ ನಮ್ಮ ಅವತಾರವನ್ನು ಸಮಾಪ್ತಿ ಗೊಳಿಸಬೇಕಾಗಿದೆ. ಅದಕ್ಕಾಗಿ ನಮ್ಮ ಭಕ್ತರಿಗೆಲ್ಲರಿಗೂ ಸ್ವಾಮಿಗಳು ಲಿಂಗೈಕ್ಯ ರಾಗುವ ಹಂಬಲದಲ್ಲಿದ್ದಾರೆ ಎಂದು ಹೇಳಿ ಕಳುಹಿಸುವವನಾಗು ಎಂದು ತಿಳುಹಿ ಸಿದರು.

ಆಗ ಗಂಟೆಪ್ಪನೊಡಗುಡಿ ಅನೇಕ ಭಕ್ತರು—ಬುದ್ಧಿ ನಮ್ಮನ್ನು ಪರದೇಶಿ ಗಳನ್ನಾಗಿ ಮಾಡಿ ತಾವು ಈ ರೀತಿ ಲಿಂಗೈಕ್ಯರಾಗುವ ಹಂಬಲ ಮಾಡುವದು ಹಿತಕರವೇ ಎಂದು ರೋಧಿಸಹತ್ತಿದರು. ಆಗ ಸ್ವಾಮಿಗಳು ನಸು ನಗುತ್ತ ಅಂದು ರಾಮನಗೌಡನು ಇನ್ನೂ ಹತ್ತುವರ್ಷ ಬಾಳಬೇಕೆಂದು ಕೇಳಿಕೊಂಡಂತೆ ನಾಳಿನ ಮಿತಿಗೆ ಅವನು ಕೇಳಿದ ಹತ್ತು ವರುಷದ ಪೂರ್ವ ವಯಸ್ಸು ಕಳೆದಾ ಯಿತು. ಇನ್ನೇನೋ ಮಕ್ಕಳೇ ನೀವು ಹೇಳಿದ ಹಾಗೆ ಪದೇ ಪದೇ ಈ ಭಂಡ ಜನ್ಮಕ್ಕೆ ವಯಹೆಚ್ಚಿಸಿದರೆ ಶಿವಾ ಏನ ಅಂದಾನು ಇಷ್ಟು ತಿಳಿಯಬಾರದೆ ಎಂದು ನಗೆಮಾಡಿದರು.

ಆಗ ರಾಮನಗೌಡರು ಗಾಭರಿಗೊಂಡು ತಾವು ಹಿಂದೊಮ್ಮೆ ಸ್ವಾಮಿ ಗಳ ಸನ್ನಿಧಿಯಲ್ಲಿ ಗ್ರಾಮಸ್ಥರೊಡಗೂಡಿ— ಬುದ್ಧಿ ಇನ್ನು ಹತ್ತು ವರುಷ ಬಾಳಿದರೆ ಸಾಕು ಎಂದು ಅಂದಿನ ಮಿತಿ ಬರೆನು ಇಟ್ಟದ್ದು ನೆನಪಾಗಿ ಮಠ ದಲ್ಲಿಯೇ ಇದ್ದ ಆ ಕಾಗದವನ್ನು ತೆಗೆದು ನೋಡಿದರೆ ನಾಳಿನ ಮಿತಿಗೆ ಹತ್ತು ವರುಷಗಳು ಸರಿಯಾಗಿ ಸರಿದು ಹೋಗುತ್ತವೆ. ಆಗ ರಾಮನ ಗೌಡನು ಹೌಹಾರಿದನು ದುಃಖದಬ್ಬರದಲ್ಲಿ—ಗುರುವೇ ತಂದೇ ಮಡಿವಾಳಜ್ಜಾ ಏನೋ ತಪ್ಪು ಮಾಡಿ ತಮಗೆ ಹಾಗೆ ಕೇಳಿದ್ದು ಅಪರಾಧವಾಗಿದೆ ಹಾಗೆ ಮಾಡಬಾರದು. ಲಿಂಗೈಕ್ಯರಾಗಬೇಕೆಂಬ ತಮ್ಮ ಬಯಕೆಯನ್ನು ಬದಲಿಸಿ

ಗರಗ ಗ್ರಾಮವಾಸಿಗಳ ಬಾಳು ನಂದಾದೀಪದಂತೆ ತಮ್ಮ ಇರುವಿಕೆಯಾಗ ಬೇಕೆಂದು ಬೇಡಿಕೊಳ್ಳಹತ್ತಿದನು.

ಆಗ ಮಡಿವಾಳೇಶ್ವರ ಸ್ವಾಮಿಗಳು—ಏ ಮಳ್ಳ ಪ್ಯಾಲಿ, ನಾವು ನೀವೆ ಲ್ಲರು ಶಿವನ ಊಳಿಗದಾಳು. ಜೀತಕ್ಕಾಗಿ ಬಂದು ಜೀತ ಮುಗಿದ ಬಳಿಕ ಇಲ್ಲೇನೋ ಕೆಲಸ ಈ ದೇಹ ಎನ್ನುವದು ಹರಕ ಪಾವು. ತಳ ಹೋದ ತಪೇಲಿ. ಎಲ್ಲಿಯುವರೆಗೆ ಈ ಕಾಯವೆಂಬ ಪಾವಿಗೆ ತ್ಯಾಪಿ ಹಾಕಿ ಉಳಿದುಕೊಳ್ಳುವ ಹಪಹಪಿ ಹಚ್ಚಿಕೊಳ್ಳುವದೇ ಬೇಡಾ ಶಿವನಾದೇಶದಂತೆ ನಿಮಗೆ ವಚನ ಕೊಟ್ಟು ಇಲ್ಲಿಯವರೆಗೆ ಈ ಭಂಡ ಜೀವಾ ಸಲುಹಿದ್ದಾಗಿದೆ. ಈಗ ನಾವು ನಿಶ್ಚಿಂತೆಯಿಂದ ನಾಳಿಗೆ ಮಿತಿ ಹೇಳಿದ ಪ್ರಕಾರ ಲಿಂಗೈಕ್ಯರಾಗುತ್ತೇವೆ ಹಂಗರಕಿ ದೇಸಾಯರನ್ನು ಕರೆಯಿಸಿರೆಂದು ಹೇಳಿದರು. ಆಗ ಕೂಡಿದ ಭಕ್ತರು ಗೋಳೋ ಎಂದು ರೋಧಿಸುತ್ತ ದೇಸಾಯರಿಗೆ ಹೇಳಿ ಕಳು ಹಿಸಿದರು.

ಬಳಿಕ ಸ್ವಾಮಿಗಳು ಲಿಂಗದೊಳಗಾಗುವರೆಂಬ ಸುದ್ದಿಯನ್ನು ವಾಯು ದೇವನು ಹೊತ್ತುಕೊಂಡೊಯ್ದು ಸುತ್ತಲಿನ ಗ್ರಾಮದವರಿಗೆ ತಿಳುಹಿಸುತ್ತ ಸಂಚರಿಸಬೇಕೇನೋ ಎನ್ನುವಂತೆ ಬೆಳಕು ಹರಿದು ಸೂರ್ಯದೇವನು ತನ್ನ ಕರ್ತವ್ಯದ ಕಂಕಣ ತೊಡುವ ಪೂರ್ವದಲ್ಲಿ ಸಾವಿರಾರು ಭಕ್ತ ಬಳಗವು ಮಠದಲ್ಲಿ ಸ್ವಾಮಿಗಳ ಸನ್ನಿಧಿಯಲ್ಲಿ ಸೇರಿ ಗೋಳೋ ಎನ್ನುತ್ತಿದ್ದರು. ಅತ್ತ ಸ್ವಾಮಿಗಳ ಆಜ್ಞೆಯಂತೆ ಹಂಗರಗಕಿ ಅಯ್ಯಪ್ಪ ದೇಸಾಯರು ಸಾಡೆರೆಡು ಮೇಲೊಂದು ನೂರು ಹಣದ ವೆಚ್ಚದಲ್ಲಿ ಸಮಾಧಿ ಕಾರ್ಯವನ್ನು ಪೂರೈಸುತ್ತಿದ್ದರು. ಊರಿನ ಅನೇಕ ಭಕ್ತರು ಸುತ್ತಲಿನ ಗ್ರಾಮದ ಹಲವು ಭಕ್ತರು ತಮ್ಮ ತಮ್ಮ ಶಕ್ತ್ಯಾನುಸಾರ ಸಹಾಯ ಮಾಡುವವರಾದರು. ಭಕ್ತರಲ್ಲಿ ಅಗ್ರಗಣ್ಯರೆನಿಸಿದ ರಾಮನಗೌಡರು ಹಂಗರಕಿ ದೇಸಾಯರು, ಗಂಟೆಪ್ಪ, ಬಸವಲಿಂಗಪ್ಪ, ಭೀಮಪ್ಪ ಮತ್ತಿತರರು ಮನದ ವೇದನೆಯನ್ನು ಸಹಿಸಿ ಅದು ಹೇಗೆ ಕಾರ್ಯ ಮಾಡುತ್ತಿದ್ದರೋ ಅವರಿಗೇ ತಿಳಿಯದಂತೆ, ಸ್ವಾಮಿಗಳ ಅಪ್ಪಣೆಯಂತೆ ಸಮಾಧಿಕಾರ್ಯ ಇನ್ನಿತರ ಕಾರ್ಯಗಳು ಸಾಗಿದ್ದವು.

ಆಗ ಸ್ವಾಮಿಗಳ ಅಂತಿಮ ದರ್ಶನಾಶೀರ್ವಾದಗಳ ಆಶೆಯಲ್ಲಿ ತಂಡೋಪತಂಡವಾಗಿ ಭಕ್ತರ ಬರಹತ್ತಿದರು. ಬಳಿಕ ಸ್ವಾಮಿಗಳ ಹಂಗರಕಿ

ದೇಸಾಯಿಯವರನ್ನು ಕರೆದು ಸಮಾಧಿ ಸಿದ್ಧವಾಗಿದೆಯೇ ಎಂದು ಕೇಳಿದರು. ಆಗ ದೇಸಾಯಿ ಹಾಗು ರಾಮನಗೌಡ, ಗಂಟೆಪ್ಪ ಹಾಗೂ ಮರಿದೇವರಾದ ಸಿದ್ಧಲಿಂಗ ಚರಮೂರ್ತಿಗಳ ಘೋಷಣದಿಂದ ಗಗನವೇ ಭೇದಿಸುವಂತಾಯಿತು. ಬಳಿಕ ದೇಸಾಯರು ಎಲ್ಲಿಲ್ಲದ ಸಮಾಧಾನ ತಂದುಕೊಳ್ಳುತ್ತ ತುಂಬಿ ಬಂದ ದುಃಖದುಸುರಿನಲ್ಲಿ—ಗುರುವೇ ಪರಮ ಗುರುವೇ ತಮ್ಮ ಆಜ್ಞೆಯಂತೆ ಎಲ್ಲವೂ ಸಿದ್ಧವಾಗಿದೆ ಎಂದು ಬಿಕ್ಕಳಿಸಹತ್ತಿದರು. ಆಗ ಸ್ವಾಮಿಗಳು ಮರಿದೇವರನ್ನು ಕರೆದು ತಮ್ಮ ಕೈಬೊಗಸೆಯಿಂದ ಮೂರು ಸಾರೆ ತುಂಬಿ ರೂಪಾಯಿಗಳನ್ನು ಬಡಬಗ್ಗರಿಗೆ ಅನಾಥ ಅಂಗಹೀನರಿಗೆ ಹಂಚಲು ತಿಳುಹಿಸಿದರು. ಮೇಲಾಗಿ ನೀವೆಲ್ಲರು ಭಕ್ತಿಯಿಂದ ಬಾಳಿರೆಂದು ಉಪದೇಶ ಮಾಡಿದರು. ಅಂದು ಸ್ವಾಮಿಗಳು ಲಿಂಗೈಕ್ಯರಾಗುವರೆಂದು ಕೇಳಿ ಬಂದ ನಾನಾ ಗ್ರಾಮದ ಹರ ಗುರು ಚರಮೂರ್ತಿಗಳಿಗೆ ವಸ್ತ್ರ ದಾನದಿಂದ ತೃಪ್ತಿಪಡಿಸಲು. ಹೇಳಿದರು ಹಾಗು ಬಡ ಮುತ್ತೈದೆ ಹೆಣ್ಣು ಮಕ್ಕಳಿಗೆ ಸೀರೆ ಖಣಗಳನಿತ್ತು ಗೌರವಿಸಲು ತಿಳಿಸಿದರು. ಅದರಂತೆ ಯಾವತ್ತು ಕಾರ್ಯಗಳು ಸಾಂಗವಾಗಿ ಜರಂಗಿದ ಮೇಲೆ ಸ್ವಾಮಿಗಳು ಸಕಲ ಭಕ್ತರನ್ನು ಉದ್ದೇಶಿಸಿ—ಅಯ್ಯಾ ನಾವು ಇನ್ನು ನಲವತ್ತು ವರುಷ ಗತಿಸಿದ ಬಳಿಕ ಸಾಧು ಸಜ್ಜನರಲ್ಲಿ ಜನಿಸಿ ಈ ಮಠಕ್ಕೆ ಬರುವೆವು ಶಿವನು ನಿಮಗೆ ಕಲ್ಯಾಣ ಮಾಡಲಿ ವ್ಯಸನದ ಉಸುರುಬಿಡದೆ, ಸಂತಸದಿಂದ ನಮ್ಮನ್ನು ಶಿವನ ಸದರಿಗೆ ಬೀಳ್ಕೊಡುವ ಮನಸ್ಸು ಮಾಡಿರಪ್ಪಾ ಎಂದು ವಾತ್ಸಲ್ಯ ತುಂಬಿದ ಧ್ವನಿಯಲ್ಲಿ ಉದ್ಗಾರ ತೆಗೆದರು. ಅಲ್ಲದೇ ನಮ್ಮ ಆಶೀರ್ವಾದವು ಸದಾ ನಿಮಗಾಗಿ ಜಾಗ್ರತವಾಗಿರುವದೆಂದು ಪದೇ ಪದೇ ಭಕ್ತರನ್ನು ಆಶೀರ್ವದಿಸಿ ಇಂದಿನ ನಮ್ಮ ಕೊನೆಯ ಪ್ರಸ್ತವು ಮಠದಲ್ಲಿ ವಿಜೃಂಭಣೆಯಿಂದ ಜರುಗಬೇಕೆಂದು ಜಂಗಮರಿಗೂ ಭಕ್ತರಿಗೂ ಅದರಲ್ಲಿ ಬಡಬಗ್ಗರಿಗೂ ಯಥೇಚ್ಛವಾಗಿ ಕರಿಗಡಬಿನ ಪಸ್ತ ಮಾಡಿಸಲು ಅಪ್ಪಣೆ ಮಾಡಿದರು. ಆ ಬಳಿಕ ಎಲ್ಲರಿಗೂ ಪ್ರಸಾದ ಅರ್ಪಿತವಾದ ಮೇಲೆ ಸಂತಸದಿಂದ ಹಂಗರಕಿ ದೇಸಾಯರನ್ನು, ಗಂಟೆಪ್ಪ, ರಾಮನಗೌಡರನ್ನು ಕರೆದು ನಾವು ಲಿಂಗೈಕ್ಯರಾದ ಬಳಿಕ ಕ್ಷೌರ ಮಾಡಿಸಿ ಮೈದೊಳೆದು ಭಸಿತವ ಲೇಪಿಸಿ ಸಮಾಧಿಯಲ್ಲಿ ಇರಿಸುದಾಗಬೇಕೆಂದು ಅಜ್ಞಾಪಿಸಿದರು. ಅಲ್ಲದೆ ಭಕ್ತನೋರ್ವ ಸ್ವಲ್ಪ ತಡೆದು ಬರಬಹುದು

ಆತನು ಸಮಾಧಿಯನ್ನು ಮುಚ್ಚಿದ ಮೇಲೆ ಬಂದರೆ, ಆತನಿಗೆ ಸಮಾಧಿಯ ಕಲ್ಲು ತೆರೆದು ಈ ದೇಹ ಘಟವನ್ನು ತೋರಿಸಲು ಮರೆಯಬೇಡಿರಿ ಎಂದು ಅಪ್ಪಣೆ ಮಾಡಿದರು. ಬಳಿಕ ಮುರಿಗೆವ್ವನೆಂಬ ತಮ್ಮ ನೆಚ್ಚಿನ ಸೇವಕಿಯನ್ನು ಕರೆದು ನಮ್ಮ ಇಚ್ಛಾ ಭೋಜನವನವೆನಿಸಿದ ಹುಳಿ ಪಲ್ಲೆ, ಉಸುಳಿ, ಮುದ್ದಿ, ಸಣ್ಣಕ್ಕಿ ಅನ್ನ ಮಾಡಲು ತಿಳಿಸಿದರು. ಬಳಿಕ ಮುರಿಗೆವ್ವ ಸ್ವಾಮಿಗಳ ಇಚ್ಛಾ ಭೋಜನವನ್ನು ಸಿದ್ಧಪಡಿಸಿ ಕರಜೋಡಿಸಿ ರೋಧಿಸುಹತ್ತಿದಳು.

ಆಗ ಸ್ವಾಮಿಗಳು ಸ್ನಾನ ಮಾಡಿ ಲಿಂಗಾರ್ಪಿತವೆಂದು ಭೋಜನ ತೀರಿಸಿ ಭಕ್ತ ಸಮೂಹದ ಸಮಕ್ಷಮದಲ್ಲಿ ಮಂಚವನ್ನೇರಿ ಪವಡಿಸಿ ಶಿವನೇ, ಶಂಕರನೇ ಅಜ್ಜಾ ಬಾಬಾ ಎಂದು ಗುರುನಾಮಸ್ಮರಣೆಯಲ್ಲಿ ತಲ್ಲೀನರಾಗಿ ಗುರುವಾಗಿದ್ದ ಪ್ರಭು ಸ್ವಾಮಿಗಳನ್ನು ತಂದೆಯಂತಿದ್ದ ಚಿದಂಬರ ದೀಕ್ಷಿತರನ್ನು ಪದೇ ಪದೇ ಸ್ಮರಿಸುತ್ತ ಸ್ವಲ್ಪ ಸಮಯ ಕಣ್ಣು ಮುಚ್ಚಿ ಗುರುಗಳನ್ನು ಶಿವನನ್ನು ಸ್ಮರಿಸಿ ಬಳಿಕ ಕಣ್ಣುದೆರೆಯುತ್ತ ಹರ ಹರ ಶಂಭೋ ಮಹಾದೇವ ಹರ ಹರ ಶಂಭೋ ಮಹಾದೇವ ಎಂದು ಶಿವನಾಮ ಉಚ್ಚಾರ ಗೈದು ಸುತ್ತಲೂ ಭಕ್ತರತ್ತ ಕಣ್ಣಾರಳಿಸಿ ಎಲ್ಲರೂ ಬಂದಿರುವರೇನಪ್ಪಾ ಗಂಟ್ಯಾ ಎಂದು ಕೇಳಿದರು. ಆಗ ಗಂಟೆಪ್ಪ ಅಳುತ್ತ ಕರೆಯುತ್ತ ಮುಂದಾಗಿ ಗುರುವೇ ತಂದೇ ನಮ್ಮನ್ನಗಲಿ ಪೋಗುವಿರಾ ಎಂದು ಮತ್ತಷ್ಟು ರೋಧಿಸುಹತ್ತಿದನು.

---

೪೩ ನೆಯ ಪ್ರಕರಣ

ಲಿಂಗೈಕ್ಯರಾದದ್ದು

ಆಗ ಗುರು ಮಡಿವಾಳಜ್ಜನವರು ಆತನನ್ನು ಸಮಾಧಾನಪಡಿಸುತ್ತ ಹುಚ್ಚಾ ನಾನು ನಿಮ್ಮನ್ನಗಲುತ್ತಿರುವದಿಲ್ಲ. ಈ ದೇಹ ಗಟ ಆಗಲಿ ಹೋದರೂ ಮನವು ಮಾತ್ರ ಸದಾ ನಿಮ್ಮೆಲ್ಲರಲ್ಲಿ ಅಡಗಿರುವದೆಂದು ತಿಳಿಯೋ ಎಂದು ನಸುನಕ್ಕು ಶಿವಪೂಜಿ ಮಲ್ಯಾ ನೀನು ಸದಾ ಸಾಧು ಸತ್ಪುರುಷರು ಸೇವೆಯಲ್ಲಿರಬೇಕು ಎಂದು ತಿಳಿಸುತ್ತ ರಾಮನಗೌಡ ಅಯ್ಯಪ್ಪ

ದೇಸಾಯಿ, ಭೀಮಪ್ಪ, ಬಸವಲಿಂಗರ ಸೇವೆಗೆ ನಾವು ಸಂತಸಗೊಂಡಿದ್ದೇವೆ ಎಂದು ಹರ್ಷದ ಉದ್ಗಾರ ತೆಗೆದು ಸವದತ್ತಿ, ಪತ್ತಾರ ಮಹಾರುದ್ರಪ್ಪಾಪ ನಮ್ಮ ಸುದ್ದಿ ಹತ್ತದಂತೆ ಬೇರೊಂದು ಊರಿಗೆ ಹೋಗಿದ್ದಾನೆ. ಆತನು ಬಂದ ಬಳಿಕ ನಮ್ಮ ಈ ಮಣ್ಣಿಗಾದ ಕಾಯವನ್ನು ತೆಗೆದು ತೋರಿಸಿ ಆತನನ್ನು ಸಮಾಧಾನ ಪಡಿಸಿರೆಂದು ಬಳಿಕ ಶಿವ ಶಿವಾ, ಬಾಬಾ ಅಜ್ಜಾ ಚಿದಂಬರೇಶಾ ಎಂದು ಶಿವ ಗುರು ಸ್ಮರಣೆ ಮಾಡುತ್ತ ಏಳು ಗಂಟೆಯ ಸುಮಾರಿಗೆ ಅವರ ಶರೀರದಲ್ಲಿಯ ದಿವ್ಯ ದೇದಿಪ್ಯಮಾನವಾದ ಜ್ಯೋತಿಯು ಮಿಂಚು ಹೊಳೆದಂತೆ ಹೊಳೆದು ಮಾಯವಾಯಿತು, ಪ್ರಾಣ ಪಕ್ಷಿಯು ಪರಮಾತ್ಮನ ಇರುವನ್ನು ಕುರಿತು ಹಾರಿ ಹೋಯಿತು. ಕ್ರಿ. ಶ. ಹದಿನೆಂಟು ನೂರಾ ಎಂಭತ್ತೆಂಟರಂದು ಫೆಬ್ರುವರಿ ದಿನಾಂಕ ಇಪ್ಪತೆಂಟರಂದು ಶಿವ ಸ್ವರೂಪಿ ಲಿಂಗದಲ್ಲಿ ಬೇರೆತು ಲಿಂಗೈಕ್ಯರಾದರು.

ಬಳಿಕ ಗುರುಗಳ ಹೇಳಿಕೆಯಂತೆ ವಿಧಿನೇಮದಂತೆ ಸಮಾಧಿ ಕಾರ್ಯವನ್ನು ಅಣಿಗೊಳಿಸುತ್ತಿರಲು ಸ್ವಾಮಿಗಳ ಹೇಳಿಕೆಯಂತೆ ಮಹಾರುದ್ರಪ್ಪನು ಅಪ್ಪಾ ಅಜ್ಜಾ ತಂದೆಗುರುವೇ ಎಂದು ಹಲಬುತ್ತ ಏಳುತ್ತಬೀಳುತ್ತ ಬಂದುಸಮಾಧಿಯನ್ನು ಸಮೀಪಿಸಿದನು. ಅವನ ರೋಧನದಿಂದ ಗಗನವೇ ಗಡಚಿಕ್ಕುವಂತಿತ್ತು ಆಗ ಕೂಡಿದ ಮೇಲೆ ಭಕ್ತರಿಗೆ ದುಃಖ ಉಮ್ಮಳಿಸಿ ರೋಧಿಸಹತ್ತಿದರು. ಆ ಮೇಲೆ ಮಹಾರುದ್ರಪ್ಪನ ಆಶೆಯಂತೆ ಸ್ವಾಮಿಗಳನ್ನು ಪದ್ಮಾಸನದಲ್ಲಿ ಕುಳ್ಳಿರಿಸಿದ ಸಮಾಧಿಯ ಕಲ್ಲು ತೆಗೆದು ಅವರ ದಿವ್ಯ ದೇಹವನ್ನು ತೋರಿಸಿ ಹರ ಹರ ಮಹಾದೇವ ಎಂಬ ಜಯಜಯಕಾರದೊಡನೆ ಶ್ರೀಗುರು ಶಿವಯೋಗಿ ಸಾಮ್ರಾಟ ಮಡಿವಾಳೇಶ್ವರ ಸ್ವಾಮಿಗಳ ನಾಮ ಘೋಷಣೆಯೊಡನೆ ಸಮಾಧಿಕಾರ್ಯವನ್ನು ಮುಗಿಸಿ ಭಕ್ತ ಸಮೂಹವು ಅನಿವಾರ್ಯವೆಂದು ತಮ್ಮ ಕರ್ತವ್ಯಕ್ಕೆ ತೆರಳಿದರು.

೫೪ ನೆಯ ಪ್ರಕರಣ

ಉ ಪ ಸಂ ಹಾ ರ

ಬಳಿಕ ಹಂಗರಕಿ ದೇಸಾಯರ ರಾಮನಗೌಡ, ಗಂಟೆಪ್ಪ ಬಸವಲಿಂಗಪ್ಪ, ಭೀಮಪ್ಪ ಮೊದಲಾದ ಭಕ್ತರು ಗುರುಗಳ ಅಪ್ಪಣೆಯಂತೆ ಅವನ ಸಮಾಧಿಯ ಮೇಲೆ ಸುಂದರವಾದ ಗುಡಿಯನ್ನು ನಿರ್ಮಿಸಿ ಆ ಗುಡಿಯಲ್ಲಿ ಶಿವಮಹಾದೇವನ ಆಪ್ತ ಸೇವಕ ನಂದೀಶ್ವರನನ್ನು ಪ್ರತಿಷ್ಠಾಪಿಸಿ ಗುಡಿ ಹಾಗೂ ಮಠ ಎರಡರ ಸುತ್ತಲೂ ವಿಶಾಲವಾದ ಹೊಲವನ್ನು ಹಸನುಗೊಳಿಸಿ ಸಮೀಪದಲ್ಲಿ ಹರಿವ ಹಳ್ಳಕ್ಕೆ ಅಂದೊಮ್ಮೆ ಸ್ವಾಮಿಗಳು ಕಟ್ಟಿರಲು ಹೇಳಿದ ಘಾಟವನ್ನು ಉತ್ತಮಗೊಳಿಸಿ ಮಡಿವಾಳೇಶ್ವರ ತೀರ್ಥವೆಂದು ಆ ಹಳ್ಳದ ಒಂದು ಭಾಗಕ್ಕೆ ಹೆಸರಿಟ್ಟು ಪ್ರತಿವರುಷ ಮಾಘ ಶುದ್ಧ ಭಿಷ್ಮಾಷ್ಟಮಿಯಿಂದ ಬಹುಳ ಪ್ರತಿಪದೆಯ ವರೆಗೆ ಸಮಾಧಿಗೆ ನೈವೇದ್ಯ ಮತ್ತು ಅನ್ನಸಂತರ್ಪಣೆಯನ್ನು ಮಾಡಿ ಗರಗ ಗ್ರಾಮವಾಸಿ ಭಕ್ತ ಬಾಂಧವರು ಭಕ್ತಿಭಾವದಿಂದ ನಿರ್ಮಲ ಚಿತ್ತದಿಂದ ಸ್ವಾಮಿಗಳ ಪುಣ್ಯ ತಿಥಿಯನ್ನು ಜರುಗಿಸಿ ಭಜನೆ, ಕಿರ್ತನೆ, ಗಾಯನ ಪುರಾಣ ಪ್ರವಚನಗಳಿಂದ ಸಪ್ತಾಹವನ್ನು ಪೂರೈಸಿ ಹತ್ತಾರುಸಾವಿರ ಭಕ್ತ ಬಳಗ ಸೇರಿ ಮಾಘವಧ್ಯ ತೃತೀಯ ದಿನ ದೊಡ್ಡ ಪ್ರಮಾಣದಲ್ಲಿ ಅನ್ನ ಸಂತರ್ಪಣೆಗೈವರು. ಬಡಬಗ್ಗರು ದೀನದಲಿತರು· ಅನಾಥ ಅಂಗಹೀನ ಬಳಗವು ಶ್ರೀಗುರು ಶಿವಯೋಗಿ ಸಾಮ್ರಾಟ ಮಡಿವಾಳೇಶ್ವರ ಸ್ವಾಮಿಗಳ ಪುಣ್ಯ ಪ್ರಸಾದವನ್ನುಂಡು ಪುನೀತರಾಗುವರು. ಪುಣ್ಯ ಜೀವಿಗಳಾಗುವರು. ಪಾವನತಮ ಬಾಳು ಬಾಳುವರಲ್ಲದೆ ಶ್ರೀಗಳ ಕೃಪೆಗೆ ಪಾತ್ರರಾದ ಗರಗ ಗ್ರಾಮದ ಇನ್ನಿತರ ಭಕ್ತ ಬಳಗವನ್ನು ಮದಣಿಯುವಂತೆ ಕೊಂಡಾಡಿ ಶ್ರೀ ಗುರು ಶಿವಯೋಗಿ ಸಾಮ್ರಾಟ ಮಡಿವಾಳೇಶ್ವರರು ಭಕ್ತರಿಗೆ ಸನ್ಮಂಗಲವನ್ನುಂಟು ಮಾಡಲೆಂದು ಹಾರೈಸುವರು.

ಸ್ಮೃತಿ ವಚನ

ಶಿವಯೋಗಿ ಸಾಮ್ರಾಟ ಮಡಿವಾಳೇಶ್ವರ
ಭವಭೋಗ ದೂರಗೊಳಿಸುವ ಈ
ಶಿವ ತತ್ವ ಸಂಪದ ತುಂಬಿದ ಪುಣ್ಯ ಚರಿತೆಯನು
ಭಾವವಶುದ್ಧಿಯಲಿ ಓದಿ ಕೇಳಿ ಅರಿತರ ನಿಜಭಕ್ತ
ಯಾವ ಜನುಮದ ಪುಣ್ಯವೊ ವೀರ ರಚಿಸಿದ
ಶಿವಯೋಗೀಶ್ವರರ ಹಲವು ಕೃತಿಗಳನ್ನಾದರಿಸಿ
ಭವ ಬಾಧೆಗಳ ನೀಗಿಸುವ ಮಡಿವಾಳೇಶನ ಒಲುಮೆಯಲಿ
ಕಾವ ಗುರು ಪದ ತಲದಿ ಅರ್ಪಿಸುವ ನಮನಗಳು

ಬಾರೈ ಬೇಗ ಬಾರೈ ಉಪದೇಶಾಮೃತವ ನೀಡು ಬಾರೈ

ಬಾರೈ ಬೇಗ ಬಾರೈ ಉಪದೇಶಾಮೃತವ ನೀಡು ಬಾರೈ
ಗರಗ ಗ್ರಾಮವಾಸಿಯೇ ವೀರವಿರತಿ ಮಡಿವಾಳೇಶರೆ
ಹರನೊರೆದ ಸುಜ್ಞಾನಿ ಸತ್ಪುರುಷ ಶಿವಯೋಗಿಯೇ
ಶರಣು ಶರಣೆಂಬೆ ನಿಮ್ಮ ಪದತಲದಿ ಬೇಗ ಬಾರೈ

ಶಿವಯೋಗಿವರ್ಯನೆ ಭವರೋಗಿ ವೈದ್ಯನೆ
ಅವತರಿಸಿ ಬಾರಯ್ಯ ನಿನ್ನ ಸೇವಕರ ನುಡಿಯನ್ನು
ಶಿವತತ್ವ ಬೀಜವನ್ನು ಬಿತ್ತಿ ಉತ್ತಿ ಶಿವಬೆಳೆಯು
ಕಾವ ಕರುಣೆಯಲಿ ಭವಹರನಾಜ್ಞೆಯಲಿ ಬೇಗ ಬಾರೈ

ಯನ್ನ ಮನದಾಸೆ ತಾ ಚಿಗುರಿ ಬೇಡುವದಯ್ಯಾ
ನಿನ್ನನೊಂದು ಕ್ಷಣಧಿ ಭಜಿಸದಿರಲಾರೆ ನಾನಯ್ಯ
ಇನ್ನೂ ತಡ ಮಾಡದಲೆ ಅವತರಿಸಿ ಬಾರಯ್ಯ
ನಿನ್ನ ತತ್ವೋಪದೇಶ ನೀಡಲೆಮಗೆ ಬೇಗ ಬಾರೈ

ಅಯೋನಿಜ ಶಿಸುವಾಗಿ ಕಲ್ಮಠದ ಪ್ರಭುವಾಗಿ
ಭಯಹರ ಶಿವರೂಪಿ ಮಡಿವಾಳೇಶ ನೀವಾಗಿ
ಕಾಯ ಬನ್ನಿರೈ ಕಿತ್ತೂರ ರಾಜಗುರು ಪರಂಪರೆಯ
ಭಯವೆಂಬ ಭಾವನೆಯ ಬಿಸುಟಿ ಬೇಡುವೆನು ಬೇಗ ಬಾರೈ

ಕವಿಯೋ ಕಾಡು ಮನುಜನೋ ಈ ವೀರನಿಗೆ ನೀ ಗತಿಮತಿ
ಶಿವಭಕ್ತಿ ಸಂಪದಕೆ ಪ್ರಾಣದಾಲ್ಲಿ ನೀ ವಿರತಿ
ಶಿವ ಮತೋದ್ಧಾರ ಭಕ್ತೋದ್ಧಾರ ಕವಚ ತೊಟ್ಟು
ಅವನಿಯೋಳ್ ಅವತರಿಸಿ ಮಡಿವಾಳೇಶ ಮತ್ತೆ ಮೂಡಿ ಬಾರೈ

ವಿರತಿ ಬಾನು ವಿಜಯ ಮಡಿವಾಳೇಶ

ಮಂಗಲಂ ಜಯ ಮಂಗಲಂ ಜಯ
ತುಂಗ ಮಹಿಮಾಶಾಲಿ ಮಡಿವಾಳೇಶಗೆ ||ಪ||

ಲಿಂಗ ಸಂಗದಿ ಭವಭಯವ ಹರಿದ ವೀರೇಶಾ
ಮಂಗಲಾಂಗ ಮಡಿವಾಳೇಶಾ ನಿಮ್ಮ ಉಪದೇಶಾ
ವಿರತಿ ಬಾನು ವಿಜಯ ಮಡಿವಾಳ ಶಿವಯೋಗೇಶಾ ||೧||

ರಾಗ ರಹಿತ ಪಾರಮಾರ್ಥ ವಿಚಾರಸಾರಾ
ಭೋಗದೂರ ತ್ಯಾಗ ವೀರ ವೀರಭದ್ರಾವತಾರ
ವಿರತಿ ಬಾನು ವಿಜಯ ಮಡಿವಾಳ ಶಿವಯೋಗೇಶಾ ||೨||

ಶರಣ ಜನ ವರದಾಯಿ ಪಾವನಾತ್ಮನೆ
ಪರಮಗುರು ಸದ್ಗುರು ಆನಂದಾತ್ಮನೆ
ವಿರತಿ ಬಾನು ವಿಜಯ ಮಡಿವಾಳ ಶಿವಯೋಗೇಶಾ ||೩||

ಶಿವತತ್ವ ಪಾಲಕಾ ಭಕ್ತೋದ್ಧಾರಕಾ
ಶಿವಯೋಗಿ ಸಾಮ್ರಾಟ ಈ ಲೋಕನಾಕಲೋಕ
ವಿರತಿ ಬಾನು ವಿಜಯ ಮಡಿವಾಳ ಶಿವಯೋಗೇಶಾ ||೪||

ವಿರಗೊಲಿದ ವೀರ ವಿರತಿ ಭಾಸ್ಕರಾ
ಹರ ನುಡಿಯ ಶೀಲ ಸಾಹಿತ್ಯ ಸಾರಾ
ವಿರತಿ ಬಾನು ವಿಜಯ ಮಡಿವಾಳ ಶಿವಯೋಗೇಶಾ ||೫||

ಶ್ರೀ ಗುರು ಮಡಿವಾಳೇಶರ ನಾಮವನು ಬಿಡದನವರತ
ಸಡಗರದಿ ಭಜಿಪ ನಿಜ ಭಕ್ತರಿಗೆ
ದುಃಖ ದಾರಿದ್ರ್ಯವ ಕಳೆದು ಮುಕ್ತಿ ಪದವ ಕರುಣಿಸುವಾ
ನಿಶ್ಚಲವಿದು ನಿಶ್ಚಲವಿದು ನಿಶ್ಚಲವಿದು

ಓಂ ಜಯ ಸಾಂಬ ಸದಾಶಿವ

ಶ್ರೀ ಶಿವಯೋಗಿ ಮಡಿವಾಳೇಶ್ವರ

ಮಂಗಲಂ

ನಮ್ಮಲ್ಲಿ ದೊರೆಯುವ ಪ್ರಮುಖ ಗ್ರಂಥಗಳು